


ಶ್ರೀ ವೇಮನ ತತ್ವಗಳು





ಬಿ. ಭೀಮರಾಜು

ಓಂ

ಮುದ್ರಣವಾಗಬೇಕಾಗಿರುವ
ಕೃತಿಗಳು

೧. "ಸೂಕ್ತಿ–ಸುಧಾ"–
(ಅಮೌಲ್ಯ ವಾಗ್ಧಾರ)

೨. "ಹರಿಜನ–ಪದ್ಯಾವಲಿ"
(ವಿಚಾರ ಪೂರಿತ, ಸಪ್ರಮಾಣ,
ಹೃದಯವಿದ್ರಾವಕ,
ಕನಿಕರಯುತ
ಕವನಗುಚ್ಛ)

೩. "ಕಬೀರ್ ಜೀವನ ದರ್ಶನ"
(ಜನನದಿಂದ ನಿರ್ಯಾಣದ
ವರೆಗಿನ ಕಥಾನಕ. ರಚನಾತ್ಮಕ
ಕಾರ್ಯಕ್ರಮಗಳ ಮಿಲನ.
ಭಾರತ ಭವ್ಯ
ಲೀಲಾ ವಿಭೂತಿಯ ಸ್ಮರಣ)



ಪುಟಗಳು: ಗದ್ಯ ೭೦ — ತತ್ವಗಳು ೨೦೯

ಬಿ. ಭೀಮರಾಜು,
ಕರ್ನಾಟಕಾಂಧ್ರ ಕವಿ,
ಮಹಾತ್ಮಾ ಗಾಂಧೀ ಸಾಹಿತ್ಯ ಮಂದಿರ,
ಚಿತ್ರದುರ್ಗ.

ಗಾಂಧಿ ಸಾಹಿತ್ಯ ಮಂದಿರ ಪ್ರಕಟನೆ.

— ಓಂ —

ಶ್ರೀ ವೇಮನ ತತ್ವಗಳು

(ತಿಳಿಗನ್ನಡ ಭಾಷಾಂತರ)



ದಿ| ಡಾ| ಸಿ. ಆರ್. ರೆಡ್ಡಿಯವರ ಸ್ಮಾರಕ ಗ್ರಂಥ.



ಕರ್ನಾಟಕಾಂಧ್ರೋಭಯ ಕವಿತಾ ವಿಶಾರದ
ಬಿ. ಭೀಮರಾಜು ವಿರಚಿತ.



ಕ್ರಿಸ್ತಾಬ್ದ ೧೯೫೩, ಮಾರ್ಚಿ – ನಂದನ ಫಾಲ್ಗುಣ.

—ಓಂ—

ಪ್ರಥಮ ಮುದ್ರಣ ೧೯೫೩.

ಬೆಲೆ: ಐದು ರೂಪಾಯಿಗಳು.

ಉಚಿತ: ಒಂದು ವೇಮನ ದೊಡ್ಡ ಭಾವಚಿತ್ರ;

ಒಂದು ವೇಮನಾಮಾವಳಿ.

ಮುದ್ರಕರು:
ವಿನಾಯಕ ಮುದ್ರಣಾಲಯ,
ಚಿತ್ರದುರ್ಗ.

—ಓಂ—

ವಿಷಯ ಸೂಚಿ.

ಚಿತ್ರ ಪರಿಚಯ

೧ ಶ್ರೀ ಕೆ. ಸಿ. ರೆಡ್ಡಿ ಅವರು
೨ ಶ್ರೀ ಮುರ-ಘರಾಜೇಂದ್ರ ಸ್ವಾಮೀಜೀ ಅವರು.
೩ ಶ್ರೀ ಕೆ. ಹನುಮಂತಯ್ಯನವರು
೪ ದಿ ಡಾ|| ಸಿ. ಆರ್ ರೆಡ್ಡಿ ಅವರು
೫ ಗ್ರಂಥಕರ್ತರು
೬ ಶ್ರೀ ವೇಮನ ರೇಖಾ ಚಿತ್ರ
೭ ರಕ್ಷಾಪತ್ರದ ಹೊದಿಕೆ (ಮೊದಲು) ವೇಮನ (ಚಿಕ್ಕದು)
೮ ,, ,, (ಕೊನೆಗೆ) ಗ್ರಂಥಕರ್ತರು (ಚಿಕ್ಕದು)




ಶ್ರೀ ಕೆ. ಚೆಂಗಲರಾಯರೆಡ್ಡಿಯವರು
ಮೈಸೂರು ಮಾಜಿ ಪ್ರಧಾನರು
ಹಾಲಿ ಕೇಂದ್ರ, ಉತ್ಪನ್ನ ಖಾತಾ ಸಚಿವರು.

—೩೦—

ಚಿತ್ರ ಪಟಗಳು

೧ ಶ್ರೀ ಕೆ. ಸಿ. ರೆಡ್ಡಿ ಅವರು
೨ ಶ್ರೀ ಮುರುಘರಾಜೇಂದ್ರ ಸ್ವಾಮಿಗಳ ಅವರು
೩ ಶ್ರೀ ಕೆ. ಹನುಮಂತಯ್ಯನವರು
೪ ಡಾ|| ಬಿ. ಆರ್ ರೆಡ್ಡಿ ಅವರು
೫ ಗ್ರಂಥಕರ್ತರು
೬ ಶ್ರೀ [illegible] ಚಿತ್ರ
೭ [illegible] (ವರ್ಣ)
೮ „ „ [illegible] (ವರ್ಣ)



ಶ್ರೀ ಕೆ. ಚಂಗಲರಾಯರೆಡ್ಡಿಯವರು
ಮೈಸೂರು ಮಾಜಿ ಪ್ರಧಾನರು
ಮತ್ತು ಕೇಂದ್ರ ಉತ್ಪನ್ನ ಶಾಖಾ ಸಚಿವರು.



ಓಂ

— ಜೈ ಹಿಂದ್ —

ಮುನ್ನುಡಿ

—

ಶ್ರೀ ವೇಮನ ಯೋಗಿಯ ತತ್ವಗಳೂ, ದಿವಂಗತ ಡಾ|| ಕಟ್ಟಮಂಚಿ ರಾಮ ಲಿಂಗಾರೆಡ್ಡಿಯವರೂ, ಈ ವಿಷಯದಲ್ಲಿ ವಿಮರ್ಶಾತ್ಮಕ ಮುನ್ನುಡಿ, ಈಗ ನಾನು ಇಲ್ಲಿ ಕೊಡಬೇಕಾಗಿರುವುದು ಈ ಸಂದರ್ಭದಲ್ಲಿ ಹಿನ್ನುಡಿ ಯನ್ನು ಗಮನಿಸಿ ಮುನ್ನುಡಿ ಕೊಡುವುದು ಸೂಕ್ತ.

ಕೀರ್ತಿಶೇಷರಾದ ರೆಡ್ಡಿ ಅವರಿಗೆ ಶ್ರೀ ವೇಮನ ತತ್ವಗಳ ವಿಷಯದಲ್ಲಿ ಎಂತಹ ಭಕ್ತಿ, ಪ್ರೇಮಾದರಗಳಿದ್ದುವೆಂಬುದಕ್ಕೆ ಗ್ರಂಥಕರ್ತರಾದ ಶ್ರೀ ಭೀಮರಾಜು ಅವರು ತಮ್ಮ "ಹಲವು ಸವಿನೆನಪುಗಳು" ಎಂಬ ಲೇಖನ ಮೂಲಕ ಉದಹರಿಸಿರುತ್ತಾರೆ. ಈ ಮಹತ್ತತ್ವಗಳು ಆಂಧ್ರಭಾಷೆಯಿಂದ ಕರ್ನಾಟಕಕ್ಕೆ ರೂಪಾಂತರ ಹೊಂದಿರುವುದು ಕೂಡಾ ದಿವಂಗತರ ಪ್ರೇರಣೆ ಯಿಂದಲೇ ಎಂದು ವ್ಯಕ್ತವಾಗುವುದು. ಆದರೆ ಕರ್ನಾಟಕ ಸಾಹಿತ್ಯ ಸಂಪ ತ್ತಿಗೆ, ಇದೂ ಒಂದು ಅಲಭ್ಯ ಲಾಭವೆಂದರೆ ಅತಿಶಯೋಕ್ತಿಯಾಗಲಾರದು.

ದಿ|| ಡಾ|| ರೆಡ್ಡಿಯವರು ಹುಟ್ಟು ಆಂಧ್ರರು. ಅವರ ಜ್ಞಾನ ಭಂಡಾರವು ಮೈಸೂರು ಕರ್ನಾಟಕ್ಕೆ ಹೆಚ್ಚು ಭಾಗ ಹಂಚಿಕೆಯಾಗಿ, ತಮ್ಮ ಶೇಷಾ ಯುಷ್ಯವನ್ನು ನಮಗಾಗಿ ಸವೆಸಿ ಪರಂಧಾಮವನ್ನೈದಿದರು ಅವರ ಸ್ಮಾರಕ ಗ್ರಂಥವಾಗಿ ಪ್ರಚುರಿಸುವುದಕ್ಕೆ, ಶ್ರೀ ವೇಮನ ತತ್ವಗಳ ಕನ್ನಡ ಅನುವಾ ದದ ಹೊತ್ತಿಗೆಯೇ, ಶ್ರೇಷ್ಠವಾದುದೆಂದು, ಮಹನೀಯರೆಲ್ಲರೂ ಒಪ್ಪುವರು. ನಾನೂ ಅದನ್ನು ಮನಃಪೂರ್ವಕವಾಗಿ ಅನುಮೋದಿಸುತ್ತೇನೆ

ಓಂ

ಶ್ರೀ ಭೀಮರಾಜು ಅವರು ಒಂದು ಸಾವಿರ ಅತ್ಯಮೋಘವಾದ ತತ್ವ ರತ್ನಗಳನ್ನು ಕನ್ನಡಕ್ಕೆ ಭಟ್ಟಿ ಇಳಿಸಿದುದು, ಪರಕಾಯ ಪ್ರವೇಶವೆಂದು ನಾನು ಹೇಳಬಯಸುತ್ತೇನೆ. ಏಕೆಂದರೆ ಮೂಲಭಾಷೆಯ ಸೌಂದರ್ಯ ಕೆಡದಂತೆ, ಪರಭಾಷೆಗೆ ಪರಿವರ್ತನಗೊಳಿಸುವುದು ಸಾಮಾನ್ಯವಲ್ಲ. ಇದ ಕ್ಕಾಗಿ ಕನ್ನಡಿಗರು ಗ್ರಂಥಕರ್ತರಿಗೆ ಕೃತಜ್ಞತೆಯನ್ನು ಸಲ್ಲಿಸಬೇಕಾದುದು ಅವಶ್ಯಕ.

ಇದರಲ್ಲಿ ಶ್ರೀ ವೇಮನಯೋಗಿ ವರ್ಯನ, ನಿರಹಂಕಾರ, ಭಕ್ತಿ ಆವೇಗ ವೆಂತಿದ್ದಿತೆಂಬುದಕ್ಕೆ:-

೧ "ನೀನಾಡಲು ನಾನಾಡುವೆ ನೀನಿರಲಾ ನಿರ್ಪೆನೈದೆ ನಿರ್ವಿಣ್ಣತೆಯಿಂ
ನೀಂ ನೆನೆಯಲ್ ನಾಂ ನೆನೆವೇಂ, ನೀಂ ನಗಲಾಂ ನಗುವೆನಯ್ಯ
ನಿಜವಿದುವೇಮಾ"

ಮತ್ತು

೨ "ಬೆಟ್ಟದಪ್ಪನೆ ಮಾವ, ಬೆಟ್ಟದಮ್ಮನೆ ಸತಿ—ಬೆಟ್ಟಗಟ್ಟ ಚಾಪ
ಬೆಟ್ಟವೆಮನೆ—ಬೆಟ್ಟದಂಥ ದೊರೆಯು ಗುಂಡಾಗಿ ಪೋದನೇ ?
ವಿಶ್ವತೋಭಿರಾಮ ಕೇಳು ವೇಮಾ,

ಹೀಗೆ ಇನ್ನೂ ಅನೇಕಾನೇಕ, ಸಪ್ರಮಾಣ, ಸತ್ಯಾರ್ಥ, ಗರ್ಭಿತಗ ಳಾದ ತತ್ವಗಳು ಮಾನವ ಸಮಾಜಕ್ಕೆ, ನೈತಿಕ, ಧಾರ್ಮಿಕ, ಜ್ಞಾನದೀವಟಿಗೆ ಗಳಾಗಿರುವುವು. ಇಲ್ಲಿ ನೋಡಿ:-

೩. ವಾಕ್ಕಿನಲ್ಲಿಗುರುವು,ವಾಕ್ತತ್ವದೊಳು ಗುರುವು-ಕತ್ತಲಲ್ಲಿ ಗುರುವು
ಕಾಣಿಸುವನು-ಸಕಲ ಜಗಕೆ ಗುರುವೆ ಆಧಾರವಾಗಿರ್ಪ ವಿಶ್ವ....

ಪಾಠಕ ಮಹಾಶಯರಿಗೆ ಮುಂದಿನ ತತ್ವಗಳನ್ನು ಬಿಟ್ಟುಕೊಟ್ಟಿರು ತ್ತೇನೆ.

ಓಂ

ಈ ಪುಸ್ತಕ ರಾಜದಲ್ಲಿ, ಶ್ರೀರಾಜು ಅವರು; ಧಾರ್ಮಿಕ ಗುರುಗಳವರ ಸಂದೇಶಗಳನ್ನು ಬರೆಸಿರುವುದು ಅತ್ಯಂತ ಅಭಿಮಾನದ ಸಂಗತಿಯಾಗಿರುವುದು. ಹಾಗೂ ಇದರಲ್ಲಿ ಶ್ರೀವೇಮನ ಸಂಕ್ಷಿಪ್ತ ಜೀವನ ಚರಿತ್ರೆಯನ್ನೂ ಕೊಟ್ಟಿರುತ್ತಾರೆ.

ಸರ್ವಜ್ಞ, ಬಸವೇಶ್ವರ, ಅಕ್ಕಮಹಾದೇವಿ ಮುಂತಾದ ಮಹನೀಯರ ವಚನ ಸುಧಾರಸವನ್ನು ಸವಿದು, ಆನಂದಿಸುವ ಕನ್ನಡ ಬಂಧುಗಳು ಶ್ರೀ ವೇಮನತತ್ವ (ವಚನ) ಗಳನ್ನು ಅಕ್ಕರೆಯಿಂದ ಪಠಿಸಿ, ಪ್ರಯೋಜನ ಹೊಂದುತ್ತಾರೆಂದು ಹಾರೈಸುತ್ತೇನೆ.

ಸ್ವರ್ಗವಾಗಿ ಶ್ರೀ ಶಿ. ಆರ್. ರೆಡ್ಡಿಯವರು ತಮ್ಮ ಸ್ವಹಸ್ತಾಕ್ಷರಗಳಿಂದ ಗ್ರಂಥಕರ್ತರಿಗೆ ಬರೆದಿದ್ದ ಆಂಗ್ಲಭಾಷೆಯ ಪತ್ರಗಳ ಅರ್ಥವನ್ನು ಕನ್ನಡದಲ್ಲಿ ಕೊಟ್ಟಿರುತ್ತಾರೆ.

ಒಟ್ಟಿನಲ್ಲಿ ದಿವಂಗತ ಡಾ|| ರೆಡ್ಡಿಯವರ ಸ್ಮಾರಕ ಗ್ರಂಥರಾಜಕ್ಕೆ ನನ್ನ ಮುನ್ನಡಿ ಕೋರಿದುದಕ್ಕಾಗಿ ನಾನು ಶ್ರೀ ಭೀಮರಾಜು ಅವರಿಗೆ ಹೃತ್ಪೂರ್ವಕ ಅಭಿವಂದನೆಗಳನ್ನು ಸಲ್ಲಿಸುತ್ತೇನೆ.

ಮಹತ್ಮಾಜೀ ಅವರ ತತ್ವಗಳಿಗೆ ಸರಿದೂಗುವ ಸರ್ವ ಸಮತ್ವವುಳ್ಳ ಈ ಪಾವನ ತತ್ವಗಳನ್ನು ಸುಹೃದಯರಾದ ಓದುಗರು ಸಾವಧಾನವಾಗಿ ಓದಿ ಆನಂದಿಸಿ, ಅನುಷ್ಠಾನ ಪರರಾಗಬೇಕೆಂದು, ಪ್ರಾರ್ಥಿಸುತ್ತೇನೆ. ಗ್ರಂಥಕರ್ತರ ಉಪೋದ್ಘಾತ ಮುಂತಾದುವನ್ನು ಓದುವುದರಿಂದ ಸರ್ವವಿದಿತವಾಗುತ್ತೆ. ನಾನು ಇದಕ್ಕಾಗಿ ಲಂಬಿಸಿ ಬರೆದುದಾದರೆ, ಪುನರುಕ್ತಿಯಾದೀತೆಂಬ ಶಂಕೆಯಿಂದ ಇಷ್ಟು ಮಾತ್ರ ಹೇಳಿ ಮುಗಿಸುತ್ತೇನೆ.

ಓಂ

ಮಹನೀಯರು ಈ ತತ್ವಗಳನ್ನು ಆಕ್ಕರೆಯಿಂದ ಪಠಿಸಿ ಸುಜ್ಞಾನ ಮಾರ್ಗದಲ್ಲಿ ತಮ್ಮ ಮನಸ್ಸನ್ನು ತಿರುಗಿಸಿ ಕೃತಾರ್ಥರಾಗಲೆಂದು, ಸರ್ವದಯಾ ಮಯನಾದ ಪರಮಾತ್ಮನಲ್ಲಿ ಪ್ರಾರ್ಥನೆಯನ್ನು ಸಲ್ಲಿಸುತ್ತೇನೆ.

ಇಂತು ವಿಜ್ಞಾಪಿಸುವ,
ಕೆ. ಚಂಗಲರಾಯರೆಡ್ಡಿ
ಮೈಸೂರು ಸಂಸ್ಥಾನದ ಮಾಜಿ ಪ್ರಧಾನರು
ಮತ್ತು
ಕೇಂದ್ರ ಸರಕಾರದ ಉತ್ಪನ್ನ ಶಾಖಾ ಸಚಿವರು.

ಬೆಂಗಳೂರು.
ಹೊಸದೆಲ್ಲಿ.





ಶ್ರೀ ಶ್ರೀ ಜಯದೇವ ಮುರುಘರಾಜೇಂದ್ರ ಸ್ವಾಮಿಗಳವರು,
ಶ್ರೀ ಸಂಸ್ಥಾನ ಬೃಹನ್ಮಠ, ಚಿತ್ರದುರ್ಗ.

[illegible]

[illegible]

ಕೆ. [illegible]

[illegible]


[illegible]

[illegible]



[illegible]

ಓಂ



ಶ್ರೀ ಶ್ರೀ ಜಯದೇವ ಮುರುಘರಾಜೇಂದ್ರ ಸ್ವಾಮಿಗಳವರು,
ಶ್ರೀ ಸಂಸ್ಥಾನ ಬೃಹನ್ಮಠ, ಚಿತ್ರದುರ್ಗ.

ಓಂ

ಶಾಂತಿ ಸಂದೇಶ

ನಮ್ಮ ಭಾರತವು ಹಲವಾರು ಭಾಷಾಪ್ರಾಂತಗಳಾಗಿ ಹರಿದು ಹಂಚಿಕೆಯಾಗಿರುವುದು ಸರಿಯಷ್ಟೆ? ಇಲ್ಲಿನ ರಾಜಕೀಯ, ಸಾಮಾಜಿಕ, ನೈತಿಕ, ಧಾರ್ಮಿಕ, ರೀತಿನೀತಿಗಳು, ಪರಧರ್ಮೀಯರ ಪ್ರಚಾರ, ಪ್ರಘಾತ ಬಾಹುಳ್ಯವಿದ್ದರೂ ಸನಾತನ ಹಿಂದೂ ಧರ್ಮವು. ಸಂಪೂರ್ಣ ಖಿಲವಾಗದೆ, ಕುಟುಕು ಜೀವದಿಂದ ಉಳಿದುಕೊಂಡಿರುವುದು ಆಂಧ್ರ, ಕರ್ನಾಟಕ, ದ್ರವಿಡ, ಮಹಾರಾಷ್ಟ್ರ ಪ್ರದೇಶಗಳಲ್ಲಿ ಲೀಲಾವಿಭೂತಿಗಳು ಅವತರಿಸಿ, ಅಮರ ತತ್ವಗಳನ್ನು ಬೀರಿ, ಎಚ್ಚರಿಸಿದುದೇ ಅತಿ ಮುಖ್ಯ ಕಾರಣಗಳಲ್ಲೊಂದೆಂಬುದು ನಿರ್ವಿವಾದ.

ಇಂದು ನಮ್ಮ ಸ್ವತಂತ್ರ ಭಾರತ ನಾಯಕರು ಈ ಕಲಸುಮೇಲೋಗರವನ್ನೊಂದುಗೂಡಿಸಿ, ನಮ್ಮ ಸಂಸ್ಕೃತಿಯನ್ನುಳಿಸಿ, ಭಾಷೆ ಭಾಷೆಗಳಿಗಿರುವ ವೈಷಮ್ಯಭಾವವನ್ನು ಕೂಡಾ ಅಳಿಸಿ, ಸಂಪೂರ್ಣ ಐಕಮತ್ಯದ ಸ್ವಾತಂತ್ರ್ಯವನ್ನು ಗಳಿಸಬೇಕಾಗಿರುವುದು ಅಂತೆಯೇ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ, ಅಮೌಲ್ಯ ತತ್ವರತ್ನಗಳು, ಪರಿವರ್ತನಗೊಂಡು, ಸರ್ವಸಮತ್ವವು ಹಬ್ಬುವಂತೆ ಮಾಡಬೇಕಾದುದೂ ಮುಖ್ಯ ಕಾರ್ಯಗಳಲ್ಲೊಂದಾಗಿರುವುದು. ಇಂತಹ ಪರಿವರ್ತನ ಮಹತ್ಕಾರ್ಯವನ್ನು ನಮ್ಮ ಚಿತ್ರದುರ್ಗದ ಕರ್ನಾಟಕಾಂಧ್ರ ಕವಿ ಬಿ. ಭೀಮರಾಜು ಅವರು ಇಂದು ಮಾಡಿ ತೋರಿಸಿರುವುದು ನಮಗೆ ವಿಶೇಷ ಆನಂದದಾಯಕವಾಗಿರುವುದು

ಅದಾವುದೆಂದರೆ:—ಆಂಧ್ರ ಸಾರಸ್ವತ ಸಮ್ರಾಟರೆಂದು ವಿಖ್ಯಾತಿ ಗಳಿಸಿರುವ, ಶ್ರೀ ವೇಮನ ಯೋಗಿಯ ಜೀವನ ಚರಿತ್ರೆಯನ್ನೂ, ಅವರ ಬೋಧಪ್ರದ ತತ್ವಗಳನ್ನೂ, ಕನ್ನಡನಾಡ ನುಡಿಗೆ, ಪರಿವರ್ತನ ಮಾಡಿರು

ವುದು ಮಾತ್ರವಲ್ಲದೆ, ನಮ್ಮ ಮೈಸೂರು ಸಂಸ್ಥಾನಕ್ಕೆ ಎರಡು ಸಲ ಶಿಕ್ಷಣ ಶಾಖಾ ಅಧ್ವರ್ಯರಾಗಿ ಆಗಮಿಸಿ, ಶ್ರೀ ವೇಮನ ತತ್ವಗಳನ್ನೇ ತಮ್ಮ ನಿತ್ಯಾನುಷ್ಠಾನದಲ್ಲಿಟ್ಟುಕೊಂಡು, ಆಂಧ್ರಾಂಗ್ಲ ವಾಙ್ಮಯದಲ್ಲಿ ಅದ್ವಿತೀಯ ಮೇಧಾವಿಗಳೆಂದು ಹೆಸರಾಂತು, ದಿವಂಗತರಾದ, ಕಟ್ಟಮಂಚಿ ಶ್ರೀ ರಾಮ ಲಿಂಗಾರೆಡ್ಡಿಯವರ ಸ್ಮಾರಕ ಗ್ರಂಥವಾಗಿ ಮುದ್ರಿಸಿರುವುದು ಕೇವಲ ಅಭಿ ಮಾನದ ಸಂಗತಿಯಾಗಿರುವುದು.

ಅದರಲ್ಲೂ ಕುಂದನಕ್ಕೆ ಮೆರಗುಕೊಟ್ಟಂತೆ, ನಮ್ಮ ಸಂಸ್ಥಾನದ ಪ್ರಧಾನ ಸಚಿವರಾಗಿದ್ದು, ಪ್ರಪ್ರಥಮ ಪ್ರಜಾರಾಜ್ಯದಲ್ಲಿ, ಅಪಾರ ಕೀರ್ತಿ ಗಳಿಸಿ, ಇಂದು ಭಾರತ ಕೇಂದ್ರ ಸರಕಾರದ ಸೇವೆಗೆ ಆಮಂತ್ರಿತರಾಗಿ, ಅಭಿ ವೃದ್ಧಿಶಾಖಾ ಸಚಿವರಾಗಿರುವ, ಶ್ರೀ ಕೆ. ಸಿ. ರೆಡ್ಡಿ ಅವರ ಸುರಸ ! ಸುಮ ಧುರ !! ಸಮೀಚೀನವಾದ ಮುನ್ನುಡಿ ಬರೆಸಿದುದು ಸಮರ್ಪಕವಾಗಿದೆ. ಇಷ್ಟು ಮಾತ್ರವಲ್ಲದೆ ಇದರಲ್ಲಿ ಅನೇಕ ಮಹಾಶಯರ ಸಂದೇಶಗಳು ಹಾಗೂ ಪ್ರಶಂಶಾಪರ ಲೇಖನಗಳನ್ನೂ ಪಡೆದು ನಮ್ಮ ಸಂದೇಶಕ್ಕೂ ಮಾನ್ಯತೆ ಕೊಟ್ಟಿರುವ ಗ್ರಂಥಕರ್ತರಿಗೆ ನಾವು ತನು, ಮನ, ಧನದಿಂದ ಸಹಕರಿಸಿ ಈ ಮಾನ್ಯ ಗ್ರಂಥಕ್ಕೆ ಶ್ರೇಯಸ್ಸನ್ನು ಕೋರುತ್ತೇವೆ.

ಇಂದು ಜಾತ್ಯತೀತ ರಾಷ್ಟ್ರನಿರ್ಮಾಣಕ್ಕೆ ಕಟಿಬದ್ಧರಾಗಿ ನಿಂತು ಅನುಪಮಾನ, ನಿಸ್ವಾರ್ಥಸೇವಾ ಸಲ್ಲಿಸುತ್ತಿರುವ ದೇಶನಾಯಕರಾದ ಶ್ರೀ ನೆಹರೂ, ಪ್ರಸಾದ್ ಮುಂತಾದ ಅವರ ಮಹಾತ್ಮರ ಪ್ರಿಯ ಶಿಷ್ಯರು, ಜಾತ್ಯತೀತ ಸಮಾಜ ನಿರ್ಮಾಣಕ್ಕೆ ದುಡಿದು ಅದರಂತೆ ತತ್ವರೂಪದಲ್ಲಿ ನುಡಿದಿರುವ ಶ್ರೀ ವೇಮನಾದಿ ಪ್ರಭೃತಿಗಳಂತಹ ಕೃತಿಪ್ರಚಾರಕ್ಕೂ, ನಾನಾ ಭಾಷೆಗಳಲ್ಲಿ ಅವಕಾಶಕಲ್ಪಿಸಿ, ಕೀರ್ತಿಕಾಮಿಗಳಾಗಬೇಕೆಂದು ಬಯಸುತ್ತೇವೆ.

ಮತ್ತೊಂದು ನಮ್ಮ ಭಾಗ್ಯವಿಶೇಷವೆಂದರೆ ಆದಿಯಿಂದಲೂ ನಮ್ಮ ಮೈಸೂರು ಅರಸು ಮನೆತನದವರು ಪ್ರಗತಿ ಮಾರ್ಗದಲ್ಲಿ, ಪರಿಪೂರ್ಣ ಪ್ರಜಾವಾತ್ಸಲ್ಯ ಮೂರ್ತಿಗಳಾಗಿರುವುದು ಹಿಂದಿನ ಆಳಿದ ಮಹಾರಾಜರು

ಗಳ ಕೀರ್ತಿಧ್ವಜವನ್ನು ಹಿಡಿದೆತ್ತಿ, ಇಂದಿನ ಪರಿವರ್ತನ ಯುಗಕ್ಕೆ ಹೊಂದಿಕೊಂಡು, ಭಾರತಕ್ಕೆ ಮಾರ್ಗದರ್ಶಕರಾಗಿರುವ ನಮ್ಮ ಶ್ರೀ ಜಯಚಾಮರಾಜ ಪ್ರಭುಗಳು ತತ್ವನಿಷ್ಠಾಗರಿಷ್ಠರೆಂದು ಹೆಮ್ಮೆಪಡಬೇಕಾಗಿರುವುದು. ಸರ್ವತೋಮುಖವಾಗಿ ಈ ತತ್ವಗಳು ಇಡೀ ಕರ್ನಾಟಕದಲ್ಲಿ ಬೆಳಗಲೆಂದು ತ್ರಿಕರಣ ಶುದ್ಧಿಯಿಂದ ಹಾರೈಸುತ್ತೇವೆ.

ಗ್ರಂಥಕರ್ತರಾದ ಶ್ರೀ ಭೀಮರಾಜು ಅವರ ಸಂಪೂರ್ಣ ಶ್ರಮ ಪ್ರಯಾಸಕ್ಕೆ ಸತ್ಫಲ ದೊರೆಯಲೆಂದು ಹಾರೈಕೆ. ಇವರು ೪೦-೫೦ ವರ್ಷಗಳಿಂದಲೂ ಉಭಯ ಭಾಷೆಗಳಲ್ಲೂ ಸತತ ಸಾಹಿತ್ಯಸೇವೆ ಸಲ್ಲಿಸಿರುತ್ತಾರೆಂಬುದು ನಮ್ಮ ಮನವರಿಕೆಯಾಗಿದೆ. ಈ ಸಂದರ್ಭದಲ್ಲಿ ನಾವು ಇವರನ್ನು ಪ್ರೀತಿಪೂರ್ವಕವಾಗಿ "ಕರ್ನಾಟಕಾಂಧ್ರೋಭಯ ಕವಿತಾವಿಶಾರದ" ಎಂದು............ಸಂಬೋಧಿಸಲು ಬಯಸುತ್ತೇವೆ. ಇವರಿಗೆ ಸರ್ವೇಶ್ವರನು ಸನ್ಮಂಗಳವೀಯಲಿ.

ಕೊನೆಯದಾಗಿ ದಿವಂಗತ ಡಾ|| ಸಿ. ಆರ್. ರೆಡ್ಡಿಗಳವರ ಆತ್ಮಕ್ಕೆ ಪರಮಾತ್ಮನು ಶಾಂತಿಪ್ರದಮಾದ ಮೋಕ್ಷಸಾಮ್ರಾಜ್ಯವನ್ನು ಅನುಗ್ರಹಿಸಲೆಂದ, ಇಚ್ಛಿಸುತ್ತೇವೆ.

ಇಂತು,

ದಿನಾಂಕ ೧೫—೧೧—೫೨

ಶ್ರೀ ಜಯದೇವ ಮುರುಘರಾಜೇಂದ್ರ ಸ್ವಾಮಿ,
ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ.






ಮೈಸೂರು ಸಂಸ್ಥಾನದ ಪ್ರಧಾನ ಸಚಿವರಾದ
ಮಾನ್ಯ ಶ್ರೀ ಕೆ. ಹನುಮಂತಯ್ಯನವರು





ಓಂ



ಮೈಸೂರು ಸಂಸ್ಥಾನದ ಪ್ರಧಾನ ಸಚಿವರಾದ
ಮಾನ್ಯ ಶ್ರೀ ಕೆ. ಹನುಮಂತಯ್ಯನವರು

ಓಂ

ಸಂದೇಶ.

ಕನ್ನಡದಲ್ಲಿ ಸರ್ವಜ್ಞನ ಪದಗಳು, ಶಿವಶರಣರ ವಚನಗಳು, ಹರಿದಾಸರ ಕೃತಿಗಳು ಹೇಗೆ ಜನಪ್ರಿಯವಾಗಿವೆಯೋ ಹಾಗೆ ಆಂಧ್ರದಲ್ಲಿ ವೇಮನನ ಪದಗಳು ಜನಪ್ರಿಯವಾಗಿವೆ

ವೇಮನ ಸಿದ್ಧಯೋಗಿ. ಸಂಸಾರದ ಸುಖದುಃಖಗಳನ್ನು ಕಂಡವನು. ಅವನ ಪದಗಳು ಜ್ಞಾನ ಭಂಡಾರ. ಅದರಲ್ಲಿ ವ್ಯಕ್ತಿ ಮತ್ತು ಸಮಾಜದ ನೈತಿಕ ಉನ್ನತಿಗೆ ಬೇಕಾದ ಬೋಧೆಗಳು ತುಂಬಿರುವದಲ್ಲದೆ ಆತ್ಮೋನ್ನತಿಗೆ ಬೇಕಾದ ಗಾಢವಾದ ತತ್ವಗಳೂ ಅಡಕವಾಗಿವೆ. ಅವುಗಳ ಶೈಲಿಯೋ ತುಂಬ ಸರಳ ಶೈಲಿ.

ಅವುಗಳನ್ನು ಉಭಯ ಭಾಷಾ ಕವಿಗಳಾದ ಶ್ರೀ ಭೀಮರಾಜು ಅವರು ಕನ್ನಡದಲ್ಲಿ ಸುಲಭ ಶೈಲಿಯಲ್ಲಿ ಗೀತ ರೂಪದಲ್ಲಿ ಪರಿವರ್ತಿಸಿದ್ದಾರೆ ಓದಲು ಹಾಡಲು ತುಂಬಾ ಚೆನ್ನಾಗಿವೆ ಇವು ಕನ್ನಡ ಜನತೆಯ ಮೆಚ್ಚುಗೆಯನ್ನು ಪಡೆಯುವುವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಈ ಗ್ರಂಥವು, ಕೀರ್ತಿಶೇಷರಾದ ಕಟ್ಟಮಂಚಿ ರಾಮಲಿಂಗಾರೆಡ್ಡಿ ಅವರಿಗೆ ಅರ್ಪಿಸಿರುವುದು, ನಮಗೆಲ್ಲಾ ಸಂತೋಷದಾಯಕವಾಗಿರುವುದು. ಅವರ ಆತ್ಮಕ್ಕೆ ತತ್ವಗಳಿಂದ ಶಾಂತಿಯುಂಟಾಗಲೆಂದು ಹಾರೈಸುತ್ತೇನೆ.

ಕೆ. ಹನುಮಂತಯ್ಯ,
ಮೈಸೂರಿನ ಮುಖ್ಯ ಮಂತ್ರಿಗಳು.

ಓಂ.

ಪ್ರೇಮ-ಸಂದೇಶ.

ಶ್ರೀ ವೇಮಣ್ಣನವರ ತತ್ವಗಳನ್ನು ನಮ್ಮ ಕರ್ಣಾಟಕಾಂಧ್ರಕವಿಗಳಾದ ಶ್ರೀ ಬಿ. ಭೀಮರಾಜು ರವರು ಕನ್ನಡಕ್ಕೆ ತರ್ಜುಮೆಮಾಡಿ ಕನ್ನಡಿಗರಿಗೆ ಉಪಕಾರಮಾಡಿರುತ್ತಾರೆ. ಭಾಷಾಂತರಿಸುವಾಗ ಸಾಧಾರಣವಾಗಿ ಮೂಲದ ಬಿಗಿ ಸ್ವಲ್ಪ ಸಡಿಲವಾಗುತ್ತದೆ. ಅದು ಸ್ವಭಾವ ಆದರೆ ಶ್ರೀ ಭೀಮರಾಜು ರವರ ಭಾಷಾಂತರದಲ್ಲಿ ಮೂಲದಲ್ಲಿ ಕಂಡುಬರುವ ವೇಮಣ್ಣನವರ ವಚನಗಳ ಸ್ವಾದ ಮತ್ತು ಭಾವಗಳಿಗೆ ಏನೊಂದೂ ಚ್ಯುತಿ ಬಂದಿಲ್ಲ. ಈ ಗ್ರಂಥವನ್ನು ಕನ್ನಡಿಗರೆಲ್ಲರೂ ಅಭಿಮಾನದಿಂದ ಸ್ವಾಗತಿಸುತ್ತಾರೆಂದು ನನ್ನ ನಂಬಿಗೆ ಮತ್ತು ಹಾಗೆ ಮಾಡಲೆಂದು ನನ್ನ ಹಾರೈಕೆ.

ಶ್ರೀ ವೇಮಣ್ಣನವರು ಸರ್ವಜ್ಞಮೂರ್ತಿ ಮತ್ತು ಇತರ ವಚನಕಾರರು ಸಮಾಜದಲ್ಲಿದ್ದ ಕೊಳಕನ್ನು ತೆಗೆದು ಹಾಕಲು ತೀವ್ರ ಪ್ರಯತ್ನಪಟ್ಟ ಕ್ರಾಂತಿಕಾರರು. ಅಂಜಿಕೆ, ಆಸೆಗಳ ಬಂಧನಗಳೇ ಅವರಿಗಿರಲಿಲ್ಲ. ಅಂತೆಯೇ ಅವರ ಕೃತಿಗಳಲ್ಲಿ ಶಕ್ತಿ ಇದೆ, ಸತ್ಯವಿದೆ ಇವೇ ಜನತೆಯನ್ನು ಉದ್ಧಾರಮಾಡುವ ಸಾಹಿತ್ಯದಬುನಾದಿಗಳು. ಈ ದೃಷ್ಟಿಯಿಂದ ಕನ್ನಡಿಗರೆಲ್ಲರೂ ವೇಮಣ್ಣನವರನ್ನು ಸರ್ವಜ್ಞನನ್ನು ಎಷ್ಟು ಆದರ, ಪ್ರೀತಿ, ಭಕ್ತಿಗಳಿಂದ ಕಾಣುತ್ತಾರೋ ಅಷ್ಟೇ ಆದರ, ಪ್ರೀತಿಗಳಿಂದ, ಭಕ್ತಿಯಿಂದ ಸ್ವಾಗತಿಸಬೇಕು

ಶ್ರೀ ಭೀಮರಾಜುರವರು ಗ್ರಂಥವನ್ನು ಬರೆಯಲು ಪ್ರೇರಿಸಿದ ಕೀರ್ತಿಶೇಷರಾದ ಕಟ್ಟಮಂಚಿ ರಾಮಲಿಂಗ ರೆಡ್ಡಿಯವರ ಜ್ಞಾಪಕಾರ್ಥವಾಗಿ ಅರ್ಪಿಸಿರುವುದು ಸೂಕ್ತವೂ ಯುಕ್ತವೂ ಆಗಿದೆ ಶ್ರೀ ರೆಡ್ಡಿಯವರು ಮೈಸೂರಿಗೆ ಹೆಚ್ಚಿನರೀತಿಯ ಸೇವೆ ಸಲ್ಲಿಸಿ, ಅವರ ಹೆಸರು ಮನೆಮಾತಾಗಿದೆ. ಈ ಗ್ರಂಥವು ಅವರಿಗೆ ಅರ್ಪಿತವಾದದ್ದು. ಗ್ರಂಥದ ಬೆಲೆಯನ್ನು ಹೆಚ್ಚಿಸಿದೆ ಎಂದು ನನ್ನ ಭಾವನೆ.

ಶ್ರೀ ಭೀಮರಾಜು ರವರ ಈ ಗ್ರಂಥಕ್ಕೆ ಯೋಗ್ಯಮನ್ನಣೆ ದೊರೆತು, ಆದರಿಂದ ಮತ್ತೆ ಇಂತಹ ಉಪಯುಕ್ತ ಗ್ರಂಥಗಳನ್ನು ರಚಿಸುವಂತಾಗಲೆಂದು ಹಾರೈಸುತ್ತೇನೆ

೨೫-೧-೫೩.

ನಿಜಲಿಂಗಪ್ಪ.

ಸದಾಶಯ-ಸಂದೇಶ



ಸಹಸ್ರಾರು ವರ್ಷಗಳಿಂದ ಬೆಳೆದು ಬಂದ ಭಾರತ ಸಂಸ್ಕೃತಿಯನ್ನು ಆಗಿಂದಾಗ್ಗೆ ಬೆಳಗಲು ಈ ವಿಶಾಲ ಭಾರತದ ವಿಭಿನ್ನ ಪ್ರದೇಶಗಳಲ್ಲಿ ಮಹಾಸೀಯರು ಅವತರಿಸಿರುವರು. ಏಕಾತ್ಮ ಭಾವವೇ ಭಾರತ ಸಂಸ್ಕೃತಿಯ ಅಂತರ್ಯ, ಏಕಾತ್ಮಭಾವದ ಸಿದ್ಧಿ ಆಳವಾದ ಆತ್ಮಾನುಭವದಿಂದಲೇ ಸಾಧ್ಯ. ಆತ್ಮಾನುಭವ ಹೊಂದಿದ ಋಷಿಗಳೇ ನಿಜ-ಕವಿಗಳು. ವೇದಗಳಲ್ಲಿ ಋಷಿಗಳು ಭಗವಂತನನ್ನು ಸಹ "ಕವಿ" ಎಂದು ಸಂಬೋಧಿಸಿರುವುದಕ್ಕೆ ಇದುವೇ ಕಾರಣ. ಆತ್ಮಾನುಭವಿಗಳು ಯಾವ ದೇಶದವರೇ ಆಗಲಿ ಯಾವ ಭಾಷೆಯವರೇ ಆಗಲಿ ದೇಶ-ಕಾಲ ವರ್ತಮಾನಾತೀತರು. ಅಂತಹವರು ಸರ್ವಮಾನ್ಯರು ವಿಶ್ವಗುರುಗಳು.

ಆಂಧ್ರ-ದೇಶದಲ್ಲಿ ಹುಟ್ಟಿ, ಆಂಧ್ರ-ಭಾಷೆಯನ್ನಾಡಿ, ಆಂಧ್ರ-ನುಡಿಯಲ್ಲೇ ತನ್ನ ಆತ್ಮಾನುಭವ ಪೂರಿತ ತತ್ವಗಳನ್ನು ಹೊರಗೆಡಹಿ, ಜಗತ್ತಿಗೆ ಮಹದುಪಕಾರ ವೆಸಗಿದ ಯೋಗಿ ವೇಮನನು ಕನಕ ಪುರಂದರ ಮುಂತಾದ ದಾಸರ, ಹೇಮರೆಡ್ಡಿ ಮಲ್ಲಮ್ಮ, ಮೀರಾ, ಅಕ್ಕಮಹಾದೇವಿ ಮುಂತಾದ ಯೋಗಿಣಿಯರ ಶ್ರೇಣಿಗೆ ಸೇರಿದ ಮಹಾಯೋಗಿ

ಆಂಧ್ರ-ಭಾಷೆಯನ್ನರಿಯದ ನನ್ನಂತಹ ಅನೇಕ ಮಂದಿ ಕನ್ನಡಿಗರಿಗೆ ಯೋಗಿ ವೇಮನನ ತತ್ವಗಳನ್ನು ಕನ್ನಡದ ಮೂಲಕವೇ ಪರಿಚಯ ಮಾಡಿಕೊಟ್ಟಿರುವ ವಯೋ-ಜ್ಞಾನವೃದ್ಧ, ಉಭಯ ಭಾಷಾ ವಿಶಾರದ ಶ್ರೀ ಭೀಮರಾಜು ಅವರಿಗೆ ಕನ್ನಡಿಗರೆಲ್ಲರೂ ಚಿರಕೃತಜ್ಞರಾಗಿರಬೇಕಾಗಿದೆ. ಶ್ರೀ ಭೀಮರಾಜು ಅವರು ಮಹತ್ವಾಕಾಂಕ್ಷಿಗಳು; ಸಾಹಸಿಗಳು. ಈ ಇಳಿ ವಯಸ್ಸಿನಲ್ಲೂ ಗ್ರಂಥಾನುವಾದ, ಗ್ರಂಥ ಪ್ರಕಾಶನಾದಿಕಷ್ಟ-ಸಾಧ್ಯ ಕಾರ್ಯಕ್ಕೆ ಕೈ ಹಾಕಿರುವುದು ಅವರ ಸಾಹಸವನ್ನು ಮಾತ್ರವಲ್ಲವೆ, ಸೇವಾ

ಬುದ್ಧಿಯನ್ನು ಸೂಚಿಸುತ್ತದೆ. ಮಂದಿಯ ಮನಸ್ಸಿನಲ್ಲಿ ಉದಾತ್ತ ಭಾವನೆಗಳು ನೆಲೆಸಿ, ದೇಶದ ಯಶಸ್ಸು ವರ್ಧಿಸಲೆಂಬ ಅವರ ಅಭಿಲಾಷೆ ಈ ಗ್ರಂಥ ಪ್ರಕಾಶನ ಪ್ರಸರಣದ ಮೂಲಕ ನೆರವೇರಲೆಂದು ನಾನು ಆಶಿಸುತ್ತೇನೆ

ಯೋಗಿ-ವೇಮನರ "ಅಕ್ಷರವರಿಯದ ಆಚಾರವದು ಏಕೆ" ಎಂಬೀ ಮಾತು ಮಡಿ-ಮಡಿ ಎಂದು ಹಾರಾಡುವ ಅನೇಕರಿಗೆ ಕೈಗನ್ನಡಿಯಂತಿದೆ ಅಲ್ಲದೆ "ಗುಡಿ-ದೇಹವಾತ್ಮ ದೇವರು" "ಅಜ್ಞಾನವೇ ಶೂದ್ರತ್ವವು" "ಜಾತಿ ಮತಗಳೆಂದು ಜನರಡರೊಳು ಸಿಕ್ಕಿ ಭಾವಪರವಶರಾಗುತಿರುವರವರು" 'ಹೊಲೆಯ ಹೊಲೆಯನಲ್ಲ' "ಹೊತ್ತುಮೂಡುವ ಕಡೆ, ಹೊತ್ತು ನಿಲ್ಲುವ ಕಡೆ, ಹೊತ್ತು ಮುಳುಗುವ ಕಡೆ, ದೃಷ್ಟಿ ನಿಲ್ಲಿಸಿ, ಹೊತ್ತು ತಿಳಿದಾತನೇ ಉತ್ತಮ ಯೋಗಿಯು" 'ಸತತ ಶಿಲೆಗೆ ಮುಗಿಯೆ ನಿರ್ಜೀವಿಯಾಗುವ' ಈ ತತ್ವಗಳು ಜನರ ಮನಸ್ಸನ್ನು ತಿಳಿಗೊಳಿಸುವುವೆಂದು ಹೇಳಬೇಕಾದ ಅವಶ್ಯಕತೆಯಿಲ್ಲ.

ಸ್ತ್ರೀಯಿಂದ ತನಗಾಗಬೇಕಾದುದೆಲ್ಲವನ್ನೂ ಮಾಡಿಸಿಕೊಂಡು ಆಕೆಯಿಂದ ಎಲ್ಲಾತರದ ಸೇವೆಯನ್ನೂ ಸ್ವೀಕರಿಸಿ, ಕೊನೆಗೆ ತನ್ನ ಅಧಃಪತನಕ್ಕೆ ಆಕೆಯೇ ಕಾರಣಳೆಂದು ತೆಗಳಿ ತಳ್ಳಿ ಬಿಡುವುದೂ ಎಲ್ಲಾ ಭಾರವನ್ನು ಹೊತ್ತು ಹೊರುತ್ತಿರುವ ಸ್ತ್ರೀಯಮೇಲೆ ತನ್ನ ತಪ್ಪನ್ನೆಲ್ಲಾ ಹೇರಿ ಜಾರಿಕೊಳ್ಳುವುದೂ ಪುರುಷನಿಗೆ ಅಭ್ಯಾಸವಾಗಿಹೋಗಿದೆ. ಸ್ತ್ರೀ ಕನಿಷ್ಠಳೆಂದೂ ಎಲ್ಲ ಅನಿಷ್ಟಕ್ಕೂ ಮೂಲಳೆಂದೂ ಸಹಸ್ರಾರು ವರ್ಷಗಳಿಂದೀಚಿಗೆ ಬೆಳೆದುಕೊಂಡು ಬಂದಿರುವ ಭಾವನೆಯನ್ನು ಒಪ್ಪಿಕೊಂಡರೆ, ಏಕಾತ್ಮಭಾವಕ್ಕೆ ಚ್ಯುತಿಬಂದಂತಾಗುತ್ತದೆ ಸ್ತ್ರೀ ಆತ್ಮಾನುಭವಿಗಳು ಅಲ್ಪ ಸಂಖ್ಯೆಯವರಾಗಿದ್ದರೂ ಪುರುಷರನ್ನು ಹೀನಾಯವಾಗಿಕಂಡಿಲ್ಲ. ಅದು ಅವರದೊಡ್ಡಸ್ತಿಕೆಯನ್ನೂ ಉಜ್ವಲ ಏಕಾತ್ಮ ಭಾವವನ್ನೂ ಸೂಚಿಸುತ್ತದೆ. ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸ, ಪೂಜ್ಯ ಮಹಾತ್ಮ ಗಾಂಧೀಜೀ ಇವರಂತೆ ವೇಮನಯೋಗಿಯೂ ಸ್ತ್ರೀಯರ ನಿಜ ಮಹತ್ವವನ್ನು ತಿಳಿದು ಅವರಿಗೆ ಯೋಗ್ಯವಾದ ಪೂಜ್ಯ ಸ್ಥಾನವನ್ನಿತ್ತಿದ್ದಾರೆ.

—ಓಂ—

ಹೀಗೆ ವೇಮನ ತತ್ವಗಳು ಜನಗಳಲ್ಲಿ ಅನೇಕ ಉತ್ತಮ ಭಾವನೆಗಳನ್ನು ಮೂಡಿಸಿ ಜಗತ್ ಕಲ್ಯಾಣ ಸಾಧಿಸಲು ಸಹಾಯಕವಾಗಿದೆ.

ಈ ಉತ್ತಮ ಗ್ರಂಥವು ದೇಶಾಭಿಮಾನಿಗಳೂ, ಜ್ಞಾನವರೇಣ್ಯರೂ ಆದ ದಿ|| ಶ್ರೀಮಾನ್ ಸಿ. ಆರ್. ರೆಡ್ಡಿ ಅವರ ಸ್ಮಾರಕ-ಗ್ರಂಥವಾಗಿ ಹೊರಬಿದ್ದಿರುವುದೂ ಒಂದು ವಿಶೇಷವೇ. ಆ ಮಹನೀಯರ ಆಶೆ-ಆದರ್ಶಗಳು ನಮ್ಮ ಜನರಿಗೆ ಪಥಪ್ರದರ್ಶಕವಾಗಲೆಂದು ಹಾರೈಸುತ್ತೇನೆ.

ಈಗ ಮೈಸೂರು ಸರ್ಕಾರದವರು ಆರಂಭಿಸಿರುವ ಸಾಹಿತ್ಯ, ಸಂಸ್ಕೃತಿ ಪ್ರಸಾರ ಕಾರ್ಯಕ್ರಮದಲ್ಲಿ ವೇಮನತತ್ತ್ವ ಬೋಧನೆಗೂ ಅವಕಾಶ ಕಲ್ಪಿಸಿಕೊಡುವುದರ ಮೂಲಕವೂ, ಈ ಗ್ರಂಥರತ್ನವನ್ನು ಕರ್ನಾಟಕದ ಎಲ್ಲಾ ಭಾಗಗಳಲ್ಲಿ 'ಪಠ್ಯಪುಸ್ತಕ'ವನ್ನಾಗಿ ಗೊತ್ತುಪಡಿಸುವುದರ ಮೂಲಕವೂ, ಬೆಳೆಯುವ ಬಾಲ-ಬಾಲಿಕೆಯರ ಮನಸ್ಸನ್ನು ಪರಿಷ್ಕರಿಸುವಹಾಗೂ ರಾಷ್ಟ್ರೀಯ ಚಾರಿತ್ರ್ಯವನ್ನು ಸಂವರ್ಧಿಸುವ ಕಾರ್ಯಕ್ಕೆ ನೆರವಾಗಲೆಂದೂ ಸಂಬಂಧಪಟ್ಟವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಇತಿ,

ಸ್ವಾಮಿ ವಿಶ್ವಾನಂದ.

ಗುರುಕುಲಾಶ್ರಮ,
ಕೆಂಗೇರಿ.
ಬೆಂಗಳೂರು

8—12—52.



ಓಂ

ಭಕ್ತಿ ಸಂದೇಶ

ಕೀರ್ತಿಶೇಷರಾದ ಶ್ರೀ ಸಿ. ಆರ್. ರೆಡ್ಡಿ ಅವರು, ಡಾಕ್ಟರ್ ಸರ್ವಪಲ್ಲಿ ರಾಧಾಕೃಷ್ಣನ್, ಶ್ರೀ ಎ.ಆರ್. ಲಕ್ಷ್ಮಣಸ್ವಾಮಿ ಮೊದಲಿಯಾರ್ ಮುಂತಾದ ಭಾರತ ಶಿಕ್ಷಣ ತಜ್ಞರ ಮಾಲಿಕೆಯಲ್ಲಿ ಶೋಭಿಸತಕ್ಕವರು ಅಸಾಧಾರಣ ವಾಙ್ಮಿಗಳು. ಅವರ ಆಂಗ್ಲ ಭಾಷಣ ವೈಖರಿಯನ್ನೂ, ನಿರರ್ಗಳ ವಾಗ್ಝರಿಯನ್ನೂ ಕೇಳಿ ತಿಳಿಯುವುದಕ್ಕೆ ಅವರ ಶತ್ರುಗಳು ಕೂಡಾ ಧಾವಿಸಿ, ಮರೆಯಲ್ಲಿ ನಿಂತಾದರೂ ಮನನ ಮಾಡಿಕೊಂಡು ಪ್ರಶಂಸೆ ಮಾಡುತ್ತಿದ್ದರೆಂದರೆ ಅತಿಶಯೋಕ್ತಿಯಾಗಲಾರದು.

ಅವರು ನಮ್ಮ ಮೈಸೂರು ಸಂಸ್ಥಾನದ, ಹಿಂದುಳಿದ ಜನವರ್ಗವನ್ನು ಎಚ್ಚರಿಸಿ, ಅಸ್ಪೃಶ್ಯತೆಯು ಮಹಾರೋಗ ನಿವಾರಣೆಗೆ, 'ಬಾಪೂ ಅವರಿಗಿಂತಲೂ ಮುಂಚಿತವಾಗಿ' ದಿಟ್ಟತನದಿಂದ ಉಚಿತ ಚಿಕಿತ್ಸೆಯನ್ನು ಮಾಡಿ ಅಜರಾಮರವಾದ ಕೀರ್ತಿಯನ್ನು ಗಳಿಸಿದರು. ಅವಿಚ್ಛಿನ್ನವಾಗಿ, ಆಂಧ್ರ ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ದುಡಿದರು, ಮಡಿದರು.

ನಾನು ಕಳೆದ ೧೯೩೧ ನೇ ಜನವರಿ ೧೯ ರಂದು, ಚಿತ್ರದುರ್ಗ ನಗರದಲ್ಲಿ ಸಮಾವೇಶಗೊಂಡಿದ್ದ ರೆಡ್ಡಿ ಮಹಾ ಸಭಾ ಸಮಯದಲ್ಲಿ ವೈದ್ಯಕೀಯ ಶಿಕ್ಷಣ ಹೊಂದುತ್ತಲಿದ್ದ ವಿದ್ಯಾರ್ಥಿಯಾಗಿದ್ದೆನು. ದಿವಂಗತ ಡಾಕ್ಟರ್ ಸಿ. ಆರ್ ರೆಡ್ಡಿ ಅವರು, ಆ ಸಭೆಯ ಅಧ್ಯಕ್ಷರಾಗಿಯೂ, ಮುನಗಾಲ ರಾಜಾರವರು ಉದ್ಘಾಟನಾ ಸಮಾರಂಭ ಅಧ್ವರ್ಯರಾಗಿಯೂ ಆರಿಸಲ್ಪಟ್ಟಿದ್ದರು. ಈ ಸನ್ನಿವೇಶ, ಸುಸಂಘಟಿತ, ಸುಯೋಗವನ್ನು ಕಳೆದುಕೊಳ್ಳಲಾರದೆ ಸ್ವಯಂ ಸೇವಕಾ ಪಡೆಯ ದಂಡನಾಯಕನಾಗಿ ಸೇರಿ ಯತ್ಕಿಂಚಿತ್

ಸೇವಾ ಸಲ್ಲಿಸಿದೆನು. ನನ್ನ ಜೀವಿತದಲ್ಲಿ ಇಂದಿಗೂ, ಆ ದೃಶ್ಯವು ಅಚ್ಚಳಿಯದೆ ನಿಂತು, ಈಗಿನ ನನ್ನ ಪುರೋಭಿವೃದ್ಧಿಗೂ ಅದೊಂದು ಮಾರ್ಗದರ್ಶಕವೆಂದೇ ನಾನು ಭಾವಿಸಿರುವೆನು.

ಶ್ರೀ ವೇಮನ ಜಯಂತಿಯ, ಶುಭ ಮುಹೂರ್ತದ ಸುದಿನದಂದೇ, ಆ ಮಹಾಸಭಾಸಮಾರಂಭವಾದುದು. ಅಧ್ಯಕ್ಷ ಗದ್ದುಗೆಯಿಂದ, ದಿವಂಗತ ರೆಡ್ಡಿಗಳವರು ಶ್ರೀ ವೇಮನ ಯೋಗಿವರ್ಯನ, ನಿರ್ದುಷ್ಟ, ಸತ್ಯಾರ್ಥ ಗರ್ಭಿತಗಳಾದ, ತತ್ವಗಳ ವೀರಸಿಂಹ ನಾದಮಾಡಿದುದು ಇಂದಿಗೂ, ಎಂದಿಗೂ ಮರೆಯುವಂತಿಲ್ಲ. ಅದು ಕಾರಣ ಕೀರ್ತಿಶೇಷರಿಗೆ ವೇಮನ ತತ್ವಗಳ ವಿಷಯದಲ್ಲಿ ಅಪಾರ ಭಕ್ತ್ಯಾದರಗಳಿದ್ದುವೆಂಬುದಕ್ಕೆ ಬೇರೆ ನಿದರ್ಶನ ಕೊಡಬೇಕಾಗಿಲ್ಲ.

ಅಂದು ಆ ಮಹಾ ಸಭಾ ಸಾಹಿತ್ಯ ಕಾರ್ಯಕಲಾಪಗಳಲ್ಲಿ ಪ್ರಧಾನ ಪಾತ್ರವಹಿಸಿದ್ದ ಕರ್ನಾಟಕಾಂಧ್ರಕವಿ ಶ್ರೀ ಭೀಮರಾಜು ಅವರು, ಇಂದು ವೇಮನ ತತ್ವಗಳನ್ನು ಕನ್ನಡಕ್ಕೆ ಭಾಷಾಂತರಮಾಡಿ, ಸ್ವರ್ಗವಾಸಿ ರೆಡ್ಡಿಗಳವರ ಸ್ಮಾರಕ ಗ್ರಂಥವಾಗಿ ಮುದ್ರಿಸುವ ಮಹತ್ಕಾರ್ಯ ಗೌರವದಲ್ಲಿ ತೊಡಗಿ, ನಮ್ಮ ಸಂಸ್ಥಾನದ ಮಾಜಿ ಪ್ರಧಾನರೂ, ಕೇಂದ್ರ ಉತ್ಪಾದನ ಶಾಖಾ ಸಚಿವರೂ ಆಗಿರುವ ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿ ಅವರ ಮುನ್ನುಡಿ ಬರೆಸಿ, ಪೂಜ್ಯ ಗುರುಗಳಾದಿಯಾದ ಮಹರ್ಷಿಯರಿಂದ ಸಂದೇಶಗಳನ್ನು ಪಡೆದಿರುವ ಈ ಪವಿತ್ರ ಗ್ರಂಥದಲ್ಲಿ ನನ್ನದೂ ಒಂದು ಸಂದೇಶ ಕೊಡಬೇಕೆಂದು ಕೃತಿಕರ್ತರಾದ ಶ್ರೀ ರಾಜು ಅವರು ಕೋರಿದುದು 'ಸೌರಭ್ಯ ಕುಸುಮಸಂಗದೆ ನಾರುಂಸಲುವಂತೆ' ಎಂಬ ಆರ್ಯೋಕ್ತಿಗನುಸಾರವಾಗಿರುವುದೆಂದು ಬಗೆದು ನಾನು ಹೆಮ್ಮೆಪಡುತ್ತೇನೆ. ಇಂದಿಗೆ ಮುವ್ವತ್ತೊಂದು ವರುಷಗಳ ಹಿಂದೆ ವಿದ್ಯಾರ್ಥಿಯಾಗಿದ್ದು ದೈವೀಕವಾಗಿ ಸೇವಾ ಸಲ್ಲಿಸಿದ ಭಾಗ್ಯ ವಿಶೇಷದಿಂದಲೇ ನಾನು ಈಗ ಸಮಗ್ರ ಮೈಸೂರು ಮಹಾಜನರ ಸೇವಾ ಸಲ್ಲಿಸುವ ಸುಯೋಗವುಂಟಾಗಿರುವುದೆಂದು ನಂಬುತ್ತೇನೆ.

ಓಂ

ಕವಿವರ್ಯ ಶ್ರೀ ಭೀಮರಾಜು ಅವರು ಈ ಮಹತ್ವಾಕಾಂಕ್ಷೆಯನ್ನು ನನ್ನಲ್ಲಿ ಸೂಚಿಸಿ ನನ್ನ ಸಂದೇಶಕ್ಕೆ ಸ್ಥಳವಿತ್ತುದಕ್ಕಾಗಿ ಅವರಿಗೆ ನಾನು ಚಿರಋಣಿಯಾಗಿರುತ್ತೇನೆ ಮಾತ್ರವಲ್ಲ ಅವರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ದಿವಂಗತ ಡಾ|| ಸಿ. ಆರ್. ರೆಡ್ಡಿ ಅವರ ಆತ್ಮಕ್ಕೆ ಶ್ರೀ ವೇಮನ ತತ್ವ-ರತ್ನಗಳಿಂದ ನಿರಂತರ ಶಾಂತಿಯುತವಾದ ಮೋಕ್ಷವು ಸಂಪ್ರಾಪ್ತವಾಗಲೆಂದು ಭಕ್ತಿ ಪುರಸ್ಸರವಾಗಿ ಹಾರೈಸುತ್ತೇನೆ.

ಬೆಂಗಳೂರು,
೯—೧೦—೫೨.

ಇಂತು ವಿಜ್ಞಾಪಿಸುವ,
ಬಿ. ಆರ್. ರಾಮಲಿಂಗಾರೆಡ್ಡಿ,
ಮೈಸೂರು ಸಂಸ್ಥಾನದ
ವೈದ್ಯಶಾಖಾ ಮುಖ್ಯಾಧಿಕಾರಿ

ಓಂ

ಪ್ರಶಸ್ತಿ ಪತ್ರಿಕಾ

ಇಹ ಖಲು ಯಥಾ ಭಾರತೇ ಕಾಳಿದಾಸಃ ಕವಿರಾಟ್ ತಥಾ ಆಂಧ್ರ ದೇಶೇ ವೇಮನಾಖ್ಯಃ ತತ್ವವೇತ್ತಾ ಪ್ರಥಿತಃ ಇತಿ ವಿದಿತ ಪ್ರಾಯಃ, ಸರ್ವಾಣ್ಯಪಿ ಶಾಸ್ತ್ರೀಯ ತತ್ವಾನಿ ನಿರ್ವ್ಯಳೀಕಂ ಅನೇನ ಅವೇದಿ, ತತ್ಸರ್ವಂ ತೆನುಗು ಭಾಷಾಯಾಂ ಅನೇನ ಪ್ರಥಿತ ಮಾಸೀತ್, ತತ್ಫಲು ಅಂಕುರಿತಂ ವಿದ್ಯಾ ಶಾಖಾ ಮುಖ್ಯಾಧಿಕಾರಿಣಾ ಸಿ. ಆರ್. ರೆಡ್ಡಿ ನಾಮ್ನಾ ಇಹ ಅಂಕುರಿತಂ ಪಲ್ಲವಿತಂ ಬಹು ಶಾಖಾಶ್ಚ ಪ್ರಸಾರಿತಾಃ ನಾದ್ಯಾಪಿ ರಸಭೂಯಿಷ್ಠಂ ಫಲಿತಂ.

ಅಧುನಾ ಭೀಮರಾಜನಾಮ್ನಾ ಸರ್ವಾಣ್ಯಪಿ ತತ್ವಬೃಂದಾನಿ ಸ್ವಯಮಾಸ್ವಾದ್ಯ ಸರ್ವೈಃ ಆಬಾಲಂ ಆಸ್ವಾದಿತಾನಿಸ್ಯುಃ ಇತಿ ಸ್ವಯಮಾಲೋಚ್ಯ ಕರ್ನಾಟ ಭಾಷಯಾ ಭೂಯಿಷ್ಠ ಪ್ರಯಾಸೇನ ಕ್ರೋಡೀಕೃತಾನಿ ಅಹಮಪಿ ಕೃತ್ಸ್ನೇನ ಅದ್ರಾಕ್ಷಂ ಅಸ್ಯ "ಕವಿರತ್ನಾಭಿಧ" ಭೀಮರಾಜನಾಮ್ನಃ ಭೂಯಾಂಸಿ ಶ್ರೇಯಾಂಸಿ ದದ್ಯಾತ್ ದಾಶರಥಿಃ ಇತಿಶಂ.

ಪಂಡಿತ ಭೀಮಸೇನಾಚಾರ್ಯಃ,
ಆಸ್ಥಾನ ಮಹಾವಿದ್ವಾನ್,
ಚಿತ್ರದುರ್ಗಂ.

ಓಂ

ವಿನಯ ಸಂದೇಶ

ನಾನು ಲಂಡನ್ನಲ್ಲಿ ಮೈಸೂರು ಟ್ರೇಡ್ ಏಜೆಂಟ್ ಉದ್ಯೋಗದಲ್ಲಿದ್ದು ಹಿಂದುರುಗಿ, ಚಿತ್ರದುರ್ಗ ಜಿಲ್ಲಾಧಿಕಾರಿಯಾಗಿ ಬಂದ ಸುಸಂಧಿಯ ತರುಣ ದಲ್ಲಿ, ಸ್ಥಳೀಯ ಸಾಹಿತಿಗಳಾದ ಕರ್ನಾಟಕಾಂಧ್ರ ಕವಿ ಶ್ರೀ ಭೀಮರಾಜು ಅವರು, ನನಗೊಂದು ಅತ್ಯಗತ್ಯವಾದ ಕಾರ್ಯವನ್ನು ಸೂಚಿಸಿದರು. ಅದು ದಿವಂಗತ ಡಾ॥ ಕಟ್ಟಮಂಚಿ ರಾಮಲಿಂಗಾರೆಡ್ಡಿ ಅವರ ಸ್ಮಾರಕ ಗ್ರಂಥ ಮುದ್ರಣ ವಿಚಾರ. ನಮಗೆ ಸಮ್ಮಂಧ ಪಟ್ಟಕಾರ್ಯವನ್ನೇ ಇವರು ಅಪ್ರಾರ್ಥಿತ ಹಾಗೂ ಅನೀರೀಕ್ಷಿತವಾಗಿ ಮಾಡುತ್ತಿರುವುದರಿಂದ ನಾವು ಅಭಿಮಾನ ಮತ್ತು ಹೆಮ್ಮೆಪಡತಕ್ಕ ವಿಚಾರವಾಗಿರುವುದು. ಕೀರ್ತಿಶೇಷರಾದ ಶ್ರೀ ಸಿ. ಆರ್. ರೆಡ್ಡಿ ಅವರು ನಮ್ಮ ಕುಟುಂಬ ವರ್ಗಕ್ಕೆ ಸೇರಿದ ಪ್ರತಿಭಾಶಾಲಿಗಳಾದ ಹಿರಿಯ ಪೂಜ್ಯಪಾದರು ಅವರಿಗೆ ಶ್ರೀ ವೇಮನ ತತ್ವಗಳ ಬಗ್ಗೆ ಎಂತಹ ಭಕ್ತ್ಯಾದರಗಳಿದ್ದುವೆಂಬುದಕ್ಕೆ ಹಲವು ನಿದರ್ಶನಗಳನ್ನು ಕೊಡ ಬಯಸುತ್ತೇನೆ.

ಅವರು ತಮ್ಮ ಜೀವಿತದ ದಿನಚರಿ, ಸರಸ ಸಂಭಾಷಣಾವಸರದಲ್ಲಿ, ಮಧ್ಯೆ ಮಧ್ಯೆ ವೇಮನ ಆಂಧ್ರ ತತ್ವ ಸುಧಾಬಿಂದುಗಳನ್ನುಣಿಸಿ, ತಣಿಸುತ್ತಿದ್ದರು. ಇಂಥವರು ನಮ್ಮ ಮೈಸೂರು ಕರ್ನಾಟಕದಲ್ಲಿ, ಎರಡು ವೇಳೆ ಶಿಕ್ಷಣಾಚಾರ್ಯರಾಗಿದ್ದುದರಿಂದ, ಈ ಅಮೌಲ್ಯ ತತ್ವ ರಸಾಯನವನ್ನು, ಕನ್ನಡ ಬಂಧುಗಳಿಗೂ, ಹಂಚಬೇಕೆಂದು ಬಯಸಿದುದು ಸ್ತುತ್ಯ.

ಈ ಭಾಷಾಂತರ ಕಾರ್ಯವನ್ನು ಶ್ರೀ ಭೀಮರಾಜು ಅವರಿಗೆ ವಹಿಸಿ ಅದರ ಮುದ್ರಣವಾಗುವುದರೊಳಗೆ ದೈವಾಧೀನವಾದುದರಿಂದ ಅವರ ಸ್ಮಾರಕ ಗ್ರಂಥವಾಗಿ ಪ್ರಚುರಿಸುವ ಕಾರ್ಯಗೌರವದಲ್ಲಿ ಸ್ವಾಮಿಗಳೂ, ಮಾನ್ಯ

ಓಂ

ಮಂತ್ರಿಗಳೂ, ಮಹಾಶಯರೂ ಭಾಗವಹಿಸುವಂತೆ ಮಾಡಿ, ಕೇವಲ ಸಿಕಟ ಸಮ್ಮಂಧವುಳ್ಳ ನನ್ನದೂ ಒಂದು ಸಂದೇಶ ಕೊಡಬೇಕೆಂದು ಕೋರಿದುದಕ್ಕಾಗಿ ಶ್ರೀಯುತ ಭೀಮರಾಜು ಅವರಿಗೆ ಹೃತ್ಪೂರ್ವಕ ಅಭಿವಂದನೆಗಳನ್ನು ಅರ್ಪಿಸುತ್ತೇನೆ.

ಈ ಪಾವನ ಗ್ರಂಥದಲ್ಲಿನ ಒಂದುಸಾವಿರದ ಐದು ತತ್ವಗಳೂ ಪ್ರತಿ ಮನುಷ್ಯನ ಇಹಪರ ಸಾಧನೀಭೂತಗಳಾದ ಜೀವರತ್ನಗಳು. ಇನ್ನು ಸಮ್ಮಾನ್ಯರ ಮುನ್ನುಡಿ, ಸಂದೇಶಗಳೂ, ದಿವಂಗತರ ಜೀವನ ಪರಿಚಯ, ವೇಮನ ಸಂಕ್ಷಿಪ್ತ ಜೀವನ ಚರಿತ್ರೆ, ಗ್ರಂಥಕರ್ತರ ಉಪೋದ್ಘಾತ, ಭಾವ ಚಿತ್ರಗಳ ಅನಾವರಣ ಇವೆಲ್ಲವೂ ಕವಿವರ್ಯರ ದೂರದರ್ಶಿತ್ವ, ಹಾಗೂ ಸಂಪೂರ್ಣ ಶ್ರಮ, ಪ್ರಯಾಸದ ಕುರುಹುಗಳು.

ನಾನು ಈ ಹಿಂದೆ ಈ ಜಿಲ್ಲೆಯಲ್ಲಿ ಬೇರೆ ಉದ್ಯೋಗದಲ್ಲಿದ್ದಾಗ, ಶ್ರೀ ರಾಜು ಅವರ ಸಾಹಿತ್ಯ ಮತ್ತು ಕೀರ್ತನ ಪ್ರಚಾರ ಕಾರ್ಯಕಲಾಪಗಳನ್ನು ಸ್ವತಃ ನೋಡಿ, ಕೇಳಿ, ಸಹಕರಿಸಿ ಅರಿತವನಾಗಿರುತ್ತೇನೆ ಅವರ ಕುಟುಂಬದವರೆಲ್ಲಾ ಸಾರ್ವಜನಿಕ ಸೇವೆಯಲ್ಲಿ ದೇಹವನ್ನು ಸವೆಸಿರುತ್ತಾರೆ ಇಂದಿಗೂ ಶ್ರೀ ಭೀಮರಾಜು ಅವರು ಈ ಅಪರ ವಯಸ್ಸಿನಲ್ಲೂ, ದೇಶಾಭಿಮಾನ ಪೂರಿತರಾಗಿ, ಅನವರತ ದುಡಿಯುತ್ತಿರುವುದನ್ನು ಕಂಡು, ಆನಂದಿಸುತ್ತೇನೆ. ಆದರೆ ಇವರಿಗೆ ಯಾವ ಪ್ರೋತ್ಸಾಹವೂ ಇಲ್ಲದೆ ತೊಂದರೆ ಪಡುತ್ತಾರೆಂದು ಕೇಳಿ ವ್ಯಸನಪಡುತ್ತೇನೆ. ಮಹಾ ಜನರೂಪೀ ಸರ್ವಶಕ್ತ ಸರ್ವದಯಾಮಯನಾದ ಭಗವಂತನು ಇವರಿಗೆ ಇವರ ಕುಟುಂಬ ವರ್ಗಕ್ಕೆ ನಿತ್ಯ ಸನ್ಮಂಗಳವೀಯಲೆಂದು ಪ್ರಾರ್ಥಿಸುತ್ತೇನೆ.

ಇತಿ,

೯—೧೦—೧೯೭೩,
ಚಿತ್ರದುರ್ಗ.

ಟಿ. ವೆಂಕಟಶಿವರೆಡ್ಡಿ,
ಚಿತ್ರದುರ್ಗ ಜಿಲ್ಲಾಧಿಕಾರಿ.

ಓಂ

ಪ್ರಿಯ ಸಂದೇಶ.

ಕರ್ನಾಟಕಾಂಧ್ರ ಕವಿ ಶ್ರೀ ಭೀಮರಾಜು ಅವರು ನನಗೊಂದು ಚಿರ ಸ್ಮರಣೀಯವಾದ ಕಾರ್ಯ ಸುಸಂಧಿಯನ್ನು ಒದಗಿಸಿ ಕೊಟ್ಟಿರುತ್ತಾರೆ.

ಅದು "ದಿವಂಗತ ಡಾ|| ಕಟ್ಟಮಂಚಿ ರಾಮಲಿಂಗಾರೆಡ್ಡಿಗಳವರ ಸ್ಮಾರಕ ಗ್ರಂಥ, ಶ್ರೀ ವೇಮನ ತತ್ವಗಳ ಕನ್ನಡ ಅನುವಾದ. ಹೊತ್ತಿಗೆಗೆ, ಸಂದೇಶ ಕೊಡಬೇಕೆಂದು, ಕೋರಿರುವುದು" ಕೀರ್ತಿಶೇಷರಾದ ಶ್ರೀ ಸಿ. ಆರ್. ರೆಡ್ಡಿ ಅವರು, ನಮ್ಮ ಮೈಸೂರು ಸಂಸ್ಥಾನದ, ಈಗಿನ ದಕ್ಷರಾದ, ಕಾರ್ಯಾಡಳಿತಗಾರರಲ್ಲಿ, ನವಸ್ಫೂರ್ತಿವಂತ, ಪಡೆಯನ್ನು ಸಿದ್ಧಪಡಿಸಿದ, ಶಿಕ್ಷಕಮಹಾಯೋಧರೆಂದರೆ, ಅತಿಶಯೋಕ್ತಿಯಾಗಲಾರದು.

ಅವರು ನಮ್ಮ ಮಹಾರಾಜಾ ಕಾಲೇಜಿನಲ್ಲಿ ಹದಿಮೂರು ವರ್ಷಗಳ ಕಾಲ ಪ್ರೊಫೆಸರರು, ಹಾಗೂ ಪ್ರಿನ್ಸಿಪಾಲರಾಗಿದ್ದು, ದಕ್ಷತೆಯಿಂದ ಪಾಶ್ಚಾತ್ಯ ರೀತಿನೀತಿಯ ಶಿಕ್ಷಣವನ್ನು ಯಶಸ್ವಿಯಾಗಿ ರೂಪಿಸಿದರು. ವಿದ್ಯಾಶಾಖಾ ಮುಖ್ಯಾಧಿಕಾರಿಗಳಾಗಿದ್ದು ಶ್ರೀಮನ್ ಮಹಾರಾಜರವರ ಮತ್ತು ರಾಜಮನೆತನದವರ ಅಸಾಧಾರಣ ದೇಶಪ್ರೇಮ ಮತ್ತು ಮಾರ್ಗದರ್ಶಿತ್ವದ ಬೆಂಬಲದಿಂದ, ಮೂರೇ ವರ್ಷಗಳಲ್ಲಿ ಮೂರು ನೂರು ವರ್ಷಗಳು ಮಾಡಲಾಗದ. ಅಪೂರ್ವ ಹಾಗೂ ಕ್ರಾಂತಿಯುತವಾದ ಸುಧಾರಣೆಗಳನ್ನು ಧೀರತನದಿಂದ ಮಾಡಿ ತೋರಿಸಿದರು

ಈ ದಿನ. ಪ್ರಜಾಪ್ರಭುತ್ವದ ಪ್ರಯೋಗವು, ನಮ್ಮ ಮೈಸೂರು ದೇಶದಲ್ಲಿ ಭಾರತದ ಇತರೇ ಪ್ರಾಂತಗಳಿಗಿಂತ, ಉತ್ತಮ ರೀತಿಯಲ್ಲಿ ಜಯಪ್ರದವಾಗಿ

ರುವುದು ಒಳಪಾರ್ಗನ್ನು ಇದೇ ಎಂದು ನಿಸ್ಸಂದೇಹವಾಗಿ ಹೇಳಬಹುದು. ತದನಂತರ ಮದರಾಸು ನ್ಯಾಯನಿರ್ಧಾಯಕ ಸಭೆಯಲ್ಲಿ ದುಡಿದು, ಆಂಧ್ರ ವಿಶ್ವವಿದ್ಯಾನಿಲಯದ, ಉಪಸ್ಥಾನಪತಿಗಳಾಗಿ ಎರಡು ಸಲ ಆರಿಸಲ್ಪಟ್ಟು ವಿಶೇಷ ರೀತಿಯ ಮಾರ್ಪಾಡುಗಳನ್ನು ರೂಢಿಸಿದರು.

ಮತ್ತೊಮ್ಮೆ ಬಹು ಕಾಲಾನಂತರ, ನಮ್ಮ ಪುಣ್ಯವಿಶೇಷದಿಂದ ಮೈಸೂರು ಸಂಸ್ಥಾನದ ಶಿಕ್ಷಣ ಸುಧಾರಣಾ ಆಫೀಸರಾಗಿ ಬಂದು, ಸರಕಾರಕ್ಕೆ ವರದಿಯನ್ನೊಪ್ಪಿಸಿ, ಪ್ರೊ. ಛಾನ್ಸಲರಾಗಿದ್ದು, ಕೇವಲ ಅಪರ ವಯಸ್ಸಿನಲ್ಲೂ ಮಹೋಪಕಾರ ಮಾಡಿ, ದಿವಂಗತರಾದರು.

ಇಂತಹ ಶಿಕ್ಷಣ ಸುಧಾರಣಾ ತತ್ತ್ವವೇತ್ತರಿಗೆ ಯಾವ ತತ್ತ್ವರತ್ನಗಳಲ್ಲಿ ಅಚಲವಾದ, ಅಭಿಮಾನ, ವಿಶೇಷವಿದ್ದಿತೋ, ಅಂತಹ ವೇಮನ ತತ್ತ್ವಗಳ ಕನ್ನಡ ನೂತನ ಗ್ರಂಥವೇ, ಸ್ಮಾರಕವಾಗಿ ಮುದ್ರಿಸುವ, ಕಾರ್ಯಗೌರವದಲ್ಲಿ ಮಂತ್ರಿ ಮಾನ್ಯರಿಂದಲೂ, ಗುರುಪುಂಗವರಿಂದಲೂ ಮುನ್ನುಡಿ, ಸಂದೇಶಗಳನ್ನು ಪಡೆದು ಪ್ರಚುರಿಸುತ್ತಿರುವ ಶ್ರೀ ಭೀಮರಾಜು ಅವರ ಪ್ರಯತ್ನವು ಅನ್ವರ್ಥವೂ, ಸ್ತೋತ್ರಾರ್ಹವೂ ಆದುದೆಂದು ಅಭಿಮಾನಪೂರ್ವಕವಾಗಿ ಹೇಳಬಯಸುತ್ತೇನೆ

ಈ ಮಾನ್ಯ ಗ್ರಂಥ ರಾಜದಲ್ಲಿ ನನ್ನದೂ ಒಂದು ಸಂದೇಶಕ್ಕೆ ಸ್ಥಳವಿತ್ತ ಕವಿವರ್ಯರಿಗೆ, ಹೃತ್ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ. ಅಲ್ಲದೆ ದಿವಂಗತರ ಆತ್ಮಕ್ಕೆ ಶ್ರೀ ವೇಮನ ತತ್ತ್ವಗಳಿಂದ ಶಾಂತಿ ಪ್ರದವಾದ ಮೋಕ್ಷವು ಲಭಿಸಲೆಂದು ಹಾರೈಸುತ್ತೇನೆ

ಇಂತು ವಿಜ್ಞಾಪಿಸುವ,
ಕೆ. ನಾರಾಯಣಸ್ವಾಮಿ,
ಮಾಜಿ ಜಿಲ್ಲಾಧಿಕಾರಿ, ಚಿತ್ರದುರ್ಗ,
ಟ್ರೇಡ್ ಏಜೆಂಟ್, ಲಂಡನ್.

೯—೧೦—೫೨
ಚಿತ್ರದುರ್ಗ,

ಗೌರವ ಸಂದೇಶ

ಕರ್ನಾಟಕಾಂಧ್ರ ಕವಿ, ಶ್ರೀ ಭೀಮರಾಜು ಅವರು—ನಾನು ಬೇರೆ ನಾಟಕ ಸಂಘದಲ್ಲಿ, ಸಾಮಾನ್ಯ, ನೌಕರಿ ನಟನಾಗಿದ್ದಾಗ, ಸುಮಾರು ೧೯೦೭ ರಂದು ಪ್ರಪ್ರಥಮ ಚಿತ್ರದುರ್ಗದ ಕೊನೆಯ ಮುಕ್ಕಾಮಿನಲ್ಲಿ ಪರಿಚಯವಾದರು. ಅಂದು ಅವರು ಸ್ವತಃ ಬರೆದು ತಂದಿದ್ದ 'ಕಿರಾತಾರ್ಜುನ' ನಾಟಕವನ್ನು ಮಾಲಕರು ಹಾಗೂ ನಟರನ್ನು ಕೂಡಿಸಿಕೊಂಡು ಓದಿ ತೋರಿಸಿದರು. ಆಗಲೇ ಪಾತ್ರವಿಭಜನೆಯಾಯಿತು ನನಗೂ ಒಂದು ಪಾತ್ರ ಬಂತು. ನಾನು ಗೌರಿಯಾದೆ. ಕವಿಗಳ ಸಮಕ್ಷಮ ರಂಗಭೂಮಿಯಲ್ಲಿ ಪ್ರದರ್ಶನ ಕೂಡಾ ಆಯಿತು.

ನಂತರ ೧೯೩೪ರಲ್ಲಿ [ನಾನಾಗಲೇ ಗುಬ್ಬಿ ನಾಟಕ ಮಂಡಲಿ ಮಾಲಕನಾಗಿ ಭರಾಟೆಯಿಂದ ಸಾಗಿತ್ತು. ಶ್ರೀ ಭೀಮರಾಜು ಅವರು ಬೆಂಗಳೂರು ಮುಕ್ಕಾಮಿನಲ್ಲಿ ಭೇಟಿಯಾದರು. ಅದಕ್ಕೆಮುನ್ನ ನಮ್ಮ ಮಂಡಲಿಯಲ್ಲಿ ಚಿಕ್ಕ ಕಂಪೆನಿಯೊಂದನ್ನು ಪ್ರಾರಂಭಿಸಬೇಕೆಂದು ವಿಚಾರ ನಡೆದಿತ್ತು. ಕವಿಗಳು ಬೇಕಲ್ಲ. ಅಪ್ರಾರ್ಥಿತವಾಗಿ ದೊರಕಿದ ಕವಿಗಳಿಂದ "ಸತಿ ಸಾವಿತ್ರಿ" ಬರೆಸಿ ಪೂಜೆ ಮಾಡಿಸಿ, ಅಭ್ಯಾಸ ನಡೆಸಿ, ಪ್ರದರ್ಶನ ಮಾಡಿದುದಾಯಿತು.

ಆ ತರುವಾಯ ಕ್ರಮವಾಗಿ ಶುಕಾವತಾರ, ಸ್ವಾತಂತ್ರ್ಯ ಪ್ರೇಮ ಇತ್ಯಾದಿ ನಾಟಕಗಳು ಶ್ರೀ ರಾಜು ಅವರಿಂದ ತೆಗೆದುಕೊಂಡು ಅಭಿನಯಿಸಲ್ಪಟ್ಟು, ಪೂರ್ಣ ಯಶಸ್ವಿಯಾಗಿ ಜರುಗಿ ಮಕ್ಕಳ ಕಂಪೆನಿ ಅಂಕುರಾರ್ಪಣಾಚಾರ್ಯರು ಶ್ರೀ ಭೀಮರಾಜು ಅವರಾದರು. ಇದು ನಮ್ಮ ಇವರ

ಪರಿಚಯವಾ ಯಿನ್ನೆಲೆ. ಅಂದಿನಿಂದ ಇಂದಿನವರೆಗೂ ಕವಿಗಳ-ನನ್ನ ನಿಕಟ ಸ್ನೇಹ ಸಂಬಂಧ ಬಾಂಧವ್ಯವು ಏಕರೀತಿಯಾಗಿ ವೃದ್ಧಿ ಹೊಂದುತ್ತಿರುವುದು.

ಮೊನ್ನೆ ಮೊನ್ನೆ ನನ್ನ ನಿವಾಸಕ್ಕೆ ಕವಿಗಳು ಹೊತ್ತಿಗೆ ಗಂಟಿನೊಡನೆ ಬಂದರು ಇನ್ನೇನು ಏನೋ ಹೊಸ ವಾರ್ತೆ ತಂದಿದಾರೆಂದು ಅಂದುಕೊಂಡು ಆದರದಿಂದ ಬರಮಾಡಿಕೊಂಡು ಕೇಳಿದೆ ಅದು ಸುವಿಚಾರವಿತ್ತು; ಶ್ರೀ ವೇಮನ ತತ್ವಗಳ ಕನ್ನಡ ಅನುವಾದ. ದಿ|| ಡಾ|| ಸಿ ಆರ್ ರೆಡ್ಡಿಗ ಳವರ ಸ್ಮಾರಕ ಗ್ರಂಥವಾಗಿ ಮುದ್ರಣ ಮುಂದುವರಿಸಿದ್ದ, ವಾಙ್ಮಯಸಾರ ಅಲ್ಲಲ್ಲಿ ವೇಮನ ವಚನ ಸುಧಾರಸವನ್ನು, ಉಣಬಡಿಸಿದರು ಆಪ್ಯಾಯ ಮಾನವಾಯ್ತು. ಪೂಜ್ಯರೂ ಮಂತ್ರಿ ಮಾನ್ಯರೂ ಈ ಮುದ್ರಣ ಕಾರ್ಯ ದಲ್ಲಿ ಸಹಕರಿಸಿದ ವಿಚಾರವನ್ನು ಕೇಳಿದೆ ನನ್ನದೂ ಯತ್ಕಿಂಚಿತ್ ಸಹಾಯ, ಸಹಾನುಭೂತಿ ಇರಲೆಂದೆ.

ಶ್ರೀ ಮುರುಘರಾಜೇಂದ್ರ ಸ್ವಾಮಿಗಳು, ಸಿರಿಗೆರೆ ಶ್ರೀಗಳು, ಸಿದ್ಧಗಂಗಾ ಗುರುಗಳು, ಇನ್ನು ನಮ್ಮ ಮುಖ್ಯ ಮಂತ್ರಿಗಳಾಗಿದ್ದು, ಈಗ ಕೇಂದ್ರ ಸಚಿವ ಸಂಪುಟದಲ್ಲಿ ಕೀರ್ತಿವೆತ್ತ-ಅಭಿವೃದ್ಧಿ ಶಾಖಾ ಸಚಿವರಾದ ಶ್ರೀ ಕೆ. ಸಿ. ರೆಡ್ಡಿ ಅವರಾದಿಯಾಗಿ ಮಹಾಶಯರನೇಕರು ಮುನ್ನುಡಿ ಸಂದೇಶಗಳನ್ನು ಕೊಟ್ಟಿ ರುವುದರ ಮಧ್ಯೆ ನನ್ನದೂ ಒಂದು ಸಂದೇಶ ಕೋರಿದರು ಬಹಳ ಆನಂದ! ಅಮಿತಾನಂದ!! ಕವಿಗಳೇ ಆಗಲಿ ಅಂದೆ, ನಮ್ಮ ದೇಶದ ಹಿಂದುಳಿದ ಜನ ರನ್ನು ಮುಂದೂಡಿದ ವೀರಪುಂಗವರು ದಿ|| ಡಾ|| ಸಿ. ಆರ್. ರೆಡ್ಡಿಗಳು ನನಗೂ ಅವರ ವಿಷಯದಲ್ಲಿ ಅತಿಶಯ ಭಕ್ತಿ ಪ್ರೇಮಾದರಗಳಿವೆ. ಅಂದಮೇಲೆ ಅವರ ಸ್ಮಾರಕಕ್ಕೆ ನನ್ನದೂ ಒಂದು ಸೇವೆ ಈ ಸಂದರ್ಭದಲ್ಲಿ ನನ್ನ ಪ್ರಿಯ ಕವಿಗಳನ್ನೂ ಮನಸಾರ ವಂದಿಸುತ್ತೇನೆ

ಇತ್ತೀಚಿಗೆ ವೇಮನ ಚಿತ್ರವೊಂದು ರಜತ ಪರದೆಯ ಮೇಲೆ ಬಂದು ಜನರ ಚಿತ್ತವೃತ್ತಿಯನ್ನು ಆಕರ್ಷಿಸಿದೆ. ಈ ಗ್ರಂಥರಾಜಕ್ಕೆ ಇತೋಸ್ಮೃತಿ

ತಯ ಭವಿಷ್ಯವಿರುವುದೆಂದು ಹೇಳ ಬಯಸುತ್ತೇನೆ. ಬಹುಕಾಲ ಉಭಯ ಭಾಷೆಗಳಲ್ಲೂ ಸಾಹಿತ್ಯ ಸೇವೆಮಾಡಿ ಬಳಲಿರುವ ಕವಿ ಶ್ರೀ ಭೀಮರಾಜು ಅವರಿಗೆ ಪ್ರೋತ್ಸಾಹ ದೊರೆಯಲಿ ದಿ॥ ಡಾ॥ ರಾಮಲಿಂಗಾ ರೆಡ್ಡಿಗಳವರ ಆತ್ಮಕ್ಕೆ ಶಾಂತಿ ಪ್ರದವಾದ ಮೋಕ್ಷವು ಲಭಿಸಲೆಂದು ಹಾರೈಸುವ

ಗಾಂಧಿನಗರ
ಬೆಂಗಳೂರು,
೧೫-೧೦-೫೨.

ತಮ್ಮಗಳ ಪ್ರಿಯಬಂಧು,
ನಾಟಕರತ್ನ. ಜಿ. ಹೆಚ್. ವೀರಣ್ಣ,
ಮೈಸೂರು ವಿಧಾನಸಭಾ ಸದಸ್ಯ.

{ಮುಗಿರು}



ಓಂ

ಪ್ರಶಂಸಾ ಪತ್ರ.

ಪ್ರಸ್ತುತ ಪರಿಸ್ಥಿತಿಯ ಪರಿಷ್ಕರಣಕ್ಕೆ ಈ ಗ್ರಂಥದ ಅಗತ್ಯವಿದೆ. ಇದರ ಲೇಖಕರಾದ ಶ್ರೀಮಾನ್ ಭೀಮರಾಜುರವರು ಹಿಂದಿನ ಸುಪ್ರಸಿದ್ಧ ಆಂಧ್ರದೇಶ ವೇಮನ ಕೃತಿಯ ಹಾಸಿನಲ್ಲಿ ಹೃದಯಾಂತರಾಳದಿಂದ ಹೊರಟ ತಮ್ಮ ನುರಿತ ಅನುಭವಗಳನ್ನು ಹೊಕ್ಕನ್ನಾಗಿ ಬಳಸಿದ್ದಾರೆ. ಕಳೆದು ಹೋದ, ಈಗಿನ ಮತ್ತು ಮುಂದೆ ಬರುವ ತ್ರಿಕಾಲಗಳಿಗೂ ಅನ್ವಯಿಸತಕ್ಕ ಹಲವಾರು ನೀತಿವಾಕ್ಯಗಳಿವೆ. ಜನರನ್ನು ಜಾಗೃತಿಗೊಳಿಸಿ ರಾಜಕೀಯದ ಸಮಸ್ಯೆಯನ್ನೂ ಬಗೆಹರಿಸುವುದು.

ತತ್ವೋಪದೇಶಕರಿಗೆ ಅವರ ನಡೆನುಡಿಯೇ ಒರೆಗಲ್ಲು ತತ್ವಗಳು ಉಪನಿಷತ್ ಕಾಲದಿಂದ ಈವರೆಗೂ ಇನ್ನು ಮುಂದೆಯೂ ಅಚ್ಚಳಿಯದೆ ಉಳಿಯತಕ್ಕವು. ಕೆಲವು ಮಹಾನುಭಾವರು ತಮ್ಮ ಜೀವಿತ ಕಾಲದಲ್ಲಿ ಅನುಷ್ಠಾನಕ್ಕೆ ತಂದುಕೊಂಡು ಪ್ರಪಂಚಕ್ಕೇ ಮಾರ್ಗದರ್ಶಕರಾಗುತ್ತಾರೆ. ಶ್ರೀರಾಮಕೃಷ್ಣರೂ, ವಿವೇಕಾನಂದರೂ ಲೋಕಸೇವಕರಾಗಿ ಪೂಜಾರ್ಹರಾದರು. ಈಗ್ಗೆ ಮಹಾತ್ಮಾ ಗಾಂಧಿಯವರು "ಗಾಂಧಿಯ ತತ್ವ"ವೆಂದು ಅನ್ವರ್ಥವಾಗುವಂತೆ ನುಡಿಯುತ್ತ, ನುಡಿದಂತೆ ಆಚರಿಸುತ್ತ ಲೋಕಸೇವಕರಾಗಿಯೂ, ಲೋಕಬೋಧಕರಾಗಿಯೂ ಕೀರ್ತಿ ಗಳಿಸಿದರು. ಶ್ರೀಮಾನ್ ಭೀಮರಾಜುರವರು ಅವರ ಮೇಲ್ಪಂಕ್ತಿಯನ್ನೇ ಅನುಸರಿಸುತ್ತಿದ್ದಾರೆ. ಕೇವಲ ಅಭಿಮಾನಕ್ಕಾಗಿ ಹೇಳತಕ್ಕ ಮಾತು ಇದಲ್ಲ. ಅವರೊಡನೆ ಬಹಳ ಕಾಲದಿಂದ ಇದ್ದು ನೋಡಿದ ಅನುಭವವಿದೆ. ಸರಳ ಜೀವನವು ಅವರದು. ಸತ್ಯ ಅಹಿಂಸೆಗಳ ಪಾಲನೆಗೂ, ಹರಿಜನೋದ್ಧಾರಕ್ಕೂ, ಖಾದಿ ಮುಂತಾದ

ಗೃಹಕೈಗಾರಿಕೆಗಳ ಅಭಿವೃದ್ಧಿಗೂ ತಮಗೆ ಸಿಕ್ಕಿದ ಕ್ಷೇತ್ರಗಳಲ್ಲಿ ದುಡಿದಿದ್ದಾರೆ. ಸಾಹಿತ್ಯದ ಮೂಲಕವೂ ಸೇವೆ ಸಲ್ಲಿಸಲು ಕೈಗೊಂಡಿರುವ ಇವರ ಮನೋಭಾವವು ಗಮನಾರ್ಹವಾದುದು.

ಕನ್ನಡ ದೇಶದಲ್ಲಿ ಸರ್ವಜ್ಞ ಹೇಗೋ, ಆಂಧ್ರ ದೇಶದಲ್ಲಿ ವೇಮನ ಹಾಗೆ. ಇವರ ಕೃತಿಗಳು ರಚನಾತ್ಮಕವಾಗಿವೆ. ಬಾಲಪ್ರಪಂಚವೆನ್ನಬಹುದು. ಮ್ಯಾಗ್ನೆಟ್ ಉಕ್ಕನ್ನು ತನ್ನಂತೆಯೇ ಮಾಡಿಕೊಳ್ಳುವಂತೆ ಸರ್ವಜ್ಞ-ವೇಮನರಂತೆ ಶ್ರೀ ಭೀಮರಾಜುರವರೂ, ಹಾಗೆಯೇ ಅವರ ಗ್ರಂಥಾವಲೋಕನ ಮಾಡತಕ್ಕವರೂ ಆಗುತ್ತಾರೆ.

ಇತಿ-ಮಿತಿ-ಔಚಿತ್ಯವರಿತು ಕೃತಿ ಸಾಗಿದರೆ ಜನಾದರಣೀಯವಾಗುವುದು. ಕನ್ನಡ ಸಾಹಿತ್ಯರಂಗಕ್ಕೆ ತೆಲುಗು, ಇಂಗ್ಲಿಷ್ ಮುಂತಾದ ಇತರ ಭಾಷೆಗಳ ಸಾಹಿತ್ಯವು ಪ್ರವೇಶಿಸಬೇಕು. ಸಾಹಿತ್ಯಕ್ಕೂ ದೇಶದ ಪ್ರಗತಿಗೂ ನಿಕಟ ಸಂಬಂಧವಿದೆ. ಆದ್ದರಿಂದ ಈ ಗ್ರಂಥವನ್ನು ಶಾಲೆಗಳಲ್ಲಿ ಪಠ್ಯಪುಸ್ತಕವನ್ನಾಗಿ ಮಾಡಿದರೆ, ಮುಂದಿನ ಜನಾಂಗ ಸತ್ಪ್ರಜೆಯಾಗಲು ವಿದ್ಯಾರ್ಥಿ ದೆಸೆಯಿಂದ ಶಿಕ್ಷಣ ದೊರೆತಂತಾಗುತ್ತದೆ. ಜನಾದರಣೀಯವಾಗಿರುವುದರಿಂದ ಎಲ್ಲಾ ಸಾರ್ವಜನಿಕ ಮತ್ತು ಸರ್ಕಾರಿ ಪುಸ್ತಕ ಭಂಡಾರಗಳಲ್ಲಿಯೂ, ಸಾಹಿತ್ಯ ಮಂದಿರಗಳಲ್ಲಿಯೂ ಈ ಗ್ರಂಥಕ್ಕೆ ಸ್ಥಾನವಿದೆ. ಹಿಂದಿನಿಂದಲೂ ರಾಜಾಶ್ರಯದಲ್ಲಿ ಮತ್ತು ರಾಜಪೋಷಣೆಯಲ್ಲಿ ಸಾಹಿತ್ಯವು ಬೆಳೆದಿರುವುದರಿಂದ ಈ ಕೃತಿಗೂ ಸರ್ಕಾರದವರು ಆಶ್ರಯ ಕೊಡುತ್ತಾರೆಂದು ಭಾವಿಸಿಯಿದೆ.

ಕವಿಯ ನಿತ್ಯಜೀವನವು ಆತನ ಕೃತಿಯಲ್ಲಿ ಕಂಡುಬರುವುದು ಸಹಜ. ಹಾಗೆಯೇ ಶ್ರೀ ಭೀಮರಾಜುರವರ ವ್ಯವಹಾರದಲ್ಲಿ ಪವಿತ್ರತೆಯಿರುವುದರಿಂದಲೇ ಈ ಗ್ರಂಥದಲ್ಲಿ ಜೀವಾಳವಿದೆ. ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಪದಪ್ರಯೋಗಗಳಿವೆ. ತಳಹದಿಯನ್ನು ವಿಸ್ತಾರವಾಗಿಯೂ ಉದಾಹರಣಪೂರ್ವಕವಾಗಿಯೂ ವಿವರಿಸಲಾಗಿದೆ. ನೈತಿಕ ವಸ್ತುವನ್ನು

ಓಂ

ಹೆಚ್ಚಿಸತಕ್ಕ ಗ್ರಂಥವಿದು. ವಿದ್ಯಾರ್ಥಿಗಳಿಗೂ ಜನಸಾಮಾನ್ಯಕ್ಕೂ ಬಹಳ ಉಪಯುಕ್ತವಾಗಿದೆ.

ಕೊನೆಯದಾಗಿ ದಿ|| ಡಾ|| ಸಿ ಆರ್. ರೆಡ್ಡಿ ಅವರು ನಮ್ಮ ಸಂಸ್ಥಾನದ ಶಿಕ್ಷಣ ಶಾಖೆಗೆ ಅಪಾರ ಸೇವಾ ಸಲ್ಲಿಸಿ ಚಿರಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಅವರ ಸ್ವೈಜಕ್ಕೆ ತಕ್ಕ ಸಮುಷ್ಟಿ ತತ್ವಗಳನ್ನು ಕನ್ನಡಕ್ಕೆ ಮಾರ್ಪಡಿಸುವಂತೆ ಶ್ರೀ ಭೀಮರಾಜು ಅವರಿಗೆ ಪ್ರೋತ್ಸಾಹಿಸಿ ಕೀರ್ತಿಶೇಷರಾಗಿರುತ್ತಾರೆ. ಆದ್ದರಿಂದ ಈ ತತ್ವಗಳು ಅವರ ಸ್ಮಾರಕವಾಗಿ ಪ್ರಚುರಿಸಿದುದು ಸಚೇತ:ಕವೆಂದು ಸರ್ವರೂ ಆನಂದಿಸುತ್ತಾರೆ. ದಿವಂಗತರ ಆತ್ಮಕ್ಕೆ ಈ ಕೃತಿ ತತ್ವಗಳಿಂದ ಶಾಂತಿ ದೊರೆಯಲೆಂದು ಪ್ರಾರ್ಥಿಸುವ,

ತಿಪಟೂರು,
೫—೧೧—೧೯೫೬.

ತಮ್ಮಗಳ ಪ್ರಿಯ ಬಂಧು,
ಎಲ್. ವಿ. ಅಶ್ವತ್ಥನಾರಾಯಣಶ್ರೇಷ್ಠಿ.





ಓಂ

ತತ್ವ ಪ್ರಶಂಶಾ

ಶ್ರೀ ವೇಮನನು ಆಂಧ್ರ ಪ್ರಾಂತದ ಪ್ರಸಿದ್ಧ ತೆಲುಗು ಕವಿಪುಂಗವನು. ಆತನು ತತ್ವಜ್ಞಾನಿಯೂ ಅಹುದು. ಆ ಮಹಾಶಯನು ತನ್ನ ಲೋಕಾನುಭವವನ್ನು ಸುಂದರವಾದ ಪದ್ಯಗಳ ಮೂಲಕ ಜಗತ್ತಿನ ಮುಂದೆ ಸೂರೆ ಮಾಡಿದ್ದಾನೆ ಆ ಯೋಗಿವರ್ಯನು ವಿಮರ್ಶಿಸದ ವಿಷಯವಿಲ್ಲ. ಹಾಗೂ ಪ್ರತಿಯೊಂದು ವಿಷಯವನ್ನೂ ಆಳವಾಗಿ ಚರ್ಚಿಸಿ ತತ್ವರಹಸ್ಯವನ್ನು ಹೊರಗೆಡಹಿದ್ದಾನೆ ಆ ಮಹೋದಯನ ವಾಕ್ಯಗಳು ಚಡಿಯ ಏಟುಗಳಿದ್ದಂತಿವೆ. ಜಗದ ಜನರ ಯಾವ ಲೋಪದೋಷಗಳನ್ನೂ ಮುಚ್ಚಿಡದೆ ಧೈರ್ಯವಾಗಿ ಟೀಕಿಸಿದ್ದಾನೆ

ಇಂತಹ ನಿಷ್ಪಕ್ಷಪಾತ ಟೀಕೆಗಳಿಂದ ಸ್ವಾರ್ಥಪರರ ಮನನೊಂದರೆ ಅವು ನಿಜ ಸತ್ಯಾರ್ಥ ಪ್ರತಿಪಾದಕಗಳಾಗಿರುವವೇ ಹೊರತು ಅಸೂಯಾ ಮಾತ್ಸರ್ಯ ನ್ಯಾಯಗಳಾಗಿಲ್ಲವೆಂದು ಈ ತತ್ವಗಳನ್ನು ಓದುವ ಯಾವ ವಿವೇಕಶಾಲಿಯಾದರೂ, ಒಪ್ಪಿಕೊಳ್ಳಲೇ ಬೇಕಾಗಿರುವುದು. ವೇಮನನು ಲೋಕೋದ್ಧಾರಕ್ಕಾಗಿ ಅವತರಿಸಿದ ಕವಿ ಸಾಮ್ರಾಟನೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ

ಈ ಪುಣ್ಯಮೂರ್ತಿಯು ಆಂಧ್ರ ಪ್ರಾಂತದಲ್ಲಿ ಉದಯಿಸಿದನಾದರೂ ಸಮಗ್ರ ಭಾರತ ದೇಶದ ಅದೇಕೆ, ಇಡೀ ವಿಶ್ವದ ಕವಿವರ್ಯನಾಗಿದ್ದಾನೆ. ಆ ಮಹಾತ್ಮನ ರಹಸ್ಯವತ್ತಾದ ಪದ್ಯಗಳು ವಿಶ್ವದಲ್ಲೆಲ್ಲಾ ಹಬ್ಬಿಸಲು ಯೋಗ್ಯವಾದವುಗಳಾಗಿವೆ ಅವನ್ನು ರಾಷ್ಟ್ರದ ಎಲ್ಲಾ ಭಾಷೆಗಳಲ್ಲಿಯೂ ಪರಿವರ್ತನ ಮಾಡುವುದು ಸೂಕ್ತವಾಗಿದೆ. ಇಂತಹ ಭಾಷಾಂತರ ಕಾರ್ಯ

ವನ್ನು ಮಾಡುವ ವಾಙ್ಮಯ ಸೇವಕರು ನಿಜವಾಗಿಯೂ ಧನ್ಯರು. ಏಕೆಂದರೆ ಈ ಮಹತ್ಕಾರ್ಯವನ್ನು ಮಾಡುವುದರಿಂದ ಲೋಕಸೇವೆ ಮಾಡಿದ ಪುಣ್ಯಕೀರ್ತಿಗೆ ಅವರು ಭಾಗಿಗಳಾಗುತ್ತಾರೆ.

ಶ್ರೀ ವೇಮನನ ಮತ್ತು ಆತನ ತತ್ವಬೋಧಕ ಪದ್ಯಗಳ ಪರಿಚಯವು ಆಂಧ್ರ ಪ್ರಾಂತದ ಅತಿ ಸಮೀಪದಲ್ಲಿರುವ ಕನ್ನಡಿಗರಾದ ನಮಗೇ ಸಾಕಷ್ಟು ಆಗದಿರುವುದು ನಮ್ಮ ದೌರ್ಭಾಗ್ಯವೇ ಸರಿ. ಕರ್ನಾಟಕ ಪ್ರಾಂತ್ಯದ ಜನ ಸಾಮಾನ್ಯರಿಗೆಲ್ಲಾ ಸುಲಭವಾಗಿ ಗ್ರಾಹ್ಯವಾಗುವಂತೆ ಶ್ರೀ ವೇಮನ ತತ್ವಗಳನ್ನು ಕನ್ನಡದಲ್ಲಿ ಅಚ್ಚುಕಟ್ಟಾಗಿ ಪರಿವರ್ತನ ಮಾಡಿರುವ, ಉಭಯ ಭಾಷಾ ಪರಿಚಿತರೂ, ಸ್ವತಃ ಕವಿಗಳೂ ಆದ ಶ್ರೀ ಭೀಮರಾಜು, ಚಿತ್ರದುರ್ಗ ಇವರು ಕರ್ನಾಟಕ ಜನರಿಗೆ ಒಳ್ಳೆಯ ಸಹಾಯವನ್ನು ಮಾಡಿದ್ದಾರೆ. ಇವರಿಗೆ ಕನ್ನಡ ಜನರ ಪರವಾಗಿ ನಾನು ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತೇನೆ

ಈ ಸಂದರ್ಭದಲ್ಲಿ ಪ್ರಕೃತೋಚಿತ ವಿಚಾರವನ್ನು ಪ್ರಸ್ತಾಪಿಸುವುದು ಯೋಗ್ಯವೆನಿಸುವುದು. ಅದಾವುದೆಂದರೆ ದಿ|| ಡಾ|| ಸಿ. ಆರ್. ರೆಡ್ಡಿ ಅವರು ಆಂಧ್ರ ಸಾರಸ್ವತದಲ್ಲಿ ಹಲವಾರು ಗ್ರಂಥಗಳನ್ನು ಬರೆದು ಪ್ರಚುರಿಸಿರುತ್ತಾರೆಂದು ಕೇಳುತ್ತೇನೆ. ಇನ್ನು ಆಂಗ್ಲ ಭಾಷೆಯಲ್ಲಂತೂ ವಿದ್ಯಾರ್ಥಿ ದೆಸೆಯಿಂದಲೂ, ಅಪಾರ ಮೇಧಾವಿಗಳೆಂದು ಹೆಸರಾಂತವರು ನಮ್ಮ ಸಂಸ್ಥಾನಕ್ಕೆ ಪ್ರಪ್ರಥಮ ಇವರು ಆಗಮಿಸಿ ಶಿಕ್ಷಣ ಶಾಖಾಧಿಕಾರಿಗಳಾಗಿದ್ದಾಗ ನಮ್ಮಲ್ಲಿ ತಾಲ್ಲೂಕಿಗೊಂದು ಆಂಗ್ಲೋ-ವರ್ನಾಕ್ಯುಲರ್ ಸ್ಕೂಲು (ಎ. ವಿ. ಸ್ಕೂಲು) ಜಿಲ್ಲೆಗೊಂದು (ಸೆಕೆಂಡರಿ ಸ್ಕೂಲು) ಹೈಸ್ಕೂಲು ಮಾತ್ರವಿದ್ದು ಅಂದು ಇವರು ಎಜ್ಯುಕೇಷನ್ ಮೆಮೊರಾಂಡಂ ಬರೆದು ಮಾಧ್ಯಮಿಕ ಶಾಲೆ (ಮಿಡಲ್ ಸ್ಕೂಲು) ಹೈಸ್ಕೂಲುಗಳ ವಿಸ್ತರಣ, ಟೀಚರುಗಳಿಗೆ ೫-೭ ರೂಪಾಯಿ ವೇತನವಿದ್ದುದನ್ನು ಗ್ರೇಡುಗಳನ್ನು ಮಾಡಿ ಈಗಿನ ಸ್ಥಿತಿಗೆ ತಂದರು ಅಲ್ಲದೆ ಪಾಶ್ಚಿಮಾತ್ಯ ದೇಶಗಳ ಅನುಭವವನ್ನು ಸೇರಿಸಿಕೊಂಡು

ಓಂ


ಸಕಲ ವಿದ್ಯಾನಿಲಯದ ತಳಹದಿಯನ್ನು (ರಿಪೋರ್ಟು ಬರೆದು) ಹಾಕಿದವರೂ ಇವರೇ ! ಮತ್ತೊಮ್ಮೆ ಸುಧಾರಣಾ ಆಫೀಸರೂ, ಪ್ರೊ. ಛಾನ್ಸಲರಾಗಿದ್ದು ತಾವು ಹುಟ್ಟು ಆಂಧ್ರರಾದರೂ ಕನ್ನಡ ಭಾಷಾಭಿಮಾನಿಗಳಾಗಿ, ವೇಮನ ಕನ್ನಡ ನಿರ್ಮಾಣಕ್ಕೂ ಕಾರಣಕರ್ತರಾದುದು ಪರಭಾಷಾ ವಿಷಯದಲ್ಲಿ ಅವರಿಗಿದ್ದ ಸಹಾನುಭೂತಿ ವ್ಯಕ್ತವಾಗುತ್ತೆ ದಿವಂಗತರಿಗೆ ಅಂಕಿತವಾಗಿ ಈ ಗ್ರಂಥ ಮುದ್ರಣವಾದುದು ಯುಕ್ತವಾಗಿರುತ್ತೆ. ಇದಕ್ಕಾಗಿ ಶ್ರೀ ಭೀಮ ರಾಜು ಅವರ ಈ ಸ್ತುತ್ಯ ಪ್ರಯತ್ನಕ್ಕೆ ಕನ್ನಡಿಗರೆಲ್ಲರೂ ಉದಾರವಾಗಿ ಪ್ರೋತ್ಸಾಹ ನೀಡುವರೆಂದು ನಾನು ಸಂಪೂರ್ಣವಾಗಿ ನಂಬಿರುತ್ತೇನೆ. ಇವರ ಅಮೋಘವಾದ ಇಂತಹ ಸೇವಾ ಕಾರ್ಯವು ಇತೋಽಪ್ಯತಿಶಯವಾಗಿ ಹಾಗೂ ಅವಿರತವಾಗಿ ಸಾಗಲೆಂದು ಸರ್ವ ಚೇತನಾತ್ಮಕನಾದ ಪರಮಾತ್ಮ ನಲ್ಲಿ ನಾನು ಅನನ್ಯ ಭಕ್ತಿಯಿಂದ ಪ್ರಾರ್ಥನೆಯನ್ನು ಸಲ್ಲಿಸುತ್ತೇನೆ.

ಇಂತು,

ಚಿತ್ರದುರ್ಗ,
೪—೧೧—೧೯೫೭.

ಗುಂಡೋರಾವ ಚಂದ್ರಹರಿಹರ್,
ನ್ಯಾಯವಾದಿ.






ಶ್ರೀ ಬಿ. ಭೀಮಸೇನರಾವ ಯವರು

(ಗ್ರಂಥಕರ್ತರು)






ಶ್ರೀ ಬಿ. ಭೀಮರಾಜು ಯವರು.

(ಗ್ರಂಥಕರ್ತರು)





— ಓಂ —

ಗ್ರಂಥಕರ್ತನ ಎರಡು ಮಾತುಗಳು

(ಉಪೋದ್ಘಾತ)

ವಿಶ್ವವ್ಯಾಪಕತ್ವ, ವಿಶ್ವಭ್ರಾತೃತ್ವ, ವಿಶ್ವಕುಟುಂಬತ್ವ ಇವು ಅತಿ ಮಾನವತ್ವದ ಹೆಗ್ಗುರುತುಗಳು. ಜಾತಿ, ಅಧಿಕಾರ ಸಂಪತ್ತಿ, ಶ್ರೀಮಂತಿಕೆಗಳಿಂದ ಲಭಿಸತಕ್ಕವುಗಳಲ್ಲ ಪೌರಾಣಿಕ, ಐತಿಹಾಸಿಕ, ಆಧುನಿಕ ರೀತಿನೀತಿಗಳನ್ನು ಪರಿಶೀಲಿಸಿ, ವಿಮರ್ಶಿಸಿದರೂ, ಇದಕ್ಕೆ ಎಷ್ಟೋ ನಿದರ್ಶನಗಳು ನಮಗೆ ದೊರೆಯುವುವು. ವ್ಯಾಸ, ವಾಲ್ಮೀಕಿ, ವಸಿಷ್ಠ, ವಿಶ್ವಾಮಿತ್ರ ಮುಂತಾದವರು ಸಂಸ್ಕಾರ ವಿಶೇಷದಿಂದ, ಉಚ್ಚ ಪದವಿಗೇರಿರುವರು.

ಇನ್ನು ಐತಿಹಾಸಿಕ ಯುಗದಲ್ಲೂ, ಉತ್ತರ ಭಾರತದಲ್ಲಿ: ಕಬೀರ್, ತುಕಾರಾಂ, ಸಮರ್ಥ ರಾಮದಾಸ್ ಮುಂತಾದ ಪ್ರಭೃತಿಗಳೂ, ಭಾರತದ ಭವ್ಯ ಕೀರ್ತಿ ಧ್ವಜವನ್ನು ಹಿಡಿದೆತ್ತಲು ಕಾಲಾನುಗುಣವಾಗಿ ಶ್ರಮಿಸಿ, ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಸರ್ವ ಸಮತತ್ವಗಳನ್ನು ಉದ್ಘೋಷಿಸಿ, ಮಹೋಪಕಾರ ಮಾಡಿರುವರು.

ಅಂತೆಯೇ ದಕ್ಷಿಣಭಾರತದ ಕರ್ನಾಟಕಾಂಧ್ರ ಪ್ರಾಂತದಲ್ಲಿ: ಸರ್ವಜ್ಞ, ಬಸವೇಶ್ವರ ಅಕ್ಕಮಹಾದೇವಿ, ಪುರಂದರ, ಕನಕದಾಸರೂ, ವೇಮನ, ತ್ಯಾಗಯ್ಯ ಇವರು ಕೀರ್ತನ, ವಚನ, ತತ್ವರೂಪದಲ್ಲಿ ಹಾಡಿ, ಪಾಡಿ ತಾವೂ ನಲಿದು, ಜನಸಾಮಾನ್ಯರನ್ನು ಭಕ್ತಿ, ವಿರಕ್ತಿ ಮಾರ್ಗಕ್ಕೆ ಕೊಂಡೊಯ್ದು ತಣಿಸಿರುವರು. ಪಾಮರ ಜನರ ಹೃದಯಾಂತರಾಳವನ್ನು ನೇರವಾಗಿ ಪ್ರವೇಶಿಸಿ, ನಲಿಸಬೇಕಾದರೆ, ಅವರಾಡುವ ಮಾತುಗಳಿಂದಲೇ ಅವರಿಗೆ ಬೋಧೆಯಾಗಬೇಕಾದುದು ಅತಿ ಮುಖ್ಯ.

—ಓಂ—

ಈಗ ಭಾರತ ಕೇಂದ್ರ,ಪ್ರಾಂತ ಸಂಸ್ಥಾನಗಳಲ್ಲೂ ಸರಕಾರದವರು ಅದಕ್ಕಾಗಿಯೇ ಆಯಾ ದೇಶಭಾಷೆಗಳಲ್ಲಿ ನಿರೂಪ ಹಾಗೂ ಪತ್ರವ್ಯವಹಾರ ಜರುಗಿಸಬೇಕೆಂದು ತವಕಪಡುತ್ತಿರುವರು.

ದೇಶ ಭಾಷೆ, ಮಾತೃಭಾಷೆಗಳಲ್ಲಿ, ಮಾನವ ಧರ್ಮದ ಒಳಮರ್ಮಗಳು ತಿಳಿಯುವಂತಾದರೆ ಅದರಿಂದ ರಾಷ್ಟ್ರೋನ್ನತಿಯಾಗುವುದರಲ್ಲಿ ಸಂಶಯವಿಲ್ಲ ಅಂತಾಗಬೇಕೆಂದು ಸರ್ವರ ಹಾರೈಕೆ.

ಇನ್ನು ಪ್ರಸಕ್ತ ವಿಷಯದ ಕಡೆ ಹೊರಳುವ:-

ನಾನು ಶ್ರೀ ವೇಮನ ಆಂಧ್ರ ತತ್ವ ರತ್ನಗಳನ್ನು ಕನ್ನಡ ಭಾಷೆಗೆ ಪರಿವರ್ತನಗೊಳಿಸಿದ ಕಾರ್ಯ ಕಾರಣಗಳನ್ನು ಪೂಜ್ಯರೂ, ಮಾನ್ಯರೂ, ಸನ್ಮಿತ್ರವರ್ಯರೂ ತಮ್ಮ ಘನವಾದ ಮುನ್ನುಡಿ, ಸಂದೇಶ, ಪ್ರಶಂಶಾಪರ ಅಮೋಘ ಲೇಖನಗಳ ಮೂಲಕ ಪ್ರಕಾಶಪಡಿಸಿರುತ್ತಾರೆ. ಆದ್ದರಿಂದ ಮತ್ತೆ ಮತ್ತೆ ಅದನ್ನು ಇಲ್ಲಿ ಪ್ರಸ್ತಾಪಿಸುವುದು, ಅನವಸರ ಅಪ್ರಕೃತ

ಇಂದು ಯುಗ ಪುರುಷ, ಪೂಜ್ಯ, ಅಮರ ಬಾಪೂ ನಮ್ಮ ಭಾರತದಲ್ಲಿ ನಮ್ಮೊಂದಿಗೆ ಜನ್ಮಿಸಿ, ನಮ್ಮೊಡನೆ ಬೆಳೆದು ರಾಜಕೀಯ, ಸಾಮಾಜಿಕ, ಧಾರ್ಮಿಕ, ನೈತಿಕ ಮರ್ಮಗಳನ್ನು ಭೇದಿಸಿ, ಗುಟ್ಟು ರಟ್ಟು ಮಾಡಿ, ಸರ್ವ ಮಾನವರಿಗೂ ಸಮಾನ, ಸುಗಮ, ಸಮೀಚೀನವಾದ ಸ್ವಾತಂತ್ರ್ಯವನ್ನು ಅನುಗ್ರಹಿಸಿ ಅದೃಶ್ಯನಾದನು. ಅಪೂತ ಚರಿತ ಮಹಾತ್ಮನು ಅಸ್ಪೃಶ್ಯತೆಯ ಒಳಮರ್ಮವನ್ನು ಬಹಿರಂಗಪಡಿಸಿದನಲ್ಲವೆ? ಇದಕ್ಕೂ ಮುನ್ನ ಶ್ರೀ ವೇಮನ ಅಸ್ಪೃಶ್ಯರ ವಿಷಯದಲ್ಲಿ ಹೇಳಿರುವುದನ್ನು ಓದಿ ನೋಡಿರಿ.

ಶಂಕರಾಚಾರ್ಯರು. ರಾಮಾನುಜರು, ಬಸವೇಶ್ವರರು ಎಲ್ಲರೂ ಹೇಳಿರುವರು ಆಚರಣೆಯಲ್ಲಿ ಮಾತ್ರವಿಲ್ಲ. ನಾವು ಅಸ್ಪೃಶ್ಯರ ವಿಷಯದಲ್ಲಿ ಸ್ವಾರ್ಥ, ಪಕ್ಷಪಾತ, ದ್ರೋಹ, ವಂಚನೆಯಿಂದ ನಡೆದುಕೊಳ್ಳುತ್ತೇವೆ.

—೦೦—

ಶ್ರೀ ವೇಮನ ಈ ವಿಚಾರದಲ್ಲಿ ಮರ್ಮಭೇದಕವಾದ ಸಪ್ರಮಾಣ ಗಳನ್ನು ಉದಹರಿಸಿರುತ್ತಾನೆ. ಇಂತಹ ಮಹಾ ಜ್ಞಾನಿ, ಕರ್ಮಯೋಗಿ ಈಗ ನಮಗೆ ಬೇಕು.

ನಮ್ಮ ಭಾರತ ಕೇಂದ್ರ ಸರ್ಕಾರದ ಸಾರಿಗೆ ಸಚಿವರಾದ ಶ್ರೀಯುತ ಜಗಜೀವನರಾಂ ಅವರು ಬೆಂಗಳೂರು ಶ್ರೀ ರಾಮಪುರ ಹರಿಜನ ಸೇವಕ ಸಂಘದಲ್ಲಿ ಭಾಷಣ ಮಾಡುತ್ತಾ, " ನಾನು ಸುವರ್ಣೀಯರೆಂದು ಹೇಳಿಕೊ ಳ್ಳುವವರಲ್ಲಿ ಹುಟ್ಟದೆ - ಈ ದಲಿತ – ಹರಿಜನರಲ್ಲಿ ಹುಟ್ಟಿದುದು ನನ್ನ ಭಾಗ್ಯವಿಶೇಷವೆಂದು ಭಾವಿಸುತ್ತೇನೆ ". ಏಕೆಂದರೆ ಪತಿತವರ್ಗದ ಜನರ ಕಷ್ಟನಿಷ್ಟುರಗಳನ್ನು ಸ್ವತಃ ಅರಿತುಕೊಳ್ಳುವಂತಾದುದು ಮಹತ್ವದ ಸಂಗತಿ

ಇನ್ನು ಮಂದಿರ ಪ್ರವೇಶ ವಿಚಾರವೆತ್ತಿ ಹೀಗೆ ನುಡಿದರು:- "ದೇವರು ಪತಿತಪಾವನನು. ಹರಿಜನರು ದೇವಾಲಯ ಪ್ರವೇಶಮಾಡಿದರೆ ಆ ದೇವರು ಅಪವಿತ್ರನಾಗುತ್ತಾನೆ. ಅರ್ಚಕನು ಮಂತ್ರ ಪುನಶ್ಚರಣೆ, ಅಭಿಷೇಕ, ಪ್ರೋಕ್ಷಣಾದಿಗಳಿಂದ ದೇವರನ್ನು ಪರಿಶುದ್ಧಿಮಾಡುತ್ತಾನೆ. ಇದೆಂತಹ ದೇವರು ಅವನು ?

ಈ ದೇವರು ನಮಗೆ ಬೇಡ ಇಂತಹ ದೇವರ ದರ್ಶನದಿಂದ. ನಮಗೆ ಪಾಪ ಸಂಘಟಿಸುವುದೇ ಹೊರತು ನಾವು ಪುನೀತರಾಗುವುದಿಲ್ಲ. ಅರ್ಚಕನು ದೇವರಿಗಿಂತಲೂ ದೊಡ್ಡವನಾದನು" ಎಂದಿರುವರು.

' ಶ್ರೀ ಜಗಜೀವನರಾಂ' ಈ ಹೆಸರು ನಿಜವಾಗಿ ಅನ್ವರ್ಥವೆಂದೂ, ಅವರ ಈ ಅಮೌಲ್ಯಭಾಷಣ ನಮ್ಮ ವೇಮನ ತತ್ವಗಳಿಗಿತ್ತ ' ಅಮರ ಸಂದೇಶ'ವೆಂದೂ ಭಾವಿಸಿ ಪರೋಕ್ಷವಾಗಿ ಆಮಹೋದಯರಿಗೆ ಗ್ರಂಥ ಕರ್ತನಾದ ನನ್ನ ಅಭಿವಂದನೆಗಳನ್ನು ಅರ್ಪಿಸುತ್ತೇನೆ

ಅರ್ಚನಾ ವಿಷಯದಲ್ಲಿ ಬಸವೇಶ್ವರ:- 'ಕಲ್ಲುನಾಗರ ಕಂಡರೆ ಹಾಲ ನೆರೆಯೆಂಬರಯ್ಯ............' ವೇಮನ:- ' ಶಿಲೆಯ ಬಸವಗೈದೆ ಶರಣೆಂದು

ಮುಗಿವರು ಜೀವ ಬಸವನನ್ನು ಗುದ್ದುತಿಹರು....... ... ಮತ್ತು ಉಪವಾಸಗಳ ಮಾಡಿ ನೀರೊಳು ಮುಳುಗುತ್ತೆ–ಅನ್ನ ಮಾಡಿ ಬಡಿಸಿ ತಿನ್ನು ಎಂದು–ಅದರ ಬಾಯಬಡಿದು–ತಾವೆ ನುಂಗುವರಲ್ಲ' ಎಂದಿರುತ್ತಾನೆ.

ಸರ್ವಜ್ಞ, ವೇಮನ ಇವರ ಸರಣಿಯನ್ನು ಇಲ್ಲಿ ಕಾಣಬಹುದು:-

'ಕಲ್ಲುಪ್ಪು ಕಪ್ಪುರವು-ಸೊಲ್ಲೆರಡು ಧಾತೊಂದ-ಖುಲ್ಲನೊಳ್ಳಿದನ ರೂಪೊಂದು ಗುಣದೊಳಗೆ ಎಲ್ಲ ಅಂತರವು ಸರ್ವಜ್ಞ '

ವೇಮನ:- 'ಉಪ್ಪು ಕಪ್ಪುರಮದು ಒಂದೆ ತೆರನಿರ್ದೊಡುಂ-ನೋಡೆ ನೋಡೆ ರುಚಿಗಳ್ ಬೇರೆಬೇರೆ - ಪುರುಷರಲ್ಲಿ ಪುಣ್ಯಪುರುಷರು ಬೇರಯ್ಯ ವಿಶ್ವ '.

ಮತ್ತೊಂದು ವಿಚಾರ ಗಮನಾರ್ಹವಾಗಿರುವುದು. ಅದಾವುದೆಂದರೆ:

ನನ್ನ ಮಾನ್ಯ ಸನ್ಮಿತ್ರವರ್ಯರಾದ ತಿಪಟೂರು ಶ್ರೀ ಎಲ್. ವಿ. ಅಶ್ವತ್ಥನಾರಾಯಣಶ್ರೇಷ್ಠಿ ಅವರು ಸಮಕ್ಷಮ ಹಾಗೂ ಪತ್ರಮುಖೇನ ನನಗೊಂದು ಸೂಚನ ಕೊಟ್ಟಿರುತ್ತಾರೆ

ತೆಲುಗು ಮೂಲತತ್ವ, ಅದರ ಭಾಷಾಂತರ ಕನ್ನಡತತ್ವ, ಉದಹರಿಸಬೇಕೆಂಬುದು. ಅವರ ಈ ಸಲಹೆಯು ಸಮುಚಿತವೂ, ಸಯುಕ್ತಿಕವೂ ಆದುದೆಂದು ಬಗೆದು ಇಲ್ಲಿ ಒಂದೆರಡು ಅಂತಹ ತತ್ವಗಳನ್ನು ಮಾತ್ರ ಕೊಡ ಬಯಸುತ್ತೇನೆ:-

ತೆಲುಗು: ಶಿವುನಿ ಮೀದ ಮನಸು–ಸ್ಥಿರಮು ಗಾನುಂಚಿನ
ನೌನು ಮೋಕ್ಷ ಮರಯ–ನೈನದೌನು -
ಶಿವುನಿ ಮೀದ ಮನಸು - ಚೀಮಂತ ತಪ್ಪಿನ -
ಕಾದು ಕಾದು ಮುಕ್ತಿ - ಗಾದು ವೇಮಾ........

—ಓಂ—

ಕನ್ನಡ: ಶಿವನ ಮೇಲೆ ಮನವು - ಸ್ಥಿರವಾಗಿ ನಿಲಿಸಲು
ಆಗದಿದ್ದ ಮುಕ್ತಿ - ಯಹುದು ! ಅಹುದು !!
ಶಿವನ ಮೇಲೆ ಮನವು - ಕಿಂಚಿತ್ತು ತಪ್ಪಿದೊ
ಡಾಗದಾಗದಯ್ಯ ಮುಕ್ತಿ ವೇಮಾ ॥

ತೆಲುಗು: ತಲ್ಲಿ ತಂಡ್ರುಲ ಮೀದ – ದಯಲೇನಿ ಪುತ್ರುಂಡು
ಪುಟ್ಟನೇಮಿ ! ವಾಡು – ಗಿಟ್ಟನೇಮಿ!!
ಪುಟ್ಟಲೋನಜದಲು – ಪುಟ್ಟದಾಗಿಟ್ಟದಾ
ವಿಶ್ವ......................

ಕನ್ನಡ: ತಂದೆ ತಾಯಿಗಳೊಳು – ದಯೆಯಿಲ್ಲದಿಹಸುತ
ಪುಟ್ಟಲೇನು ? ತಾನು – ಸಾಯಲೇನು ?
ಹುತ್ತದಲ್ಲಿ ಗೆದ್ದಲುದಿಸಿ - ಲಯವೈದದೇಂ ?
ವಿಶ್ವ...........................

ಇತ್ಯಾದಿ........

ಈ ಉಪೋದ್ಘಾತವನ್ನೇ ವಿಸ್ತರಿಸಿ ಬರೆಯಬೇಕೆಂಬುವುದು ನನ್ನ ಅಭಿಮತವಲ್ಲ. ಸೂಜ್ಞರಿಗೆ ಈ ವಿಮರ್ಶಾ ಭಾಗವನ್ನು ಬಿಟ್ಟುಕೊಟ್ಟು, ನನ್ನ ಮೇಲೆ ಅಪಾರ ಕೃಪಾವೃಷ್ಟಿಸೇಚನ ಮಾಡಿರುವ ಮಹೋದಯರಿಗೆ ನನ್ನ ಕೃತಜ್ಞತಾಪೂರ್ವಕ ಅಭಿವಂದನೆಗಳನ್ನು ಅರ್ಪಿಸಿ ಈ ಲೇಖನವನ್ನು ಮುಕ್ತಾಯಗೊಳಿಸುತ್ತೇನೆ.

ಮಂತ್ರಿಮಾನ್ಯರು

೧ ಮೈಸೂರು ಮಾಜೀ ಪ್ರಧಾನರೂ, ಭಾರತ ಕೇಂದ್ರ ಉತ್ಪನ್ನ ಶಾಖಾ ಸಚಿವರೂ ಆದ ಮಾನ್ಯ ಶ್ರೀ ಕ್ಯಾಸಂಬಳ್ಳಿ ಚಂಗಲರಾಯರೆಡ್ಡಿ

ಅವರು ಈ ಗ್ರಂಥ ರಾಜಕ್ಕೆ ಮುನ್ನುಡಿ ಕೊಟ್ಟು ಮಹೋಪಕಾರ ಮಾಡಿರುತ್ತಾರೆ.

೨. ಹಾಗೆಯೇ ಈಗಿನ ನಮ್ಮ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಕೆಂಗಲ್ ಹನುಮಂತಯ್ಯನವರು ನನ್ನ ಪ್ರಾರ್ಥನೆಯನ್ನು ಅಂಗೀಕರಿಸಿ ಸಂದೇಶವನ್ನು ಕಳುಹಿಸಿರುತ್ತಾರೆ.

೩. ಮತ್ತೂ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರೂ, ಭಾರತ ಲೋಕಸಭಾ ಸದಸ್ಯರೂ ಆದ ಪ್ರಿಯ ಮಹಾಶಯ ಶ್ರೀಮಾನ್ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರು ತಮ್ಮ ಪ್ರೇಮಮಯ ಸಂದೇಶವನ್ನು ಕೊಟ್ಟಿರುತ್ತಾರೆ.

ಈ ತ್ರಿಮೂರ್ತಿಗಳಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಶ್ರೀಗಳವರು

೧ ಚಿತ್ರದುರ್ಗ ಬೃಹನ್ಮಠಾಧ್ಯಕ್ಷ ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ತಮ್ಮ ಘನತರವಾದ ಸಂದೇಶದೊಂದಿಗೆ ಸೌಹಾರ್ದ್ರಮಯ, ಸಹಾಯ, ಸಹಾನುಭೂತಿ ಪ್ರಶಸ್ತಿಯನ್ನೂ ಅನುಗ್ರಹಿಸಿರುತ್ತಾರೆ.

೨ ಸಿರಿಗೆರೆ ಮಠಾಧ್ಯಕ್ಷ ಶ್ರೀ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜೀ ಅವರೂ;

೩. ಹಾಗೂ ಸಿದ್ಧಗಂಗಾ ಕ್ಷೇತ್ರಾಧ್ಯಕ್ಷ ಶ್ರೀ ಶಿವಕುಮಾರ ಶ್ರೀಗಳವರೂ;

೪. ಮತ್ತು ಧಾರವಾಡ ಮುರುಘಾಮಠ ಶ್ರೀ ಮೃತ್ಯುಂಜಯ ಸ್ವಾಮಿಗಳವರೂ ತಮ್ಮ ನೈಜವಾದ ವಾತ್ಸಲ್ಯಾನುರಾಗದಿಂದ ನನ್ನ ಸವಿನಯ ಪ್ರಾರ್ಥನೆಗೆ ಆಂತರಿಕವಾಗಿ ಸಹಕಾರವನ್ನು ನೀಡಿರುತ್ತಾರೆ

ಈ ಸಾಹಿತ್ಯಪ್ರೇಮಿ ಶ್ರೀ ಗುರುವರ್ಯರಿಗೆ ನನ್ನ ಸಾದರ ಪ್ರಣಾಮಗಳನ್ನು ಅರ್ಪಿಸುತ್ತೇನೆ.

೧. ಕೆಂಗೇರಿ ಗುರುಕುಲಾಶ್ರಮದ ಆದರ್ಶ, ನವೀನ ಸುಧಾರಣಾ, ಸ್ವಾಮಿ ಶ್ರೀ ವಿಶ್ವಾನಂದಜೀ ಅವರ ಸದಾಶಯ ಸಂದೇಶಕ್ಕಾಗಿ ನನ್ನ ಸಪ್ರೇಮಪೂರಿತ ವಂದನೆಗಳು.

ಮಹಾಶಯರು

೧. ನಾಟಕರತ್ನ ಶ್ರೀಮಾನ್ ಜಿ. ಹೆಚ್. ವೀರಣ್ಣನವರೂ;

೨. ಮಾನ್ಯ ಸನ್ಮಿತ್ರ ತಿಪಟೂರು ಎಲ್. ವಿ. ಅಶ್ವತ್ಥನಾರಾಯಣ ಶೆಟ್ಟರೂ;

ಈ ಉಭಯ ಮಹಾಶಯರಿಗೆ ಅವರ ಅತ್ಯುತ್ತಮ ಸಂದೇಶಗಳಿಗಾಗಿ ನನ್ನ ವಿನಯಪೂರ್ವಕ ವಂದನೆಗಳು

೩. ಧಾರವಾಡ ರೆಡ್ಡಿ ಜನಸಂಘ, ರೆಡ್ಡಿ ಬ್ಯಾಂಕಿನ ಕಾರ್ಯನಿರ್ವಾಹಕ ಮಂಡಲಿಯವರು, ಶ್ರೀ ವೇಮನ ತತ್ವಗಳ ವಿಷಯದಲ್ಲಿ ತಮಗಿರುವ ಸಹಜವಾದ ಭಕ್ತಿ ಪ್ರೇಮಾದರಗಳ ಮೂಲಕ ಸಹಕರಿಸಿರುತ್ತಾರೆ. ಅವರಿಗೆ ನನ್ನ ಕೃತಜ್ಞತಾ ವಂದನೆಗಳು

೧ ಆಸ್ಥಾನ ಮಹಾ ವಿದ್ವಾನ್ ಪಂಡಿತ್ ಶ್ರೀ ಭೀಮಸೇನಾಚಾರ್ಯರವರು ಸಂಸ್ಕೃತದಲ್ಲಿ ಗಂಭೀರ ವಾಕ್ಸರಣಿಯಿಂದ ಪ್ರಶಸ್ತಿಪತ್ರವನ್ನು ಕೊಟ್ಟಿರುತ್ತಾರೆ

೨ ಹಾಗೆಯೇ ನ್ಯಾಯವಾದೀ ಶ್ರೀ ಗುಂಡ್ಲೋ ರಾಮಚಂದ್ರ, ಹರಿಹರ್ ಇವರು ಚಿತ್ರದುರ್ಗದಲ್ಲಿ ರಾಷ್ಟ್ರೀಯ ಭಾವನೆಯನ್ನು ಪ್ರಪ್ರಥಮ ಬೀಜಾಂಕುರವಾಗುವಂತೆ ಮಾಡಿದವರು. ತಮ್ಮ ಸರ್ವಸಮತ್ವ, ಸಮದರ್ಶಿತ್ವ ಭಾವನಾಪೂರ್ವಕವಾದ ಪ್ರಶಂಸಾ ಪತ್ರವನ್ನಿಲ್ಲಿ ಕೊಟ್ಟಿರುತ್ತಾರೆ.

ಉಭಯ ಸನ್ಮಿತ್ರರಿಗೂ ನಮಸ್ತೇಗಳು.

ಅಧಿಕಾರ ವರ್ಗದವರು

೧. ಮೈಸೂರು ಸಂಸ್ಥಾನದ ವೈದ್ಯಶಾಖಾ ಮುಖ್ಯಾಧಿಕಾರಿಗಳಾದ ಶ್ರೀ ಬಿ. ಆರ್. ರಾಮಲಿಂಗಾರೆಡ್ಡಿ ಅವರು, ತಾವು ವಿದ್ಯಾರ್ಥಿ ದೆಸೆಯಿಂದ ಉನ್ನತ ಪದವಿಗೇರಿದ ಕಥಾನಕವನ್ನು ವಿವರಿಸಿರುತ್ತಾರೆ.

೨. ಶ್ರೀಮಾನ್ ಕೆ. ನಾರಾಯಣಸ್ವಾಮಿಗಳು ಚಿತ್ರದುರ್ಗ ಜಿಲ್ಲಾಧಿಕಾರಿಗಳಾಗಿದ್ದು ಈಗ ಲಂಡನ್ನಿನಲ್ಲಿ ಮೈಸೂರು ಟ್ರೇಡ್ ಏಜೆಂಟರಾಗಿರುತ್ತಾರೆ.

೩. ಶ್ರೀ ಟಿ. ವೆಂಕಟಶಿವರೆಡ್ಡಿಗಳು ಲಂಡನ್ನಲ್ಲಿ ಮೈಸೂರು ಟ್ರೇಡ್ ಏಜೆಂಟರಾಗಿದ್ದು ಈಗ ಚಿತ್ರದುರ್ಗ ಜಿಲ್ಲಾಧಿಕಾರಿಗಳಾಗಿರುತ್ತಾರೆ.

ಈ ಮೂವರೂ ದಿ। ಡಾ। ಶಿ. ಆರ್. ರೆಡ್ಡಿ ಅವರ ಸ್ಮಾರಕ ಗ್ರಂಥ, ಶ್ರೀ ವೇಮನತತ್ವ ಈ ಪುಸ್ತಕಕ್ಕೆ ತಮ್ಮ ಭಕ್ತಿ ಸಂದೇಶಗಳನ್ನು ಅರ್ಪಿಸಿರುತ್ತಾರೆ. ಇವರಿಗೆ ನನ್ನ ಪ್ರೀತಿಮಯ ವಂದನೆಗಳು.

೧. ಶ್ರೀ ಎಂ. ಚನ್ನಾರೆಡ್ಡಿ ಅವರು ನಿವೃತ್ತ ರೆವಿನ್ಯೂ ಸಬ್-ಡಿವಿಜನ್ ಅ। ಕಮೀಷನರು. ಈ ಮಹಾಶಯರು ಬಾಲ್ಯದಿಂದಲೂ ನನ್ನ ಸನ್ಮಿತ್ರರು. ಒಕ್ಕಲಿಗರ ಸಂಘ ಒಕ್ಕಲಿಗರ ಮುದ್ರಾಯಂತ್ರ, ಒಕ್ಕಲಿಗರ ಪತ್ರ, ಈ ಮೂರು ಕಾರ್ಯಗಳಲ್ಲೂ ದುಡಿದು ವಿದೇಶದಲ್ಲಿ ವ್ಯಾಸಂಗ ಮಾಡಿ

ಸಂಸ್ಥಾನದ ರೈತ ಸೇವೆಯನ್ನು ನಿಸ್ಪೃಹತೆಯಿಂದ ನೆರವೇರಿಸಿ ಧನ್ಯರಾದ ಸ್ಫೂರ್ತಿವಂತ ಸಾಹಸಿಗಳು ಏಕರೀತಿಯಾದ ಮನೋಭಾವವುಳ್ಳವರು. ಜ್ಞಾನ ಪ್ರಸಾರ ಕಾರ್ಯವು ಸಪ್ತ ಸಂತಾನಗಳಲ್ಲಿ ಒಂದೆಂದು ಭಾವಿಸಿ ನನ್ನ ಈ ಮಹತ್ಕಾರ್ಯಕ್ಕೆ ಸಂಪೂರ್ಣ ಸಹಾನುಭೂತಿಯಿಂದ ಸಹಕರಿಸಿರುತ್ತಾರೆ ಇವರಿಗೆ ಸನ್ಮಂಗಳವಾಗಲೆಂದು ಹಾರೈಕೆ.

೨ ನಮ್ಮ ಗಾಂಧಿತತ್ವಗಳು, ಗಾಂಧಿ ಗುಣಗಾನ ಕೀರ್ತನೆಗಳು ಈ ಪುಸ್ತಕಗಳಿಗೆ ಮುನ್ನುಡಿ ಬರೆಸಿ ಮಹೋಪಕಾರ ಮಾಡಿದ ನಿವೃತ್ತ ಮೈಸೂರು ಸಕಲ ಕಲಾ ನಿಲಯದ ಉಪಸ್ಥಾನಪತಿಗಳಾಗಿದ್ದ ಶ್ರೀ ಆರ್. ಕಸ್ತೂರಿರಾಜಶೆಟ್ಟರವರನ್ನೂ;

೩ ಸಂಸ್ಥಾನದ ಗ್ರಾಮಾಭಿವೃದ್ಧಿ ಶಾಖಾ ಮುಖ್ಯಾಧಿಕಾರಿಗಳಾಗಿದ್ದು ನನ್ನ ಸಾಹಿತ್ಯಸೇವೆಗೆ ಸಹಾಯ ಮಾಡಿದ ಶ್ರೀ ಎನ್. ಎಸ್. ಹಿರಣ್ಣಯ್ಯರವರನ್ನೂ; ಈ ಸಂದರ್ಭದಲ್ಲಿ ಸ್ಮರಿಸಿ ಉಭಯ ಮಹಾಶಯರಿಗೂ ಸನ್ಮಂಗಳವಾಗಲೆಂದು ಹಾರೈಸುತ್ತೇನೆ.

ಈ ಸುಸಂಧಿಯಲ್ಲಿ ನನ್ನ ಸಾಹಿತ್ಯ ಸೇವೆಗೆ ನೆರವಿತ್ತ ಪೂರ್ವ ಮಿತ್ರರನ್ನು ಸ್ಮರಿಸುವುದು ಅಪ್ರಕೃತವಾಗಲಾರದು.

ತತ್ವನಿಷ್ಠರು

೧ ನಂದಿ ಶ್ರೀ ಸೊಣ್ಣಪ್ಪ ಸಹೋದರರು ಶ್ರೀ ವೇಮನ ತತ್ವ ಪ್ರಕಾಶನ. ವೇಮನ ಜಯಂತಿ ಕಾರ್ಯಕ್ಕೆ ವಿಶೇಷರೀತಿಯಲ್ಲಿ ತನು, ಮನ, ಧನದಿಂದ ಸಹಕರಿಸಿರುತ್ತಾರೆ. ಅಲ್ಲದೆ

ಮೇಲೂರು ರೇಷ್ಮೆ ವ್ಯಾಪಾರಿಗಳಾದ ಶ್ರೀ ಕೆ. ಎಂ. ನಂಜುಂಡಪ್ಪ ಶ್ರೀ ಜಿ. ಚಿಕ್ಕಮುನಿಯಪ್ಪ ಇವರಿಗೂ, ಗ್ರಾಮ ಮುಖಂಡರಿಗೂ;

ಸ್ಫೂರ್ತಿಯನ್ನಿತ್ತು ಕೀರ್ತಿ ಪ್ರತಿಷ್ಠಾವಂತವಾಗಿ ವೇಮನ ಜಯಂತಿಯನ್ನು ಜಯಜಯಕಾರವಾಗಿ ಮಾಡಿದ ಭಕ್ತವರೇಣ್ಯರವರು ಮುಂದೂ ಅಚಲವಾಗಿ ಜಯಂತಿಯನ್ನು ಆಚರಣೆಗೆ ತಂದು ಗುರುಕೃಪೆಗೆ ಪಾತ್ರರಾಗಲೆಂದು ಹಾರೈಸುತ್ತೇನೆ.

೩ ಶ್ರೀ ಕೆ.ಟಿ. ವಾಸುದೇವರೆಡ್ಡಿ ಅವರು ಚಿತ್ರದುರ್ಗ ಜಿಲ್ಲಾ ರೆಡ್ಡಿ ಜನಸಂಘದ ಅಧ್ಯಕ್ಷರು. ಪದವೀಧರರು ನಿಗರ್ವ ಶಿರೋಮಣಿಗಳು, ಜಗಳೂರಿನ ತಮ್ಮ ಮಿತ್ರರಿಂದ ತತ್ವ ಮುದ್ರಣ ಕಾರ್ಯಕ್ಕೆ ಸಹಕಾರ ನೀಡಿರುತ್ತಾರೆ ಇದಕ್ಕಾಗಿ ಸಹಾಯಕ ಮಹಾಶಯರಿಗೆಲ್ಲಾ ಸಮುಚಿತ ವಂದನೆಗಳು.

೪ ನನ್ನ ಜನ್ಮಭೂಮಿ 'ಮರಡಿಹಳ್ಳಿ' ಅಲ್ಲಿಯೇ ಶ್ರೀವೇಮನ ಕನ್ನಡ ತತ್ವ ನಿರ್ಮಾಣಕ್ಕೆ ಅಂಕುರಾರ್ಪಣವಾದುದು ಅಂದು ಉತ್ಸಾಹಿ ತರುಣರಾಗಿದ್ದು, ನನ್ನ ಕಾರ್ಯಕಲಾಪಗಳಿಗೆಲ್ಲಾ ವಿಶೇಷ ಉತ್ತೇಜನ ವಿತ್ತು ಗೌರವಿಸಿದ ಶ್ರೀ ಎಸ್. ರುದ್ರರೆಡ್ಡಿ ಅವರನ್ನು ಇಂದು ನಾನು ಮನಃಪೂರ್ವಕವಾಗಿ ಅಭಿವಂದಿಸುತ್ತೇನೆ.

೫ ಶ್ರೀವರ್ಮಾ ಎಂ. ವಿ. ಸುಬ್ಬಯ್ಯನಾಯ್ಡು ಅವರು ಬಾಲ್ಯದಿಂದಲೂ ಬೇರೆ ಬೇರೆ ನಾಟ್ಯರಂಗಗಳಲ್ಲಿ ಅಭಿನೇತೃಗಳಾಗಿದ್ದವರು ತರುವಾಯ ಸ್ವಯಂ 'ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ'ಯನ್ನು ಸ್ಥಾಪಿಸಿದರು. ಅದರಲ್ಲಿ 'ಭಕ್ತ ಅಂಬರೀಷ' ಇವರ ಕೀರ್ತಿ ಲತೆಯನ್ನು ಅಂಬರಕ್ಕೇರಿಸಿದುದಲ್ಲದೆ ಕುಂದನಕ್ಕೆ ಮೆರಗು ಕೊಟ್ಟಂತೆ, ಕರ್ನಾಟಕ ಚಲನಚಿತ್ರರಂಗದಲ್ಲೂ ಪ್ರವೇಶಿಸಿ. ವಿಶೇಷ ಬೆಳಕಿಗೆ ಬಂದಿರುವರು. ನಮ್ಮ ಕನ್ನಡ ರೂಪವಾಣಿಯಲ್ಲಿ ಇವರಿಗೆ ಅಗ್ರಸ್ಥಾನವು ಮೀಸಲಾಗಿರುವುದೆಂದರೆ ತಪ್ಪಾಗಲಾರದು. ಇವರ ವಸಂತಸೇನ, ಹರಿಶ್ಚಂದ್ರ, ಭೂಕೈಲಾಸ ಇವು ಜನರ ಮೆಚ್ಚುಗೆಯನ್ನು ಗಳಿಸಿರುವುವು.

ನನಗೆ ಶ್ರೀ ನಾಯ್ಡು ಅವರು ಚಿರಪರಿಚಿತರು. ನನ್ನಿಂದ ವಿರಚಿತ ವಾದ ನಾಟಕಗಳಲ್ಲೂ ಪಾತ್ರವಹಿಸಿರುವರು. ಭಕ್ತಿ ಹಾಗೂ ವೀರರಸೋದ್ವೇಗ ಪಾತ್ರಾಭಿನಯದಲ್ಲಿ ಪ್ರೇಕ್ಷಕರ ಮನಾಕರ್ಷಣ ಮಾಡುವ ಶಕ್ತಿಯು ಇವರಿಗೆ ನೈಜವಾಗಿ, ದೈವದೇಣಿಗೆಯಾಗಿರುವುದು. ನಮ್ಮ ಶ್ರೀ ವೇಮನ ತತ್ವಗಳ ವಿಷಯದಲ್ಲಿ ಇವರು ಅಚಲವಾದ ಭಕ್ತಿ, ಪ್ರೇಮಾದರಗಳನ್ನು ಪ್ರದರ್ಶಿಸಿರುತ್ತಾರೆ.

ಶ್ರೀ ನಾಯ್ಡು ಅವರು ದೇಶ ಪ್ರೇಮ ಸದಾಶಯಗಳಿಂದ ಸ್ಫೂರ್ತಿಗೊಂಡು ಇತೋಪ್ಯತಿಶಯವಾಗಿ ಇವರ ಮಂಡಲಿಯು ವರ್ಧಿಷ್ಣುವಾಗಲೆಂದು ಹಾರೈಸುತ್ತೇನೆ

೬ ಶ್ರೀ ಎಂ. ಎಸ್ ಗೋವಿಂದಸ್ವಾಮಿ ಇವರು ಬಾಲ್ಯದಿಂದಲೂ ನಾಟ್ಯರಂಗದಲ್ಲಿ ಉತ್ತಮ ನಟರಾಗಿದ್ದು ಸಂಗೀತ ರಂಗಕ್ಕೆ ತಿರುಗಿ ವ್ಯಾಪಾರ ರಂಗದಲ್ಲೂ ಮಾಹಿತಿ ಪಡೆದು, ಈಗ ಉಭಯ ರಂಗಗಳಲ್ಲೂ ನಿಷ್ಣಾತರಾಗಿರುತ್ತಾರೆ.

ಆದರೆ ಇವರ ಸುಮಧುರ ಸಂಗೀತಾಲಾಪನಕ್ಕೆ ತಲೆತೂಗದವರಿಲ್ಲ ಏನು ಮಾಡುವುದು? 'ನಿರಾಶ್ರಯಾಃ ನ ಶೋಭಂತೆ' ಜೀವನ ರಂಗವು ಕುಂಠಿತವಾದಾಗ ವ್ಯಾಪಾರ ರಂಗಕ್ಕೆ ನುಗ್ಗುತ್ತಾರೆ.

ಆಲ್ ಇಂಡಿಯಾ ಆಕಾಶವಾಣಿ ಮೈಸೂರು ಕೇಂದ್ರದಿಂದ ಪ್ರತಿ ೩ ತಿಂಗಳಿಗೊಮ್ಮೆ ಇವರ ಗಾನ ಪ್ರಸಾರ ಕಾರ್ಯವು ನಡೆಯುವುದು.

ಇವರು ಉತ್ತಮ ಗುಣಾಢ್ಯರು. ಸಮಭಾವವುಳ್ಳವರು. ನನ್ನ ಕಲ್ಪನಾ ಸಾಮ್ರಾಜ್ಯದ ಭಾವೀ 'ಪ್ರಚಾರ ಮಂಡಲಿ' ಮುಖಂಡತ್ವವು ಅವರ ಭಾಗದ್ದು. ಶ್ರೀ ವೇಮನ ತತ್ವಗಳ ವಿಷಯದಲ್ಲಿ ಭಕ್ತ್ಯಾದರಗಳುಳ್ಳ ಶ್ರೀ ಸ್ವಾಮಿ ಅವರಿಗೆ ಸನ್ಮಂಗಳವಾಗಲೆಂದು ಹಾರೈಕೆ.

೭ ಮೈಸೂರು ದಿವಂಗತ ಶ್ರೀ ಅತ್ತಿಗುಪ್ಪೆ ಸೂರ್ಯನಾರಾಯಣ ಶ್ರೇಷ್ಠಿ ಅವರು ನಿಸ್ಸೀಮ ದೈವಭಕ್ತರು. ಆಗರ್ಭ ಶ್ರೀಮಂತರು ವರ್ಷಂ ನವರಾತ್ರಿ ಸಮಾರಂಭ ಸಮಯದಲ್ಲಿ ಅವಿಚ್ಛಿನ್ನವಾಗಿ ಹಗಲೂ ರಾತ್ರಿ ಅನ್ನ ದಾನ ನಡೆಯುತ್ತಿದ್ದ ದೃಶ್ಯವು ಅಭೂತಪೂರ್ವವಾಗಿರುತ್ತಿತ್ತು. ಇವರಿಗೆ ಶ್ರೀ ಕಾಂತಶೆಟ್ಟರು, ಶ್ರೀ ರಾಜಗೋಪಾಲಶೆಟ್ಟರು, ಶ್ರೀ ವೆಂಕಟಾಚಲಶೆಟ್ಟ ರೆಂಬ ಪುತ್ರರಿರುವರು. ಇವರೂ ಸಹ ತಂದೆಯವರ ಧರ್ಮಕಾರ್ಯವನ್ನೇ ಮುಂದುವರಿಸುತ್ತಿರುವರು.

ದಿವಂಗತರ ಸಹೋದರರಾದ ಶ್ರೀ ಭಾಸ್ಕರಶೆಟ್ಟರವರು ಅಣ್ಣಂದಿರ ಆಜ್ಞಾಪಾಲಕರಾಗಿ, ವ್ಯವಹಾರ ಕಾರ್ಯ ನಿರತರಾಗಿದ್ದು, ಈಗ ಪ್ರತ್ಯೇಕ ಕುಟುಂಬಿಗಳಾಗಿ ಹಿರಿಯರ ಮೇಲ್ಪಂಕ್ತಿಯನ್ನೇ ಇಂದಿಗೂ ಪಾಲಿಸುತ್ತಾ ಧರ್ಮಕಾರ್ಯ ನಿರತರಾಗಿರುವರು ಈ ಕುಟುಂಬ ವರ್ಗದವರಿಗೆ ನಾನು ನಲವತ್ತು ವರ್ಷಗಳಿಂದಲೂ ಸುಪರಿಚಿತನು ಅಂದಿನಿಂದ ಇಂದಿನವರೆ ವಿಗೂ ಒಂದೇ ವಿಧವಾದ ಪ್ರೀತ್ಯಾದರವುಳ್ಳವರಾಗಿರುತ್ತಾರೆ.

ಇವರ ತೆರೆದ ಛತ್ರವೊಂದು ಆಗಂತುಕರ ಬಿಡಾರಕ್ಕೆ ಹಾಗೂ ವಿದ್ಯಾರ್ಥಿ ಬೃಂದದ ಸುಖವಸತಿಗೆ ನೆಲೆವೀಡಾಗಿ ರಂಜಿಸುವುದು.

ಸರ್ವೇಶ್ವರನು ಈ ಕುಟುಂಬ ವರ್ಗಕ್ಕೆ ಸುಖಶಾಂತಿಯನ್ನೀಯಲೆಂದು ಪ್ರಾರ್ಥನೆ.

೮ ಇನ್ನು ನಮ್ಮ ವಿನಾಯಕ ಮುದ್ರಣಾಲಯದ ಮಾಲಕರಾದ ಶ್ರೀ ಇ. ಗುರುಪಾದಪ್ಪನವರೂ, ಶ್ರೀ ಎ ಆರ್. ಕೃಷ್ಣಸ್ವಾಮಿಶ್ರೇಷ್ಠಿ ಯವರೂ ಬಹುಕಾಲದಿಂದ ನನ್ನಲ್ಲಿಟ್ಟಿರುವ ವಿಶ್ವಾಸಕ್ಕಾಗಿ ಅವರು ಯುವ ಕರಾದ್ದರಿಂದ ಶ್ರೇಯಸ್ಸನ್ನು ಕೋರುತ್ತೇನೆ.

ಅಕ್ಷರ ಸಂಯೋಜನಾದಿ ಕರ್ಮಚಾರಿಗಳಿಗೂ ಜಗದೀಶನು ಆಶೀರ್ವ ದಿಸಲೆಂದು ಕೋರುತ್ತೇನೆ.

ನಾನಾ ಪರಿಯಿಂದ ಸಹಕರಿಸಿರುವ ಸರ್ವರಿಗೂ ಸಪ್ರೇಮ ವಂದನೆಗಳು.

—ಓಂ—

ಕೊನೆಯ ಮಾತು ಕ್ಷಮಾಯಾಚನೆ

ಈ ಸ್ಮಾರಕ ಗ್ರಂಥ ಮುದ್ರಣ ಕಾರ್ಯವು ಸಂಪೂರ್ಣವಾಗಿ ನನ್ನ ಮೇಲೇ ಬಿದ್ದಿತು. ಕಾಗದ ದುರ್ಲಭವಾಗಿದ್ದ ಸಮಯದಲ್ಲಿ ಮೊದಲು ತಂದ ಕಾಗದಗಳು ಮುಗಿದು, ಮತ್ತೆ ತರುವಾಗ ಒಂದಕ್ಕೊಂದು ಸಂಬಂಧವೇಇಲ್ಲ. ಮೂರನೇ ಸಲ ತಂದ ಕಾಗದವೂ ಬೇರೆ. ಹೀಗಾಗಿ ಮೂರು ಪಾರಿ ಹಿಡಿಯಿತು. ಮುಂದಿನ ಮುದ್ರಣದಲ್ಲಿ ಈ ಲೋಪವೆಲ್ಲಾ ಸರಿಪಡಿಸಲಾಗುತ್ತೆ.

ಈ ಸಲ ಬರೆಯುವವನು ನಾನೇ, ತಿದ್ದುವವನು ನಾನೇ, ಎಲ್ಲಾ ನಾನೇ ನಾನಾಗಿ ಹಲವು ದೋಷಗಳಾದುದು ಅನಿವಾರ್ಯ. ತೆಲಗು ಕವಿ ಹೇಳಿರುವಂತೆ " ಚೆರುಕುನಕು ವಂಕ ಬೋತೇಮಿ ಚೆಡುನ ತೀಪು-ತಪ್ಪುಬಡಿತೇಮಿ ಸದ್ಭಕ್ತಿ ತಕ್ಕುವೌನ''-ಕಬ್ಬು ಹಳ್ಳದಲ್ಲಿ ಕೊಚ್ಚಿಹೋದರೆ ಸಿಹಿ ಕಡಿಮೆಯಾಗುವುದೇ ? ತಪ್ಪುಬಿದ್ದರೆ ನಿಜವಾದ ಭಕ್ತಿಗೆ ಚ್ಯುತಿ ಬರುವುದೇ ? ಎಂದಿರುವರು. ತತ್ವ ನಿಷ್ಠರು ಇದನ್ನು ಗ್ರಹಿಸುವರೆಂದು ನಂಬುತ್ತೇನೆ.

ಈ ಸಲ ಸಂಸ್ಕರಣ ರೀತ್ಯಾ 'ಅ' ಕಾರದಿಂದ ಹಿಡಿದು 'ಹ' ಕಾರದ ವರಿವಿಗೆ ಅಕ್ಷರಮಾಲೆಯಂತೆ ಸಯ್ಯೋಜನ ಮಾಡಲಾಗಿದೆ ಆದರೆ ೧೧೦೫ ತತ್ವಗಳಲ್ಲಿ ಕೆಲವು ಮಾತ್ರ 'ಸಂಕಲನ' ಹಾಕಬೇಕಾಯಿತು. ಮುಂದಿನ ಮುದ್ರಣದಲ್ಲಿ ಇವುಗಳನ್ನು ಹಂಚಿಕೆ ಹಾಕಿ ಸರಿಪಡಿಸಲಾಗುತ್ತೆ.

ಮತ್ತೊಂದು ವಿಚಾರ, ಈ ಪುಸ್ತಕದಲ್ಲಿ ಇಷ್ಟೊಂದು ಸಂದೇಶಗಳೂ, ಪ್ರಶಂಶಾಪರ ಲೇಖನಗಳೇಕೆಂದು ತರ್ಕಿಸಬಹುದು. ಈ ಸಂಚಿಕೆ ಸ್ಮಾರಕ ಗ್ರಂಥವಾದುದರಿಂದ ದಿ। ಡಾ। ಸಿ. ಆರ್. ರೆಡ್ಡಿ ಅವರ ಹಿತೈಷಿಗಳೂ, ಶ್ರೀಗಳವರೂ, ಶಿಷ್ಯಪ್ರಶಿಷ್ಯರೂ, ಹಾಗೂ ಬಂಧುಗಳೂ ಒಪ್ಪಿಸಿದ ಲೇಖನಗಳನ್ನು ಸ್ವೀಕರಿಸುವುದಾವಶ್ಯಕವೆಂದು ಹೇಳಬೇಕಾಗಿಲ್ಲ.

ಆದರೆ ಸಂದೇಶ – ಪ್ರಶಂಸೆಗಳಿತ್ತ ಮಹಾಶಯರು ತತ್ವಗಳ ವಿಷಯದಲ್ಲಿ ಆಳವಾಗಿ ಅಭ್ಯಸಿಸಿ ಕೊಟ್ಟ ಮಹತ್ವಪೂರ್ಣ ಮೆಚ್ಚುಗೆಯ ಅಭಿಪ್ರಾಯಗಳು ಓದುಗರಿಗೆ ಸಂಪೂರ್ಣ ಸಹಾಯಕಗಳೆಂದು ಭಾವಿಸಬೇಕಾಗಿ ವಿನಂತಿಸುತ್ತೇನೆ.

ಇತಿ, ತಮ್ಮ,

ಬಿ. ಭೀಮರಾಜು.

ಅರ್ಪಣಾ ಪತ್ರ.

ದಿವಂಗತ ಡಾ| ಕಟ್ಟಮಂಚಿ ರಾಮಲಿಂಗಾರೆಡ್ಡಿ ಅವರ ನಿಕಟ ಸಮ್ಮಂಧಿಗಳಾದ ಕೇವಲ ಆತ್ಮೀಯರ ಭೇಟಿಯಾಗಿ, ಹಾಗೂ ಪತ್ರವ್ಯವಹಾರ ನಡೆಸಿ, ಕೀರ್ತಿಶೇಷರ ಜೀವನಚರಿತ್ರೆಯನ್ನು ಅಪೇಕ್ಷಿಸಿದೆನಾದರೂ ದೀರ್ಘ ಕಾಲಾವಧಿ ನಿರೀಕ್ಷಿಸಿ ಸಂಕಲ್ಪ ಸಿದ್ಧಿಯಾಗಲಿಲ್ಲ. ಈ ಕಾರಣ ನನಗೆ ತಿಳಿದಮಟ್ಟಿಗೆ ಅವರ, ನನ್ನ ಹಲವು ಸವಿನೆನಪುಗಳು, ಎಂಬ ಲೇಖನ ಮತ್ತು ಅವರ ಕೈಬರೆಹದ ಇಂಗ್ಲೀಷು ಎರಡು ಪತ್ರಗಳ ಕನ್ನಡ ಭಾಷಾಂತರ ಇಷ್ಟು ಮಾತ್ರ ಇದರಲ್ಲಿ ಕೊಟ್ಟು ಅವರ ಭಾವಚಿತ್ರವನ್ನೀ ಪುಸ್ತಕದಲ್ಲಿ ಅನಾವರಣ ಮಾಡಿರುತ್ತೇನೆ.

ಅವರಿಗೆ ಅತ್ಯಂತ ಪ್ರಿಯವಾದ ಶ್ರೀ ವೇಮನ ಕನ್ನಡ ತತ್ವರತ್ನಗಳು ಅವರ ಅಂತರಾತ್ಮಕ್ಕೆ ನಿವೇದನವಾಗಲೆಂದೂ, ಇದರಿಂದ ಅವರಿಗೆ ಶಾಂತಿಪ್ರದವಾದ ಮೋಕ್ಷವು ಪ್ರಾಪ್ತಿಯಾಗಲೆಂದೂ ಹಾರೈಸುತ್ತೇನೆ.

ಬಿ. ಭೀಮರಾಜು,
ಗ್ರಂಥಕರ್ತ.



ಡಾ|| ಸಿ. ಆರ್. ರೆಡ್ಡಿಯವರು

ಅರ್ಪಣಾ ಪತ್ರ.

ದಿವಂಗತ ರಾ|| ಕಟ್ಟಿಮನಿ ರಾಮಲಿಂಗಾರೆಡ್ಡಿ ಅವರ ಪವಿತ್ರ ಸ್ಮೃತಿಗಳಿಗಿದು ಕೇವಲ ಅತ್ಯಲ್ಪವಾದ ಭೇಟಿಯಾಗಿ. ಹಾಗೂ ಪತ್ರಸ್ಥಾನ ವಹಿಸಿ, ಕೀರ್ತಿಶೇಷರ ಜೀವನಚರಿತ್ರೆಯನ್ನು ಅಪೇಕ್ಷಿಸಿದೆನಾದರೂ ದೀರ್ಘ ಕಾಲಾವಧಿ ನಿರೀಕ್ಷಿಸಿ ಸಂಕಲ್ಪ ಸಿದ್ಧಿಯಾಗಲಿಲ್ಲ. ಈ ಕಾರಣ ನನಗೆ ತಿಳಿದಮಟ್ಟಿಗೆ ಅವರ, ನನ್ನ ಹಲವು ನೆನಪಿನವುಗಳು, ಎಂಬ ಲೇಖನವನ್ನು ಅವರ ಸ್ವಹಸ್ತದ ಇಂಗ್ಲೀಷು ಎರಡು ಪತ್ರಗಳ ಕನ್ನಡ ಭಾಷಾಂತರ ಇಷ್ಟು ಮಾತ್ರ ಇದರಲ್ಲಿ ಕೊಟ್ಟು ಅವರ ಭಾವಚಿತ್ರವನ್ನೇ ಮುನ್ನಿಗೆ [illegible] ಅನಾವರಣ ಮಾಡುತ್ತೇನೆ.

ಅವರಿಗೆ ಅತ್ಯಂತ ಪ್ರಿಯವಾದ ಶ್ರೀ ವೇಮನ ಕನ್ನಡ ಪದ್ಯರತ್ನಗಳ [illegible] ಅನುವಾದಕ್ಕೆ ನಿವೇದನವಾಗಲೆಂದೂ, ಇದರಿಂದ ಅವರಿಗೆ ಶಾಶ್ವತವಾದ ಮೋಕ್ಷದ ಪ್ರಾಪ್ತಿಯಾಗಲೆಂದೂ ಹಾರೈಸುತ್ತೇನೆ.

ಬಿ. ಭೀಮರಾ[illegible]

ಗ್ರಂಥಕರ್ತ[illegible]



ದಿ| ಡಾ| ಸಿ ಆರ್. ರೆಡ್ಡಿಯವರು

ಓಂ

ದಿ|| ಡಾ|| ಸಿ. ಆರ್. ರೆಡ್ಡಿ ಅವರ ಹಲವು ಸವಿನೆನೆವುಗಳು.

ಆಂಧ್ರ ಆಂಗ್ಲ ಉಭಯ ಸಾಹಿತ್ಯ ಸಮ್ರಾಟರೆಂದರೆ, ಕೀರ್ತಿಶೇಷರಾದ ಶ್ರೀ ಕಟ್ಟಮಂಚಿ ರಾಮಲಿಂಗರೆಡ್ಡಿ ಅವರಿಗೆ ಸಲ್ಲುವುದು. ಶಿಕ್ಷಣ ಪ್ರಪಂಚ ದಲ್ಲಿ ಅವರಿಗೆ ಅದ್ವಿತೀಯ ಸ್ಥಾನಮಾನವು ಮೀಸಲಾಗಿರುವುದು. ನಮ್ಮ ಮಾದರಿ ಮೈಸೂರು ಸಂಸ್ಥಾನಕ್ಕೆ ಎರಡು ವೇಳೆ ಅವರ ಸೇವೆ ದೊರೆತುದು ನಮ್ಮ ಭಾಗ್ಯವಿಶೇಷವೇ ಸರಿ.

೧೯೦೯ರಂದು ಪ್ರಪ್ರಥಮ ವಿದ್ಯಾಶಾಖಾ ಅಸಿಸ್ಟೆಂಟ್ ಇನ್ಸ್ಪೆಕ್ಟರ್ ಜನ ರಲ್‌ರವರಾಗಿ ನಿಯಮಿಸಲ್ಪಟ್ಟಾಗ ವಿಜಾಪುರ ಜಿಲ್ಲಾ, ಬಾಗಲ್ಕೋಟೆ ತಾಲ್ಲೂಕು ದೇವನಾಳ ಕರ್ನಾಟಕ ರೆಡ್ಡಿ ಮಹಾಸಭೆಗೆ ಅಧ್ಯಕ್ಷರಾಗಿ ಆರಿಸ ಲ್ಪಟ್ಟರು. ಅಧ್ಯಕ್ಷರಿಗೆ ಕನ್ನಡ ತಿಳಿಯದು, ಸಭಿಕರಿಗೆ ತೆಲುಗು ಬಾರದು. ಇನ್ನು ಆಂಗ್ಲಭಾಷೆಯಲ್ಲಿ ಮಾತನಾಡುವುದೆಂದರೆ ಪದವೀಧರರಿಗೆ ಮಾತ್ರ ಪ್ರಯೋಜನ. ಅದೂ ಅಲ್ಪ ಸ್ವಲ್ಪ ಅಷ್ಟೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಭಾಷಾಂತರಕಾರರೋರ್ವರು ಧೈರ್ಯಮಾಡಿ ಶ್ರೀ ರೆಡ್ಡಿಗಳ ಆಂಗ್ಲ ಭಾಷ ಣವನ್ನು ಕನ್ನಡದಲ್ಲಿ ತರ್ಜುಮೆಮಾಡಿ ಹೇಳಲು ಮುಂದೆ ಬಂದರು. ವೇದಿ ಕೆಯ ಮೇಲೆ ನಿಂತು ಆಗ ೨೯ ವಯಸ್ಸಿನವರಾಗಿದ್ದು, ನವಯೌವ್ವನ, ಸ್ಫೂರ್ತಿವಂತ ಸ್ಪುರದ್ರೂಪಿಗಳಾಗಿದ್ದ ಶ್ರೀ ರೆಡ್ಡಿಗಳವರ ವದನಾರವಿಂದ ದಿಂದ ಉಕ್ಕಿ ಬರುತ್ತಿದ್ದ ವಾಕ್ಯರತ್ನಗಳು ಇಂತಿದ್ದವು:–

೧. "ನಾನು ಈ ಸಮಯದಲ್ಲಿ, ನನ್ನ ಪ್ರಿಯ ಕನ್ನಡರೆಡ್ಡಿ ಬಾಂಧವರ ಮಹಾಸಭೆಗೆ ಅಧ್ಯಕ್ಷನಾಗುತ್ತೇನೆಂದು ಇದಕ್ಕೆ ಪೂರ್ವಭಾಗಿಯಾಗಿ ನನ್ನ ಮಾತಾಪಿತೃಗಳಿಗೆ ತಿಳಿದಿದ್ದರೆ ನನಗೆ ಕನ್ನಡ ಕಲಿಸದೆ ಇರುತ್ತಿರಲಿಲ್ಲ."

ಇಂತಹ ಅನೌಲ್ಯ ಸುರಸಿಕ ವಾಕ್ಸುಧಾರಸವನ್ನು ಸಭಿಕರಿಗೆ ಉಣ
ಬಡಿಸುತ್ತಿದ್ದರು.

೧೯೩೧ ಜನವರಿ ತಿಂಗಳು ಚಿತ್ರದುರ್ಗದಲ್ಲಿ ಸಮಾವೇಶಗೊಂಡ ರೆಡ್ಡಿ
ಮಹಾಸಭೆಯ ಅಧ್ಯಕ್ಷರಾಗಿ ಆಗಮಿಸಿದ ಅವರಿಗೆ ಅಭೂತಪೂರ್ವಮಾದ
ರಾಜವೈಭವೋಪೇತಮಾದ ಮೆರವಣಿಗೆ ಜರುಗಿತು. ಅಂದು ಅವರ ಅಧ್ಯಕ್ಷ
ಭಾಷಣವು ಆಂಧ್ರಭಾಷೆಯಲ್ಲಿ ಗಮನಾರ್ಹವಾಗಿತ್ತು. ಪ್ರಾರಂಭದಲ್ಲಿ ಅವರು
ಹೀಗೆ ಹೇಳಿದರು:-

೧. "ಮನುಷ್ಯನಾಗಿ ಜನ್ಮಿಸಿದ ಪ್ರತಿ ಸ್ತ್ರೀಪುರುಷ ವ್ಯಕ್ತಿಗೂ, ತನ್ನ
ಜೀವಿತ ಕಾಲದಲ್ಲಿ ಶುಭಪ್ರದವಾದ ಮೆರವಣಿಗೆಯೊಂದು ತಟಸ್ಥಿಸುವುದು.
ಅಂಥಾ ಮೆರವಣಿಗೆ ನನಗೆ ಇದುವರುವಿಗೆ ಜರುಗಲಿಲ್ಲವಾದರೂ ಇಂದು
ನಡೆದ ಮೆರವಣಿಗೆ ಯಂಥಾ ಮಹತ್ವವಾದ ಮೆರವಣಿಗೆಯು ನನಗೂ ಇನ್ನಾ
ರಿಗೂ ಖಂಡಿತವಾಗಿ ನಡೆಯಲಾರದು".

ಇದು ಅರ್ಥಗರ್ಭಿತವಾದ ವಾಕ್ಸರಣಿಯು. ದಿವಂಗತರು ಮಹಾಧೀ
ರರು, ವಾಚಾಳಿಗಳು. ಅಸ್ಪೃಶ್ಯತೆಯ ಮಹಾರೋಗವನ್ನು ಮಹಾತ್ಮರಿಗೀ
ತಲೂ ಮುಂಚಿತವಾಗಿಯೇ ತೊಡೆದವರು. ನಿರ್ದಾಕ್ಷಣ್ಯ ಮೂರ್ತಿಗಳು
ಅತಿ ಖಂಡಿತವಾದಿಗಳು. ಅವರಿಗೆ ಶ್ರೀ ವೇಮನ ತತ್ವಗಳ ವಿಷಯದಲ್ಲಿ
ಎಂತಹ ಭಕ್ತಿ ಪ್ರೇಮಾದರಗಳಿದ್ದುವೆಂಬುದಕ್ಕೆ ಅವರ ವಾಕ್ಯಗಳಿಂದಲೇ
ಒಂದು ನಿದರ್ಶನ ಕೊಡಲಿಚ್ಛಿಸುತ್ತೇನೆ:-

೨. "ನಾನು ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಪದವೀಧರನಾಗಿ
ಕೇಂಬ್ರಿಡ್ಜು ಸಕಲ ಕಲಾನಿಲಯದ ವ್ಯಾಸಂಗಕ್ಕೆ ಹೋದಾಗ ಹಡಗಿನಿಂದ
ನನ್ನ ಸಾಮಾನುಗಳನ್ನು ಇಂಗಡಿಸುತ್ತಿದ್ದೆನು. ನನಗೆ ಅತ್ಯಂತ ಪ್ರಿಯತಮ
ವಾದ ವಸ್ತು ಒಂದು ಕಾಣಿಸಲಿಲ್ಲ. ಆಗ ನನಗುಂಟಾದ ಕಳವಳವಷ್ಟಿಷ್ಟೆಂದು

(ಎರಡು)

ಓಂ

ವರ್ಣಿಸಲಾಗದು ಅಯ್ಯೋ! ನನ್ನ ಪರಮಗುರು, ನನ್ನ ಮಿತ್ರ, ನನ್ನ ಮಾರ್ಗದರ್ಶಕ ನನ್ನಲ್ಲಿಲ್ಲವಾಯಿತಲ್ಲಾ ಎಂದು ಅಮಿತ ವ್ಯಾಕುಲಚಿತ್ತನಾಗಿ ಮತ್ತೊಮ್ಮೆ ಕಾತರನಾಗಿ ಸಾಮಾನುಗಳನ್ನು ಶೋಧಿಸಿದಾಗ ನನಗಗತ್ಯವಾದ ಆ ವಸ್ತುವು ದೃಗ್ಗೋಚರವಾಯಿತು. ನಾನು ಪರಮಾನಂದಭರಿತನಾದೆನು. ಅದು ಮತ್ತಾವುದೂ ಅಲ್ಲ. ಶ್ರೀ ವೇಮನ ತತ್ವಗಳ ಹೊತ್ತಿಗೆ" ಎಂದರು.

ಆ ಸಮಯದಲ್ಲಿ ಅಲ್ಲಿದ್ದ ನನಗೆ ಅವರು ಶ್ರೀ ವೇಮನ ತತ್ವಗಳನ್ನು ಆಂಧ್ರಭಾಷೆಯಿಂದ ಕನ್ನಡಕ್ಕೆ ಪರಿವರ್ತನ ಮಾಡಬೇಕೆಂದು ನಿರೂಪಿಸಿದರು. ನಾನು ಅದನ್ನು ಮಾನ್ಯಮಾಡಿ ಕ್ರಮವಾಗಿ ಒಂದುಸಾವಿರ ತತ್ವಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ೩-೪ ಸಂಪುಟಗಳಾಗಿ ಮುದ್ರಿಸಿ ದೀರ್ಘ ಕಾಲಾವಧಿಯಾದರೂ ಆರ್ಥಿಕ ಮುಗ್ಗಟ್ಟಿನಿಂದ ಪುನರ್ಮುದ್ರಣಕ್ಕೆ ಅವಕಾಶವಾಗಲಿಲ್ಲ. ಈಗ ಆ ಮಹಾಶಯರ ಆಶಯದಂತೆ ಒಂದೇ ಸಂಪುಟವಾಗಿ ಈ ತತ್ವಗಳನ್ನು ಮುದ್ರಿಸುವ ವಿಚಾರ ಮನದಂದು ೨-೩ ತಿಂಗಳಹಿಂದೆ ಬೆಂಗಳೂರು ರೆಸಿಡೆನ್ಸಿಯಲ್ಲಿ ಅವರ ಭೇಟಿಮಾಡಿಕೊಂಡು ಬಿನ್ನೈಸಿದೆನು ಅವರು ಸಂತೋಷಿಸಿ, ಮುನ್ನುಡಿ ಕೊಡುವುದಾಗಿ ಹೇಳಿದರು. ಆದರೆ ಅನಿರೀಕ್ಷಣೆಯಾಗಿ ಅವರೀಗ ಪರಂಧಾಮವನ್ನೈದಿದರು. ಆದ್ದರಿಂದ ಅವರ ಅಂತರಾತ್ಮಕ್ಕೆ ಈ ತತ್ವರತ್ನಗಳನ್ನು ಅರ್ಪಿಸುವ ದೃಢಸಂಕಲ್ಪ ಮಾಡಲಾಯಿತು. ಈ ಕಾರ್ಯಕ್ಕಾಗಿ ಮಹಾಜನರು ಸಹಕರಿಸಿದುದಕ್ಕಾಗಿ ಭಗವಂತನು ಅನುಗ್ರಹಿಸಲೆಂದು ಹಾರೈಸುವ.

ದಿವಂಗತರ ಚಿರಪರಿಚಿತ,
ಬಿ. ಭೀಮರಾಜು.



★ ಮೋಲೂರು ವೇಮನ ಜಯಂತಿ ಸಮಯದಲ್ಲಿ ಬರೆದ ಪತ್ರಗಳು. ★

ಮೊದಲನೆಯ ಪತ್ರ

ನನ್ನ ಪ್ರಿಯ ಮಿತ್ರ ಭೀಮರಾಜು ಅವರೇ,

ನನ್ನ ಆರೋಗ್ಯ ಸ್ಥಿತಿ ಕೆಟ್ಟಿರುತ್ತದೆ ಮತ್ತು ನಾನು ಪ್ರಯಾಣ ಮಾಡಲು ಸಾಧ್ಯವಿಲ್ಲ. ಅಥವಾ ಒಂದಕಡೆಯಿಂದ ಮತ್ತೊಂದು ಕಡೆಗೆ ಹೋಗಲು ಆಗುವಂತಿಲ್ಲ. ನಾನು ನಿಮ್ಮ ಆಹ್ವಾನವನ್ನು ಮನಸ್ಸಿಲ್ಲದೆ ಬಿಡಬೇಕಾಗಿದೆ.

ನಮ್ಮ ಭಾರತೀಯ ಸಹೋದರರು ಪರಸ್ಪರ ಮತ್ಸರವನ್ನು ಬಿಟ್ಟು ಒಬ್ಬರಿಗೊಬ್ಬರು ಸಹಾನುವರ್ತಿಗಳಾಗಿ ಬಾಳಿ ದೇಶದ ಉನ್ನತಿಯನ್ನು ಸಾಧಿಸುವರೆಂದು ಆಶಿಸುತ್ತೇನೆ.

ವೇಮನ ಜಯಂತಿಯನ್ನು ಆಚರಿಸಬೇಕು. ಆದರೆ ಬರೀ ಭಾಷಣಗಳಿಂದ ಹಬ್ಬಗಳಿಂದ ತೃಪ್ತಿಹೊಂದಬಾರದು. ಪರಸ್ಪರ ಸಹಾಯ ಸಂಘಗಳಿಂದಲೂ, ವಿದ್ಯಾಭ್ಯಾಸದಿಂದಲೂ ನಮ್ಮ ಜನಾಂಗವನ್ನು ವೇಮನ ತತ್ವದ ಮೇಲೆ ಕಟ್ಟಲು ಪ್ರಯತ್ನ ಮಾಡಬೇಕು.

ನಾವು ಒಳ್ಳೆಯ ದಕ್ಷರಾದ ಸೈನಿಕರಂತಿರಬೇಕು. ಇತರರೊಡನೆ ಯುದ್ಧಮಾಡುವುದಕ್ಕಲ್ಲ ಅಥವಾ ವಿನಾಶಕಾರಿಯಾದ ಅನೈಕಮತ್ಯವನ್ನು ಉಂಟುಮಾಡುವುದಕ್ಕಲ್ಲ. ಶ್ರೀ ವೇಮನ ಪದ್ಯಗಳನ್ನು ವಿಶೇಷ ರೀತಿಯಿಂದ ಪ್ರಸಾರ ಮಾಡಬೇಕು.

ದೇವರು ನಿಮ್ಮೆಲ್ಲರನ್ನೂ ಆಶೀರ್ವದಿಸಲಿ.

೨೦—೧೨—೧೯೫೯,
ಚಿತ್ತೂರು (N.A)

ಇತಿ, ನಿಮ್ಮ ಪ್ರೀತಿಪಾತ್ರ,
ಸಿ. ಆರ್. ರೆಡ್ಡಿ.

ಓಂ

ಎರಡನೆಯ ಪತ್ರ

ನನ್ನ ಪ್ರಿಯ ಸ್ನೇಹಿತ ಭೀಮರಾಜು ಅವರೇ,

ನನ್ನ ಅನಾರೋಗ್ಯ ನಿಮಿತ್ತ ಜಯಂತಿಯಲ್ಲಿ ಭಾಗವಹಿಸಲು ಆಗುವಂತಿಲ್ಲ. ಜಯಂತಿಯು ಯಶಸ್ವಿಯಾಗಿ ಜರುಗಲೆಂದು ಹಾರೈಸುತ್ತೇನೆ.

ಯೋಗಿ ವೇಮನನು ಮತಪದ್ಧತಿಗಳನ್ನು ನಿಷೇಧಿಸಿರುವನು. ನಾವು ಮತಗಳನ್ನು ಸಂಪೂರ್ಣವಾಗಿ ತ್ಯಜಿಸುವುದಕ್ಕಾಗದಿದ್ದರೂ ಕಡೆಯ ಪಕ್ಷ ಅಂತರ್ಜಾತಿ ವಿವಾಹಗಳನ್ನು ಪ್ರೋತ್ಸಾಹಿಸೋಣ.

ಎಲ್ಲಾ ಜನಾಂಗವೂ ಇತರರ ಮೇಲ್ಮೆಗಾಗಿ ಪರಸ್ಪರ ವೈಮನಸ್ಸು, ಮತ್ಸರಗಳನ್ನು ತೊರೆದು ಬದುಕಲಿ. ವಿದ್ಯಾಭ್ಯಾಸ ಮತ್ತು ಸಹಕಾರ ಸಂಘಗಳು ಹಿಂದುಸ್ಥಾನದ ಉನ್ನತಿಗೆ ಎರಡು ಕಾಲುಗಳಿದ್ದಂತೆ

ನಿಮ್ಮ ವೇಮನ ತತ್ವಗಳು ಪುಸ್ತಕಗಳು ವಿಶೇಷ ಪ್ರಸಾರವಾಗಲಿ ಅವನ್ನು ಪಠ್ಯಪುಸ್ತಕಗಳಾಗಿ ಆರಿಸುವರೆಂದು ಹಾರೈಸುತ್ತೇನೆ.

ದೇವರು ನಿಮ್ಮೆಲ್ಲರಿಗೂ ಆಶೀರ್ವಾದ ನೀಡಲಿ,

೨೦—೧೨—೧೯೭೯,
ಚಿತ್ತೂರು. (N.A.)

ಇತಿ,
ಸಿ. ಆರ್. ರೆಡ್ಡಿ.


ಓಂ

ಶ್ರೀ ವೇಮನ



ಓಂ

ಸಮಾಧಿ ನಿಷ್ಟೆ



ಶ್ರೀ ಯೋಗಿ ವೇಮಣ್ಣನವರು.

ಗೀ॥ ತಾಯ ಗರ್ಭದಿಂದ - ತಾಂ ಬರುವ ಸಮಯದಿ
ಮೊದಲು ವಸ್ತ್ರಮಿಲ್ಲ – ತುದಿಗು ಮಿಲ್ಲ
ನಡುವೆ ಬಟ್ಟೆ ಯುಡುವು – ದೇಕೆಂದು ತಿಳಿಯಿರಿ
ವಿಶ್ವತೋಭಿರಾಮ – ಕೇಳುವೇಮಾ ॥

ಓಂ

ಶ್ರೀ

ವೇಮನನ ಸಂಕ್ಷಿಪ್ತ ಜೀವನ ಚರಿತ್ರೆ

ಪೂರ್ವಕಾಲದಲ್ಲಿ ರಾಜಮಹೇಂದ್ರ ಮೊದಲಾದ ದೇಶಗಳನ್ನು ಚಾಳುಕ್ಯರು ಪಾಲಿಸಿದರು. ಕೊನೆಗೆ ಆ ರಾಜ್ಯವು ರೆಡ್ಡಿಗಳ ಅಧೀನವಾಯಿತು. ಆ ರೆಡ್ಡಿಗಳು ಗೋದಾವರಿ ಜಿಲ್ಲಾ ರಾಜಮಹೇಂದ್ರವನ್ನೂ, ಕೃಷ್ಣಾ ಡಿಸ್ಟ್ರಿಕ್ಟ (ಕೊಂಡವೀಡು) ಬೆಟ್ಟ ಪ್ರದೇಶವನ್ನೂ, ರಾಜಧಾನಿಯಾಗಿ ಮಾಡಿಕೊಂಡು ರಾಜ್ಯಭಾರ ಮಾಡಿದರು. ಪ್ರಪ್ರಥಮದಲ್ಲಿ ಇವರು ಕೃಷ್ಣಾ ಡಿಸ್ಟ್ರಿಕ್ಟಿನಿಂದ ಸಿಹ್ಮಾಚಲದ ವರಿವಿಗೂ, ರಾಜ್ಯವಾಳುತ್ತಿದ್ದರು. ಅನಂತರ ರಾಜ ಮಹೇಂದ್ರವು ಇವರ ಸ್ವಾಧೀನವಾಯಿತು. ಕೃಷ್ಣಾ ಡಿಸ್ಟ್ರಿಕ್ಟು ಬೆಟ್ಟ ಪ್ರದೇಶ ರಾಜ್ಯವನ್ನು ಪರಿಪಾಲಿಸಿದ ಪ್ರಥಮ ಪುರುಷನು ಪೋಲಯ್ಯ ವೇಮಾರೆಡ್ಡಿ. ಈತನು ೧೨ ವರುಷಗಳು ರಾಜನಾಗಿದ್ದು ಗತಿಸಿದಮೇಲೆ ಇವನ ಮಗ ಅನವೇಮಾರೆಡ್ಡಿಯು ೨೦ ವರುಷಗಳು ಪ್ರಭುತ್ವ ಪದವಿಯಲ್ಲಿದ್ದನು. ನಂತರ ಅನಪೋತ ವೇಮಾರೆಡ್ಡಿಯು ಯುದ್ಧದಲ್ಲಿ ವೀರಸ್ವರ್ಗ ಹೊಂದಿದಮೇಲೆ ಈತನ ಮಗ ಕುಮಾರಗಿರಿವೇಮಾರೆಡ್ಡಿಯು ೧೪ವರ್ಷಗಳು ರಾಜ್ಯಪದಾಧಿಷ್ಠನನಾಗಿದ್ದನು. ಈ ಕುಮಾರಗಿರಿ ವೇಮಾರೆಡ್ಡಿಗೆ ಇಬ್ಬರು ಗಂಡುಮಕ್ಕಳು ಜನಿಸಿದರು. ಇವರಲ್ಲಿ ಹಿರಿಯ ಮಗನು ವೆಂಕಾರೆಡ್ಡಿ, ಕಿರಿಯಾತನು ರಾಚವೇಮಾರೆಡ್ಡಿ. ಇವರನ್ನು ಅನವೇಮಾರೆಡ್ಡಿ, ವೇಮಾರೆಡ್ಡಿ ಎಂದು ಜನರು ಕರೆಯುತ್ತಿದ್ದರು.

ನಮ್ಮ ಕಥಾನಾಯಕನಾದ ಎರಡನೇ ವೇಮಾರೆಡ್ಡಿಯು, ತನ್ನ ಯೌವ್ವನ ಪ್ರಾಪ್ತವಾದಮೇಲೆ ವಿಟಪುರುಷನಾಗಿ ತಿರುಗುತ್ತಿದ್ದನು ತಂದೆಯು ತೀರಿಹೋದುದರಿಂದ, ತಾಯಿ ಮಲ್ಲಮ್ಮನೂ, ಅಣ್ಣನೂ ಹೇಳಿದ ಮಾತೆ

ಗಳನ್ನು ಲಕ್ಷ್ಯಮಾಡದೆ, ವಾರಾಂಗನೆಯ ಗೃಹವೇ ತನ್ನ ನಿಜನಿವಾಸವಾಗಿ ಮಾಡಿಕೊಂಡು, ಸ್ವೇಚ್ಛಾವಿಹಾರಿಯಾಗಿ, ಅವಳಿಗೆ ಅಪೂರ್ವ್ಯವಾದ ಅನೇಕ ವಸ್ತುಗಳನ್ನು ಧಾರೆಯೆರೆಯುತ್ತಿದ್ದನು. ಹೀಗಿದ್ದರೂ ಅಣ್ಣನ ಹೆಂಡತಿ ನರಸಾಂಬೆಯು. ಈ ವೇಮಾರೆಡ್ಡಿಯನ್ನು ಪುತ್ರನಿರ್ವಿಶೇಷವಾತ್ಸಲ್ಯದಿಂದ, ಸಾಕುತ್ತಿದ್ದಳು. (ಭ್ರಾತಾ ಪಿತೃಸಮಃ) ಅಣ್ಣನು ತಂದೆಯ ಸಮಾನ ವಾದ್ದರಿಂದ, ಅಣ್ಣನ ಹೆಂಡತಿಯೂ ತಾಯಿಯ ಸಮಾನವೆಂಬ ಧರ್ಮಶಾಸ್ತ್ರ ರೀತ್ಯಾ, ಈ ಪುಣ್ಯಸಾಧ್ವಿಯು ಗಂಡನ ಮನೆಗೆ ಬಂದ ಕಾಲದಲ್ಲಿ ವೇಮ ಣ್ಣನು ೪-೫ ವರುಷಗಳ ವಯಸ್ಸಿನವನಾಗಿದ್ದುದರಿಂದ ಈಕೆಯು ತನ್ನ ಹೊಟ್ಟೆಯ ಮಗನಿಗಿಂತಲೂ ಪ್ರೀತಿಯಾಗಿ ವೇಮಾರೆಡ್ಡಿಯನ್ನು ಸಾಕುತ್ತಿ ದ್ದಳು. ಹೀಗೆ ಅಣ್ಣನ ಹೆಂಡತಿಯು, ತನಗೆ ಮುಖ್ಯ ಪೋಷಕಳಾಗಿದ್ದ ಕಾರಣ, ವೇಮಣ್ಣನು ಆಡಿದುದೇ ಆಟವಾಗಿದ್ದಿತು. ಒಂದೊಂದು ಸಮಯ ಅನವೇಮಾರೆಡ್ಡಿಯು, ತಮ್ಮನನ್ನು ಧಿಕ್ಕರಿಸಿದರೂ, ಆತನ ಹೆಂಡತಿಯು ಬುಜ್ಜಗಿಸಿ, ವೇಮಣ್ಣನಿಗೆ ಅನೇಕ ಬುದ್ಧಿವಾದಗಳನ್ನು ಹೇಳುತ್ತಿದ್ದಳು. ಆದರೆ ವೇಮಣ್ಣನು ಮಾತ್ರ ಸನ್ಮಾರ್ಗ ಪ್ರವರ್ತಕನಾಗಲಿಲ್ಲ. ಅಣ್ಣನೂ, ತಾಯಿಯೂ, ಅತ್ತಿಗೆಯೂ ಸೇರಿ ನಾವು ರಾಜವಂಶೀಯರಾದುದರಿಂದ, ಅನು ರೂಪವತಿಯಾದ ಸ್ತ್ರೀಯನ್ನು ವರಿಸಿ, ಸುಖವಾಗಿರೆಂದು ಬಹುಪರಿಯಾಗಿ ಬೋಧಿಸಿದರು. ಆದರೂ ವೇಮಣ್ಣನು ಕೇಳಲಿಲ್ಲ.

ಇಂದ್ರಜಾಲ ಮಹೇಂದ್ರಜಾಲ ವಿದ್ಯೆಯಲ್ಲಿ ಅಗ್ರಗಣ್ಯಳಾದ ಗಣಿಕಾ ಸ್ತ್ರೀಯ ಮಾಯಾಪಾಶದಲ್ಲಿ ಸಿಲುಕಿ, ಅವಳು ಕೋರಿದ ವಸ್ತುಗಳನ್ನೆಲ್ಲಾ ಒಪ್ಪಿಸಿಬಿಡುತ್ತಿದ್ದನು. ಸಮಯಕ್ಕೆ ಸರಿಯಾಗಿ ಮನೆಯಲ್ಲಿ ಏನಾದರೂ ವಸ್ತುಗಳು ದೊರೆಯದಿದ್ದರೆ, ಅತ್ತಿಗೆಯನ್ನು ಕೇಳಿ ತಂದುಕೊಡುತ್ತಿದ್ದನು.

ಹೀಗೆ ಅನವೇಮಾರೆಡ್ಡಿಯ ಧರ್ಮಪತ್ನಿಯು ಕೇಳಿದ ವಸ್ತುಗಳ ನ್ನೆಲ್ಲಾ ಕೊಡುವಳೆಂದು ವೇಶ್ಯೆಯು ತಿಳಿದು, ಒಂದಾನೊಂದು ದಿನ ವೇಮಾ ರೆಡ್ಡಿಯನ್ನು ಕುರಿತು ಪ್ರಿಯ ರೆಡ್ಡಿಯವರೇ ? ನನಗೋಸ್ಕರ ತಾವು ಏನು

ಓಂ

ತಂದುಕೊಟ್ಟರೂ, ಸಂತೋಷದಿಂದ ತೆಗೆದುಕೊಳ್ಳುತ್ತಿದ್ದೇನೇ ಹೊರ
ಅಷಾಗಬೇಕು, ಇದಾಗಬೇಕೆಂದು ಕೆಲವರು ಸಾನಿಗಳಂತೆ ನಿರ್ಬಂಧಿಸುತ್ತಿ
ದುಂಟೆ ? ಈ ವಿಷಯವು ಚಿತ್ತಕ್ಕೆ ವೇದ್ಯವೇ ಇರುವುದು. ನನ್ನ ತಾಯಿ
ಏನೇನೋ ಕೇಳೆಂದು ಹೇಳುವಳಾದರೂ, ತಾವು ಸುಖವಾಗಿದ್ದರೆ ಅತ್ಯವ
ವಾದ ನೂರಾರು ವಸ್ತುಗಳು, ನನ್ನಲ್ಲಿದ್ದ ಹಾಗೆಂದು ಭಾವಿಸಿರುವೆನು. ಆ
ಈಗ ನನಗೆ ಒಂದೇ ಒಂದು ವಸ್ತುವಿನ ಮೇಲೆ ಆಸೆಯಿರುವುದು. ಅದನ್ನು
ಮಾತ್ರ ತಾವು ದೊರಕಿಸಿ ಕೊಡಲೇಬೇಕೆಂದು ವಿಚಿತ್ರ ಚಮತ್ಕಾರದಿ
ಮರುಳು ಮಾಡಿ, ಈ ವಿಷಯದಲ್ಲಿ ರೆಡ್ಡಿಯವರಿಂದ ಭಾಷೆಯನ್ನು ಕೂಡ
ತೆಗೆದುಕೊಂಡಳು. ಅವಳ ಸ್ತೋತ್ರಕ್ಕೆ ಮರುಳಾದ ವೇಮಾರೆಡ್ಡಿಯು ನಿ
ಕೋರಿಕೆಯೇನೆಂದು ಕೇಳಲು, ವೇಶ್ಯೆಯು ರೆಡ್ಡಿಯವರೇ ? ನನಗೆ ಬೇಕ
ದುದು ತಮ್ಮ ಅತ್ತಿಗೆಯವರ ಬಲ ಮುಕ್ಕರವು. ಅದನ್ನು ತಂದು ಕೊ
ಬೇಕೆಂದು ಕೇಳಿದಳು.

ಈ ಮಾತು ಕಿವಿಯಲ್ಲಿ ಬೀಳುತ್ತಲೇ ವೇಮಾರೆಡ್ಡಿಯ
ನಿಶ್ಚೇಷ್ಟಿತನಾಗಿ ಆಹಾ ! ಎಂತಹ ಮೋಸವಾಯಿತು ! ಈಗ ಭಾ
ಕೊಟ್ಟ ತಪ್ಪುವುದಾದರೂ ಹೇಗೆ ? ಒಂದು ವೇಳೆ ಇವಳ ಕೋ
ಯನ್ನು ನೆರವೇರಿಸುವುದಕ್ಕಾಗಿ, ಪರಮ ಪತಿವ್ರತಾ ಶಿರೋಮಣಿಯಾ
ನಮ್ಮ ಅತ್ತಿಗೆಯ ಬಲ ಮೂಗುತಿಯನ್ನು ಕೇಳುವುದಾದರೂ ಹೇಗೆ ? ಏ
ಮಾಡುವುದಕ್ಕೂ ತಿಳಿಯದಂತಿರುವುದಲ್ಲಾ ! ಎಂದು ಹಲವು ಪರಿ ಚಿಂ
ಯತ್ನವಿಲ್ಲದೆ ಮನೆಗೆ ಹೋಗಿ, ಸುಮ್ಮನೆ ಒಂದು ಮೂಲೆಯಲ್ಲಿ ಮ
ಕೊಂಡನು. ಹೀಗೆ ಮೌನವಾಗಿ ಮಲಗಿದ ವೇಮಾರೆಡ್ಡಿಯನ್ನು ತಾಯಿಯ
ಅಣ್ಣನೂ ಹಲವು ಬಾರಿ ಊಟಕ್ಕೆ ಏಳುವಂತೆ ನಿರ್ಬಂಧಿಸಿದರು. ಆ
ಪ್ರಯೋಜನವಾಗಲಿಲ್ಲ. ತರುವಾಯ ಅತ್ತಿಗೆಯು ಬಂದು ಮೈದುನನ
ಊಟಕ್ಕೆ ಏಳೆಂದು ಪ್ರಾರ್ಥಿಸಿದಳು. ಎಷ್ಟು ಮಾತನಾಡಿಸಿದರೂ ಮಾ
ನಾಡದಿರುವುದನ್ನು ತಿಳಿದು, ಪತಿವ್ರತಾಶಿರೋಮಣಿಯು ಪ್ರಿಯ ಮೈದುನನ

ನಿನಗುಂಟಾದ ಪರಾಭವವೇನು ? ಮಾಜದೆ ಹೇಳೆಂದು ಕೇಳಲು, ಮಾತೃ ಸಮಾನಳಾದ ಅತ್ತಿಗೆಗೆ ನಮಸ್ಕರಿಸಿ ಅಮ್ಮಾ ? ನಾನು ಮೋಸಹೋಗಿ ವೇಶ್ಯೆಗೆ ಮಾತುಕೊಟ್ಟಿರುವುದರಿಂದ, ನಿನ್ನ ಬಲಭಾಗದ ಮೂಗುತಿಯನ್ನು ಕೊಡಬೇಕೆಂದು ಕೇಳಿದನು. ಆಗಲಾ ಸೂಕ್ಷ್ಮಮತಿಯಾದ ಮಹಿಳಾ ಮಣಿಯು ಆಹಾ ! ಈತನಿಗೆ, ಸುಕರ್ಮ ಪರಿಪಕ್ವಕಾಲವು ಪ್ರಾಪ್ತವಾಗಿರಬಹುದು. ಹಾಗಲ್ಲದಿದ್ದರೆ, ಕೊಟ್ಟ ಮಾತಿಗೆ ತಪ್ಪಬೇಕಾಯಿತೆಂದೂ, ಆ ಮಾತನ್ನು ಸಲ್ಲಿಸುವುದಕ್ಕಾಗಿ ನನ್ನ ಮುಕ್ಕರವನ್ನು ಕೇಳಬೇಕಾಯಿತೆಂದೂ, ಚಿಂತಿಸುತ್ತಿರಲಿಲ್ಲ. ಒಳ್ಳೆಯದು. ಈತನು ಸನ್ಮಾರ್ಗಗಾಮಿಯಾಗುವುದೇ ನನ್ನ ಅಮೌಲ್ಯ ರತ್ನಖಚಿತವಾದ ಮೂಗುತಿಗಿಂತಲೂ ಶತಾಧಿಕ್ಯ ಬೆಲೆಯೆಂದು ಭಾವಿಸಿ, ಮೂಗುತಿಯನ್ನು ಕೊಡುವೆನೆಂದು ಹೇಳಿ ಉಣಬಡಿಸಿ ಅಪರಿಮಿತ ಬೆಲೆ ಬಾಳುವ, ತೌರುಮನೆಯವರು ಕೊಟ್ಟ ಮಾಣಿಕ್ಯದ ಮೂಗುತಿಯನ್ನು ತೆಗೆದು, ವೇಮಣ್ಣನ ಕೈಗೆ ಕೊಟ್ಟು ಈ ರೀತಿಯಾಗಿ ಹೇಳಿದಳು :—

ಮೈದುನಾ ! ಈ ಮೂಗುತಿಯನ್ನು ಆ ವೇಶ್ಯೆಗೆ ಕೊಡಬೇಕಾದರೆ ಅವಳು ನಗ್ನಳಾಗಿ ಕೈನೀಡಿ ಮೂಗುತಿಯನ್ನು ತೆಗೆದುಕೊಳ್ಳುವಂತೆ ಹೇಳು ಆ ಸಮಯದಲ್ಲಿ ನೀನು ಅವಳ ಪಾರ್ಶ್ವದಲ್ಲಿ ನಿಂತುಕೊಂಡಿರಬೇಕು ಈ ಕಟ್ಟಳೆಯನ್ನು ಖಂಡಿತವಾಗಿ ಮೀರಕೊಡದೆಂದು ಹೇಳಿದಳು. ವೇಮಾರೆಡ್ಡಿಯು ಈ ನಿಯಮಗಳಿಗೊಪ್ಪಿ, ವೇಶ್ಯೆಯ ಮನೆಯನ್ನು ಸೇರಿ ಅವಳಿಗೆ ಈ ನಿಬಂಧನೆಯ ಮೇರೆಗೆ ತೆಗೆದುಕೊಳ್ಳಬೇಕಾಗಿ ಹೇಳಿದನು. ವೇಶ್ಯೆಯು ಅದಕ್ಕೆ ಸಮ್ಮತಿಸಿ, ವಸ್ತ್ರಹೀನೆಯಾಗಿ ಮೂಗುತಿಯನ್ನು ತೆಗೆದುಕೊಳ್ಳುವುದಕ್ಕಾಗಿ ಬಿಲ್ಲಿನಂತೆ ಹಿಂದಕ್ಕೆ ಬಾಗಿ ಕೈನೀಡಿದಳು ಈ ಸಮಯದಲ್ಲಿ ಸಂಪೂರ್ಣ ನಗ್ನಚಿತ್ರವನ್ನೀಕ್ಷಿಸಿದ ಈತನಿಗೆ ವಿಚಾರವುದಿಸಿ ಆಹಾ ! ಇಂತಹ ಹೇಯವಾದ ಭೋಗಕ್ಕಾಶಿಸಿ, ದಾಸಿಗೆ ದಾಸನಾದೆನಲ್ಲಾ ಎಂದು ಆ ವೇಶ್ಯೆಗೆ ಮೂಗುತಿಯನ್ನು ಕೊಟ್ಟು, ಅಮೋಘವಾದ ಜ್ಞಾನಪ್ರದಾಯಿನಿಯೂ,

ಮಾತೃ ಸ್ವರೂಪಿಣಿಯೂ ಆದ ತನ್ನ ಅತ್ತಿಗೆಯನ್ನು ಕೊಂಡಾಡಿದನು.* ತರುವಾಯ ಆಗಿಂದಾಗಲೇ ವೈರಾಗ್ಯನಿಧಿಯಾಗಿ, ಲೋಕಸುಖಗಳನ್ನು ಮನಸ್ಸಿನಲ್ಲಿ ಚರ್ಚಿಸಿ ತನ್ನ ಮನಸ್ಸನ್ನು ನಿಶ್ಚಲ ತತ್ವದಲ್ಲಿ ನಿಲ್ಲಿಸಿ, ಈ ಪ್ರಪಂಚವನ್ನೇ ತೃಣಗಣಾಯಮಾನವಾಗಿ ಭಾವಿಸಿ, ದೇಹಾಭಿಮಾನವನ್ನು ತೊರೆದು ಹುಚ್ಚನಂತಿದ್ದನು. ಅದು ಮೊದಲು ಆತನನ್ನು ಜನರು ಹುಚ್ಚು ವೇಮಣ್ಣನೆಂದು ಕರೆಯುತ್ತಿದ್ದರು.

ಹೀಗೆ ವೇಮಣ್ಣನು ಬ್ರಹ್ಮಧ್ಯಾನಪರನಾಗಿ ಸಕಲ ಸಿದ್ಧಿಗಳನ್ನು ಹೊಂದಿ ಭಗವತ್ಕಟಾಕ್ಷಕ್ಕೆ ಪಾತ್ರನಾಗಿದ್ದನು. ಈತನನ್ನು ಅನೇಕರು ದೊಡ್ಡ ಕಾಯಿಯೂ ವೇಮಣ್ಣನೂ ಒಂದೇ ಎಂದು ಅಪಹಾಸ್ಯಮಾಡುತ್ತಿದ್ದರು. ಅಂದರೆ ದೊಡ್ಡ ಹುಚ್ಚು ಕಾಯಿಯು ಹೇಗೆ ಪ್ರಯೋಜನವಿಲ್ಲದ ವಸ್ತುವೋ ಹಾಗೆಯೇ ವೇಮಣ್ಣನೂ ಪ್ರಯೋಜನವಿಲ್ಲದವನೆಂದು ಭಾವನೆ. ಇದು ತಿಳಿದು ವೇಮಣ್ಣನು ತನ್ನ ಅಣ್ಣನಿಂದ ಸ್ವಲ್ಪ ಭಾಗ ಭೂಮಿಯನ್ನು ಪಡೆದುಕೊಂಡು ಅದರಲ್ಲಿ ಮೇಲೆ ಹೇಳಿದ ದೊಡ್ಡ ಕಾಯಿಯ ಬಳ್ಳಿಯನ್ನು ಹಬ್ಬಿಸಿದನು. (ಇದು ಎರೆ ಕಲ್ಲಂಗಡಿ ಬಳ್ಳಿಯಂತೆ ಇದ್ದು. ಅದೇ ಆಕೃತಿಯ ಒಂದು ಒಳಹಿಡಿಗಾತ್ರದ ಗುಂಡಾದ ಕಾಯಿಗಳನ್ನು ಬಿಡುವುದು.) ಅದು ವಿಶೇಷ ಫಲಿಸಿ ಹೊಲವೆಲ್ಲಾ ಕಾಯಿಗಳ ಮಯವಾಗಿ ಕಾಲಿಡಲು ಸ್ಥಳವಿಲ್ಲದಂತಾಯಿತು.

ಆಗಲಾ ವೇಮಣ್ಣನು 'ತನ್ನ ಹೊಲದ ಪೈರನ್ನು ಕೊಯ್ದು ಕಾಯಿಗಳನ್ನು ರಾಸಿಮಾಡಿ ಕೂಲಿ ತೆಗೆದುಕೊಂಡು ಹೋಗುವವರಾರಿದ್ದರೂ ಬರಬಹುದೆಂದು' ಬೀದಿಬೀದಿಗಳಲ್ಲಿ ಕೂಗಿ ಹೇಳುತ್ತಿದ್ದನು. ಇವನ ಮಾತನ್ನು ಕೇಳಿ ಜನರೆಲ್ಲರೂ ನಗುತ್ತಿದ್ದರು. ಯಾರೂ ಕೂಲಿಗೆ ಹೋ[ಗ]

* ಆ ಪುಣ್ಯಸಾಧ್ವಿಯು ಆತನ ಮನೋಪರಿಪಕ್ವವನ್ನು ತಿಳಿದು ಸುಜ್ಞಾನಿಯಾದ ಅಭಿರಾಮಯ್ಯನೆಂಬ ಅಕ್ಕಸಾಲೆಯ ಮೂಲಕ ಶ್ರೀ ಶಿವಯೋಗಿಯಿಂದ ಉಪದೇಶ ದೊರೆಯುವಂತೆ ಮಾಡಿದಳು. ವೇಮಣ್ಣನು ತನಗೆ ಮಾರ್ಗದರ್ಶಕನಾದ ಅಭಿರಾಮನನ್ನು ಮರೆಯದೆ ಪದ್ಯಗಳಲ್ಲಿ "ವಿಶ್ವತೋಭಿರಾಮ" ಎಂದು ಸಂಬೋಧಿಸಿರುವನು.

ಲಿಲ್ಲ. ಏಕೆಂದರೆ, ಆತನು ಕೊಡುವ ಆ ದೊಡ್ಡಕಾಯಿಗಳು ತಮ್ಮ ಉದರ ಪೋಷಣೆಗೆ ಯಾವ ವಿಧದಲ್ಲಿಯೂ ಪ್ರಯೋಜನವಾಗುವಹಾಗಿರಲಿಲ್ಲ. ಆದರೆ ಒಬ್ಬ ಮುದುಕಿಯು ಮಾತ್ರ ವೇಮಣ್ಣನು ದೈವಭಕ್ತನೆಂದು ತಿಳಿದು, ತಾನು ಆತನ ಜೊತೆಗೆ ಹೋಗಿ. ಹಗಲೆಲ್ಲಾ ಕಾಯಿಗಳನ್ನು ಕುಯ್ದು ರಾಸಿಮಾಡಿ, ವೇಮಣ್ಣನ ಕೈಯಿಂದ ಮೂರು ಕಾಯಿಗಳನ್ನು ಕೂಲಿಯಾಗಿ ತೆಗೆದು ಕೊಂಡು ಬಂದು ಮನೆಯನ್ನು ಸೇರಿದಳು

ಈ ಮುದುಕಿಯ ಮಗನು ತಾಯನ್ನ ಕುರಿತು 'ಹುಚ್ಚುಮುದುಕಿಯು ಹುಚ್ಚು ವೇಮಣ್ಣನ ಹೊಲಕ್ಕೆ ಹೋಗಿ, ದೊಡ್ಡ ಹುಚ್ಚು ಕಾಯಿಗಳನ್ನು ಕೂಲಿ ತಂದಿರುವಳು' ಎಂದು ಕೋಪಿಸಿಕೊಂಡು ಆ ಕಾಯಿಗಳನ್ನು ಬಲವಾಗಿ ನೆಲಕ್ಕೆ ಹೊಡೆದನು, ಒಡನೆ ಆ ಕಾಯಿಗಳು ಒಡೆದು, ಒಳಗಿನ ಬೀಜ ಗಳೆಲ್ಲಾ ಭಂಗಾರದ ವರಹಗಳಾಗಿ ಉದುರಿದವು ಆಗಲಾ ವರಹಗಳನ್ನು ಅತಿ ಸಂತೋಷದಿಂದ ಆರಿಸಿ, ಬಚ್ಚಿಟ್ಟು ಮಗನೂ, ಸೊಸೆಯೂ ಮುದುಕಿ ಯನ್ನು ವಿಶೇಷ ಉಪಚಾರ ಮಾಡತೊಡಗಿದರು. ಮರುದಿವಸದಿಂದ ತಾಯಿಯೂ, ಮಗನೂ, ಸೊಸೆಯೂ ಮೂವರೂ ಸೇರಿ ವೇಮಣ್ಣನ ಹೊಲಕ್ಕೆ ಹೋಗಿ ಹಗಲೆಲ್ಲಾ ಕಾಯಿಗಳನ್ನು ಕುಯ್ದು ರಾಸಿಮಾಡಿ, ಆತ ನಿಂದ ಕೂಲಿಯನ್ನು ತರುತ್ತಿದ್ದರು.

ಆದರೆ ಧನದ ಆಸೆಯಿಂದ ಈ ಮುದುಕಿಯ ಮಗನೂ, ಸೊಸೆಯೂ ಹಲವು ಕಾಯಿಗಳನ್ನು ಮಡಲಲ್ಲಿ ಬಚ್ಚಿಟ್ಟುಕೊಂಡು ಮನೆಗೆ ಬಂದು ಎಲ್ಲ ವನ್ನೂ ಬಿಚ್ಚಿ ನೋಡುವಾಗ, ವೇಮಣ್ಣನು ಕೈಯಿಂದ ಕೂಲಿಗಾಗಿ ಕೊಟ್ಟ ಕಾಯಿಗಳ ಬೀಜಗಳು ಮಾತ್ರ ಭಂಗಾರದ ವರಹಗಳಾಗಿದ್ದು, ಕಳ್ಳತನದಿಂದ ತಂದ ಕಾಯಿಗಳಲ್ಲಿ ನಿಜವಾದ ಬೀಜಗಳೇ ಇರುತ್ತಿದ್ದವು

ಇತ್ತ ವೇಮಣ್ಣನು ಅಣ್ಣನ ಬಳಿಗೆ ಹೋಗಿ ಭೂಮಿಯ ಕೋರನ್ನು ತೆಗೆದುಕೊಂಡು ಹೋಗೆಂದು ನಿರ್ಬಂಧಿಸಿದನು. ಅಣ್ಣನು ಹುಚ್ಚನ ಮಾತೆಂದು ಅಲಕ್ಷ್ಯಮಾಡಿದನು. ತರುವಾಯ ಅತ್ತಿಗೆಯ ಬಳಿಗೆ ಹೋಗಿ

ನಿಮ್ಮ ಕೋರಿನ ಭಾಗವನ್ನು ತೆಗೆದುಕೊಂಡು ಬನ್ನಿರೆಂದು ಪ್ರಾರ್ಥಿಸಿ
ಆ ಸಾಧ್ವಿಯು ಗಂಡನಿಗೀಸಮಾಚಾರವನ್ನು ತಿಳಿಸಿ ವೇಮಣ್ಣನು ಮ
ತ್ಮನು, ಉದಾಸೀನ ಮಾಡತಕ್ಕದು ಸರಿಯಲ್ಲವೆಂದು ಪತಿಯನ್ನು ಒಡಂ
ದಂಪತಿಗಳೀರ್ವರೂ ರಾಸಿಯ ಬಳಿಗೆ ಹೋಗಿ ಅರ್ಧಭಾಗವನ್ನು ತೆ
ಕೊಂಡು ಉಳಿದರ್ಧವನ್ನು ವೇಮಣ್ಣನ ಕೋರಿಕೆಯ ಮೇರೆಗೆ ದಾನಧ
ವಿನಿಯೋಗಿಸಿದರು.*

ಅಣ್ಣನು ತನ್ನ ಭಾಗದ ಕಾಯಿಗಳನ್ನು ಒಡೆದು ಸುವರ್ಣಬೀಜಗ
ವುದನ್ನು ಕಂಡು ತಮ್ಮನ ಶಿದ್ಧಿ ಮಹತ್ವಕ್ಕೆ ಆಶ್ಚರ್ಯ, ಸಂತೋಷವನ್ನೈ
ಅದು ಮೊದಲು ತಮ್ಮನಲ್ಲಿ ಭಕ್ತಿ ಭಾವವುಳ್ಳವನಾಗಿದ್ದನು ಯಾ
ಯಿಂದ ಅದ್ಭುತ ಮಹಾತ್ಮೆಯುಳ್ಳವನಾದನೋ ಅಂತಹ ವನಿತಾ ತಿಲ
ಈ ಸಮಯದಲ್ಲಿ ಉಂಟಾದ ಸಂತೋಷವಿಷ್ಟೆಂದು ಯಾರು ಹೇಳಬಲ್ಲ
ಅನವೇಮಾರೆಡ್ಡಿಯು ತಮ್ಮನ ಹೇಳಿಕೆಯಂತೆ ವಿಶೇಷ ದಾನ ಧರ
ಳನ್ನು ಮಾಡಲಾರಂಭಿಸಿದನು.

ಅದು ಮೊದಲ್ಗೊಂಡು ಅನವೇಮಾರೆಡ್ಡಿಯನ್ನು ಧರ್ಮ ವೇಮಾ
ಯೆಂತಲೂ, ದೊಡ್ಡ ಕಾಯಿಗಳ ಬೀಜಗಳನ್ನು ಭಂಗಾರದ ವರಹಗ
ಪೂರ್ಪಡಿಸಿದ ಹುಚ್ಚು ವೇಮಣ್ಣನನ್ನು ಯೋಗಿ ವೇಮಣ್ಣನೆಂತಲೂ
ಗಳು ಕರೆಯುತ್ತಿದ್ದರು.

ವೇಮಣ್ಣನು ಅನೇಕ ಲೀಲಾ ವಿಭೂತಿಗಳಂತೆ ಮಹತ್ವವಾದ ಮ
ಗಳನ್ನು ಪ್ರದರ್ಶಿಸಿದನೆಂದು ಮುಂತಾಗಿ ಉಲ್ಲೇಖವಿದೆ ಏನೇ ಇ
ಒಟ್ಟಿನಲ್ಲಿ ಶಿಷ್ಯಬೃಂದಕ್ಕೆ ಅಮೌಲ್ಯವಾದ ತತ್ವ-ರತ್ನಗಳನ್ನು ಬಿತ್ತಿ ಬೆ
ಫಲೋದಯವಾಗುವಂತೆ ಮಾಡಿ, ನಿರ್ವಿಕಾರ ಸಮಾಧಿಸಿಷ್ಠನಾ

*ಈ ಪೂರ್ವ ಸಂಪ್ರದಾಯವನ್ನು ಅನುಸರಿಸಿಯೇ ಈಗಿನ ರೆಡ್ಡಿ ಜನಗಳೂ ಪ
ಒಕ್ಕಲಿಗರೂ ದವಸ ಧಾನ್ಯದ ಕಣಗಳಲ್ಲಿ ಉದಾರ ಚಿತ್ತರಾಗಿ ದಾನಮಾಡುತ್ತ

ಬಯಸಿ, ಈಗಿನ ಅನಂತಪುರ ಜಿಲ್ಲಾ, ಕದಿರಿ ತಾಲ್ಲೂಕು 'ಕಠಾರಿಪಳ್ಳಿ' ಗ್ರಾಮದಲ್ಲಿ ಆತ್ಮಧ್ಯಾನಮಗ್ನನಾಗಿ ಯೋಗನಿದ್ರಾಪರವಶತೆಯಿಂದ 'ಶಾರ್ವರಿ ನಾಮ ಸಂವತ್ಸರ ಶ್ರೀರಾಮ ನವಮಿ ಶುಭ ದಿವಸ' ಭೌತ ದೇಹವನ್ನು ತ್ಯಾಗ ಮಾಡಿದನು. ಅಲ್ಲಿ ಈ ಮಹಾನುಭಾವನ ಸಮಾಧಿಯು ಈಗಲೂ ಕಂಗೊಳಿಸುತ್ತಿರುವುದು. ಆ ಸ್ಮಾರಕ ವೇದಿಕೆಗೆ ನಿರಂತರ ಗುರುಪೂಜೆಯು ಜರುಗುವುದು. ವೇಮನ ಪಂಥದವರೆಂಬ ಶಿಷ್ಯರು ಈ ಪಾವನ ತತ್ವಗಳನ್ನು (ತೆಲುಗು ಭಾಷೆಯಲ್ಲಿ) ಬೋಧಿಸುತ್ತಾ ಅಲ್ಲಲ್ಲಿ ಸುತ್ತಿ ಜನಜಾಗೃತಿಗೊಳಿಸುತ್ತಿರುವರು.

ಸರ್ವಜ್ಞ, ಪುರಂದರ, ತ್ಯಾಗಯ್ಯ, ಕಬೀರ್ ಇತ್ಯಾದಿ ಮಹನೀಯರು ತಮ್ಮ ಹೆಸರನ್ನೇ ಮಕುಟವಾಗಿ ಬಳಸಿಕೊಂಡಿರುವಂತೆ, ವೇಮನನಾದರೂ, ತನ್ನನ್ನು ತಾನು ಸಂಬೋಧಿಸಿಕೊಂಡು, ತನ್ನನ್ನೇ ಹೀಯಾಳಿಸಿಕೊಂಡು, ಇತರರಿಗೆ ಬೋಧಿಸಿದರೆ ಅವರಲ್ಲಿ ನಿರಹಂಕಾರ, ನಿರ್ಮಾತ್ಸರ್ಯಗಳು ಮೂಡುವುವು. ಸದಸದ್ವಿವೇಕಿಗಳಾಗುವರೆಂದು 'ವಿನರ ವೇಮಾ' ಕೇಳು ವೇಮಾ ಎಂದು ಬೋಧಿಸಿದುದು ಗಮನಾರ್ಹವಾಗಿರುವುದು.

ಇಂತು ಲೋಕ ಕಲ್ಯಾಣಾರ್ಥವಾಗಿ, ಅವತರಿಸಿ, ನಿಸ್ವಾರ್ಥ ಸೇವೆ ಸಲ್ಲಿಸಿ. ಅಮರರಾದ ಮಹಾತ್ಮರ ಮಾಲಿಕೆಯಲ್ಲಿ ಸೇರಿ, ಶೋಭಿಸುವ ನಮ್ಮ ವೇಮನ ತತ್ವಗಳು ಅಮರಗಳು! ಅಜೇಯಗಳು!! ವೇದಸಾರಗಳು!!!

ಓಂ ಶಾಂತಿ ಶ್ಯಾಂತಿ ಶ್ಯಾಂತಿ!

ಇತ್ತೀಚಿನ ಕೆಲವು ವಿಮರ್ಶಕರು, ಈ ಪುಣ್ಯಶ್ಲೋಕನ ಜಯಂತಿಯು, ಇಂಗ್ಲಿಷ್ ತಿಂಗಳು ಜನವರಿ ೧೯ನೆಯ ತಾರೀಕೆಂದು ನಿರ್ಣಯಿಸಿ, ಆರೀತಿ ಉತ್ಸವ ಸಮಾರಂಭ, ತತ್ವಪಠನಗಳನ್ನು ಜರುಗಿಸುತ್ತಿರುವರು.

(ಒಂಭತ್ತು)

|| ಓಂ ||

ಶ್ರೀ ವೇಮನ ತತ್ವಗಳು

(ಕರ್ನಾಟಕ ಸಾಹಿತ್ಯದಲ್ಲಿ)

ಓಂ

ಶ್ರೀ ವೇಮನ ತತ್ವಗಳು

(ಗೀತ, ಕಂದ, ಸೀಸಪದ್ಯಗಳು)

ಅಕಾರಾದಿ ಅಕ್ಷರಮಾಲಾ

—೦—

ಗೀ॥ ಶ್ರೀಕರ ಶಿವತತ್ವ – ಶೀಲನಾ ವೇಮನ
ಪ್ರಕಟ ಮಾಡಿದಂಥ – ತತ್ವಗಳನು
ಲೋಗರೆಲ್ಲ ಓದಿ - ಒಳಮರ್ಮವರಿವುದು
ವಿಶ್ವತೋಭಿರಾಮ - ಕೇಳು ವೇಮಾ । ೧ ।

ಅ

ಕಂ॥ ಅರಿಯಲ್ ಮನವೇ ಕಾರಣ ।
ಮಿರುವನ್ನೆಗಮಾತ್ಮ ಶರಿರದೊಳ್ ಸುಖ ದುಖ್ಖಂ ॥
ನೆರೆಮೋಕ್ಷಮಾದೊಡೊಂದಂ ।
ಭರಿಸಲ್ಬೇಕಿದುವೆ ಸತ್ಯಮುಹುದೈ ವೇಮಾ ॥ । ೨ ।

ಗೀ॥ ಅಡವಿ ಅಡವಿ ತಿರುಗಿ – ಆಸೆಯನುಳಿಯದೆ
ಗಾಸೆಪಡುವ ನರನು - ಘನನೆನಿಸನು
ಬೇಸರಿಸದೆ ಮನವ - ಬಿಗಿಯಾಗಿ ನಿಲ್ಲಿಸ
ಲವನು ಪರವ ಸಾಧಿ–ಸುವನು ವೇಮಾ । ೩ ।

—ಓಂ—

—ಶ್ರೀ ವೇಮನ ತತ್ವಗಳು—

ಅನುವಿಲ್ಲದೆಡೆಯೊಳು - ತನಗೆ ತಾನೆಯೆ ದ್ಯೂತ
ವನು ಕೂಡಿ ಆಡಿ - ಓಡಿದನಡವಿ ಪೊಕ್ಕ
ಘನನ ನೋಡಲ್ಕಾದು - ಮೂರ್ಖತನವಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ | ೪ |

ಅರಿಯೆ ದಧಿಯೊಳ್ ಘೃತವು–ಮರದೊಳು ಜಂಕಿಯು
ಸುಮದಿ ಪರಿಮಳವಃದು – ವ್ಯಾಪಿಸಿಹುದು
ತಿಲದಿ ತೈಲದಂತೆ – ತಾನಿರ್ಪುದು ಚಿದಾತ್ಮ
ವಿಶ್ವತೋಭಿರಾಮ - ಕೇಳು ವೇಮಾ | ೫ |

ಅಹುದೆನುತ್ತಲೋರ್ವ - ನಾಡಿದ ಮಾತಿಗೆ
ಅಲ್ಲವೆಂದು ಪೇಳ - ಲೊಂದೆ ನಿಮಿಷ
ಅದನು ಸ್ಥಿರಪಡಿಸುವ - ನಿಳೆಯೊಳು ಬೇಕಯ್ಯ
ವಿಶ್ವತೋಭಿ ರಾಮ – ಕೇಳು ವೇಮಾ | ೬ |

ಅಮಮ ! ತುಂಟನರ – ರದೆಂಥವರಿಳೆಯೊಳು
ಪ್ರಭುವ ಗೇಲಿ ಮಾಡು - ತಿರ್ಪರ್ಕೃದೆ
ಮೀರಿದವರು ಯಾರನುಂ – ಲೆಕ್ಕಮಾಡರು
ವಿಶ್ವತೋಭಿ ರಾಮ - ಕೇಳು ವೇಮಾ | ೭ |

ಕಂ|| ಅರಿಷಡ್ವರ್ಗಗಳಿಂದಂ |
ನರರೆಲ್ಲರು ಸೊಕ್ಕಿ ಸಿಕ್ಕಿನಯ ಗತಿಯೆನುತಂ ||
ಅರಿತಿಹರಲ್ಲದೆ ತತ್ವವ |
ನರಿತದನಂ ಲೇಶ ತಿಳಿದು ನಡೆಯರು ವೇಮಾ || | ೮ |

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಅಧಮ ಮನುಜನಾದೊಡಂ - ಅರ್ಥವಿರ್ದೊಡೆ
ಅವನ ಮಾತು ನಡೆವು - ದವನಿಯುಲ್ಲಿ
ದೊರೆಗಳ ರಾಜ್ಯದಿ – ಕವಡೆಗಳ್ ನಡೆಯುವೇಂ ?
ವಿಶ್ವತೋಭಿರಾಮ - ಕೇಳು ವೇಮಾ | ೯ |

ಅಲ್ಲವಲ್ಲವೆಂದು - ತಿಳಿದವರುಸಿರಲು
ಕೇಳದಿರ್ಪ ಮೂರ್ಖ - ನವನು ಕೆಡುವ
ಮುನಿಗಳೊರೆದ ಧರ್ಮ - ಮಾರಲಿಂತೇಕಣಾ ?
ವಿಶ್ವತೋಭಿರಾಮ – ಕೇಳು ವೇಮಾ | ೧೦ |

ಅಸ್ಥಿರವಿದು ಕಾಯ - ವಧಿಕ ಸಂಕಟಪಟ್ಟು
ಹಲವು ವಿಧಗಳಿಂದ - ಬೆಳಸಿ ಬೆಳಸಿ
ಅಗ್ನಿಗೀವರಂತೆ - ಅಡವಿ ನರಿಗೀವರೈ
ವಿಶ್ವತೋಭಿರಾಮ – ಕೇಳು ವೇಮಾ | ೧೧ |

ಅಧಿಪನಾದ ರಾಜ – ನಲ್ಪನ ಮನ್ನಿಸೆ
ಅವನ ಮಾತು ನಡೆವು - ದವನಿಯಲ್ಲಿ
ರಾಜನೊಪ್ಪಿದಾಗ – ಓಡುತಾಂ ನಡೆವುದು
ವಿಶ್ವತೋಭಿರಾಮ – ಕೇಳು ವೇಮಾ | ೧೨ |

ಅಧಿಕವಾದ ಯಜ್ಞ – ವಲ್ಪನು ಮಾಡಿ ತಾಂ
ಮುದದಿ ಶಾಸ್ತ್ರಗಳನು – ಪಠಿಸಲೇನು
ತಳ್ಳಲರಿತ ನಾಯಿ–ಯದನು ತಾಂ ಹೊರುವುದೇ !
ವಿಶ್ವತೋಭಿ ರಾಮ – ಕೇಳು ವೇಮಾ | ೧೩ |

ಓಂ

—ಶ್ರೀ ವೇಮನ ತತ್ವಗಳು—

ಅಕ್ಷರವರಿಯದ - ಆಚಾರಮದು ಏಕೆ
ತಾನು ತಿನ್ನದಿರುವ – ಧನಮದೇಕೆ
ಪರರ ಮೇಲು ನೋಡಿ - ಸಹಿಸದ ತನುವೇಕೆ
ವಿಶ್ವತೋಭಿರಾಮ - ಕೇಳು ವೇಮಾ | ೧೪ |

ಅಮಲ ವಾಕ್ಯಾಳಿಯು - ಅಭಿಷೇಕವಾರಿಧಿ
ತನುವೆ ನುಡಿಯು - ತಾಳ್ಮೆಯನ್ನು ಪೊಂದಿ
ಆತ್ಮದಲ್ಲಿ ಶಿವನ - ನಿರಿಸುವ ಯೋಗಿಯು
ವಿಶ್ವತೋಭಿರಾಮ - ಕೇಳು ವೇಮಾ | ೧೫ |

ಅಕ್ಷಮಾಲೆಯಾಂತು - ಆಲಸ್ಯಮೊಂದುತ್ತ
ಕುಕ್ಷಿತುಂಬುತಿಹುದು - ಮೇಲಿಡಲ್ಲ
ಪಕ್ಷಿ ಬಕದ ರೀತಿ – ಮೇಲಿನ ನೋಟವ್ವೈ
ವಿಶ್ವತೋಭಿರಾಮ - ಕೇಳು ವೇಮಾ | ೧೬ |

ಅನ್ನವಧಿಕವಾಗ – ಲದುತಾನು ಕೊಲ್ವುದು
ಅನ್ನವಂಟದಿರಲು – ತನು ಕ್ಷಯಿಪುದು
ಕೊಲ್ವ ನೋವ ಬಗೆಯು - ಸಾಲದೇ ನೂರೇಕೆ
ವಿಶ್ವತೋಭಿರಾಮ - ಕೇಳು ವೇಮಾ | ೧೭ |

ಅಲ್ಲಿ ಇಲ್ಲಿ ಇರ್ಪ - ನೆಲ್ಲ ದಿಕ್ಕಿನೊಳಿರ್ಪ
ನೆಲ್ಲ ತಾನೆ ತಾನೆ - ತುಂಬಿ ಇರ್ಪ
ಅವನ ಪೂಜೆ ಮಾಡಿ - ಮುಕ್ತನಾಗಲಿ ಬೇಕು
ವಿಶ್ವತೋಭಿರಾಮ - ಕೇಳು ವೇಮಾ | ೧೮ |

—ಓಂ—

—ಶ್ರೀ ವೇಮನ ತತ್ವಗಳು—

ಅಲೆಗಳಿಲ್ಲದುದಧಿ – ಯುಂತಿರ್ಪ ಮನದೊಳು
ತಿಳಿವಿನಿಂದ ತನ್ನ – ತಿಳಿಯುವವನೆ
ಇಳೆಯೊಳು ಸಜ್ಜನ – ನೆಂಬರು ಜನಗಳು
ವಿಶ್ವತೋಭಿರಾಮ – ಕೇಳು ವೇಮಾ | ೧೯ |

ಕಂ|| ಅಜ್ಞಾನವೆ ಶೂದ್ರತ್ವವು |
ಸುಜ್ಞಾನ ಬ್ರಹ್ಮವೆಂಬ ಶೃತಿ ವಚನವ ಕೇ- ||
ಳಜ್ಞಾನವಳಿಯೆ ವಾಲ್ಮೀಕಿ |
ಸುಜ್ಞಾನ ಬ್ರಹ್ಮನಾದ ನೋಡೈ ವೇಮಾ || | ೨೦ |

ಗೀ|| ಅತಿಥಿ ಬರವ ನೋಡಿ - ಆದರಿಸಿ ಬೆದರಿಸಿ
ಕಠಿಣ ಚಿತ್ತರಾಗಿ – ಕಳುಹಿಸುವರು
ಕರ್ಮಬದ್ಧರಾಗಿ – ಧರ್ಮವಂ ಮಾಡರು
ವಿಶ್ವತೋಭಿರಾಮ – ಕೇಳು ವೇಮಾ | ೨೧ |

ಅಲ್ಲಿ ಇಲ್ಲಿ ಬೆದಕಿ - ಅನುಭವವರಿಯದ
ಕೆಲಬರಯ್ಯನವರು – ಬಕನ ತೆರದಿ
ಮೂರ್ಖ ತಪವ ಮಾಡಿ – ಕೊಳೆವರು ನೋಡಿರಿ
ವಿಶ್ವತೋಭಿರಾಮ – ಕೇಳು ವೇಮಾ | ೨೨ |

ಅಲೆಯೊಳ್ ಬುಗ್ಗೆ ಪುಟ್ಟಿ – ತಾಕ್ಷಣ ನಶಿಪುದು
ಕನಸಿನಲ್ಲಿ ಧನವು – ತೊಲಗುತಿಹುದು
ಇಳೆಯ ಭೋಗ ಭಾಗ್ಯ – ವೀ ರೀತಿಯಲ್ಲವೇ?
ವಿಶ್ವತೋಭಿರಾಮ - ಕೇಳು ವೇಮಾ | ೨೩ |

—ಓಂ—

—ಶ್ರೀ ವೇಮನ ತತ್ವಗಳು—

ಅವರ ನಿವರ ಬೈದು – ತವಕದಿ ಕೂಗುತ್ತೆ
ಜವದಿ ಪತಿಯ ಬೈದು – ಮುಸುಕಿಡುವಳು
ಇವಳು ಗಂಡನನ್ನು – ಗೂಡೆಯೊಳು ಮಾರುವಳು
ವಿಶ್ವತೋಭಿರಾಮ – ಕೇಳು ವೇಮಾ | ೨೪ |

ಅಲ್ಪನಾಡುತಿರ್ಪ – ನಾಡಂಬರದೊಳೈದೆ
ಸಜ್ಜನನಾಡುತಿರ್ಪ – ಸೌಮ್ಯವಾಗಿ
ಕಂಚಿನಂತೆ ಕನಕವೇಂ – ಶಬ್ದಗೆಯ್ಡುವುದೇ?
ವಿಶ್ವತೋಭಿರಾಮ – ಕೇಳು ವೇಮಾ | ೨೫ |

ಅಗ್ನಿನೇತ್ರದಿಂದೆ - ಕಾಮನ ದಹಿಸುತೆ
ಕಾಮದಿಂದೆ ಗಿರಿಜೆ - ಕೂಡಿದಂಥ
ಶಿವನು ಕರ್ಮಬದ್ಧ - ನಾದನು ನೋಡಲ್ಕೆ
ವಿಶ್ವತೋಭಿರಾಮ - ಕೇಳು ವೇಮಾ | ೨೬ |

ಅಡಿಗಡಿಗುಂ ನೋಡ – ಲತಿ ಚಿತ್ರವಾಗಿದೆ
ಸಕಲವಸ್ತು ಭೋಗ – ಭಾಗ್ಯನಿಚಯ
ತಾನೆ ತಿರುಗುತಿಹದು – ಹಿಂದೆ ನೆರಳಾಗುತ್ತೆ
ವಿಶ್ವತೋಭಿರಾಮ – ಕೇಳು ವೇಮಾ | ೨೭ |

ಅಡವಿ ತಿರುಗಿದೊಡಿಲ್ಲ-ಅಗಸದೊಳಗಿಲ್ಲ
ಅವನಿ ತೀರ್ಥಯಾತ್ರೆ - ಮಾಡಲಿಲ್ಲ
ಒಡಲ ಶುದ್ಧಿಮಾಡಿ - ಒಡೆಯನ ಕಾಣ್ಬುದು
ವಿಶ್ವತೋಭಿರಾಮ - ಕೇಳು ವೇಮಾ | ೨೮ |

—ಓಂ—

—ಶ್ರೀ ವೇಮನ ತತ್ವಗಳು —

ಕಂ॥ ಅಷ್ಟಾಂಗ ಯೋಗ ಸಾಧನ।
ಕಷ್ಟಂಗಳ ಸಹಿಸಲಾರ ಕಾಣಲ್ಕಾರಂ॥
ಚೇಷ್ಟೆಗಳಂ ಬಿಡದವನಿಗೆ।
ಕಷ್ಟಂ ತಪ್ಪದದು ಸಾವು ದಿಟವಿದು ವೇಮಾ ।೨೯।

ಗೀ॥ ಅತುಲ ವೈರಾಗ್ಯ - ಬೋಧೋಪ ರತರನರಿತು
ಸತಿಯ ವಲಪಿಗೆ - ಸಿಗದೆ ಸತ್ಯವನು ತಿಳಿದು
ಮತಿಯ ಬಿಗಿಯಾಗಿ - ಪಿಡಿವುದೇ ಮಾನ್ಯವುದುವೆ
ಸತಮದೇ ಸುಜನತ್ವವು - ಧರೆಯೊಳ್ ವೇಮಾ ।೩೦।

ಅಧರಾಮೃತವ ನೋಡಿ - ಸಕಲವುಂ ಮರೆವನು
ತರುಣಿ ರೂಪ ನೋಡಿ - ತನ್ನ ಮರೆವ
ಮರ್ಮಸ್ಥಳವ ನೋಡಿ -ಯೋಗವುಂ ಮರೆವನು
ವಿಶ್ವತೋಭಿರಾಮ - ಕೇಳುವೇಮಾ ।೩೧।

ಕಂ॥ ಅಜ್ಞಾನವೆಂಬ ಕಾಡಂ।
ಸುಜ್ಞಾನಮದೆಂಬ ಖಡ್ಗದಿಂ ಕಡಿದಿಡುತಂ॥
ಅಜ್ಞಾನ ತನುವ ತೊಡೆದೊಡೆ।
ಸುಜ್ಞಾನ ಬ್ರಹ್ಮಪದವಿ ದೊರೆಗುಂ ವೇಮಾ॥ ।೩೨।

ಗೀ॥ ಅನುವಿಲ್ಲದೆಡೆಯೊಳು - ಅಧಿಕನೆಂದೆನೆಸಲ್ಲ
ಅಲ್ಪನೆಂದೊಡದರಿಂ - ತಪ್ಪದೇನು
ಬೆಟ್ಟವಷ್ಟು ಕನ್ನಡಿಯೊಳು - ಕಾಣುವುದಲ್ಲ
ವಿಶ್ವತೋಭಿರಾಮ – ಕೇಳು ವೇಮಾ ।೩೩।

—ಓಂ—

—ಶ್ರೀ ವೇಮನ ತತ್ವಗಳು—

ಅನ್ನ ತಿನ್ನದಿರಲು – ಕುಕ್ಷಿಯ ಜಠರಾಗ್ನಿ
ಭಕ್ಷಿಸುವುದು – ಕುಕ್ಷಿ ಮಲವ ಬಿಡದೆ
ಕೂಳು ಬಿಟ್ಟು ಮಲವ - ತಿನ್ನುವನುಪವಾಸಿ
ವಿಶ್ವತೋಭಿರಾಮ – ಕೇಳು ವೇಮಾ | ೩೪ |

ಅನ್ನ ರಸದಿಂದಲೇ - ಬಿಂದು ರಸವಾದುದು
ಬಿಂದು ರಸದಿಂದಲೇ - ಬೀಜವಾಯ್ತು
ಬಿಂದು ಬೀಜಗಳನ್ನು – ಭೇದಿಸಿ ನೋಡಯ್ಯ
ವಿಶ್ವತೋಭಿರಾಮ - ಕೇಳು ವೇಮಾ | ೩೫ |

ಅಸು ವಿನಾಶವಾದೊ - ಡಾನಂದ ಸುಖ ಕೇಳಿ
ಸತ್ಯನಿಷ್ಠಪರನ - ಸಂತವಿಪುದು
ಸತ್ಯನಿಷ್ಠೆ ನೋಡೆ - ಸಜ್ಜನ ಭಾವವು
ವಿಶ್ವತೋಭಿರಾಮ . ಕೇಳು ವೇಮಾ | ೩೬ |

ಅಡವಿ ಕಲ್ಗಳ ತಂದು – ಕಾಲು ಕೈಗಳ ಮಾಡಿ
ಉರವ ಶಿರವನ್ನೈದೆ – ಕೊರೆಡದರೊಳು
ಜಡಶಿಲೆಗೆ ನಮಿಸುವ - ಜಡರನೇನೆಂಬೆನು
ವಿಶ್ವತೋಭಿರಾಮ - ಕೇಳು ವೇಮಾ | ೩೭ |

ಕಂ|| ಅಮಲಾತ್ಮನ ಮಾನಸದೊಳ್ |
ವಿಮಲಾಂತರ್ಗತನನ್ನೈದೆ ವಿವರಿಸವೇಳ್ಕುಂ ||
ಕ್ರಮವಾದ ಛಾಯೆಯೊಳು ತಾಂ |
ಮಮಕಾರಂ ತೊಡೆವುದದುವೆ ಮಾನ್ಯಂ ವೇಮಾ | ೩೮ |

—ಶ್ರೀ ವೇಮನ ತತ್ವಗಳು—

ಅಗಸತಿಗೆ ಪುಟ್ಟಿದನು ತಾಂ |
ಬಗೆಯಲ್ಕಾರದನು ಪೇಳಲೇ ನಿನ್ನದನಃ ||
ಜಗದೊಳಗೆಲ್ಲಿ ಡೆಯುಂ ಜನ |
ರಗಣಿತ ಸಂಖ್ಯಾತರರಿತರಿದನಂ ವೇಮ್ರಾ || | ೩೯ |

ಗೀ|| ಅರುಣೋದಯಗಳೆಷ್ಟೊ - ಅಸ್ತಮಾನಗಳೆಷ್ಟೊ
ಜನನ ಮರಣಗಳೆಷ್ಟೊ – ಜಾತಿಯೆಷ್ಟೊ
ಇಡನು ತಿಳಿದ ಜ್ಞಾನಿ - ಧೀರನಾಗಿರ್ಪನು
ವಿಶ್ವತೋಭಿರಾಮ - ಕೇಳು ವೇಮಾ | ೪೦ |

ಕಂ|| ಅಕ್ಷರವೆಂಬಡವಿಯೊಳು ನಿ |
ರಕ್ಷರ ಸಾಸಿರವ ಲಕ್ಷವರಸುವುದೇಕೋ ||
ಈಕ್ಷಿಸಿ 'ಶಿವ' ಎಂದೆಂಬೆರ |
ಡಕ್ಷರವನ್ನಿರಿಸಿ ಚರಿಪುದುತ್ತಮ ವೇಮಾ || | ೪೧ |

ಗೀ|| ಅನೃತವಾಡಲಾರದಾ - ಹರಿಶ್ಚಂದ್ರನು
ಸತಿಯ ಸುತರ ಮಾರಿ - ತಾನು ಸಹಿತ
ಹೊಲೆಯ ದಾಸನಾಗಿ - ವರ್ತಿಸಲಿಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ | ೪೨ |

ಅಕ್ಷರಾತ್ಮಕಮುದು – ಅಮೃತಪಾನಕ್ಕುಮುಂ
ರಕ್ಷಣತ್ವಮೈದೆ - ರಾಜಹಂಸ
ದೀಕ್ಷೆಯೊಳಗೆ ದೀಕ್ಷೆ - ತಿಳಿದು ನೋಡುವುದಯ್ಯ
ವಿಶ್ವತೋಭಿರಾಮ - ಕೇಳು ವೇಮಾ | ೪೩ |

—ಓಂ—

—ಶ್ರೀ ವೇಮನ ತತ್ವಗಳು—

ಅಲ್ಪ ಸೌಖ್ಯಕಾಸೆ - ಮಾಡುವ ಮನುಜನು
ಅಮಿತ ದುಃಖದಿಂದೆ - ಬಾಧೆಪಡುವ
ಪರಸುಖವರಿದು ತಾಂ - ಬದುಕಲು ಬೇಕಯ್ಯ
ವಿಶ್ವತೋಭಿರಾಮ - ಕೇಳು ವೇಮಾ | ೪೪ |

ಗೀ॥ ಅನ್ನದಾನದಿಂದಲತಿ - ಸಂಪದವನಾಂತು
ಅಮರಲೋಕ ಪೂಜ್ಯ - ನಪ್ಪನವನು
ಅನ್ನವೇ ಬ್ರಹ್ಮ - ಸ್ವರೂಪವು ಅರಿಯುರು
ವಿಶ್ವತೋಭಿರಾಮ - ಕೇಳು ವೇಮಾ | ೪೫ |

ಅನ್ನಮದದೊಳೈದೆ - ಸತಿಯರು ಪುರುಷರು
ಮದನಹತಿಯೊಳ್ಮುಗ್ಧ - ರಾದೆವೆಂಬರ್
ಅನ್ನವಡಗಲಾಗ - ಮದನನೇನಾಡನೋ !
ವಿಶ್ವತೋಭಿರಾಮ - ಕೇಳು ವೇಮಾ | ೪೬ |

ಅನ್ನವಮೃತವದನು - ಮುಸುರೆಯೆಂದೆನ್ನುತ್ತೆ
ಪರಿಹಸಿಪರು - ತಿಳಿಯದಿರ್ಪ ಜನರು
ಅನ್ನವಮೃತಮರಿಯೆ - ಹರಿಹರ ಬ್ರಹ್ಮರು
ವಿಶ್ವತೋಭಿರಾಮ - ಕೇಳು ವೇಮಾ | ೪೭ |

ಅರಿಯೆ ಸತ್ಯದಲ್ಲಿ - ವರಹರಿಶ್ಚಂದ್ರ ತಾಂ
ನಿತ್ಯವಾದ ಕೀರ್ತಿ - ಯುಳಿಸಿಕೊಂಡ
ಸತ್ಯವೇ ರಾಜರ್ಗೆ - ಸರ್ವದಾ ಯೋಗ್ಯವು
ವಿಶ್ವತೋಭಿರಾಮ - ಕೇಳು ವೇಮಾ | ೪೮ |

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಅಡಗದು ತಪದಿಂ ಕ್ರತುವಿಂ ।
ಡಪವಿಯ ತೀರ್ಥಗಳ ತಿರುಗಲದರಿಂ ಮತ್ತಂ ॥
ಒಡೆಯನ ಕಾಣಲಿಕಾಗದು ।
ಕಡುಧೀರತೆ ಗುರುವು ತಿಳಿಸಬಲ್ಲನು ವೇಮಾ ॥ ।೪೯।

ಅಡಿಗಡಿಗೆ ಬಿದ್ದು ಮುಗಿವರ್ ।
ಗುಡಿಯೊಳಗಣ ಕಠಿಣ ಶಿಲೆಯ ಗುಣ ಹೆಚ್ಚುವುದೇಂ ॥
ಗುಡಿ ದೇಹವಾತ್ಮ ದೇವರು !
ಕೆಡು ಶಿಲೆಗಳ ಪೂಜೆ ಮಾಡದಿರು ವರವೇಮಾ ।೫೦।

ಗೀ॥ ಅನ್ನ ತಿನ್ನುವಾಗ - ರುಚಿಯು ಕೋರುವುದಾತ್ಮ
ಮನವು ಜಿಹ್ವೆ ಬಯಸು - ತಿಹವು ಮಂತೆ
ಆತ್ಮಂಗೆ ತೃಣವಾದ – ರಯ್ಯೊ ; ಎನಬಾರದು
ವಿಶ್ವತೋಭಿರಾಮ – ಕೇಳು ವೇಮಾ ।೫೧।

ಅನ್ನ ಬೇಡದವನಿ – ಗನ್ನವನಿಡಲಾಗಿ
ಹೊರಗೆ ಚೆಲ್ವನವನು - ಫಲಿತಮೇನು
ಧನಿಕಗೀವ ದಾನ – ವೀರೀತಿಯಪ್ಪುದು
ವಿಶ್ವತೋಭಿರಾಮ - ಕೇಳುವೇಮಾ ।೫೨।

ಕಂ॥ ಅತಿ ನಿದ್ರಾವಂತನಿಗುಂ ।
ಅತಿ ಪಾನಿಗೆ ಸಿರಶನಾತಿ ಕೋಪಿಷ್ಠನಿಗುಂ ॥
ಧೃತಿಹೀನಂಗಪಕೃತಿಗುಂ ।
ಜೊತೆಗೊಳದೀ ಬ್ರಹ್ಮವಿದ್ಯೆ ಕೇಳ್ಳೈ ವೇಮಾ ॥ ।೫೩।

—ಓಂ—

—ಶ್ರೀ ವೇಮನ ತತ್ವಗಳು —

ಗೀ॥ ಅರಿವಿಲ್ಲದವರೆಷ್ಟು – ಓದಿದರುಂ ವೃಥಾ
ಓದಿದನಿತು ವೇಳೆ – ಸದ್ಗುಣಗಳು
ತಾ ಮರದೆಡೆಯೊಳು – ಕಪ್ಪೆಗಳಿದ್ದಂತೆ
ವಿಶ್ವತೋಭಿರಾಮ - ಕೇಳು ವೇಮಾ |೫೪|

ಅಹುದು ಅಲ್ಲವೆಂದು – ಆತ್ಮದಿ ತಿಳಿಯದೆ
ಮಂತ್ರ ತಂತ್ರಗಳಿಗೆ - ಮುಗ್ಧರಾಗಿ
ಸಂಶಯದಿಂದಲಿ - ಸತ್ತರು ಮನುಜರು
ವಿಶ್ವತೋಭಿರಾಮ – ಕೇಳು ವೇಮಾ |೫೫|

ಅಲ್ಪನಾದ ನರನಿ – ಗಧಿಕಾರ ಬಂದೊಡೆ
ದೊಡ್ಡವರನು ನಿಂದಿ – ಸುವನು ಬಿಡದೆ
ಮೆಟ್ಟಿ ಕಡಿವನಾಯಿ - ಕಬ್ಬುಸಿಹಿಯರಿವುದೇ ?
ವಿಶ್ವತೋಭಿರಾಮ – ಕೇಳು ವೇಮಾ |೫೬|

ಕಂ॥ ಅಲ್ಲದ ಸತಿ ಬಲ್ಲಿದ ಸತಿ ।
ನಲ್ಲನ ಪರಿಗಣಿಸದವಳ ಬಿಡದಿರ್ಪವನೇ ॥
ಗೊಲ್ಲನು ಮಲ್ಲನೆ ಧರೆಯೊಳ್ ।
ಗೊಲ್ಲನಿಗಿನ್ನಿಹವೆ ಬೇರೆ ಕೋಡುಗಳ್ವೇಮಾ ॥ |೫೭|

ಗೀ॥ ಅಳಿಯ ಸಾಯಲಾತ್ಮ - ದೊಳು ಚಿಂತೆ ಮಾಡುವ
ತನಯ ಸಾಯೆ ತಾನೆ - ತಲ್ಲಣಿಸುವ
ಪುಣ್ಯಪುರುಷ ಸಾಯೆ - ಭೂಮಿಯ ಜನರಿಗೆ
ಯುಗವೆ ಪ್ರಳಯವಾದೊ - ಲಿಹುದು ವೇಮಾ ॥ |೫೮|

—ಓಂ—

—ಶ್ರೀ ವೇಮನ ತತ್ವಗಳು —

ಆ

ಗೀ॥ ಆಸೆಯಳಿಯದಿರಲು – ಪಾಶಮುಕ್ತನು ಸುಳ್ಳು
ಮುಕ್ತನಾಗದಿರಲು ಮುನಿಯು - ಸುಳ್ಳು
ಮುನಿಗೆ ಹೊರತು ಸರ್ವ - ಮೋಹಗಳ್ ತೊಲಗವು
ವಿಶ್ವತೋಽಭಿರಾಮ – ಕೇಳು ವೇಮಾ |೫೯|

ಆಸೆಯಿಂದ ಧನವ – ನಾರ್ಜಿಪುದೇತಕ್ಕೆ
ಮಣ್ಣಿನಲ್ಲಿ ಹೂತು ಮರೆವುದೇಕೆ
ಧನವು ಪೋದ ಮೇಲೆ - ಧರ್ಮವಿನ್ನೆಲ್ಲಿದೆ
ವಿಶ್ವತೋಽಭಿರಾಮ – ಕೇಳು ವೇಮಾ |೬೦|

ಆಸೆಯಿಂದ ನರರು – ಜೀವಿತ ಪರಿಯಂತ
ತಿರುಗುತಿಹರು ಭ್ರಮೆಯ - ತಿರುಗಿಸದಲೆ
ಕೊಳಕು ಪಾತ್ರೆಯಲ್ಲಿ – ಮುತ್ತುವ ನೊಣದಂತೆ
ವಿಶ್ವತೋಽಭಿರಾಮ - ಕೇಳು ವೇಮಾ |೬೧|

ಆಸೆ ನಾಶಗೈ – ದ ಸೂರ್ಯಾಗ್ನಿ – ತಂಪಿಸಿ
ಕಚ್ಚೆ ಬಿಗಿಯ ಹಿಡಿದು - ಕೋಪಮುಳಿದು
ಗುಟ್ಟು ಮೀರುವವನು – ಗುರುವಿಗೆ ಗುರುವಯ್ಯ
ವಿಶ್ವತೋಽಭಿರಾಮ - ಕೇಳು ವೇಮಾ |೬೨|

—ಓಂ—

—ಶ್ರೀ ವೇಮನ ತತ್ವಗಳು—

ಆಸೆಯೆಂಬ ಹಗ್ಗದಿಂ – ಸರ್ವ ಜನಗಳು
ಕಟ್ಟುಬಿದ್ದು – ಮುಕ್ತರಾಗರವರು
ಜ್ಞಾನಖಡ್ಗದಿಂದ – ಖಂಡಿಸರೇತಕ್ಕೊ !
ವಿಶ್ವತೋಭಿರಾಮ - ಕೇಳು ವೇಮಾ | ೬೩ |

ಆಸೆಯೆಂಬ ಹಗ್ಗಮುಂ – ತುಂಡುಮಾಡುತ್ತೆ
ದೂರ ಚೆಲ್ಲದಿರಲು - ಪರಮದಿಲ್ಲ
ತಿಂಡಿಯಾಸೆಗಾಗಿ - ಹೆಗ್ಗಣ ಸತ್ತಂತೆ
ವಿಶ್ವತೋಭಿರಾಮ - ಕೇಳು ವೇಮಾ | ೬೪ |

ಆಸೆಪಾಪಿ ಜಾತಿ – ಐಹಿಕ ಲೋಕದಿ
ಆಸೆಯಿಂಧ ಮೋಸ - ಪೋಪರೆಲ್ಲ
ನೋಡಿ ಅದನು ಬಿಡುವರೇ – ಪರಿಶುದ್ಧರು
ವಿಶ್ವತೋಭಿರಾಮ - ಕೇಳುವೇಮಾ | ೬೫ |

ಆಸೆಯೆಂಬ ಪಾಶಮುಂ – ಛೇದಿಸದವನು
ಮೋಸಬುದ್ಧಿಯಿಂದ - ನಡೆಯುವವನು
ಕಾಶಿವಾಸಿಯಾದರುಂ – ಮೋಕ್ಷ ಪೊಂದನು
ವಿಶ್ವತೋಭಿರಾಮ – ಕೇಳು ವೇಮಾ | ೬೬ |

ಕಂ॥ ಆಸೆಯೆ ಇಹಪರ ಸೌಖ್ಯವಿ |
ನಾಶಿಯು ಭವಬಂಧಗಳಿಗೆ ಮೂಲಂಮತ್ತಂ ॥
ಈಶನ ಸೇರಲ್ಕಾಗದು |
ಆಸೆ ವಿನಾಶದೊಳು ಪರವು ದೊರೆಗುಂ ವೇಮಾ ॥ | ೬೭ |

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಆತ್ಮಶುದ್ಧಿಯಿಲ್ಲ - ದಾಚಾರವೇತಕ್ಕೆ
ಭಾಂಡ ಶುದ್ಧಿಯಿಲ್ಲ – ದಡುಗೆಯೇಕೆ
ಚಿತ್ತಶುದ್ಧಿ ಹೊರತು - ಶಿವಪೂಜೆಯೇತಕ್ಕೆ
ವಿಶ್ವತೋಭಿರಾಮ – ಕೇಳು ವೇಮಾ । ೬೮ ।

ಆತ್ಮಬುದ್ಧಿಯಿಂದ - ಲಖಿಲವು ತಾನಾದ
ಜೀವಬುದ್ಧಿಯಿಂದೆ - ಜೀವಿಯಾದ
ಮೋಹಬುದ್ಧಿಯಿಂದೆ – ಸ್ತ್ರೀಯರ ನೋಡಿದ
ವಿಶ್ವತೋಭಿರಾಮ – ಕೇಳು ವೇಮಾ । ೬೯ ।

ಆತ್ಮವರಿಯದವರು – ಅಲ್ಲಲ್ಲಿ ಪೊಗಳಲು
ಅವರ ಮೆಚ್ಚುವವರು - ಮೂರ್ಖರಲ್ತೆ ?
ಕತ್ತೆಯ ಗಾನಕ್ಕೆ - ಕಾಗೆಯು ಮೆಚ್ಚದೇಂ ?
ವಿಶ್ವತೋಭಿರಾಮ – ಕೇಳು ವೇಮಾ । ೭೦ ।

ಆದಿ ಬ್ರಹ್ಮದಿಂದೆ - ಮುವ್ವರು ಮೂರ್ತಿಗಳ್
ಪುಟ್ಟಿ ಕೊನೆಗೆ ಸತ್ತು - ಸತ್ತು ಪುಟ್ಟಿ
ಮಾಯೆಯೊಳಗೆ ತೊಳಲಿ - ಬಳಲುತಲಿರ್ಪರು
ವಿಶ್ವತೋಭಿರಾಮ - ಕೇಳು ವೇಮಾ । ೭೧ ।

ಆದಿಕಾರಣವನ್ನು - ಅಲ್ಪನೆಂತರಿವನು
ಹೇಳಲರಿಯ ತಪ್ಪು – ಹಿಡಿಯಬಲ್ಲ
ತಳ್ಳಲರಿತ ನಾಯಿ – ಸಾಲೇರಿಸುವುದೇನು ?
ವಿಶ್ವತೋಭಿರಾಮ – ಕೇಳು ವೇಮಾ । ೭೨ !

—ಓಂ—

—ಶ್ರೀ ವೇಮನ ತತ್ವಗಳು—

ಆದಕಾರ್ಯಕ್ಕೈದೆ - ಆಗದ ಕಾರ್ಯಕ್ಕೆ
ಹೆಂಗಳಂತೆ - ಮಾತನಾಡೆನಲ್ಕೆ
ಸಾಹಸ ಪಡುವರು - ಊಹೆಪ್ರೋಹಗಳಿಂದೆ
ವಿಶ್ವತೋಭಿರಾಮ - ಕೇಳು ವೇಮಾ | ೭೩ |

ಆರ್ಯರಾದವರುಗ - ಅನುಭವ ರೂಢಿಯಿಂ
ತಿಳಿಯ ಹೇಳುತಿಹರು - ವಿಶದಮಾಗಿ
ಗುರುತರಿಯದಿರುವವರು - ಗುರಿಯನೆಂತೊರೆವರು
ವಿಶ್ವತೋಭಿರಾಮ - ಕೇಳು ವೇಮಾ | ೭೪ |

ಆದಿಅಂತ್ಯವರಿಯು - ದಲ್ಪನು ದಿನವೆಲ್ಲ
ಬದಲಿಸುತ್ತೆ ಬುದ್ಧಿ - ತಿರುಗಿಸುವನು
ಮರ ಮರಕೆ ಹಾರುವ - ಕೋತಿಗಳಂದದಿ
ವಿಶ್ವತೋಭಿರಾಮ - ಕೇಳು ವೇಮಾ | ೭೫ |

ಆಲಿಸ್ಯೆ ವಿವೇಕ - ವೆಂಬೆಂಬ ಕೊಡಲಿಯಿಂ
ಪಿರಿದು ಮೋಹವೆಂಬ - ಕಾಡ ಕಡಿದು
ತಿಳಿವುಯೆಂಬ ದೊಡ್ಡ - ದೀವಿಗೆ ಪಿಡಿಯುತ್ತೆ
ಮುಕ್ತಿ ಬೆದಕಬಹುದು - ಯೋಗಿ ವೇಮಾ | ೭೬ |

ಆಕಳ್ಹಾಲು ಶಿವನಿ - ಗಭಿಷೇಕಮಾಗ್ಪುದು
ಆಕಳ್ಹಾಲು ಔಷದಕ್ಕು - ಮಹದು
ಆಕಳ್ಹಿಲೊಳಿರ್ಪ - ಅತಿಶಯುಮರಿವುದು
ವಿಶ್ವತೋಭಿರಾಮ - ಕೇಳು ವೇಮಾ | ೭೭ |

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಆಕಾಶದೊಳಾ ವಾಯುವು !
ಸಾಕಾರಂ ಮರದೊಳಗ್ನಿ ನೆರೆ ಮಾನಸದೊಳ್॥
ಏಕಾಕಾರಂ ಜಗದೊಳ್ ।
ಶ್ರೀಕರ ತಾಂ ಬೆಳಗುತಿರ್ಪನರಿವುದು ವೇಮಾ॥ | ೭೮ |

ಗೀ॥ ಆದಿ ನೋಡುತಿರಲು – ಎಲ್ಲೆಡೆ ತಾನಿರ್ಪ
ಆದಿ ನೋಳ್ಪುದರಿಂದು - ಸುಲಭವಲ್ಲ
ಆದಿ ಮುಕ್ತಿರೀತಿ – ಆತ್ಮದೊಳಿರ್ಪುದು
ವಿಶ್ವತೋಭಿರಾಮ - ಕೇಳು ವೇಮಾ | ೭೯ |

ಆತ್ಮನಲ್ಲಿ ಶಿವನ - ನನುವಿನಿಂ ಶೋಧಿಸಿ
ನಿಶ್ಚಲ ಭಕ್ತಿಯಂ – ನಿಲಿಸಲಾಗಿ
ಸರ್ವ ಮುಕ್ತನಪ್ಪ – ಸರ್ವವು ತಾನಪ್ಪ
ವಿಶ್ವತೋಭಿರಾಮ – ಕೇಳು ವೇಮಾ | ೮೦ |

ಅನುಕೂಲ್ಯವಾದ – ಅಂಗನೆ ದೊರೆಯಲು
ಸತಿಪತಿಯರ ಸೌಖ್ಯ – ವತಿಶಯಿಪ್ಪುದು
ಪ್ರಾತಿಕೂಲ್ಯಮಾಗೆ - ನರಕಯಾತನೆಯದು
ವಿಶ್ವತೋಭಿರಾಮ - ಕೇಳು ವೇಮಾ | ೮೧ |

ಆ ಚರಾಚರದೊಳ - ಗಂಗಾಂಗ ಲಿಂಗಾಂಗ
ಸರಣಿ ತಿಳಿಯದಂಥ – ಶೈವವೇಕೆ !
ಅಷ್ಟತನುಮಯನಾತ ಹರನೆಂದು ತಿಳಿಯರು
ವಿಶ್ವತೋಭಿರಾಮ – ಕೇಳು ವೇಮಾ | ೮೨ |

—ಓಂ—

—ಶ್ರೀ ವೇಮನ ತತ್ವಗಳು —

ಇ

ಗೀ|| ಇಹದಿ ಸುಖವ ಪಡಲು – ಹೇಮ ತಾರಕ ವಿದ್ಯೆ
ಪರದಿ ಸುಖಿಸೆ ಬ್ರಹ್ಮ – ವಿದ್ಯೆ ವಿದ್ಯೆ
ಮಿಕ್ಕ ವಿದ್ಯೆಗಳೆಲ್ಲ - ಸುಳ್ಳು ಮೂರ್ಖರ ವಿದ್ಯೆ
ವಿಶ್ವತೋಭಿರಾಮ - ಕೇಳು ವೇಮಾ | ೮೩ |

ಇಂಥ ಕಂಗಳಿಂದೆ – ಬ್ರಹ್ಮವನೇಪರಿ
ನೋಡಲಹುದು - ನೋಳ್ಪ ಕಣ್ಣೆ ಬೇರೆ
ನೋಟ ಬೇರೆ ಮತ್ತೆ – ಮಾಟವು ಬೇರೆಯೋ
ನೋಟದಲ್ಲಿ ನಿಲಿಸಿ - ನೋಡೈ ವೇಮಾ|| | ೮೪ |

ಇಂತು ಘಟದಲ್ಲಿ ತಾ – ನಿರಿಸಿದ ಜೀವನ
ಕಾಣದಿದನು – ಕಾಶಿಯಾತ್ರೆ ಪೋಗಿ
ಬೆದಕಿ ಬೆದಕುತವನು - ಹುಚ್ಚನಂತಾಗುವ
ವಿಶ್ವತೋಭಿರಾಮ - ಕೇಳು ವೇಮಾ | ೮೫ |

ಇಷ್ಟಲಿಂಗವಾವು - ಡಿಳಿ ಶಿಲೆಲಿಂಗವ
ನಿಷ್ಟೆಯಾರಿ ಬಿಗಿದು - ಕೊರಳಿಗಲ್ಲಿ
ಕಷ್ಟಪಡುವುದೊಂದೆ - ಮೋಕ್ಷವು ಲಭಿಸದು
ವಿಶ್ವತೋಭಿರಾಮ - ಕೇಳು ವೇಮಾ | ೮೬ |

—ಓಂ—

—ಶ್ರೀ ವೇಮನ ತತ್ವಗಳು—

ಇಂದ್ರಲೋಕವಿಂದ್ರ – ಜಾಲವೆಂದೆನ್ನಲು
ಇಂದ್ರಪದವಿಯೆನ್ನ – ಲೆಲ್ಲವೊಂದೇ
ಕಲಿಯುಗದೊಳು ನರ – ರರಿಯರು ಭ್ರಮೆಯೊಳು
ವಿಶ್ವತೋಭಿರಾಮ – ಕೇಳು ವೇಮಾ ।೮೭।

ಇಹದೊಳ್ಬೆದೆ ಪುಟ್ಟಿ – ಇಂಗಿತವರಿಯದ
ಜನರ ತಿಳಿವು ನೋಡೆ - ಸ್ಥಾವರಗಳ
ಜಂಗಮವೆಂದೊಡೆ - ತಿಳಿದವರ್ ನಗುವರು
ವಿಶ್ವತೋಭಿರಾಮ – ಕೇಳು ವೇಮಾ ।೮೮।

ಇರುವ ವಸ್ತು ನೋಡು – ಕಣ್ಣುಗಳರಳಿಸಿ
ಕಣ್ಣುಮುಚ್ಚಲೇನು - ಕಾಣಲಾರೆ
ಇರುವುದೆನ್ನಲದುವೆ – ವಿಜ್ಞಾನವೆಂದರಿ
ವಿಶ್ವತೋಭಿರಾಮ - ಕೇಳು ವೇಮಾ ।೮೯।

ಇಂದ್ರನಾದೊಡೇನು - ಚಂದ್ರ ತಾನಾದೊಡೇಂ !
ಮಾನವಿಲ್ಲದವರು - ಗೌರವಿಪರೆ ?
ಬಗುಳುತಿರುವ ನಾಯಿ- ಯೋಗಿಯನರಿವುದೇಂ ?
ವಿಶ್ವತೋಭಿರಾಮ - ಕೇಳು ವೇಮಾ ।೯೦।

ಇಂದ್ರ ಕಾಮಿಯಾಗಿ - ಹೀನತೆ ಪೊಂದಿದ
ಮಾರ ಕಾಮಿಯಾಗಿ - ಮಡಿದು ಪೋದ
ಬ್ರಹ್ಮ ಕಾಮಿಯಾಗಿ - ತಲೆಗಡಿಸಿಕೊಂಡನು
ವಿಶ್ವತೋಭಿರಾಮ - ಕೇಳು ವೇಮಾ ।೯೧।

—ಓಂ—

—ಶ್ರೀ ವೇಮನ ತತ್ವಗಳು—

ಇಂದ್ರನಾದೊಡೈದೆ - ಚಂದ್ರ ತಾನಾದೊಡುಂ
ನಂದಿದುರ್ಗವೇರಿ – ನಾರಿಯೊಡನೆ
ಪೊಂದಿ ಕೆಡದೆ ಮುಕ್ತಿ - ಪೊಂದಲು ಬೇಕಯ್ಯ
ವಿಶ್ವತೋಭಿರಾಮ – ಕೇಳು ವೇಮಾ | ೯೨ |

ಇಹವನುಳಿಯೆ ಫಲವು - ಹೆಚ್ಚುವುದೆನ್ನುತ್ತೆ
ಮಹಿಯೊಳ್ಪೇಳುವವರ – ಮತವು ಸುಳ್ಳು
ಇಹಮೊಳೈದೆ ಪರವು - ಸೇರಿಹುದರಿಯರೈ
ವಿಶ್ವತೋಭಿರಾಮ – ಕೇಳು ವೇಮಾ | ೯೩ |

ಇಲಿಯು ತೊಗಲು ತಂದು - ವರ್ಷಾಂತ ಒಗೆದರುಂ
ಕಪ್ಪು ಕಪ್ಪೆ ಹೊರಿತು - ಬಿಳುಪು ಬರದು
ಮರದ ಬೊಂಬೆ ತಂದು - ಬಡಿದರುಂ ನುಡಿವುದೇಂ?
ವಿಶ್ವತೋಭಿರಾಮ – ಕೇಳು ವೇಮಾ | ೯೪ |

ಕಂ॥ ಇಂದ್ರಿಯ ಪರವಶ ನಧಮಂ ।
ಇಂದ್ರಿಯ ಪರವಶನು ಭಕ್ತಿಯೊಳ್ಮಧ್ಯಮತಾ ॥
ಸಿಂದ್ರಿಯ ಜಯನುತ್ತಮನು ಜಿ ।
ತೇಂದ್ರಿಯ ಸಮ್ಮತನು ತಿಳಿಯಲಭವನು ವೇಮಾ॥ | ೯೫ |

ಇದು ರಾಜಮಾರ್ಗ ಭಾವಂ ।
ಸುಧೆಯಾಗುತೆ ಜಗದೊಳೆಲ್ಲ ಸೂಕ್ಷ್ಮಾಕೃತಿಯಿಂ ॥
ಸದಮಲ ಮತಿಯಾಗಿರ್ಪುದು ।
ಮುದುವೇ ಪರಮೆನಿಪ ಬಯಲೆನಿಪ್ಪುದು ವೇಮಾ | ೯೬ |

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಇರ್ಪನಿರ್ಪ ಜ್ಞಾನಿ - ಯುಗಗಳು ಕಳೆದರುಂ
ಪ್ರಾಣಹಾನಿಯಿಲ್ಲ - ಪ್ರಳಯದಲ್ಲುಂ
ಪ್ರಾಣಹಾನಿಯಾಗೆ - ಪರಮಾತ್ಮನಂ ಸೇರ್ವ
ವಿಶ್ವತೋಭಿರಾಮ – ಕೇಳು ವೇಮಾ । ೯೭ ।

ಇಲ್ಲವಿಲ್ಲವೆನಲು – ಇಲ್ಲವೇ ಇಲ್ಲವು
ಅಲ್ಲವಲ್ಲವೆನಲು – ಅಲ್ಲವಲ್ಲ
ಎಲ್ಲಿ ಇರ್ಪನೆನಲು – ಎಲ್ಲೆಲ್ಲಿ ಇರ್ಪನು
ವಿಶ್ವತೋಭಿರಾಮ - ಕೇಳು ವೇಮಾ । ೯೮ ।

ಕಂ॥ ಇಡುವವರೆಡೆಗೆಯೆ ಪೋಪುದು ।
ಕೊಡಲೊಡನೆಯೆ ಕೊಸರದವರು ಕೊಡಲಾರೆನೆನಲ್ ॥
ಗಡುಸಾಗಿ ಕೇಳದಿರ್ಪುದು ।
ಗಡ ? ಬೇಡುವರಿಂಗು ನೀತಿಯೆನಿಪುದು ವೇಮಾ । ೯೯ ।

ಗೀ॥ ಇದ್ದು ಈಯದಿರ್ಪ - ಕರ್ಮ ಜೀವರಿಗೆಲ್ಲ
ತಿರುಪೆ ಸಿಗದು ಮುಂದೆ – ದೀನನಪ್ಪಂ
ತೀದು ನೋಡಿಕೊಳ್ಳಿ – ದೃಷ್ಟಾಂತವಿದು ನಿಮಗೆ
ವಿಶ್ವತೋಭಿರಾಮ - ಕೇಳು ವೇಮಾ ।೧೦೦।

ಕಂ॥ ಇಡಬೇಕು ದೀನಜನರಿಗೆ ।
ಬಿಡಬೇಕೈ ದುರ್ಮತಗಳ ಖಂಡಿಸುತನಿಶಂ ॥
ಪಿಡಿವುದು ಪರಮಪದವನುಂ ।
ನಡೆವುದು ತಾನೀತೆರದೊಳು ಧರ್ಮವು ವೇಮಾ ॥ ।೧೦೧।

—ಓಂ—

—ಶ್ರೀ ವೇಮನ ತತ್ವಗಳು—

ಈ

೧॥ ಈ ಷಣತ್ರಯಂಗಳಂ – ಗೆಲಲಾರದೆ
ಮೋಹರಾಶಿಯಲ್ಲಿ ಮುಳುಗುತಿರ್ಪ
ನರರಿಗೆಂತು ಮೋಕ್ಷ – ಸೌಖ್ಯವು ಲಭಿಪುದು
ವಿಶ್ವತೋಭಿರಾಮ – ಕೇಳು ವೇಮಾ ।೧೦೨।

ಈಜಿಗಿಂತ ಲಾಳ – ವೆಲ್ಲಿಯುಮಿಲ್ಲವು
ಸಾವಿಗಿಂತ ಕೇಡು – ಜಗದೊಳಿಲ್ಲ
ಯಾವುದಿಲ್ಲವಲ್ಪ - ಲಂಗೋಟಿಗಿಂತಲು
ವಿಶ್ವತೋಭಿರಾಮ - ಕೇಳು ವೇಮಾ ।೧೦೩।

ಈಜು ಬಲ್ಲವನಿಗೆ – ಆಳದ ಭಯಮಿಲ್ಲ
ಅಮಿತ ದೋಷಿಗಿತರ - ಭಯಗಳಿಲ್ಲ
ಕೋತಿ ಕೊಂಬೆಯಿಂದ – ಕುಪ್ಪಳಿಸಲಾರದೇ ?
ವಿಶ್ವತೋಭಿರಾಮ - ಕೇಳು ವೇಮಾ ।೧೦೪।

ಈಡಿಗನ ಮನೆಯಲ್ಲಿ - ಹಾಲನ್ನು ಕುಡಿದೊಡೆ
ನೋಡಿ ಜನರು ಮದ್ಯ - ವೆಂದು ನುಡಿವರ್
ಜೋಡಿಲ್ಲದಿಹ ಸ್ಥಳದಿ – ಸಿಲೆ ನಿಂದೆ ತಪ್ಪದೈ
ವಿಶ್ವತೋಭಿರಾಮ - ಕೇಳು ವೇಮಾ ।೧೦೫।

—ಓಂ—

—ಶ್ರೀ ವೇಮನ ತತ್ವಗಳು —

ಕಂ॥ ಈ ಲೋಕ ಚಿಹ್ನೆಯೆಲ್ಲವು।
ಮೇಲಹ ಗುರುಶಕ್ತಿಯಿಂದೆ ಬೆಳೆದಿರ್ಪಾಗಳ್ ॥
ಕಾಲನು ಸಂಧಿಸಲಾರನು।
ಪೇಳುವುದೀ ಜನ್ಮ ಸಾಕೆನುತ ವರ ವೇಮಾ |೧೦೬|

ಗೀ॥ ಈಶನಲ್ಲಿ ಭಕ್ತಿ ಈಷದಪಿ ಇಲ್ಲದೆ
ಪಾಶದಲ್ಲಿ ಸಿಕ್ಕಿ – ಫಲವರಿಯದೆ
ಕಾಶಿಯಾತ್ರೆ ಪೋಗೆ – ಕಾಲನು ಅರಿಯನೇಂ ?
ವಿಶ್ವತೋಭಿರಾಮ - ಕೇಳು ವೇಮಾ |೧೦೭|

ಉ

ಗೀ॥ ಉಪ್ಪು ಹುಳಿಯ ಹಣ್ಣು – ಊರೊಳಗಿರಲಾಗಿ
ಬರವು ಬಂದಿತೆಂದು – ಅಳುವಿರೇಕೆ !
ತಾಳಕವುಂಟೈದೆ - ತವರವು ಮತ್ತುಂಟು
ವಿಶ್ವತೋಭಿ ರಾಮ ಕೇಳು ವೇಮಾ ॥ |೧೦೮|

ಉಕ್ಕು ಕತ್ತಿ – ಕೈಯ್ಯೊ - ಳಿರ್ದವನೇತಕ್ಕೆ
ಬೆಕ್ಕು ನಾಯಿ ನರಿಗೆ – ಬೆದರುತಿಹನು
ದೃಕ್ಕು ದೃಶ್ಯಗಳನು – ವಿಚಾರಿಸಿ ತಿಳಿವುದು
ಅಕ್ಕರಿಂದ ಮನದೊ–ಳದನು ವೇಮಾ |೧೦೯|

—ಓಂ—

—ಶ್ರೀ ವೇಮನ ತತ್ವಗಳು—

ಉದ್ದವಾಗಿ ಬೆಳೆದು - ಗಡ್ಡ ಉದ್ದಮದಾಗೆ
ದಾನ ಗುಣವಿಲ್ಲದೇ – ದಾತೃವೆಂತು
ಎಷ್ಟು ದೊಡ್ಡದಾದ-ರದು ಆನೆಯಾಗ್ವುದೇ ?
ವಿಶ್ವತೋಃಭಿರಾಮ - ಕೇಳು ವೇಮಾ ।೧೧೦।

ಉಪವಾಸಗಳ ಮಾಡಿ - ನೀರೊಳು ಮುಳುಗುತೆ
ಅನ್ನ ಮಾಡಿ ಬಡಿಸಿ - ತಿನ್ನು ಎಂದು
ಆದರ ಬಾಯಿ ಬಡಿದು - ತಾವೆ ತಿನ್ನುವರಲ್ಲ
ವಿಶ್ವತೋಃಭಿರಾಮ – ಕೇಳು ವೇಮಾ ।೧೧೧।

ಉಚಿತವಂತನಾದೊ - ಡುದ್ಯೋಗಿಯಾದೊಡುಂ
ಧನವು ಕನ್ನೊಳಿರುವ - ಸಮಯದಲ್ಲಿ
ಪರರಿಗುಪಕೃತಿಯನ್ನು - ಮಾಡಲು ಸಾಧ್ಯವೈ
ವಿಶ್ವತೋಃಭಿರಾಮ – ಕೇಳು ವೇಮಾ ।೧೧೨।

ಉಪ್ಪು ಕಪ್ಪುರವುದು – ಒಂದೆ ತೆರನಿರ್ದೊಡುಂ
ನೋಡೆ ನೋಷೆ - ರುಚಿಗಳ್ಬೇರೆ ಬೇರೆ
ಪುರುಷರಲ್ಲಿ ಪುಣ್ಯ – ಪುರುಷರು ಬೇರಯ್ಯ
ವಿಶ್ವತೋಃಭಿರಾಮ - ಕೇಳು ವೇಮಾ ।೧೧೩।

ಉಣ್ಣಲುಡಲುವಿಲ್ಲ – ಮುನ್ನ ಕೊಡಲೊಂದಿಲ್ಲ
ಇನ್ನು ಬಿಡಲು ಸಲ್ಲ – ಎನ್ನ ನಲ್ಲ
ಮನ್ನಿಸುವರು ವಿಲ್ಲ - ಹೆಣದಂತೆ ಕಾಂಬರು
ವಿಶ್ವತೋಃಭಿರಾಮ – ಕೇಳು ವೇಮಾ ।೧೧೪।

—ಓಂ—

—ಶ್ರೀ ವೇಮನ ತತ್ವಗಳು—

ಉತ್ಪತ್ತಿ ಶೂದ್ರನು – ಉತ್ತಮೋತ್ತಮನೆಂತು
ಸ್ತ್ರೀಯು ಶೂದ್ರಳನಿಶ – ಷುವನಿಯಲ್ಲಿ
ತಾಯಿ ಶೂದ್ರಳಾಗಿ – ತಾನೆಂತು ಬ್ರಾಹ್ಮಣ
ವಿಶ್ವತೋಭಿರಾಮ - ಕೇಳು ವೇಮಾ |೧೧೫|

ಕಂ|| ಉದಯಾದ್ರಿ ಮೇಲೆ ಬೆಳಗುವ |
ಸದಮನ ಮನದಲ್ಲಿ ನಿಲಿಸಲಾದೊಡಮಾಗಳ್ ||
ಕುದುರಿದ ಮಾನಸ ಪಕ್ವದೊ |
ಳದುವೇ ಪರಿಪೂರ್ಣ ಸೌಖ್ಯಮರಿವುದು ವೇಮಾ |೧೧೬|

ಗೀ|| ಉದರದೊಳ್ - ದುರ್ಮಲವು - ಮೈಯೆಲ್ಲ ಎಲುಬುಗಳ್
ಬೆದಕಿದೊಡೆ - ಮೇಲೆಲ್ಲ - ಕೊಳಕು ಚರ್ಮ
ಇಂಥ ದೇಹ ಸುಖಮಿ - ದೇನು ಸಂಸಾರವೋ
ವಿಶ್ವತೋಭಿರಾಮ - ಕೇಳು ವೇಮಾ |೧೧೭|

ಕಂ|| ಉಚಿತಾಹಾರಗಳಿಂದಂ |
ಉಚಿತ ಸುಬುದ್ಧಿಯು ಸಮತ್ವವೊಂದುವ ತೆರದಿಂ ||
ಉಚಿತ ಗುರು ಬೋಧೆಯಿಂದಂ |
ಸುಚರಿತನಾಗುತ್ತೆ ಪರವ ಸೇರುವ ವೇಮಾ |೧೧೮|

ಉಪಕಾರಕ್ಕಪಕಾರವ |
ನೆಪಮೇನಿರ್ದರೆಯು ಮಾಡಲಾಗದು ಸುಜನರ್ ||
ಅಪಕಾರಕ್ಕನಿಶಂ ತಾ |
ನುಪಕಾರವ ಮಾಡಲಪ್ಪುದೈವರ ವೇಮಾ |೧೧೯|

—ಓಂ—

—ಶ್ರೀ ವೇಮನ ತತ್ವಗಳು—

ಗಿ॥ ಉಟ್ಟಬಟ್ಟೆ ನೋಡಿ - ಘನನೆಂದೆನಲುಸಲ್ಲ
ಕಾಣಲಹುದೆ ಒಳಗಿರುವ - ಘನತೆಯು
ಜಂಗಮನಾದೊಡೇಂ - ಜಾತಿಗುರುತರಿವುದೇ?
ವಿಶ್ವತೋಭಿರಾಮ - ಕೇಳು ವೇಮಾ |೧೨೦|

ಉದಧಿ ಲಂಘಿಸಿ - ದಾಂಟಿದ - ಭಕ್ತವರನು
ಮನದಿ ರಾಮಾಜ್ಞೆ - ಮೀರದೆ - ಮಾಯೆ ಗೆಲ್ದು
ಹೃದಯ ಕಮಲದಿ ರಾಮನ - ಶರೆಯುವಿಡಿದ
ವಿಮಲ ಗುಣ ರಾಜ ಯೋಗೀಂದ್ರ ವೇಮ ಚಂದ್ರಾ |೧೨೧|

ಉಸಿರು ಇರುವ ವೇಳೆ - ಉಪದೇಶ ಪಡೆವುದು
ಹಸುವುನಶಿಸಲದುವೆ - ರೂಢಿಯಲ್ಲ
ವಿಪ್ರನಾದೊಡೇನು - ಬಡಬಾಗ್ನಿ ನುಂಗುವನೆ ?
ವಿಶ್ವತೋಭಿರಾಮ - ಕೇಳು ವೇಮಾ |೧೨೨|

ಉಜ್ಜಿ ಉಜ್ಜಿ ಮರದೊ - ಳನಲವು ಜನಿಪುದು
ಮಥಿಸೆ ಮಥಿಸೆ ದಧಿಯೊಳ್ - ಘೃತ ಜನಿಪುದು
ನೆನೆಯೆ ನೆನೆಯೆ ತನುವಿನೊ - ಳ್ತತ್ವ ಜನಿಪುದು
ವಿಶ್ವತೋಭಿರಾಮ - ಕೇಳು ವೇಮಾ |೧೨೩|

ಊ

ಊರಹಂದಿ ಅರಿಯ - ದುತ್ತರ ಪೂರ್ವವ
ಕೆಟ್ಟ ನರಕವನ್ನು - ಕೆದರುತಿಹುದು
ಪತ್ನಿ ಧರ್ಮ ಮಹಿಮೆ - ಕಾಕತಾನರಿವನೇ?
ವಿಶ್ವತೋಭಿರಾಮ - ಕೇಳು ವೇಮಾ |೧೨೪|

—ಓಂ—

—ಶ್ರೀ ವೇಮನ ತತ್ವಗಳು –

ಊರೊಳಗಿಹ ಭಾವಿ - ಯುದಕವಂ ನಿಂದಿಸಿ
ಕಾಶಿ ತೀರ್ಥವೆಂದು - ಭ್ರಮಿಸುತಿಹರು
ಕಾಶಿ ತೀರ್ಥದಿಂದ - ಫಲವೇನೊ ಕಾಣೆನೈ
ವಿಶ್ವತೋಭಿರಾಮ - ಕೇಳು ವೇಮಾ |೧೨೫|

ಕಂ|| ಊರನು ಕೇರಿಯ ನುಳಿಯುತೆ |
ಆರಯಲಡವಿಯೊಳು ತಿರುಗುತನುವಿಂದನಿಶಂ ||
ಬೇರುಂ ನಾರುಂ ಮೆಲ್ವವಿ
ಕಾರಿಗೆ ತಾನೆಂತು ಮೋಕ್ಷ ದೊರೆಗುಂ ವೇಮಾ |೧೨೬|

೨೮

ಗೀ|| ಋಗ್ಯಜುಸ್ಸನರಿತು – ಯೋಗ್ಯತೆ ಇಲ್ಲದೆ
ವಿಪ್ರನಾದೊಡೆಂತು - ವಿಹಿತನಪ್ಪಂ
ಭರ್ತನಿರ್ದು್ ಅನ್ಯರಂ - ನೋಳ್ಪ ಸತಿಯಂತೆ
ವಿಶ್ವತೋಭಿರಾಮ – ಕೇಳು ವೇಮಾ |೧೨೭|

ಋಷಿಗಳರಿಯದಿರ್ಪ - ವಿಷಯವೊಂದಿಲ್ಲವು
ಅವರು ಹೇಳಿದಂತೆ – ಕ್ರಮದೊಳಹುದು
ತಿಳಿಯದೆ ವರ್ತಿಸು–ವವರೆ ಅಜ್ಞಾನಿಗಳ್
ವಿಶ್ವತೋಭಿರಾಮ – ಕೇಳು ವೇಮಾ |೧೨೮|

—ಶ್ರೀ ವೇಮನ ತತ್ವಗಳು—

ಋಷಿಗಳೆಲ್ಲ ಹೀನ-ರಂತೆ ಕಾಣಿಸುವರು
ಅವರ ಬೋಧೆ–ಮೇರು ಗಿರಿ ಸಮಾನಂ
ಒಳಗಡಗಿರ್ಪುದು - ಜ್ಞಾನ ಪ್ರಭಾವವು
ವಿಶ್ವತೋಭಿರಾಮ - ಕೇಳು ವೇಮಾ |೧೨೯|

ಋಷಿ ಕುಲದೊಳು ತಾವು – ರೂಢಿಯೊಳ್ ಜನ್ಮಿಸಿ
ಕುಲವ ಗೋತ್ರವನ್ನು - ಗೋಪ್ಯಮಾಡಿ
ಬ್ರಹ್ಮಕುಲವಲ್ಲದೆ - ಬ್ರಾಂಹಣರವರೆಂತು
ವಿಶ್ವತೋಭಿರಾಮ - ಕೇಳು ವೇಮಾ |೧೩೦|

ಎ

ಗೀ|| ಎಲೆಯು ಮರೆಯೊಳಗಿರ್ಪ - ವಖಿಲ ಲೋಕಂಗಳುಂ
ಶಾಖೆ ಕಾಣದಾ – ವಿಧಾತಗರಿದು
ಶಾಖೆ ಕಾಣಿಸಿದೊಡೆ – ಪೊಗಳಲು ಬಪ್ಪುದು
ವಿಶ್ವತೋಭಿರಾಮ – ಕೇಳು ವೇಮಾ |೧೩೧|

ಎಲ್ಲ ಜಾತಿಗಿಂತ - ಹೆಚ್ಚು ನಾವೆನ್ನುತ್ತೆ
ಯಜ್ಞ ಪಶುವ ಕೊಂದು - ಅಗ್ನಿಗಿಡುತೆ
ಬೇಯಿಸುತ್ತೆ ತಿಂದು - ತೇಗುವರಿಳೆಯೊಳು
ವಿಶ್ವತೋಭಿರಾಮ – ಕೇಳು ವೇಮಾ |೧೩೨|

—ಓಂ—

—ಶ್ರೀ ವೇಮನ ತತ್ವಗಳು—

ಎಷ್ಟು ಊರು ತಿರುಗು - ತೇ ಪಾಟು ಬಿದ್ದರುಂ
ದಕ್ಕಗೊಡದೆ ಶನಿಯು – ಕಾಟವಿಡುವ
ಭೂಮಿ ಪೊಸತಾದರೇಂ – ಗ್ರಹಚಾರ ಬಿಡುವುದೇ ?
ವಿಶ್ವತೋಭಿರಾಮ - ಕೇಳು ವೇಮಾ ।೧೩೩।

ಎಲೆಯು, ಅಡಕೆ, ಸುಣ್ಣ - ಮಿವು ಮೂರು ಬಣ್ಣಗ
ಳೇಕವಾಗಿ ಕೆಂಪು – ಬಣ್ಣಮಹುದು
ತ್ರಿಗುಣಮಿಂತು ಬೆರೆದು - ಪರಮಾತ್ಮ ಶೋಭಿಪಂ
ವಿಶ್ವತೋಭಿರಾಮ - ಕೇಳು ವೇಮಾ ।೧೩೪।

ಎಲೆಯ ಮೇಲಣ ಬರೆಹ - ವೆಲ್ಲರಿಗು ತಿಳಿಯುವುದು
ಕೈಯ್ಯ ಮೇಲಿನ ಬರೆಹ - ಪೇಳಬಹುದು
ತೊಗಲೊಳಡಗಿಹ ಬರೆಹ – ದೊಡ್ಡವರರಿವರೈ
ವಿಶ್ವತೋಭಿರಾಮ - ಕೇಳು ವೇಮಾ ।೧೩೫।

ಎತ್ತಿಗಿಂತ ಬುದ್ಧಿ – ಕಡಮೆ ತಾಂ ಕೋಣಕ್ಕೆ
ವಿವರವರಿತು ನೋಡು – ವೃತ್ತಿಯಿಂದೆ
ತಿದ್ದುಪಾಟಿಲ್ಲದೇ - ಯೋಧನೆಂತಾಗುವಂ
ವಿಶ್ವತೋಭಿರಾಮ - ಕೇಳು ವೇಮಾ ।೧೩೬।

ಎಷ್ಟು ತಪಮಾಡಿ ತಾಂ - ನೋಂಪಿಯ ಮಾಡ್ದರುಂ
ಎಷ್ಟು ಕಷ್ಟಪಟ್ಟ – ರೇನು ಫಲವು
ಕರ್ಮ ಬಲವಿಲ್ಲದೇ - ಮುಕ್ತಿಯು ದೊರೆಯದು
ವಿಶ್ವತೋಭಿರಾಮ - ಕೇಳು ವೇಮಾ ।೧೩೭।

—ಶ್ರೀ ವೇಮನ ತತ್ವಗಳು—

ಎತ್ತನಾದರೊಂದು - ವರ್ಷ ಶಿಕ್ಷಿಸಲಾಗಿ
ಮಾತು ತಿಳಿದು ಮರ್ಮ - ವಾಗಿ ನಡೆಗುಂ
ಮಂಕ ತಿಳಿಯಲಾರ - ಜೀವಿತ ಪರ್ಯಂತ
ವಿಶ್ವತೋಭಿ ರಾಮ ಕೇಳು ವೇಮಾ ॥ |೧೩೮|

ಕಂ॥ ಎಲ್ಲಿಯ ಸತಿ ಎಲ್ಲಿಯ ಸುತ ।
ರೆಲ್ಲಿಯ ಬಾಂಧವರು ತನಗದೆಲ್ಲಿಯ ಸಖ್ಯರ್ ॥
ತಲ್ಲಣಿಸುತಿಹಲು ಕಷ್ಟದೊ ।
ಳಲ್ಲಿಗೆ ಯಾರಾರು ಬರರು ಧರೆಯೊಳ್ ವೇಮಾ |೧೩೯|

ಗೀ॥ ಎಂಥ ಯೋಗಿಗಾದರುಂ – ಮನ್ಮಥಾವಸ್ಥೆ
ಯದುವೆ ತಿಳಿವುದಲ್ತೆ ? ನೋಡಿದೊಡನೆ
ಯೋಗವೆಲ್ಲ ಪೋಗಿ – ಭೋಗಿಯಾಗುವನಯ್ಯ
ವಿಶ್ವತೋಭಿರಾಮ - ಕೇಳು ವೇಮಾ |೧೪೦|

ಎಣ್ಣೆಯ ಸ್ನಾನದಿ – ಚರ್ಮ ತಾಂ ಹೊಳೆವುದು
ಸಾಧಕದೊಳು ಮೈಗೆ . ಶಕ್ತಿ ಬಹುದು
ಜ್ಞಾನಮಾರ್ಗದಿಂದೆ – ಜನ್ಮ ಸಾರ್ಥಕಮಕ್ಕುಂ
ವಿಶ್ವತೋಭಿರಾಮ - ಕೇಳು ವೇಮಾ |೧೪೧|

ಎಷ್ಟು ತೊಳೆಯೆ ಬಾಯಿ - ಎಂಜಲು ಪೋಪುದೇಂ
ಸರ್ವ ಕಾಲದಲ್ಲಿ – ಎಂಜಲಿಹುದು
ಅನುದಿನದೊಳು ನೋಡ - ಲನೃತವಾಡುವ ಬಾಯಿ
ಬಾಯಿಯಲ್ಲ ಬಿಲದ - ಬಾಯಿ ವೇಮಾ |೧೪೨|

—ಓಂ—

—ಶ್ರೀ ವೇಮನ ತತ್ವಗಳು—

ಎಂಜಲೆಂಜಲೆನ್ನು - ತೀ ಬಾಯಿಯಿಂದಲೇ
ವೇದವನ್ನು ನುಡಿವ - ಹುಚ್ಚುಜನರೆ
ಎಣಿಸಿನೋಡಲಿದುವೆ - ತಾನೆಂಜಲಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ ।೧೪೩।

ಎಂಟಕ್ಷರಂಗಳ - ಮಂತ್ರಮಂ ಜಪಿಸಲು
ಕಂಟಕಂಗಳು - ಪರಿಹಾರವಾಗಿ
ಅಂಟಿ ಅಂಟದಂತೆ - ತತ್ವಾತ್ಮನಾಗುವ
ವಿಶ್ವತೋಭಿರಾಮ - ಕೇಳು ವೇಮಾ ।೧೪೪।

ಎಷ್ಟು ದಿನಗಳು ಬದುಕಿದ - ರೇನು ಫಲವು
ಚಿಕ್ಕದೊಡ್ಡವರೆಲ್ಲರ - ಪೆಸರೆ ಹೋಯ್ತು
ಅಣ್ಣತಮ್ಮದಿರಾಪ್ತರು - ಮಳಿದರಲ್ತೆ ?
ವಿಶ್ವತೋಭಿರಾಮ - ಕೇಳು ವೇಮಾ ।೧೪೫।

ಎಷ್ಟು ಬರವು ಬಂದ - ರೆಂಜಲನ್ನವ ತಂದು
ಪರರಿಗಿಡುವ ಧರ್ಮ - ಪರನ ನೋಡೆ
ಭೂಮಿಯಲ್ಲಿ ಎಂಜ - ಲೆಲೆಗಳ ನೆಕ್ಕುವ
ಸ್ವಾನನಾಗಿ ಜನಿಪ - ನೈಯ್ಯ ವೇಮಾ । ।೧೪೬।

ಎಣ್ಣೆಯಿರುವ ದೀಪ - ಮೇಲಾಗಿ ಉರಿವುದು
ಎಣ್ಣೆಯಿಲ್ಲದಿರ್ದ - ದೀಪವಳಿಗುಂ
ತನುವು ಬಿದ್ದ ಕ್ಷಣದಿ - ನೆನಹುಗಳ್ಪೋಪುವು
ವಿಶ್ವತೋಭಿರಾಮ - ಕೇಳು ವೇಮಾ ।೧೪೭।

—ಓಂ—

—ಶ್ರೀ ವೇಮನ ತತ್ವಗಳು—

ಎಷ್ಟು ಓದ ಓದಿ - ನೀತಿಯೆನಿತರಿತರುಂ
ಹೀನನವಗುಣಗಳ – ಮಾಣನೆಂದುಂ
ಹಾಲೊಳಿದ್ದಲರೆಯ – ಕಪ್ಪು ತಾಂ ಪೋಪುದೇ
ವಿಶ್ವತೋಭಿರಾಮ – ಕೇಳು ವೇಮಾ |೧೪೬|

ಏ

ಗೀ|| ಏನು ತಂದ ಮತ್ತೆ – ತಾನೇನು ಕೊಂಡೊಯ್ದ
ಹುಟ್ಟುವಾಗ ಸತ್ತು - ಹೋಗುವಾಗ
ಧನವು ಪೋಪುದೆಲ್ಲಿ – ತಾಂ ಪೋಗುವನಲ್ಲಿ
ವಿಶ್ವತೋಭಿರಾಮ – ಕೇಳು ವೇಮಾ |೧೪೯|

ಕಂ|| ಏಕಬ್ರಹ್ಮಸೆನಲ್ಕಾ |
ವೈಕಲ್ಪಿತವಾದ ಜಗದ ಮನುಜರ್ಗೆಲ್ಲ ||
ಸಾಕಾರ ತ್ವಗಳಡಗಲ್ |
ಶೋಕ ವಿಮೋಹಂಗಳಡಗಿ ಶುಭಮದು ವೇಮಾ |೧೫೦

ಐ

ಗೀ|| ಐದು ಬೆರಳಿನಿಂದ - ಹಸ್ತಕ್ಕೆ ಬಲುಮೆಯು
ಆದರೊಳೊಂದು ಪೋಗೆ – ಹದಗೆಡುವುದು
ಸ್ನೇಯನೋರ್ವ ಬಿಡಲು - ಕೆಲಸವೇ ಕೆಡುವುದು
ವಿಶ್ವತೋಭಿರಾಮ - ಕೇಳು ವೇಮಾ, |೧೫೧

—೩೨—

—ಓಂ—

—ಶ್ರೀ ವೇಮನ ತತ್ವಗಳು—

ಐದಕ್ಷರಂಗಳ – ಅಂಗಮಂ ತಿಳಿದೊಡೆ
ಐವರಲ್ಲಿಯೆ ಮುಕ್ತಿ - ಯಡಗಿರುವುದು
ಐದರಲ್ಲಿರುವ - ಮಹಾತ್ಮನ ತಿಳಿವುದು
ವಿಶ್ವತೋಭಿರಾಮ - ಕೇಳು ವೇಮಾ |೧೫೩|

ಒ

ಗೀ|| ಒಳಗೆ ನೋಡೆ ನೋಡೆ – ಲೋಕಾಭಿರಾಮವು
ಹೊರಗೆ ನೋಡೆ ನೋಡೆ – ಬಂಧನವುದು
ತನ್ನ ನೋಡೆ ನೋಡೆ - ತಾರಕ ಬ್ರಹ್ಮವು
ವಿಶ್ವತೋಭಿರಾಮ - ಕೇಳು ವೇಮಾ |೧೫೪|

ಒಂದು ತುತ್ತು ಅನ್ನ - ವೀಶ್ವರಾರ್ಪಣಮೆನೆ
ಪುಣ್ಯಲೋಕವನ್ನು - ಸೇರ್ವನವನು
ಧರೆಯೊಳನ್ನದಾನ – ಕ್ಕಿಂತಧಿಕವಾವುದೈ
ವಿಶ್ವತೋಭಿರಾಮ - ಕೇಳು ವೇಮಾ |೧೫೫|

ಕಂ|| ಒಣಮರ ವೊಂದ್ರಡವಿಯೊಳಿರೆ |
ಘನ ಶಿಖಿಯಾವರಿಸಿ ವೃಕ್ಷ ಮರಗಳ ಸುಡುಗುಂ ||
ಮಿನುಗುವ ವಂಶದೊಳೋರ್ವಂ |
ಜನಿಸಲ್ ಚಂಡಾಲ ಕುಲವ ಕೆಡಿಸನು ವೇಮಾ |೧೫೬|

—ಓಂ—

—ಶ್ರೀ ವೇಮನ ತತ್ವಗಳು —

ಗೀ॥ ಒಬ್ಬನನ್ನು ಕೆಡಿಸ - ಲೆಣಿಸರು ಮನದೊಳು
ತಮ್ಮ ಕೇಡನರಿಯ - ರವನಿ ಜನರು
ಒಮ್ಮೆ ಕೆಡಿಸುವಾತ - ದೈವತಾನಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ |೧೫೭|

ಕಂ॥ ಒಡ್ಡರವಳು ಒಲಪರಿವಳೆ ; ।
ಮಡ್ಡಿಯು ತಾಂ ಜಾಣನಾಗಬಲ್ಲನೆ ಧರೆಯೋಳ್ ॥
ಆಡ್ಡಾದಿಡ್ಡಿಯು ತಿರುಗುವ ॥
ಕಡ್ಡಿಯು ತಿಳಿಯುವುದೆ ಹಾಲರುಚಿಯನು ವೇಮಾ |೧೫೮|

ಗೀ॥ ಒಡವೆ ವಸ್ತು ದ್ರವ್ಯ - ಮೊದಲಾದ ಸಂಪದ
ಪಡೆದು ಮೆರೆವ ನರನು - ಜಗದೊಳ್ಳೆದೆ
ಹೀನಕುಲಜನಾದೊ - ಡೆಂಥವನಾದೊಡುಂ
ಬನ್ನಿ ಬನ್ನಿ ಬನ್ನಿ - ರೆಂಬರ್ ವೇಮಾ |೧೫೯|

ಒಳ್ಳೆ ಶಕುನಗಳನು - ನೋಡಿ ಲಗ್ನವ ಮಾಡ
ಲವರು ಸ್ಥಿರದೊಳಿಹರೆ – ತಿಳಿದು ನೋಡೆ
ಜನರ ಕರ್ಮಗಳಿಗೆ – ಶಕುನಗಳ್ ನಿಲುವ್ರವೇ ?
ವಿಶ್ವತೋಭಿರಾಮ – ಕೇಳು ವೇಮಾ |೧೬೦|

ವೃ॥ ಒಬ್ಬನು ರೋಗಿಯಾದ ಮತ್ತೊಬ್ಬನು ದಿಕ್ಕಿ
ನೊಳಾತ್ಯಗಿಯಾದ ಬೇ ।
ರೊಬ್ಬನು ಭೋಗಿಯಾದ ಪಿರಿದೊಬ್ಬನು ಉತ್ತಮ
ಯೋಗಿಯಾದ ತಾ ।

—ಓಂ—

—ಶ್ರೀ ವೇಮನ ತತ್ವಗಳು—

ನೊಬ್ಬನು ರಾಗಿಯಾದ ನಿನ್ನ ಪೋಲ್ವ ಮಹಾತ್ಮನ
ಕಾಣೆವೆಲ್ಲಿಯುಂ ।
ನಿರ್ಭಯವೆಲ್ಲ ರೂಪುಗಳು ನಿನಗೆ ಸಲ್ವುವು
ವೇಮ ಯೋಗಿಯೇ ।೧೬೧।

ಗೀ ಒಳ್ಳೆ ಗಂಧದಿಂದ - ಮನವು ಹರ್ಷಿಸುವುದು
ಎಂಥ ವಾಸನೆ ಎಂದು – ಪೊಗಳುತಿಹರು
ತಮ್ಮ ಪೂರ್ವ ವಾಸ - ನೆಯನು ತಾವರಿಯರು
ವಿಶ್ವತೋಭಿರಾಮ - ಕೇಳು ವೇಮಾ ।೧೬೨।

ಒಳ್ಳೆ ನೀರು ಹಾಕೆ - ಮೊಲ್ಲೆಹೂ ಬಿಡುವುದು
ನೀರು ಹಾಕದಿರಲು - ಹೂ ಬಿಡುವುದೆ ?
ಅಡಿಗೆ ಮಾಡದೆಂತು - ಅನ್ನವು ದೊರೆವುದು
ವಿಶ್ವತೋಭಿರಾಮ - ಕೇಳು ವೇಮಾ ।೧೬೩।

ಒಳ್ಳೆ ರುಚಿಯು ಮತ್ತೆ - ಒಳ್ಳೊಳ್ಳೆ ಸ್ತ್ರೀಯರ
ಕೋರುತಿರ್ಪುದೆಂಥ - ಮನವೊ ತಿಳಿಯೆ
ಮನುಜನಿದನು ದೂರ – ಮಾಡನು ಯೋಚಿಸಿ
ವಿಶ್ವತೋಭಿರಾಮ - ಕೇಳು ವೇಮಾ ।೧೬೪।

ಕಂ॥ ಒಂಭತ್ತು ಕಂತೆ ಚೀಲವ ।
ನಂಬುತೆ ಸಾಂಬನನು ನಂಬಿ ನುತಿಸದೆ ಕೆಡುವೈ॥
ಬೆಂಬಿಡದೆ ಗೃಧ್ರಚಯುಗಳ್ ।
ತುಂಬುತಲಂತಿಮದಿ ಕಿತ್ತು ತಿಂಬುವು ವೇಮಾ॥ ।೧೬೫।

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಒಳ್ಳೆಯವರು ಕಡಿಮೆ - ಮಹಿಯೊಳು ಬೆದಕಲು
ಕೆಟ್ಟ ಜನಗಳೆಲ್ಲ - ಕಡೆಯೊಳಿಹರು
ಚಿನ್ನ ದೊರೆವುದೆಲ್ಲಿ - ಕಲ್ಲು ಕಬ್ಬಿಣದಂತೆ
ವಿಶ್ವತೋಭಿರಾಮ - ಕೇಳು ವೇಮಾ ।೧೬೭।

ಒಡಲೊಳ್ಬೂದಿಯಾಂತು - ಜಡೆಗಳ ಧರಿಸಲು
ಒಡೆಯನಪ್ಪ ಮುಕ್ತಿ – ಪಡೆಯಲಾರ
ತಡಿಕೆಗಿಡಲು ಬಿರಿಯ - ಬಾಗಿಲ ಪೋಲ್ವುದೇಂ
ವಿಶ್ವತೋಭಿರಾಮ - ಕೇಳು ವೇಮಾ ।೧೬೮।

ಓ

ಕಂ॥ ಓಧುಗಳೆನಿತೋದಿದೊಡುಂ ।
ಸಾಧಿಸರಾ ಪರಮಪದವನೆಂದಿಗುಮದರಿಂ ॥
ಈ ಧರೆಯ ಭೋಗಮುಳಿದಾ ।
ರಾಧಿಸೆ ಕೈವಲ್ಯ ಪದವಿ ಲಭಿಪುದು ವೇಮಾ ।೧೬೯।

ಗೀ ಓದು ಓದದಿರಲು – ಸೌಖ್ಯಮದಿಲ್ಲವು
ಓದು ಓದಲಾಗಿ - ಸುಗುಣಿಯಪ್ಪಂ
ಓದು ಮರ್ಮವರಿತು - ಓದುವುದೋದಯ್ಯ
ವಿಶ್ವತೋಭಿರಾಮ – ಕೇಳು ವೇಮಾ ।೧೭೦।

—ಓಂ—

—ಶ್ರೀ ವೇಮನ ತತ್ವಗಳು—

ಐದಕ್ಷರಂಗಳ – ಅಂಗವಮಂ ತಿಳಿದೊಡೆ
ಐವರಲ್ಲಿಯೆ ಮುಕ್ತಿ - ಯಡಗಿರುವುದು
ಐದರಲ್ಲಿರುವ - ಮಹಾತ್ಮನ ತಿಳಿವುದು
ವಿಶ್ವತೋಭಿರಾಮ - ಕೇಳು ವೇಮಾ |೧೫೩|

ಒ

ಗೀ|| ಒಳಗೆ ನೋಡೆ ನೋಡೆ – ಲೋಕಾಭಿರಾಮವು
ಹೊರಗೆ ನೋಡೆ ನೋಡೆ – ಬಂಧನಮದು
ತನ್ನ ನೋಡೆ ನೋಡೆ - ತಾರಕ ಬ್ರಹ್ಮವು
ವಿಶ್ವತೋಭಿರಾಮ - ಕೇಳು ವೇಮಾ |೧೫೪|

ಒಂದು ತುತ್ತು ಅನ್ನ - ವೀಶ್ವರಾರ್ಪಣಮೆನೆ
ಪುಣ್ಯಲೋಕವನ್ನು - ಸೇರ್ವನವನು
ಧರೆಯೊಳನ್ನದಾನ – ಕ್ಕಿಂತಧಿಕವಾವುದೈ
ವಿಶ್ವತೋಭಿರಾಮ – ಕೇಳು ವೇಮಾ |೧೫೫|

ಕಂ|| ಒಣಮರ ವೊಂದಡವಿಯೊಳಿರೆ |
ಘನ ಶಿಖಿಯಾವರಿಸಿ ವೃಕ್ಷ ಮರಗಳ ಸುಡುಗುಂ ||
ಮಿನುಗುವ ವಂಶದೊಳೋರ್ವಂ |
ಜನಿಸಲ್ ಚಂಡಾಲ ಕುಲವ ಕೆಡಿಸನು ವೇಮಾ |೧೫೬|

—ಶ್ರೀ ವೇಮನ ತತ್ವಗಳು —

ಗೀ|| ಒಬ್ಬನನ್ನು ಕೆಡಿಸ - ಲೆಣಿಸರು ಮನದೊಳು
ತಮ್ಮ ಕೇಡನರಿಯ - ರವನಿ ಜನರು
ಒಮ್ಮೆ ಕೆಡಿಸುವಾತ - ದೈವತಾನಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ |೧೫೭|

ಕಂ|| ಒಡ್ಡರವಳು ಒಲಪರಿವಳೆ ; |
ಮಡ್ಡಿಯು ತಾಂ ಜಾಣನಾಗಬಲ್ಲನೆ ಧರೆಯೋಳ್ ||
ಅಡ್ಡಾದಿಡ್ಡಿಯು ತಿರುಗುವ ||
ಕಡ್ಡಿಯು ತಿಳಿಯುವುದೆ ಹಾಲರುಚಿಯನು ವೇಮಾ |೧೫೮|

ಗೀ|| ಒಡವೆ ವಸ್ತು ದ್ರವ್ಯ - ಮೊದಲಾದ ಸಂಪದ
ಪಡೆದು ಮೆರೆವ ನರನು - ಜಗದೊಳ್ಳೈದೆ
ಹೀನಕುಲಜನಾದೊ - ಡೆಂಥವನಾದೊಡುಂ
ಬನ್ನಿ ಬನ್ನಿ ಬನ್ನಿ - ರೆಂಬರ್ ವೇಮಾ |೧೫೯|

ಒಳ್ಳೆ ಶಕುನಗಳನು - ನೋಡಿ ಲಗ್ನವ ಮಾಡ
ಲವರು ಸ್ಥಿರದೊಳಿಹರೆ – ತಿಳಿದು ನೋಡೆ
ಜನರ ಕರ್ಮಗಳಿಗೆ – ಶಕುನಗಳ್ ನಿಲುವುವೇ ?
ವಿಶ್ವತೋಭಿರಾಮ – ಕೇಳು ವೇಮಾ |೧೬೦|

ವೃ|| ಒಬ್ಬನು ರೋಗಿಯಾದ ಮತ್ತೊಬ್ಬನು ದಿಕ್ಕಿ
ನೊಳ್ತ್ಯಾಗಿಯಾದ ಬೇ |
ರೊಬ್ಬನು ಭೋಗಿಯಾದ ಪಿರಿದೊಬ್ಬನು ಉತ್ತಮ
ಯೋಗಿಯಾದ ತಾ |

—ಓಂ—

—ಶ್ರೀ ವೇಮನ ತತ್ವಗಳು—

ನೊಬ್ಬನು ರಾಗಿಯಾದ ನಿನ್ನ ಪೋಲ್ವ ಮಹಾತ್ಮನ
ಕಾಣೆವೆಲ್ಲಿಯುಂ ।
ನಿರ್ಭಯವೆಲ್ಲ ರೂಪುಗಳು ನಿನಗೆ ಸಲ್ಲುವು
ವೇಮ ಯೋಗಿಯೇ ।೧೬೧।

ಗೀ ಒಳ್ಳೆ ಗಂಧದಿಂದ - ಮನವು ಹರ್ಷಿಸುವುದು
ಎಂಥ ವಾಸನೆ ಎಂದು – ಪೊಗಳುತಿಹರು
ತಮ್ಮ ಪೂರ್ವ ವಾಸ - ನೆಯನು ತಾವರಿಯರು
ವಿಶ್ವತೋಭಿರಾಮ - ಕೇಳು ವೇಮಾ ।೧೬೨।

ಒಳ್ಳೆ ನೀರು ಹಾಕೆ - ಮೊಲ್ಲೆಹೂ ಬಿಡುವುದು
ನೀರು ಹಾಕದಿರಲು - ಹೂ ಬಿಡುವುದೆ ?
ಅಡಿಗೆ ಮಾಡದೆಂತು - ಅನ್ನವು ದೊರೆವುದು
ವಿಶ್ವತೋಭಿರಾಮ - ಕೇಳು ವೇಮಾ ।೧೬೩।

ಒಳ್ಳೆ ರುಚಿಯ ಮತ್ತೆ - ಒಳ್ಳೊಳ್ಳೆ ಸ್ತ್ರೀಯರ
ಕೋರುತಿರ್ಪುದೆಂಥ - ಮನವೊ ತಿಳಿಯೆ
ಮನುಜನಿದನು ದೂರ – ಮಾಡನು ಯೋಚಿಸಿ
ವಿಶ್ವತೋಭಿರಾಮ - ಕೇಳು ವೇಮಾ ।೧೬೪।

ಕಂ॥ ಒಂಭತ್ತು ಕಂತೆ ಚೀಲವ ।
ನಂಬುತೆ ಸಾಂಬನನು ನಂಬಿ ನುತಿಸದೆ ಕೆಡುವೈ॥
ಬೆಂಬಿಡದೆ ಗೃಧ್ರ ಚಯಗಳ್ ।
ತುಂಬುತಲಂತಿಮದಿ ಕಿತ್ತು ತಿಂಬುವು ವೇಮಾ॥ ।೧೬೫।

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಒಳ್ಳೆಯವರು ಕಡಿಮೆ - ಮಹಿಯೊಳು ಬೆದಕಲು
ಕೆಟ್ಟ ಜನಗಳೆಲ್ಲ - ಕಡೆಯೊಳಿಹರು
ಚಿನ್ನ ದೊರೆವುದೆಲ್ಲಿ - ಕಲ್ಲು ಕಬ್ಬಿಣದಂತೆ
ವಿಶ್ವತೋಽಭಿರಾಮ - ಕೇಳು ವೇಮಾ |೧೬೭|

ಒಡಲೊಳ್ದುದಿಯಾಂತು - ಜಡೆಗಳ ಧರಿಸಲು
ಒಡೆಯನಪ್ಪ ಮುಕ್ತಿ – ಪಡೆಯಲಾರ
ತಡಿಕೆಗಿಡಲು ಬಿರೆಯ - ಬಾಗಿಲ ಪೋಲ್ವುದೇಂ
ವಿಶ್ವತೋಽಭಿರಾಮ - ಕೇಳು ವೇಮಾ |೧೬೮|

ಓ

ಕಂ॥ ಓದುಗಳೆನಿತೋದಿದೊಡುಂ |
ಸಾಧಸರಾ ಪರಮಪದವನೆಂದಿಗುಮದರಿಂ ||
ಈ ಧರೆಯು ಭೋಗಮುಳಿದಾ |
ರಾಧಿಸೆ ಕೈವಲ್ಯ ಪದವಿ ಲಭಿಪುದು ವೇಮಾ |೧೬೯|

ಗೀ॥ ಓದು ಓದದಿರಲು – ಸೌಖ್ಯಮದಿಲ್ಲವು
ಓದು ಓದಲಾಗಿ - ಸುಗುಣಿಯಪ್ಪಂ
ಓದು ಮರ್ಮವರಿತು - ಓದುವುದೋದಮ್ಯ
ವಿಶ್ವತೋಽಭಿರಾಮ – ಕೇಳು ವೇಮಾ |೧೭೦|

—ಓಂ—

—ಶ್ರೀ ವೇಮನ ತತ್ವಗಳು—

ಕಲ್ಲಿನಲ್ಲಿ ಕಪ್ಪೆ - ಗಲ್ಲಿ ಆಹಾರವ
ಸಲ್ಲಿಸುವನು ದೇವ - ದೇವನವನು
ಹುಟ್ಟಿಸಿರುವ ಸ್ವಾಮಿ – ಹುಲ್ಲು ಮೇಯಿಸುವನೇಂ ?
ವಿಶ್ವತೋಭಿರಾಮ - ಕೇಳು ವೇಮಾ |೧೮೮|

ಕತ್ತಲಲ್ಲಿ ಪುಟ್ಟಿ - ಕತ್ತಲಲ್ಲಿ ಬೆಳೆದು
ಕತ್ತಲ ಮರೆಯಲ್ಲಿ – ಸಿಗುವುದೇಕೆ ?
ಕತ್ತಲು ತಿಳಿದೊಡೆ - ಜಗವೆಲ್ಲ ಬೆಳಕದು
ವಿಶ್ವತೋಭಿರಾಮ – ಕೇಳು ವೇಮಾ |೧೮೯|

ಕಂ|| ಕನಸಿನ ಸಂಪದವೆಲ್ಲಂ |
ಕನಸಿಂದೆಚ್ಚೆತ್ತ ಮೇಲೆ ಕಾಣದವೋಲೀ ||
ಧನ ಭೋಗ ಭಾಗ್ಯಚಯಗಳ್ |
ಕನಸಿನ ರೀತಿಯೊಳ ದೃಶ್ಯವೆಲ್ಲವು ವೇಮಾ || |೧೯೦|

ಗೀ|| ಕಳ್ಳಗುಡಿಗೆ ಪೋಗಿ - ಮುಡಿಪನ್ನು ಬಿಚ್ಚುವ
ನಲ್ಲಿ ದೇವರನ್ನು - ನೋಡನವನು
ನಾಯಿ ಮನೆಯೊಳ ಪೊಕ್ಕು - ಸೋರೆಗಳ್ ಬೆದಕದೇಂ ?
ವಿಶ್ವತೋಭಿರಾಮ - ಕೇಳು ವೇಮಾ |೧೯೧|

ಕತ್ತಿ ಕೈಲಿಪಿಡಿದು - ಘನ ಸಾಧನೆಯ ಮಾಡಿ
ಮತ್ತನಾಗಿ ಮೆರೆವ - ವೀರವರನು
ಕಾಲವಾದ ಬಳಿಕ - ಕಾಲನ ಕೈಯ್ಯಿಂದೆ
ಕಷ್ಟಬಿದ್ದು ಕೊನೆಗೆ - ಜನಿಪ ವೇಮಾ |೧೯೨|

—ಶ್ರೀ ವೇಮನ ತತ್ವಗಳು —

ಕಂ॥ ಕಮಲಗಳು ನೀರನುಳಿದೊಡೆ ।
ಕಮಲಾಪ್ತಂ ಕಿರಣದಿಂದೆ ಸುಡುವಂ ಗಡ? ತಾಂ॥
ಕ್ರಮದಿಂ ಸ್ಥಳ ಪಲ್ಲಟದಿಂ ।
ಶ್ರಮತಪ್ಪದು ಹಿತರಹಿತರು ಧರೆಯೊಳ್ ವೇಮಾ ॥ |೧೯೩|

ಗೀ॥ ಕಣ್ಣಿನಲ್ಲಿ ಮದವು - ವ್ಯಾಪಿಸಿ ಕಾಣರು
ಹೋದ ಆಚೆ ವರುಷ - ನಿನ್ನೆ ಮೊನ್ನೆ
ದಗ್ಧರಾದ ನರರು - ತಮಗಿಂತ ಕಡಮೆಯೇಂ?
ವಿಶ್ವತೋಭಿರಾಮ – ಕೇಳು ವೇಮಾ |೧೯೪|

ಕಡೆಗಖಿಳ ಜಗಕೆಲ್ಲ - ನಡುನಾಳದಲ್ಲಿರ್ಪ
ಉದಯ ಚುಕ್ಕೆಯಂಥ - ಬೆಳಕು ದಿಕ್ಕು
ಬೆಳಕಿಗಿಂತ ದಿಕ್ಕು - ಬೇರೆ ಮತ್ತೇನುಂಟು
ವಿಶ್ವತೋಭಿರಾಮ - ಕೇಳು ವೇಮಾ |೧೯೫|

ಕಾಶಿ ನೀರು ಪೊತ್ತು - ಕಾಲು ಮುಖಗಳು ಬಾತು
ಎಲ್ಲಿ ಸುಖವಿಲ್ಲದೆ - ಒಣಗಿ ಒಣಗಿ
ಸತ್ತು ಕೊನೆಗೆ ಮುಕ್ತಿ - ಸಾಧಿಸಲಾರರು
ವಿಶ್ವತೋಭಿರಾಮ - ಕೇಳು ವೇಮಾ |೧೯೬|

ಕಾಗೆ ಪಕ್ಷಿಗಳೊಳು - ಕಡುಹೀನವೆಂಬರು
ಕಾಗೆ ಭೋಗವರಿಯ - ರಾರು ಭುವಿಯೊಳ್
ಕಾಗೆಗನ್ನವಿತ್ತು - ಕಾಲಿಗೆ ಬೀಳುವರ್
ವಿಶ್ವತೋಭಿರಾಮ - ಕೇಳು ವೇಮಾ |೧೯೭|

—ಓಂ—

—ಶ್ರೀ ವೇಮನ ತತ್ವಗಳು—

ಕಾಯಿ ಮೇಲೆ ವೃಕ್ಷ - ಘನವಾಗಿ ತೋರ್ಪುದು
ಮರದ ಮೇಲೆ ಲತೆಯು - ಸುತ್ತಿರುವುದು
ಬಳ್ಳಿ ಮೇಲೆ ಬೆರಳು - ತ್ರಿಪುರ ನರ್ತನವಹುದು
ವಿಶ್ವತೋಭಿರಾಮ – ಕೇಳು ವೇಮಾ |೯೮|

ಕಾಮಿಯಾದ ಹರನು – ಘನನೆನಿಸಲಿಲ್ಲವೇ ?
ಕಾಮಿಯಾದ ವಿಷ್ಣು – ಶ್ರೇಷ್ಠನಾದ
ಕಾಮಿ ಹೊರತು ಮೋಕ್ಷ - ಕಾಮಿಯಾಗನು ಜಗದಿ
ವಿಶ್ವತೋಭಿರಾಮ - ಕೇಳು ವೇಮಾ |೯೯|

ಕಾಶಿ, ಮಥುರೆ, ಕಂಚಿ, – ಗಯೆ; ಪ್ರಯಾಗವು, ಸೇತು
ಆಸೆಯಿಂದಲಾತ್ರ – ವಿವನು ನೋಡಿ
ವಾಸನೆ ತಿಳಿಯನು - ಬರಿ ಭ್ರಮೆ ಹೊರತಾಗಿ
ವಿಶ್ವತೋಭಿರಾಮ - ಕೇಳು ವೇಮಾ |೧೦೦|

ಕಾಡು ಗಿಡವ ಕಡಿದು - ಕಡು ರಮ್ಯವಾಗಿಹ
ಉನ್ನತೋನ್ನತದ – ವಿಶಾಲವೆನಿಪ
ಮನೆಯ ಕಟ್ಟನೋಡು – ಆಶ್ಚರ್ಯಗೊಳ್ಳುವ
ಕೇಡನರಿಯನವನು - ನೋಡು ವೇಮಾ |೧೦೧|

ಕಾವು ಕಾವೆನುತ್ತೆ – ಕಾಲಿದ್ದು ನುಡಿವರು
ಕಾಗೆಯಂತೆ ಕೂಗಿ – ಕಾಣದಿಹರು
ಬ್ರಾಹ್ಮಣರೆಂಬರು – ಬ್ರಹ್ಮವನರಿಯರು
ವಿಶ್ವತೋಭಿರಾಮ - ಕೇಳು ವೇಮಾ |೧೦೨|

—ಓಂ—

—ಶ್ರೀ ವೇಮನ ತತ್ವಗಳು—

ಕಾಶಿಗೆ ಪೋಪವನ - ಕರ್ಮವೇನೆನಬಹುದು
ತಿರುಗಲೇನು ಕಾಲು – ತೀಟಿ ಹೊರತು
ಕೂಲಿಯು ಸ್ತ್ರೀಯರು - ನೀರನ್ನು ಹೊರರೇನು?
ವಿಶ್ವತೋಭಿರಾಮ - ಕೇಳು ವೇಮಾ |೨೦೩|

ಕಾಶಿ ಯಾತ್ರೆ ಪೋಗಿ – ಗಂಗೆ ಸ್ನಾನವ ಮಾಡಿ
ಕಷ್ಟಪಟ್ಟು ಮುಕ್ತಿ - ಕಾಣರವರು
ಕೋಣ ತಿರುಗುತಿಹುದು – ಎಮ್ಮೆಯ ಸಂಗಡ
ವಿಶ್ವತೋಭಿರಾಮ - ಕೇಳು ವೇಮಾ |೨೦೪|

ಕಾಗೆ ಗೂಡಿನಲ್ಲಿ – ಕೋಗಿಲೆಯಿದ್ದಂತೆ
ಭ್ರಮರ ಕೀಟನ್ಯಾಯ – ಬಾಳನರಿತು
ಗುರುವ ನುತಿಸೆ ಬಳಿಕ - ಗುರುವೆ ತಾನಾಗುವ
ವಿಶ್ವತೋಭಿರಾಮ - ಕೇಳು ವೇಮಾ |೨೦೫|

ಕಂ|| ಕೈಲಾಸಂ ವೈಕುಂಠಂ |
ಬೈಲಾಗಿರುವಲ್ಲಿ ಬಾಹ್ಯನೋಟದಿ ನೀವ್ಗಳ್ ||
ಎಲ್ಲೆಲ್ಲಿ ಬೆದಕಿ ನೋಡ್ವರು |
ಕೈಲಾಸಂ ನೋಡಲಾರಿರಿದು ದಿಟ ವೇಮಾ |೨೦೬|

ಗೀ|| ಕೆಲವು ಕಪ್ಪಾಗಿಹವು - ಕೆಲವು ಕೆಂಪಾಗಿಹವು
ಕೆಲವು ಬೆಳ್ಳಗಿಹವು - ಧರಣಿಯಲ್ಲಿ
ಒಂದೆ ರೀತಿ ಇರದದೇನು – ಕಾರಣವದು
ವಿಶ್ವತೋಭಿರಾಮ – ಕೇಳು ವೇಮಾ |೨೦೭|

—ಓಂ—

—ಶ್ರೀ ವೇಮನ ತತ್ವಗಳು—

ಕೊಳಕಿನಲ್ಲಿಯೆ ಪುಟ್ಟಿ - ಕೊಳಕಿನಲ್ಲಿಯೆ ಬೆಳೆದು
ಕೊಳಕು ಬಾಳಿಗಿಂತು - ಬಿಂಕಮೇಕೋ
ಕೊಳಕು ತಿಳಿಯಲ್ಕವನು - ಕೊಳಕಿನೊಳ್ ಜನಿಪನೇ
ವಿಶ್ವತೋಭಿರಾಮ - ಕೇಳು ವೇಮಾ |೨೦೮|

ಕಂ॥ ಕುಚಗಳ್ಪರಸತಿಗೊಪ್ಪಿದ ।
ಕುಚಗಳ ಮೇಲಪ್ಪಪ ದೃಷ್ಟಿ ಬೀಳದ ಮೊದಲೇ ॥
ಕುಚಗಳಿವು ಮೊದಲು ಕುಡಿದಿಹ ।
ಕುಚಗಳ್ನಿಜವೆಂದು ತಿಳಿವುದೈ ವರ ವೇಮಾ |೨೦೯|

ಗೀ॥ ಕೋಪದಿಂದ ನರಕ – ಕೂಪಮಂ ಸೇರುವ
ಕೋಪದಿಂದ ಸುಗುಣ – ಗಣಮೆ ಶೂನ್ಯಂ
ಕೋಪದಿಂದ ಬಾಳು – ಕೆಡುವುದು ಜಗದೊಳು
ವಿಶ್ವತೋಭಿರಾಮ – ಕೇಳು ವೇಮಾ |೨೧೦|

ಕುಲವ ನೀರು ಮಾಡಿ - ಗುರುವನ್ನು ಕೊಲ್ಲಿಸಿ
ಬರಿದೆ ಆನೆಯುಷ್ಟು - ಸುಳ್ಳು ನುಡಿದ
ಹೆಸರು ಧರ್ಮರಾಜ - ನೆರೆಬೇವು ಬೀಜವೈ
ವಿಶ್ವತೋಭಿರಾಮ - ಕೇಳು ವೇಮಾ |೨೧೧|

ಕಂ॥ ಕುಚಗಳ ಕುಡಿದಿಹ ಮನುಜರು ।
ಕುಚಗಳ ಮೇಲಾಸೆಪಟ್ಟು ಗತಿಸುವರಿಳೆಯೊಳ್ ॥
ಕುಚಗಳು ಮಾಂಸದ ಮುದ್ದೆಗಳ್ ।
ಕುಚಗಳೊಳೇನಿಹುದು ಸಾರ ಪೇಳ್ಳೈ ವೇಮಾ |೨೧೨|

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಕಲ್ಲು ಬೊಂಬೆ ಮಾಡಿ – ರಾಜಸದೊಳಗಿಟ್ಟು
ಪೂಜೆಮಾಳ್ಪರಿಳೆಯೊಳ್ - ಮತಿವಿಹೀನರ್
ಪ್ರಾಣಿಯಲ್ಲಿಯೆ ಶಿವನು - ವ್ಯಾಪಿಸಿ ಇರ್ಪನು
ವಿಶ್ವತೋಭಿರಾಮ - ಕೇಳು ವೇಮಾ |೨೧೩|

ಕಂಕಭಟ್ಟನಾಗಿ - ಕಾಷಾಯಗಳನುಟ್ಟು
ಧರ್ಮನಿದ್ದನಾ - ವಿರಾಟನಲ್ಲಿ
ಕಾಲಕರ್ಮಗತಿಗ – ಳರಿವುದು ಕಷ್ಟವು
ವಿಶ್ವತೋಭಿರಾಮ - ಕೇಳು ವೇಮಾ |೨೧೪|

ಕ್ರಿಮಿಯು, ಮಣ್ಣು, ಬೆಂಕಿ, – ಗೃಧ್ರವು, ನಾಯಿಯು
ನರಿಯು ಮಿವುಗಳೆಲ್ಲ - ವರಸೆಯಾಗಿ
ಕಿತ್ತು ತಿನ್ನುತಿರುವ - ತನುವ ಬೆಳೆಸುವರಲ್ಲ
ವಿಶ್ವತೋಭಿರಾಮ - ಕೇಳು ವೇಮಾ |೨೧೫|

ಕುಧ್ದುಕೊಂಬ ನರನ - ಕೂಡೆ ಪೂತಾಡ್ವರುಂ
ಇದ್ದ ಮರ್ಮವೆಲ್ಲ – ಹೇಳಿಸಲ್ಲ
ಹೇಳಿದೊಡವನಿರ – ದೂರೆಲ್ಲ ಮುಟ್ಟಿಪ
ವಿಶ್ವತೋಭಿರಾಮ – ಕೇಳು ವೇಮಾ |೨೧೬|

ಕಂ॥ ಕರ್ಮಾಕರ್ಮಗಳೆಲ್ಲವು ।
ಕರ್ಮಿಗಳಿಗೆ ತಿಳಿಯಲಾರದನವರತಂ ತಾಂ ॥
ಧರ್ಮಾಧರ್ಮ ವಿಮರ್ಶೆಯ ।
ನಿರ್ಮಲ ಮತಿ ತಿಳಿಸಲಪ್ಪುದಿದು ದಿಟ ವೇಮಾ |೨೧೭|

—ಶ್ರೀ ವೇಮನ ತತ್ವಗಳು—

ಗೀ॥ ಕೇಳಿ ಕೇಳದಿರ್ಪ - ಹುಚ್ಚನಂದದೊಳಿರ್ಪ
ಕಂಡು ಕಾಣದಿರ್ಪ - ಕೊನೆಗೆ ಯೋಗಿ
ಮನುಜಶ್ರೇಷ್ಠರಿಂದೆ - ಪೂಜೆಯಗೊಳುತಿರ್ಪ
ವಿಶ್ವತೋಭಿರಾಮ - ಕೇಳು ವೇಮಾ |೨೧೮|

ಕಂ॥ ಕೊಡುವವರ ಧನಮದನಿಶಂ |
ತಡೆಯದೆ ಹೆಚ್ಚುವುದು ವೆಚ್ಚವಾದನಿತರೊಳುಂ ||
ಗಡ ! ಚಲುವೆ ನೀರು ಚೆಲ್ಲಲ್ |
ಬಿಡಿದೂರುವುದಿದು ಸಮಸ್ತರರಿತಿಹರ್ವೇಮಾ |೨೧೯|

ಗೀ॥ ಕಾಮಿಯಲ್ಲದವನು - ಕವಿಯಲ್ಲ ರವಿಯಲ್ಲ
ಕಾಮಿ ಹೊರತು ಮೋಕ್ಷ - ಕಾಮಿಯಲ್ಲ
ಕಾಮಿಯಾದ ನರನು - ಕವಿಯು ರವಿಯಾಗುವನು
ವಿಶ್ವತೋಭಿರಾಮ - ಕೇಳು ವೇಮಾ |೨೨೦|

ಕುಲದೊಳೋರ್ವನ್ನೈದೆ - ಗುಣವಂತನಿರ್ದೊಡೆ
ಕುಲವು ಬೆಳಗುವುವನ - ಗುಣಗಳಿಂದೆ
ಲಲಿತ ವನದ ನಡುವೆ - ಮಲಯಜವಿದ್ದಂತೆ
ವಿಶ್ವತೋಭಿರಾಮ - ಕೇಳು ವೇಮಾ |೨೨೧|

ಕೈಕೆ ಪುಟ್ಟಿ ಕೆಡಸಿದಳು - ರಾಮಪಟ್ಟವಂ
ಸೀತೆ ಪುಟ್ಟಿ ನಾಶ - ವಾಯ್ತು ಲಂಕೆ
ಹೇಳಲಾಗದಯ್ಯ - ಚಿತ್ರಾಂಗಿ ಸಂಗತಿ
ವಿಶ್ವತೋಭಿ ರಾಮ ಕೇಳು ವೇಮಾ |೨೨೨|

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಕೌಂಡಿನ್ಯನು ಮುಂಡೆಯ ಮಗ ।
ಮಾಂಡವ್ಯನು ಕಪ್ಪೆಯುದರದೊಳು ಜನಿಸಿದ ತಾಂ ॥
ಚಂಡಾಲಿ ಮತಂಗನು ತಾಂ ।
ಪಿಂಡದೊಳುದ್ಭವಿಸಲಿಲ್ಲೆ ಧರೆಯೊಳು ವೇಮಾ |೨೨೩|

ಗೀ॥ ಕೆಟ್ಟ ಮಾನವನನ್ನು - ಕೈವಿಡಿದು ರಕ್ಷಿಸಿ
ಡಡವ ಸೇರಿಸಿದ - ಘನರವನಿಯಲ್ಲಿ
ಕಡೆಗೆ ಸುಕೃತಿಯಾಗಿ - ಕರಕಂಠನೆಡೆಯಲ್ಲಿ
ಬಿಡದೆ ನಿರುತ - ವಾಸಿಸುವರು ವೇಮಾ |೨೨೪|

ಕೃಪಣ ನರನ ಮನೆಯೊಳ್ - ಕುಣಪವು ಹೊರಟರುಂ
ಬೆರಣಿ ಕಾಷ್ಟಗಳಿಗೆ – ಕಾಸಕೊಟ್ಟು
ವೆಚ್ಚವಾಯಿತೆಂದು - ಬಿಕ್ಕಿ ಬಿಕ್ಕಳುವನೈ
ವಿಶ್ವತೋಭಿರಾಮ - ಕೇಳು ವೇಮಾ। |೨೨೫|

ಕೊಲ್ಲಲಿರುವ ಶತ್ರು - ವಾದರುಂ ಕೈಯ್ಯಿಗೆ
ಸಿಕ್ಕವೇಳೆ ಕೇಡ - ಮಾಳ್ಪುದಲ್ಲ
ಪಿರಿದು ಮೇಲು ಮಾಡಿ - ಪೋಗೆಂಬುದೊಳ್ಳಿತು
ವಿಶ್ವತೋಭಿರಾಮ - ಕೇಳು ವೇಮಾ |೨೨೬|

ಕೂಲಿ ನಾಲಿ ಮಾಡಿ – ಆಳಾಗಿ ದುಡಿಯುತ್ತೆ
ತಂದು ಹಾಕೆ ಸತಿಯು - ಮೆಚ್ಚುತಿಹಳು
ರಿಕ್ತನಾಗೆ ಪತಿಯು – ಬಗೆ ಬಗೆ ಬೈವಳು
ವಿಶ್ವತೋಭಿರಾಮ – ಕೇಳು ವೇಮಾ |೨೨೭|

ಕುಲದ ಮದವು ಸ್ವಲ್ಪ - ಬಲದ ಮದವದು ಸ್ವಲ್ಪ
ತಿಳಿದ ಮದವಿಂತು - ಹಲಮದಗಳಿಂದೆ
ಭಂಡ ವಿದ್ಯೆಯೋದಿ - ಪಾಷಂಡರಾಗುವರಲ್ಲ
ವಿಶ್ವತೋಭಿರಾಮ - ಕೇಳು ವೇಮಾ |೨೨೮|

ಕಾಳು ಮಾಡಿ ಕಡ್ಡಿ - ಕಸ ಜಳ್ಳು ತೆಗೆದುದ
ತಿರುಪೆಯುವರಿಗಿಡುವ - ಕೃಪಣರಿಲ್ಲಿ
ಮರಳಿ ಜನ್ಮವೆತ್ತಿ - ಮಣ್ಣನ್ನು ಮುಕ್ಕುವ
ರವನಿಯಲ್ಲಿ - ದಿಟವಿದಯ್ಯ ವೇಮಾ |೨೨೯|

ಕಸವ ತಿಂಬ ಕತ್ತೆ - ಪಶುಗಳು ನಿರುತವು
ಹೇಳಿದಂತೆ ಕಾರ್ಯ - ವೆಸಗುತಿಹವು
ಇವುಗಳನ್ನು ಹೋಲ - ನವನೆಂತು ಮನುಜನು
ವಿಶ್ವತೋಭಿರಾಮ - ಕೇಳು ವೇಮಾ |೨೩೦|

ಕಸವ ತಿನ್ನುವಾತ - ಘನ ಫಲ ರುಚಿಸುನು
ಕಾಣಲಾರನಲ್ತೆ ? - ಕರ್ಮವಶದಿ
ಅಲ್ಪ ವಿದ್ಯೆಯಿಂದ - ಜ್ಞಾನಿ ತಾನಪ್ಪನೇ ?
ವಿಶ್ವತೋಭಿರಾಮ - ಕೇಳು ವೇಮಾ |೨೩೧|

ಕಷ್ಟ ಬಂದ ವೇಳೆ - ದೇವರಂ ದೂರುವ
ಸುಖವು ಬಂದ ವೇಳೆ - ಪೊಗಳುತಿರ್ಪ
ಕಷ್ಟ ಸುಖಗಳೆರಡು - ಮಾಡಿದ ಕರ್ಮಗಳ್
ವಿಶ್ವತೋಭಿರಾಮ - ಕೇಳು ವೇಮಾ |೨೩೨|

—ಓಂ—

—ಶ್ರೀ ವೇಮನ ತತ್ವಗಳು —

ಕಾವಿ ಪಂಚೆಯುಟ್ಟು - ಯೋಗಿಯಂದದೊಳಿರ್ದು
ಹೊರಗೆ ವಿಷಯ ವಿಮುಖ - ನಂತೆ ನಟಿಸಿ
ತೂಗಿ ತೂಗಿ ಬಾಗುವವ - ಕಳ್ಳ ಯೋಗಿಯು
ವಿಶ್ವತೋಭಿರಾಮ - ಕೇಳು ವೇಮಾ ||೩೩||

ಕಲ್ಲು ಬೊಂಬೆಗೇಕೆ - ರಂಗು ವಸ್ತ್ರಂಗಳು
ಗುಡಿಯು ಗೋಪುರಗಳು - ಉತ್ಸವಗಳು
ಕೂಳು ಬಟ್ಟೆ ಕೇಳುವನೆ - ದೇವನಿಳೆಯೊಳು
ವಿಶ್ವತೋಭಿರಾಮ – ಕೇಳು ವೇಮಾ ||೩೪||

ಕಲಿಯುಗದೊಳು ದೇವ – ಕಲ್ಲಾಗಿ ಪೋದನು
ಮುಗಿವ ಭಕ್ತನೈದೆ - ಬಂಡೆಯಲ್ತೆ ?
ಕಲ್ಲು ಬಂಡೆಯಾಗೆ – ಕಲಿಯುಗ ನಿಲ್ವುದೇಂ ?
ವಿಶ್ವತೋಭಿರಾಮ - ಕೇಳು ವೇಮಾ ||೩೫||

ಕುಲವಿಹೀನನಾದೊಡುಂ - ಧನವಿರ್ದೊಡೆ
ಬೆಳಗುತಿರ್ಪನವನು - ದೀನ ಹೀನ
ಕುಲದ ಬಲುಮೆಗಿಂತ – ಧನ ಬಲುಮೆಯೆ ಹೆಚ್ಚು
ವಿಶ್ವತೋಭಿರಾಮ – ಕೇಳು ವೇಮಾ ||೩೬||

ಕೋಮಟಿಯಾಸಿಪ - ಲಾಭವನ್ನೆಲ್ಲೆಡೆ
ವೈದ್ಯನೈದೆ ವ್ಯಾಧಿ - ಯನ್ನೆ ಕೋರ್ವ
ದೋಣಿಯವರು ಧನಿಕರಂ - ಬಯಸುತಿರ್ಪರು
ವಿಶ್ವತೋಭಿರಾಮ - ಕೇಳು ವೇಮಾ ||೩೭||

— ಓಂ —

— ಶ್ರೀ ವೇಮನ ತತ್ವಗಳು —

ಕೂಡಿ ಬರದ ವೇಳೆ - ಏನೇನ ಮಾಡ್ದರುಂ
ಕೂಡಿ ಬರದು ಕಾಸು - ವೀಸವವಗೆ
ಕೂಡಿ ಬರ್ಪ ವೇಳೆ - ಯಾಡುತ ಬರ್ಪುದು
ಬೇಡವೆಂದರೈದೆ - ಬಿಡದು ವೇಮಾ |೨೩೮|

ಕೀಲಕಗಳನುಳಿದು - ಬಯಲರಿತಾತನೇ
ಶೌರಿಯಾಗಿ ಸಿರಿಗೆ – ಸಿಕ್ಕಿ ಬಿದ್ದ
ಧರೆಯನರರು ಸ್ತ್ರೀಯರಿಗೆ - ಸಿಕ್ಕಿ ಬೀಳರೇಂ ?
ವಿಶ್ವತೋಭಿರಾಮ - ಕೇಳು ವೇಮಾ |೨೩೯|

ಕೋರಿ ದ್ರೌಪದಿಯುಳ - ಮುಡಿ ಪಿಡಿದೆಳೆದನಾ
ಸಿಂಹ ಬಲನ ಸಾವು – ಪೇಳಲಳವೆ ?
ಅಂತ್ಯಕಾಲದಲ್ಲಿ – ಪೌರುಷವಿರ್ಪುದೇಂ ?
ವಿಶ್ವತೋಭಿರಾಮ – ಕೇಳು ವೇಮಾ |೨೪೦|

ಕೋಗಿಲೆ ಕಾಗೆಯಿಂ – ಪಾಲಿತವಾದಂತೆ
ದಾರಿ ತೋರಬೇಕು – ಜ್ಞಾನಿಯೋರ್ವ
ಪೂರ್ವಜನ್ಮ ಫಲವೆ - ತುದಿಗೆ ಹಬ್ಬುವುದಲ್ತೆ ?
ವಿಶ್ವತೋಭಿರಾಮ - ಕೇಳು ವೇಮಾ |೨೪೧|

ಕರ್ಮವುಯನಲ್ಲದೆ - ಕರ್ಮವನ್ನರಿಯನು
ಕರ್ಮಜೀವಿ ಮೋಲು - ಪೊಂದಲಾರ
ನೀರ ಪೊಗದೆ ಆಳ - ತಾನೆಂತು ತಿಳಿವುದು
ವಿಶ್ವತೋಭಿರಾಮ - ಕೇಳು ವೇಮಾ |೨೪೨|

—ಶ್ರೀ ವೇಮನ ತತ್ವಗಳು—

ಕಂ॥ ಕರ್ಮ ಜ್ಞಾನಿಗೆ ದೂರಂ ।
ಕರ್ಮಕ್ಕಾ ಜ್ಞಾನಿ ದೂರವಿಮಿದು ಸಿದ್ಧಾಂತಂ ॥
ಕರ್ಮ ಜ್ಞಾನಗಳಡಗಲ್ ।
ನಿರ್ಮಲನಾದಪನು ಮುಕ್ತಿ ದೊರೆಗುಂ ವೇಮಾ ।೧೪೩।

ಕನ್ನೈದಿಲೆಯ ಪೋಲ್ವ - ಕಣ್ಣುಗಳಿದ್ದೇನು
ಮುನ್ನ ಗಿಣಿಯ ತೆರದಿ – ನುಡಿದೊಡೇನು
ಉನ್ನತ ಸುಗುಣ ಸಂ - ಪತ್ತಿ ಇಲ್ಲದ ಮೇಲೆ
ವಿಶ್ವತೋಭಿರಾಮ - ಕೇಳು ವೇಮಾ ।೧೪೪।

ಕೊಲ್ಲಲಾಗದಂಥ - ಜಂತುವನ್ನಾದರು
ಕೊಲ್ಲಬೇಕು- ಲೋಕ ಶತೃಗಣವ
ಮುಳ್ಳು ವಿಷವ ಕೀಳೆ - ಚೇಳೇನು ಮಾಳ್ಪುದು
ವಿಶ್ವತೋಭಿರಾಮ – ಕೇಳು ವೇಮಾ ।೧೪೫।

ಕಣ್ಣು ಕಾಣದವನು – ಕಾಲಿಲ್ಲದಿರುವವನು
ಉಭಯರ್ಸೈದೆ ಸೇರಿ – ಚರಿಸುವಂತೆ
ದೀನ ದೀನ ಸೇರು - ತಾನಂದಿಸುವರಲ್ತೆ ?
ವಿಶ್ವತೋಭಿರಾಮ - ಕೇಳು ವೇಮಾ ।೧೪೬।

ಕಂ॥ ಕಾಲವು ಕಾಲವು ಎನ್ನದೆ ।
ತಾಳುತೆ ಬಾಳುತ್ತೆ ಮೀರಿ ನಡೆಯದೆ ಸತತಂ॥
ಕಾಲನ ತಪ್ಪದೆ ಸಂಧಿಪ ।
ವೇಳೆಯುಮುಂಟೆಂದು ಶಿವನ ನೆನೆವುದು ವೇಮಾ ।೧೪೭।

—ಓಂ—

—ಶ್ರೀ ವೇಮನ ತತ್ವಗಳು—

ಗೀ|| ಕಾಲುಮುಂದಿನುದಧಿಯಂ - ದಾಂಟಲಾರದೆ
ಮೂವರೀಜಿನವರು - ಮುಳುಗಿರುವರು
ನರನು ಈಜಬಲ್ಲ - ನೆಂಬುದು ಸಾಧ್ಯವೇ ?
ಅರಿಯಲಾಗದಿಡನು — ಧರೆಯೊಳ್ ವೇಮಾ |೨೪೮|

ಕುರಿಯು ಸಾವಿರಾರು — ಗುಂಪು ಕೂಡಿರುವಲ್ಲಿ
ತಾಯನರಸಿ ಬರ್ಪು - ದದರ ಮರಿಯು
ಪರಮ ಗುರುವನರಸಿ - ಭಕ್ತನು ಬರ್ಪನೈ
ವಿಶ್ವತೋಭಿರಾಮ - ಕೇಳು ವೇಮಾ |೨೪೯|

ಕಿವಿಗಳಲ್ಲಿ ಪುಟ್ಟುವುದೆ - ಮಹಾಕಾಶವು
ಕಂಗಳಲ್ಲಿ ಪುಟ್ಟು - ತಿಹುದೆ ಜ್ವಾಲೆ
ಮೂಗಿನಲ್ಲಿ ಗಾಳಿಯುದೆ — ಮುಕ್ತಿಮಾರ್ಗವು
ವಿಶ್ವತೋಭಿರಾಮ - ಕೇಳು ವೇಮಾ |೨೫೦|

ಕಡೆಗೆ ಇಂದ್ರಿಯಂಗಳಂ — ಕಟ್ಟಲಾರದೆ
ಸಾವು ಬಂದ ವೇಳೆ — ಸನ್ಯಸಿಸುತೆ
ಆತ್ಮಜಿತನಿಲ್ಲದೆ - ಮೋಕ್ಷಮೆಂತಪ್ಪುದು
ವಿಶ್ವತೋಭಿರಾಮ — ಕೇಳು ವೇಮಾ |೨೫೧|

ಕೆಟ್ಟ ಲೋಭಿ ನರನ - ಧನಕೆ ತಾನಾಶಿಸಿ
ತುಂಟ ಯೌವನಸ್ಥ - ತಿರುಗುತಿರ್ಪ
ಟಗರಿನ ಬೆನ್ನತ್ತಿ - ನರಿಯು ತಿರುಗುವ ಪೋಲು
ವಿಶ್ವತೋಭಿರಾಮ - ಕೇಳು ವೇಮಾ |೨೫೨|

— ಓಂ —

— ಶ್ರೀ ವೇಮನ ತತ್ವಗಳು —

ಕಾಲಧರ್ಮವರಿತು – ಕಪಟ ವೃತ್ತಿಯ ಬಿಟ್ಟು
ಸತಿಯ ಸುತರ ಮೇಲ – ಣಾಶೆ ತೊರೆದು
ಮೇಲು ಶಿವನ ಪಾದ - ವೆಚ್ಚತ್ತು ನೋಳ್ಪುದು
ವಿಶ್ವತೋಭಿರಾಮ - ಕೇಳು ವೇಮಾ |೩೫೩|

ಕರ್ಮ ವಶದೊಳು – ಸಂಸಾರ ಕಷ್ಟಗಳನು
ಪೊಂದಿ ಮೋಹಾತಿಶಯದೊಳು – ಕೆಡುವ ನರನು
ಕರ್ಮರಾಹಿತ್ಯಜ್ಞಾನ ಸಂಕಲಿತನಾಗ
ಲವನ ಮೋಹಗಳೇನ - ಗೈಯ್ಯುವವು ವೇಮಾ |೩೫೪|

ಕಂ॥ ಕರ್ಮಾಕರ್ಮ ನಿಮಿತ್ತಾದಿ |
ನಿರ್ಮಲ ತಾನಿರ್ಪನಾತ್ಮನೋರ್ವಂ ಕರ್ತಃ ||
ಧರ್ಮಾಧರ್ಮಂಗಳ ನಾ |
ನಿರ್ಮಲಮತಿ ನಿಲಿಸಿಕೊಳ್ವನರಿವುದು ವೇಮಾ |೩೫೫|

ಗೀ॥ ಕಷ್ಟಕಾಲಮದರೊಳ್ - ನೆರೆ ಪಾಪಿ ಚಿಂತೆಯು
ಚಿಂತೆಯಿಂದ ತನುವು - ಬಳಲುತಿಹುದು
ಚಿಂತೆಯಿಲ್ಲದಿರಲು – ಸಿರಿಯು ತಾಂ ಬರ್ಪುದೈ
ವಿಶ್ವತೋಭಿರಾಮ – ಕೇಳು ವೇಮಾ |೩೫೬|

ಕಾಯವಿರುವಾಗಲೇ – ಕಾಮಾದಿಗಳ ಗೆಲ್ದು
ಜ್ಞಾನಮಾರ್ಗದಲ್ಲಿ – ನಡೆಯಬೇಕು
ಜಾಗು ಮಾಡಲಾಗ - ಕಾಯಮೇನಪ್ಪುದೋ
ವಿಶ್ವತೋಭಿರಾಮ - ಕೇಳು ವೇಮಾ |೩೫೭

—ಓಂ—

—ಶ್ರೀ ವೇಮನ ತತ್ವಗಳು—

ಕತ್ತುರಿ ವಲಸೇಕೆ ಗಜರಾಜ ರಾಜಗೆ
ತನ್ನ ಮದದ ಧಾರೆ - ಯೊಂದೆ ಸಾಕು
ಯೋಗಿಗೇಕೆ ರಂಭೆ - ಯೋಗಹರ್ಷಮದಿರೆ
ವಿಶ್ವತೋಭಿರಾಮ - ಕೇಳು ವೇಮಾ| |೩೫೮|

ಕಂ|| ಕರ್ಮ ಜ್ಞಾನೇಂದ್ರಿಯಗಳ್ |
ನಿರ್ಮಲ ಹೃದಯದೊಳು ನಿಲಿಸಿ ನಿರ್ಗುಣ ಮತಿಯಿಂ ||
ಧರ್ಮಮದಂ ವಿವರಿಪುದೇ |
ಮರ್ಮಮಿದಧ್ಯಾತ್ಮ ಯೋಗ ಮಹಿಮೆಯು ವೇಮಾ |೩೫೯|

ಗೀ|| ಕಲುಷ ಜಾಲವ ಖಂಡಿಪ – ಗತಿಯನರಿತು
ಚಿನ್ಮಯಾನಂದ - ಪಟ್ಟಾಭಿಷಿಕ್ತನಾಗ
ಲಾತನಂ ಪೊಗಳಲಾರಿಗೆ - ಸಾಧ್ಯಮಲ್ತು
ಪರಶಿವನು ತಾನೆಯೆಂಬರು - ಧರೆಯೊಳ್ ವೇಮಾ |೩೬೦|

ಕಂ|| ಕಿಂಚಿನ್ಮಾತ್ರಂ ಮನಸಿಗೆ |
ಚಂಚಲಮಂ ಪುಟ್ಟಿಸದಲೆ ಜಾಗ್ರತೆಯಿಂದಂ ||
ಅಂಚಿತಮಹ ಗುರುಭಕ್ತಿಯ
ಮಿಂಚಿಪ ಪರಿಪೂರ್ಣತೆಯನು ಪೊಂದಿಸು ವೇಮಾ |೩೬೧|

ಗೀ|| ಕೀಲು ತಿಳಿದು ಮನದಿ – ಕೇವಲಾತ್ಮನ ಕೂಡಿ
ಭಾವದಲ್ಲಿ ಸೊಕ್ಕಿ – ಬಯಲ ಬಡಿದು
ಸೇರಿಯಿಹುದೆ ಮುಕ್ತಿ - ಪೊಂದಲೆತ್ನವು ಕಣಾ ?
ವಿಶ್ವತೋಭಿ ರಾಮ ಕೇಳು ವೇಮಾ |೩೬೨|

—೫೫—

—ಓಂ—

—ಶ್ರೀ ವೇಮನ ತತ್ವಗಳು—

ಕೋರಿ ಮನದಿ ಗುರುವ - ನುತಿಸುವುದೇ ಮೇಲು
ಗೌರವದೊಳು ಪೇಳ್ವ - ಗಹನವಿದ್ಯೆ
ದೂರದೃಷ್ಟಿ ನಿಲಿಸಿ – ತೊಡಗುವುದೇ ಮೋಕ್ಷ
ವಿಶ್ವತೋಭಿರಾಮ - ಕೇಳು ವೇಮಾ |೨೬೩|

ಕೇಳದರ್ಥವಿಾವ - ನವನೆ ಬ್ರಹ್ಮಜ್ಞಾನಿ
ಕೇಳಲರ್ಥವಿಾವ - ನವನೆ ತ್ಯಾಗಿ
ಕೇಳಿಯರ್ಥವಿಾಯ – ದಿರುವನೇ ಲೋಭಿಯು
ವಿಶ್ವತೋಭಿರಾಮ - ಕೇಳು ವೇಮಾ |೨೬೪|

ಕನ್ನೆ ಕೊಟ್ಟವನನ್ನು - ಅನ್ನವಿಟ್ಟವನನ್ನು
ಮನ್ನಿಸುತ್ತಿ ಸತತ - ಪೊಗಳದವನು
ಘನ್ನ ಘಾತುಕರೊಳ - ಗತಿ ಘನ ಘಾತುಕ
ವಿಶ್ವತೋಭಿರಾಮ - ಕೇಳು ವೇಮಾ |೨೬೫|

ಕಾನನವನು ಸೇರಿ – ಕಡು ಶ್ರಮೆ ಪೊಂದಿದ
ನಳನು ರಾಜ್ಯವನ್ನು - ಮತ್ತೆ ಪಡೆದ
ಕಷ್ಟಸಹಿಷ್ಣುಗಳ್ – ಪಡೆವರು ಸುಖವನ್ನು
ವಿಶ್ವತೋಭಿರಾಮ - ಕೇಳು ವೇಮಾ |೨೬೬|

ಸೀ॥ ಕಮಲ ಭವಾಂಡವು - ಕರ್ಪಟಮದು ಎಷ್ಟು
ಅದರೊಳಡಗಿಹ – ಜಗತ್ರಯಗಳೆಷ್ಟು
ಅದರ ನಾಲ್ಕನೆ ಭಾಗ – ಭೂಮಿಯು ತಾನೆಷ್ಟು
ಅದರ ಏಳನೆ ಭಾಗ – ದ್ವೀಪವೆಷ್ಟು

—ಓಂ—

—ಶ್ರೀ ವೇಮನ ತತ್ವಗಳು—

ಆದರೊಳೊಂಭತ್ತನೆ – ಭಾಗ ತುಂಡುಗಳೆಷ್ಟು
ಆ ತುಂಡಿನೊಳು ಭಾಷಾ – ಸಂಖ್ಯೆ ಎಷ್ಟು.
ಅಂಥ ಭಾಷೆಗಳೊಳ – ಗಪರಿಮಿತವೆನಿಸುತೆ
ತೋರುತಲಿರ್ಪ – ಭೂಭಾಗವೆಷ್ಟು

ಗೀ||
ಕೊನೆಗೆ ಈ ಭೂಮಿಯಾಳುವ – ದೊರೆಗಳೆಷ್ಟು
ಘನರು ಕೆಲಬರು – ಇರುವರೆಂದರಿತು ಕೊನೆಗೆ
ಓರ್ವನಾತನ ದಯೆಯನು – ನಂಬಿದವನ
ವಿಭವವೇನೆಂದು ಪೇಳಲಿ – ಹುಚ್ಚು ವೇಮಾ |೨೬೭|

ಕಣ್ಣು ಕಾವರದೊಳು – ಕಾಣನು ಮರಣವ
ಪದವು ಹತ್ತಿ ತತ್ವ – ಮಹಿಮೆಯರಿಯ
ಭೋಗವಾಂಛೆಯಿಂದ – ಹರನ ಗುರುತಿಸಲಾರ
ವಿಶ್ವತೋಭಿರಾಮ – ಕೇಳು ವೇಮಾ |೨೬೮|

ಕತ್ತೆ ಹಾಲ ತಂದು – ಕಾಸಿ ಸಕ್ಕರೆ ಹಾಕ
ಲದುವೆ ಭಕ್ಷ್ಯವಹುದೆ – ಭ್ರಷ್ಟನಂತೆ
ಎಷ್ಟು ಪೇಳ್ದರೇನು – ಕೊನೆಗು ಭ್ರಷ್ಟನೆ ಅವ
ವಿಶ್ವತೋಭಿರಾಮ – ಕೇಳು ವೇಮಾ |೨೬೯|

ಕಡೆದು ತಾನು ಕೊಡನು – ಪರರು ಪೇಳಿದರು ಆ –
ದರಿಸಿ ಈಯನವನು – ಪರಮ ಲೋಭಿ
ಹೊಟ್ಟೆ ತಿಂಬ ನರನು – ಹಿಟ್ಟು ಹಾಕುವನೆಂತು
ವಿಶ್ವತೋಭಿರಾಮ – ಕೇಳು ವೇಮಾ |೨೭೦|

—ಓಂ—

—ಶ್ರೀ ವೇಮನ ತತ್ವಗಳು—

ಕುಕ್ಕುಟ ಮನನವು – ಕೊಕ್ಕರೆ ಧ್ಯಾನವು
ಯತಿ ಜನಗಳ ಪಣೆಯೊಳ್ – ಬರೆದನಿಂತು
ಹಿಂದೆ ಮಾಡಿದಂಥ – ದೋಷವು ತಗಲಿತೋ
ವಿಶ್ವತೋಭಿರಾಮ – ಕೇಳು ವೇಮಾ |೨೬೧|

ಕಂ॥ ಕುಂಬಾರಗೆ ಸುವಿವೇಕಂ ।
ತುಂಬುವುದಸದಳಮುದಲ್ತೆ? ನಿರಸಿಪಸದನಂ ॥
ನಂಬುತೆ ತಾನೇ ಬೊಮ್ಮಂ ।
ಎಂಬಪನಿದು ಸತ್ಯಮರಿವುದೈ ವರವೇಮಾ |೨೬೨|

ಗೀ॥ ಕೆಟ್ಟ ಕಾಡನುತ್ತು – ನೆಟ್ಟು ಮುಳ್ಳನು ಸುತ್ತು
ಬಟ್ಟೆ ಕಟ್ಟೆ – ನಟ್ಟನಡುವೆ ಬೆಳೆದು
ಕೊಟ್ಟು ದಂಡ - ಸುಖಿಸುವರು ಧಾನವೀಯರು
ವಿಶ್ವತೋಭಿರಾಮ - ಕೇಳು ವೇಮಾ |೨೬೩|

ಕೋತಿಯನ್ನು ತಂದು - ಹೊಸ ಬಟ್ಟೆಯನ್ನುಡಿಸಿ
ಕಳ್ಳರೆಲ್ಲ ಸೇರಿ – ನುತಿಸುವಂತೆ
ನೀತಿಹೀನರೆಡೆಯೊಳ್ – ನಿರ್ಭಾಗ್ಯರಿರ್ಪರು
ವಿಶ್ವತೋಭಿರಾಮ - ಕೇಳು ವೇಮಾ |೨೬೪|

—ಓಂ—

—ಶ್ರೀ ವೇಮನ ತತ್ವಗಳು—

ಖ

ಖಚರವರರು ಭೂಮಿ – ಯೊಳ್ ಕಾಣರೆಂಬರು
ಕಾಣಬಂದರವರ – ಗೌರವಿಪರೊ ?
ತಾಯಿ ತಂದೆ ಗುರುಗಳ್ – ತತ್ಸಮರಲ್ಲವೇ ?
ವಿಶ್ವತೋಭಿರಾಮ – ಕೇಳು ವೇಮಾ |೨೭೫|

ಖಲರು ಬೈದರೆಂದು – ಕಳವಳವೇತಕ್ಕೆ
ಅವರ ಬೈಗಳೆಲ್ಲಿ – ಗಂಟುತಿಹವು
ಸುಜನರು ಬೈದೊಡೆ – ಶಾಪವಾಗುವುದೈಯ್ಯ
ವಿಶ್ವತೋಭಿ ರಾಮ ಕೇಳು ವೇಮಾ |೨೭೬|

ಗ

ಗೀ॥ ಗಡ್ಡ ಮೀಸೆಗ – ಳುದ್ದವಾಗಿದ್ದರೇನು
ದಾನ ಧರ್ಮವ ಮಾಡದೆ – ದಾತನಲ್ಲ
ಎಮ್ಮೆ ತಾನೆಲ್ಲಿಯಾದರು – ಮಾನೆಯಹುದೆ ?
ವಿಮಲ ಗುಣರಾಜ-ಯೋಗೀಂದ್ರ-ವೇಮ ಚಂದ್ರಾ |೨೭೭|

ಗುರು ಚರಣಮಂ ಪಿಡಿಯೆ – ಶುನಕ ತಾಂ ಕಡಿವುದೇ
ಗುರು ಚರಣಮಂ ಬಿಡಲ್ – ಕಡಿವುದದುವೆ
ಶುನಕ ತಿಂದವನೆ ಶ್ರೀ – ಗುರುಲಿಂಗಮೆನಿಪನು
ವಿಶ್ವತೋಭಿರಾಮ – ಕೇಳು ವೇಮಾ |೨೭೮|

—ಓಂ—

—ಶ್ರೀ ವೇಮನ ತತ್ವಗಳು—

ಗುರುವು ಪೇಳ್ವ ವಿದ್ಯೆ - ಗುರುವಿಗೆ ತಿಳಿಯುತ್ತೆ
ಗುರುತು ತಿಳಿಯದಿರಲು - ಗುಣಮದಿಲ್ಲ
ಗುರು ಮಹಿಮೆಯು ವರ – ಗುರುವಿಗೆ ತಿಳಿವುದು
ವಿಶ್ವತೋಭಿರಾಮ - ಕೇಳು ವೇಮಾ |೨೭೯|

ಗಿಡವು ಮೊದಲೊಳಿಲ್ಲ – ಅರಿದು ಶಾಖೆಗಳ್ನಾಲ್ಕು
ಒಟ್ಟಬಯಲೊಳಿಹುದು - ಹಣ್ಣು ಹಣ್ಣು
ತಿಂದರು ರುಚಿಯಿಲ್ಲ – ಸಿಹಿ ಪುಟ್ಟಿಸುವುದದು
ವಿಶ್ವತೋಭಿರಾಮ – ಕೇಳು ವೇಮಾ |೨೮೦|

ಗಂಗೆ ತುಳುಕದಂತೆ - ಹರಿಯುತಲಿರ್ಪುದು
ಕೊಳಕು ಹಳ್ಳ – ಗರ್ಜಿಸುತ್ತ ಪರಿಗುಂ
ದಾತ್ಮವಿತ್ತ ತೆರದೊ – ಅಧಮ ತಾನೀವನೇ ?
ವಿಶ್ವತೋಭಿರಾಮ – ಕೇಳು ವೇಮಾ |೨೮೧|

ಗಾಳಿ ಗಾಳಿ ಕಲೆತು – ಗಗನದಿ ಗಗನವು
ಮಣ್ಣು ಮಣ್ಣು ಕಲೆತು - ಉರಿಯೊಳುರಿಯು
ನೀರು ನೀರು ಕಲೆತು – ನಿರ್ಮಲವಾದುದು
ವಿಶ್ವತೋಭಿರಾಮ - ಕೇಳು ವೇಮಾ |೨೮೨|

ಗುಣ ಗಣಗಳಿದ್ದವನ - ಕುಲವೆಣಿಸಲೇತಕ್ಕೆ
ಗುಣಗಳಿರ್ದೊಡೆ ಕೋಟಿ - ಮಾಳ್ಪದದುವೆ
ಗುಣವಿಲ್ಲದಿರುವವನ - ಕುಲ ದೊಡ್ಡದಾದರುಂ
ಎಣಿಸಲಹುದೆ ನೀಚ – ನವನು ವೇಮಾ |೨೮೩|

—ಓಂ—

—ಶ್ರೀ ವೇಮನ ತತ್ವಗಳು—

ಗುಬ್ಬಿಗೆ ತನುವನ್ನು - ಕೊಯ್ದಿತ್ತ ಶಿಬಿರಾಜ
ವಾರ್ತೆ ಬಿಡದೆ ಕೀರ್ತಿ - ಗಳಿಸಿ ಮೆರೆದ
ನೀಚನನ್ನು ಸ್ಮರಿಸ - ರುಪಕಾರಿಯುಂಡದಿ
ವಿಶ್ವತೋಭಿರಾಮ - ಕೇಳು ವೇಮಾ |೨೪|

ಗೊಡ್ಡು ಹಸುವ ಕರೆವುದಕೆ - ಪಾತ್ರೆ ಕೊಂಡೊಯ್ಯೆ
ಹಾಲು ಕೊಡದೆ ಹಲ್ಲು - ಮುರಿಯುವದೆಗುಂ
ಲೋಭಿ ನರನ ಕೇಳೆ - ಲಾಭವೇನಿಲ್ಲವೈ
ವಿಶ್ವತೋಭಿರಾಮ - ಕೇಳು ವೇಮಾ |೨೫|

ಸೀ|| ಗಯನಂಬರೀಷನು - ಘನ ಶಶಿಬಿಂದುವು
ಅನಘನು ಪೃಥು - ಮರುದ್ವಂತನೈದೆ
ಭರತ ಸಹೋತ್ರನು - ವರ ರಾಮಚಂದ್ರನು
ಧೀರ ದಿಲೀಪ - ಮಾಧಾತ ಸಗರ
ಭಾರ್ಗವನಾ ಯಯಾತಿಯು - ಭಗೀರಥ ಶಿಬಿ
ಮೊದಲಾದ ರಾಜಾಧಿ - ರಾಜರೆಲ್ಲ
ಪ್ರಖ್ಯಾತ ನೃಪತಿಗ - ಳೇಳು ಒಂಭತ್ತು
ಮತ್ತಂ ಹದಿನಾರ್ವರು - ಪ್ರಬಲರೆನಿಸಿ

ಗೀ||

ಇಂತು ನೃಪವರ್ಯ - ರಗಣಿತ - ಮಡಿದರಲ್ತೆ ?
ನೋಡೆ ನೋಡಲ್ಕೆ ನಿನ್ನಯ - ಮಾಯೆ ಚೋದ್ಯಂ
ವಿಶ್ವದೊಳ್ ಸರ್ವವೆಲ್ಲ - ವ ಶಾಶ್ವತಮದು
ವಿಮಲ ಗುಣರಾಜ ಯೋಗೀಂದ್ರ - ವೇಮಚಂದ್ರಾ |೨೬|

—ಓಂ—

—ಶ್ರೀ ವೇಮನ ತತ್ವಗಳು—

ಸೀ॥ ಗುರುಬೋಧೆ ತಿಳಿಸದ - ಕುಟಿಲ ಶಾಸ್ತ್ರಂಗಳು
ಪರಿಕಿಸಲದರಿಂದೆ - ಫಲಮದೇನು
ಆತ್ಮೈಕ್ಯವರಿಯದ - ಅಖಿಳ ಯೋಗಂಗಳ
ಸಾಧಿಸೆ ಫಲಮೇನು - ಸತ್ಯಮಹ:ದು
ತನ್ಮಯತ್ವವನರಿಯ - ಲಾರದ - ಮುಗ್ಧರ
ಸೇವೆಯ ಮಾಡಲೇಂ — ಸಿದ್ಧಿಯಹುದು
ತಮ್ಮ ಕೇಡರಿಯದ — ಪಲವು ವಿದ್ಯಂಗಳ
ಓದಲು ಫಲಮೇನು - ಸಿದ್ಧಿಸುವುದು

ಗೀ॥

ಎನುತೆ ಸದ್ಗುರು ಬೋಧೆಯ - ನರಿತು ನಿತ್ಯ
ವರಿಯದಿರ್ಪವರೀ ಮಾಯೆ - ಜಗದಿ ಬಿದ್ದು
ಹತ್ತದಿಹರೆಂದು ತಿಳಿಯುತೆ — ನಯನದೊಳ್ಪೈದೆ
ವಿವರಿಸಿದನಿಂತು - ವೇಮಣ್ಣ ದೇಶಿಕೇಂದ್ರಂ |೨೮೭|

ಗೀ॥ ಗುಣವತಿ ಸತಿಯು ತಾಂ - ಗೃಹವಲಂಕರಿಪಳು
ಕತ್ತಲಲ್ಲಿ ದೀಪ — ಬೆಳಗುವಂತೆ
ದೇವಿಯಿರ್ಪ ಮನೆಯು - ದೇವಾಲಯಮುದಯ್ಯ
ವಿಶ್ವತೋಭಿರಾಮ - ಕೇಳು ವೇಮಾ |೨೮೮|

ಗುರುವಿಗೆ ಹಸಿಯ ಸೊ - ಪ್ಪಾದರುಂ ಕೊಡರು ತಾ
ವರಿಯೆ ವೇಶ್ಯೆಗೀವ - ರರ್ಥಮೆಲ್ಲ
ಗುರುವು ವೇಶ್ಯೆಗಿಂತ - ಗುಣಹೀನನಾದನೇಂ ?
ವಿಶ್ವತೋಭಿರಾಮ - ಕೇಳು ವೇಮಾ |೨೮೯|

—ಶ್ರೀ ವೇಮನ ತತ್ವಗಳು –

ಗಿಳಿಯುದರದಲ್ಲಿ ಶ್ರೀ - ಶುಕಮುನಿಯುದಿಸುತ್ತಿ
ಮತ್ತೆ ಖರದೊಳವನು – ಜಾತನಾದ
ಇಂಥ ಋಷಿಯ ಕುಲವ - ನೆಣಿಸಲು ಸಲ್ಲದು
ವಿಶ್ವತೋಭಿರಾಮ - ಕೇಳು ವೇಮಾ |೨೯೦|

ಗಂಗೆ ಗೋವು ಹಾಲು - ಒಂದು ಸವುಟೇ ಸಾಕು
ಕುಂಭವಾದೊಡೇಕೆ - ಕತ್ತೆ ಹಾಲು
ಭಕ್ತಿಲಿಡುವ ಕೂಳು - ಒಂದು ತುತ್ತೇ ಸಾಕು
ವಿಶ್ವತೋಭಿರಾಮ – ಕೇಳು ವೇಮಾ |೨೯೧|

ಗುಣಯುತನಿಗೆ ಮೇಲು - ಉಗುರಷ್ಟು ಮಾಡ್ದರುಂ
ಬೆಟ್ಟವಾಗ್ವುದವನ - ಗುಣಗಳಿಂದೆ
ಬೆಟ್ಟದಷ್ಟು ಮೇಲು – ಗುಣಹೀನನರಿವನೇಂ ?
ವಿಶ್ವತೋಭಿರಾಮ - ಕೇಳು ವೇಮಾ |೨೯೨|

ಗ್ರಾಸವಿಷ್ಟು ದೊರೆಯ - ದತಿಕಷ್ಟ ಪಡುತಿಹ
ವಿದ್ಯೆಯಿದ್ದು ಫಲಮದೇನು - ಮದರಿಂ
ಹಸಿಯ ಮಡಕೆಯಲ್ಲಿ - ನೀರಿಡೆ ನಿಲ್ವುದೇಂ ?
ವಿಶ್ವತೋಭಿರಾಮ – ಕೇಳು ವೇಮಾ |೨೯೩|

ಗುಹೆಗಳ್ಸಾಸಿರ ಪೊಕ್ಕರುಂ - ಗುಣಮದಿಲ್ಲ
ನಯವಿನಯ ಗುರುಭಕ್ತಿಯು - ನೈಜಮಾಗಿ
ಮಹಿತ ತತ್ವಸುಭಾವವು - ಮಧುರ ಮಾಗ –
ಲದನು ಸಾಧಿಪುದುತ್ತಮ - ಮತವು ವೇಮಾ |೨೯೪|

—ಓಂ—

—ಶ್ರೀ ವೇಮನ ತತ್ವಗಳು—

ಗಡಿಗೆ ಕುಂಭವೆನಲು – ಬೆಟ್ಟ ಪರ್ವತವೆನಲು
ಉಪ್ಪು ಲವಣವೆನ - ಲಿವಿಲ್ಲವೊಂದೇ
ಭಾಷೆ ಬೇರೆಯಾದೊಡುಂ – ತತ್ವವೊಂದೆಯೇ
ವಿಶ್ವತೋಭಿರಾಮ - ಕೇಳು ವೇಮಾ |೨೯೫|

ಗೇಕು ಗಡ್ಡೆಗೇಕೆ - ಕೊಟ್ಟನು ವಾಸನೆ
ಕುಂದನವವಗೇನು - ಕೇಡೆಣಿಸಿತು
ಬ್ರಹ್ಮನ ಕೈಗಳು - ಹಾಳಾದ ಕೈಗಳು
ವಿಶ್ವತೋಭಿರಾಮ - ಕೇಳು ವೇಮಾ |೨೯೬|

ಗಣಿಗಳಲ್ಲಿ ಲೋಹ - ಗಣಗಳೊಳಿಲ್ಲವು
ಕಬ್ಬಿಣವೊಂದೆ – ಸರ್ವಕ್ಕು ಸುಲಭ
ಇದನಲಕ್ಷ್ಯ ಮೂಳ್ಪ -ರೆಲ್ಲೆಡೆ ಇಹುದರಿಂ
ವಿಶ್ವತೋಭಿರಾಮ – ಕೇಳು ವೇಮಾ |೨೯೭|

ಗಾಳಿಯಲ್ಲಿ ಪುಟ್ಟಿ – ಗಾಳಿಯಲ್ಲಿಯೆ ಬೆಳೆದು
ಗಾಳಿಯರಿಯಲಾರ - ದಿಹರು ನರರು
ಗಾಳಿಯುಲ್ಲಿಯಾತ್ಮ – ಇಹುದದೇ ತತ್ವವು
ವಿಶ್ವತೋಭಿರಾಮ - ಕೇಳು ವೇಮಾ |೨೯೮|

ಗುಣಹೀನನಾದವನ - ಗುಣವೆಣಿಸಲೇತಕ್ಕೆ
ಬುದ್ಧಿಹೀನ ಮೂಳ್ಪ - ಪೂಜೆ ಏಕೆ
ಮನಸು ಕುದುರದವನ – ಮಂತ್ರವೇತಕ್ಕಯ್ಯ
ವಿಶ್ವತೋಭಿರಾಮ - ಕೇಳು ವೇಮಾ |೨೯೯|

—ಶ್ರೀ ವೇಮನ ತತ್ವಗಳು—

ಗಂಡಹೆಂಡಿರಳಿದು – ಮತ್ತೆ ಭೂಲೋಕದಿ
ತಾಯಿ ಮಗನಾಗುತ್ತೆ – ಜನಿಸುತಿಹರು
ಧರಣಿ ಜನರಿಗೆಲ್ಲ – ಹೆಂಡತಿಯೇ ತಾಯಿ
ವಿಶ್ವತೋಭಿರಾಮ – ಕೇಳು ವೇಮಾ |೩೦೦|

ಕಂ|| ಗಂಗಾಧರನೇ ದೇವರು |
ಸಂಗೀತವೆ ಕಿವಿಗೆ ಸೊಂಪು ಸರ್ವಜ್ಞರಿಗುಂ ||
ಬಂಗಾರವೆ ಉಪಭೋಗವು |
ಅಂಗಜನೇ ಮೃತ್ಯು ಹೇತುವರಿಯಲ್ ವೇಮಾ |೩೦೧|

ಗಂಗಾ ಯಮುನೆಯ ಮಧ್ಯದಿ |
ಬಂಗಾರದ ಬೊಂಬೆಯಂತೆ ಬಾಲಕಿಯಿರ್ಪಳ್ ||
ಸಂಗತಿ ತಿಳಿದಾಚರಿಸಲು |
ಭಂಗವ ನೀಗುತ್ತೆ ಮುಕ್ತಿಪರನಹ ವೇಮಾ |೩೦೨|

ಗೀ|| ಗುರುವಿಲ್ಲದಿಹ ವಿದ್ಯೆ – ಗುರುತಾಗಿ ದೊರಕದು
ದೊರೆಯಿಲ್ಲದಿಹ ಧರೆ – ತೃಪ್ತಿಪಡದು
ಗುರು ವಿದ್ಯೆಯಿಲ್ಲದೆ – ವರದ್ವಿಜನಪ್ಪನೇ
ವಿಶ್ವತೋಭಿರಾಮ – ಕೇಳು ವೇಮಾ |೩೦೩|

ಕಂ|| ಗುರುವೆಂದೊಡೆ ಧೇನುವೆ ತಾಂ |
ವರಶಿಷ್ಯನೆ ವತ್ಸನಾಗಿ ವರ್ತಿಪನನಿಶಂ ||
ಅರಿತಾಗಲೊಂದು ವೇಳೆಯೊ |
ಕ್ಷಿರದೀವಂ ನಿರುಪಮಾಂಮೃತವ ತಿಳಿ ವೇಮಾ |೩೦೪|

—ಓಂ—

—ಶ್ರೀ ವೇಮನ ತತ್ವಗಳು—

೧೬|| ಗುರುತನರಿತು ಪೇಳ್ವ - ಗುರುವಾರುವಿಲ್ಲವು
ಗುರುತನರಿವ ಶಿಷ್ಯ - ನಾವನಿಲ್ಲ
ಗುರುವು ಶಿಷ್ಯರಿವರು - ಕುರುಡೆತ್ತು ಹೊಲವಯ್ಯ
ವಿಶ್ವತೋಭಿರಾಮ - ಕೇಳು ವೇಮಾ |೩೦೫|

ಗುರು ಶಿಕ್ಷೆಯಿಲ್ಲದೆ – ಗುರುತೆಂತು ಸಾಧ್ಯವೈ
ಧಾತನೇನು ಅವನ – ತಾತನೇನು
ಬೀಗಡ ಕೈಯಿರದೆ – ಬೀಗಮೇಂ ಬರ್ಪುದೇ
ವಿಶ್ವತೋಭಿರಾಮ – ಕೇಳು ವೇಮಾ |೩೦೬|

ಗಡಿಗೆ ತೂತು ಬಟ್ಟೆ - ಯಿಡುತು – ಪಯೋಗಿಸೆ
ಕೆಲಸ ನಡೆಯುತಿಹುದು - ಒಳ್ಳಿತಾಗಿ
ಕೆಟ್ಟು ಪೋದ ನರನು - ದಿಟ್ಟನಪ್ಪುದು ಕಷ್ಟ
ವಿಶ್ವತೋಭಿ ರಾಮ – ಕೇಳು ವೇಮಾ |೩೦೭|

ಗೂಬೆ ಪೊಕ್ಕ ಮನೆಯು – ಕೆಟ್ಟುಪೋಗುವುದೆಂದು
ಹೊರಟು ಹೋಗುತಿಹರು – ಹುಚ್ಚು ಜನರು
ಗೂಬೆಯಿಂದ ಕೇಡು – ಬರುವುದು ತಾನೆಂತು
ವಿಶ್ವತೋಭಿರಾಮ - ಕೇಳು ವೇಮಾ |೩೦೮|

ಗುರುವೆಂದು ಪೇಳುತ್ತೆ – ನೆಪದೋಚಿಕೊಳ್ಳುತ್ತೆ
ತಿರುಗುವವನು ತನ್ನ – ನರಿಯನವನು
ಪರಿಕಿಸಲವಿವೇಕಿ – ದಾಸಿಯ ಪುತ್ರನೈ
ವಿಶ್ವತೋಭಿರಾಮ - ಕೇಳು ವೇಮಾ |೩೦೯|

ಗೂಬೆಯಂತೆ ಕಣ್ಣು – ತಿರುಗಿಸೆ ಗುಣಮದೇಂ
ಲೋಭ ಮೋಹವಡಗೆ – ಲಾಭಮಹುದು
ಈ ಭುವಿಯೊಳು ಬಿಕ್ಷ – ವೆತ್ತುವುದಾವಗಂ
ಸಾಭಿಲಾಷೆಯೊಳಿದು – ಸಹಜ ವೇಮಾ |೩೧೦|

ಗಾಳಿಯಿಲ್ಲದಿರ್ದ ಗಗನ – ಮೇಘಾಳಿಯೊಲ್
ಅಲೆಗಳಿಲ್ಲದಿರ್ಪ – ಜಲಧಿಯಂತೆ
ನಿರ್ವಿಕಾರನಾಗಿ – ನಿಶ್ಚಲ ತಾನಿರ್ಪ
ವಿಶ್ವತೋಭಿರಾಮ - ಕೇಳು ವೇಮಾ |೩೧೧|

ಗುರುವು ಬಂದ ವೇಳೆ – ಕೂತವರೇಳದ
ತುಂಟ ನರರಿಗೆಂತು – ಮುಕ್ತಿಯಹದು
ಪತಿಯು ಲೆಕ್ಕಿಸದಿಹ – ಸತಿಗೆ ಗತಿ ದೊರಗುಮೇಂ ?
ವಿಶ್ವತೋಭಿರಾಮ – ಕೇಳು ವೇಮಾ |೩೧೨|

ಘ

೧|| ಘನತರ ವೃಕ್ಷದೊಳ್ - ಕಾಯೊಂದು ಪುಟ್ಟಿತು
ಮೂರು ಕಂಗಳುಂಟು – ಶಿವನುಮಲ್ಲ
ಮೇಲೆ ಚರ್ಮವಿಹುದು – ಯೋಗಿಯು ತಾನಲ್ಲ
ಸಿಹಿಯ ನೀರಿನಿಂದ - ಲೆಸೆಗು ವೇಮಾ |೩೧೩|

ಘಟದ ಜಲದೊಳೈದೆ – ಗಗನವು ಕಾಣ್ಬುದು
ಘಟದ ಜಲವಿಲ್ಲದೆ – ಗಗನವಿಲ್ಲ
ಘಟದೊಳು ಜ್ಯೋತಿಯಂ – ಕ್ರಮವಾಗಿ ನೋಳ್ಪುದು
ವಿಶ್ವತೋಭಿರಾಮ – ಕೇಳು ವೇಮಾ |೩೧೪|

ಕಂ॥ ಘನಸಾರವಗ್ನಿ ಸೋಂಕಲು |
ಘನಸಾರಮುದಪ್ಪುದಲ್ತೆ ? ಕಾರಣ ವಿದ್ಯಾ ॥
ಘನಸಾರವು ವಿದ್ಯಾಗ್ನಿಗೆ |
ಘನಸಾರವೆ ಕಂಟಕಮುದೆನಿಪುದ್ಯೆ ವೇಮಾ |೩೧೫|

ಚ

ಗೀ॥ ಚಂಡಾಲನೆಂದೇಕೆ – ನಿಂದಿಸುತಿರ್ಪಿರಿ
ಒಡಲ ರಕ್ತಮಾಂಸ – ಮೆಲ್ಲವೊಂದೆ
ಆದರೊಳಡಗಿದವನ – ಕುಲಮದಾವುದು ಪೇಳಿ
ವಿಶ್ವತೋಭಿರಾಮ – ಕೇಳು ವೇಮಾ |೩೧೬|

ಚಿತ್ತಶುದ್ಧಿಯಿಂದೆ – ಮಾಡಿದ ಪುಣ್ಯವು
ಅಲ್ಪವಾದೊಡದುವೆ – ದೊಡ್ಡದಹುದು
ಬೀಜವೆಷ್ಟು ನೋಡ – ಆಲದ ವೃಕ್ಷಕ್ಕೆ
ವಿಶ್ವತೋಭಿರಾಮ – ಕೇಳು ವೇಮಾ |೩೧೭|

—ಶ್ರೀ ವೇಮನ ತತ್ವಗಳು—

ಚಿಪ್ಪಿನಲ್ಲಿ ಬಿದ್ದ – ಹನಿಯು ಮುತ್ತಾಯಿತು
ನೀರೊಳ್ಬಿದ್ದ ಹನಿಯು - ನೀರದಾಯ್ತು
ಪ್ರಾಪ್ತವಿದ್ದ ಕಡೆಯೊಳ್ – ಫಲವು ತಪ್ಪುವುದೇಕೆ
ವಿಶ್ವತೋಭಿರಾಮ – ಕೇಳು ವೇಮಾ |೩೧೮|

ಚುಕ್ಕೆಗಳಿಷ್ಟೆಂದು - ಲೆಕ್ಕಿಸೆ ಬರ್ಪುದು
ಸೂರ್ಯಮಂಡಲವನ್ನು - ನೋಡಬಹುದು
ಆತ್ಮನಾಥನೊಡನೆ - ಆಟವುಸಾಧ್ಯವು
ವಿಶ್ವತೋಭಿರಾಮ - ಕೇಳು ವೇಮಾ |೩೧೯|

ಚಿತ್ತವೆಂಬ ಬೇರು - ಶಿಥಿಲವಾದಾಗಲೇ
ಶಕ್ತಿಯೆಂಬ ಮರವು - ಮುರಿವುದಲ್ತೆ ?
ವಾಂಛೆಯೆಂಬ ಶಾಖೆಗಳು - ಒಣಗಿಪೋಪವು
ವಿಶ್ವತೋಭಿರಾಮ – ಕೇಳು ವೇಮಾ |೩೨೦|

ಚಾಡಿಕೋರ ಸಾಯೆ - ಮನೆವರೆಗು ಪೋಗುವರು
ಒಂತಿಗಷ್ಟೆ ಹೊರತು – ಅಳುವರಿಲ್ಲ
ನರಿಯು ಸಾಯಲಾಗಿ - ಕುರಿಯೇತಕಳುವುದು
ವಿಶ್ವತೋಭಿರಾಮ - ಕೇಳು ವೇಮಾ |೩೨೧|

ಚಳ್ಳಿಯುಂಟಿದಾಗ - ಊಟವು ಸೇರದು
ಸ್ತ್ರೀಯು ನೋಡಿದಾಗ - ನೀತಿಯಿರದು
ಕೇಡು ಮೂಡಿದಾಗ ಮಾತುಗಳ್ ರುಚಿಸವು
ವಿಶ್ವತೋಭಿರಾಮ - ಕೇಳು ವೇಮಾ |೩೨೨|

—ಶ್ರೀ ವೇಮನ ತತ್ವಗಳು —

ಚಾಡಿಕೋರನ್ನೈದೆ - ಜಗಳವ ಮಾಡುವ
ಸಾಧುಜನರ ಸೇರಿ - ಬಾಧಿಸುವನು
ಯಮನ ಹೊರತು ಸರ್ವರುಂ - ಭಯಪಡುವರು
ವಿಶ್ವತೋಭಿರಾಮ - ಕೇಳು ವೇಮಾ |೩-೨೩|

ಕಂ|| ಚಿತ್ರದ ಬೊಂಬೆಯು ತೆರದೊಳ್ ।
ಚಿತ್ತವಿಕಲ್ಪಂಗಳುಳಿದು ಚಿರತರ ಮತಿಯಿಂ ॥
ಚಿತ್ತವನ್ನರಿತವನೇ ತಾ ।
ನತ್ಯಧಿಕ ಜ್ಞಾನಿಯಾಗುವನು ತಿಳಿ ವೇಮಾ |೩-೨೪|

ಗೀ|| ಚೋರರಿಗೆ ಸಿಕ್ಕಿ - ಪೋದವೋಲಾಗುತಿಹುದು
ಸಾಗಿ ಗುಣಿಸಿದ ಮಂತ್ರವು - ನೀರೆನಿಪುದು
ಮಾತಿನಿಂ ಪರಮಾತ್ಮನು - ಮತ್ತೆ ಸಿಗನು
ಚಿತ್ತದೊಳು ಸ್ವಸ್ಥವಿಲ್ಲದೆ - ಕೆಡುವ ವೇಮಾ |೩-೨೫|

ಚಿತ್ತಶುದ್ಧಿಯೊಂದೆ – ಶ್ರೇಷ್ಠ ಲಾಂಛನವಹುದು
ಅಖಿಲ ಪುಣ್ಯಕಾರ್ಯ – ನಿರ್ವಹಣವು
ಇತರವಾವುದುಂ – ಸರಿಬಾರದು
ವಿಶ್ವತೋಭಿರಾಮ - ಕೇಳು ವೇಮಾ |೩-೨೬|

—ಓಂ—

—ಶ್ರೀ ವೇಮನ ತತ್ವಗಳ.—

ಜ

ಗೀ॥ ಜಾತಿ ನೀತಿ ಬೇರೆ - ಜನ್ಮಂಗಳೊಂದೆಯೇ
ಅರಿಯೆ ತಿಂಡಿ ಬೇರೆ - ಹಸಿವು ಒಂದೇ
ಹಸುಗಳ್ಬಣ್ಣ ಬೇರೆ - ಹಾಲೆಲ್ಲ ಒಂದೆಯೇ
ವಿಶ್ವತೋಭಿರಾಮ - ಕೇಳು ವೇಮಾ |೩೨೭|

ಜೀವ ಜೀವ ತೆಗೆದು ಜೀವಿಗೆ ಹಾಕಲು
ಜೀವಿಯಿಂದ ನಿನಗೆ - ದೊರೆವುದೇನು
ಜೀವಹಿಂಸಕರಿಗೆ - ದೊರೆವುದೇ ಮುಕ್ತಿಯು
ವಿಶ್ವತೋಭಿರಾಮ – ಕೇಳು ವೇಮಾ |೩೨೮|

ಜಾತಿ ಜನಗಳೆಲ್ಲ - ನೀತಿ ವಿದ್ಯೆಗಳರಿದು
ಜಾಣತನದೊಳೈದೆ - ನಡೆಯುತಿಹರು
ಬ್ರಾಹ್ಮಣರೇತರಕ್ಕೊ – ಬ್ರಹ್ಮವನರಿಯರು
ವಿಶ್ವತೋಭಿರಾಮ - ಕೇಳು ವೇಮಾ |೩೨೯|

ಜಗದಿ ಒಕ್ಕಲಿಗರ - ವಂಶದಿ ವೇಮನ
ಜನಿಸಿ ಕೀರ್ತಿಲತೆಯ – ಹಬ್ಬಿಸಿದನು
ಸತ್ಯಮತವನೈದೆ – ಜನರಿಗೆ ಬೀರಿದ
ವಿಶ್ವತೋಭಿರಾಮ - ಕೇಳು ವೇಮಾ |೩೩೦|

—ಓಂ—

—ಶ್ರೀ ವೇಮನ ತತ್ವಗಳು—

ಜನನ ಮರಣದಲ್ಲಿ - ಸ್ವಾತಂತ್ರ್ಯಹೀನನು
ಮೊದಲು ಕರ್ತನಲ್ಲ – ತುದಿಗುಮಲ್ಲ
ನಡುವೆ ಕರ್ತನೆನಲು - ನಗೆಗೀಡದಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ |೩೩೧|

ಜನನ ಕಾಲದಲ್ಲಿ - ಜನಿವಾರವಿಲ್ಲವು
ತನುಗುವಿಃಲ್ಲ ತನ್ನ , ತಾಯಿಗಿಲ್ಲ
ನಡುವೆ ದಾರವಿಡಲು - ನಗೆಗೀಡದಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ |೩೩೨|

ಜಾತಿಗಳೊಳಗೆಂಥ – ಜಾತಿ ಮುಖ್ಯವುದೆಂದು
ತಿಳಿಯದೈದೆ ತಿರುಗ - ಲೇನು ಫಲವು
ತಿಳಿದ ಮನುಜನ ಜಾತಿ - ಯಾವುದಾದರೆಯೇನು
ವಿಶ್ವತೋಭಿರಾಮ - ಕೇಳು ವೇಮಾ |೩೩೩|

ಜೇನು ಸಕ್ಕರೆ ಮತ್ತೆ – ಸಿಹಿಯು ಮಾವಿನಹಣ್ಣು
ತಿಂದ ಹೊರತು ಸಿಹಿಯು - ತಿಳಿವುದಿಲ್ಲ
ನೋಡಿದೊಡನೆ ಪುಟ್ಟುವುದು - ಸ್ತ್ರೀಯೊಳ್ವ್ಯಾಮೋಹ
ವಿಶ್ವತೋಭಿರಾಮ – ಕೇಳು ವೇಮಾ |೩೩೪|

ಜನನ ಮರಣಗಳೆಲ್ಲ – ಸ್ವಪ್ನಸುಷುಪ್ತಿಗಳ್
ಜಗಗಳೆಲ್ಲ ಬಿಸಿಲ್ಗು - ದುರೆಗಳೆಂಬರ್
ಅವನಿಯಲ್ಲಿ ಜನಗ ಳರಿಯರೀ ವಿಧವನ್ನು
ವಿಶ್ವತೋಭಿರಾಮ _ ಕೇಳು ವೇಮಾ |೩೩೫|

—ಶ್ರೀ ವೇಮನ ತತ್ವಗಳು—

ಜಂತುರಾಶಿಯಲ್ಲಿ – ಜನ್ಮಿಸಿ ಜನ್ಮಿಸಿ
ಹುಚ್ಚು ಹಿಡಿದ ತೆರದಿ – ತಿರುಗಿ ತಿರುಗಿ
ತನುವು ನಿತ್ಯವೆನಲು – ದೈವವು ನಗುವುದೈ
ವಿಶ್ವತೋಭಿರಾಮ – ಕೇಳು ವೇಮಾ |೩೩೬|

ಜಪವು ಬಾಹ್ಯಪೂಜೆ – ಮಿಗಿಲು ಮಾಡಿದ ಮೇಲೆ
ಕಪಟವನ್ನು ಬಿಡದೆ – ಕೆಟ್ಟ ನರರು
ಮುಕ್ತಿ ಸೂರೆಗೊಳದೆ – ಮುಳುಗಿದರ್ತಮದೊಳು
ವಿಶ್ವತೋಭಿರಾಮ – ಕೇಳು ವೇಮಾ |೩೩೭|

ಜೇನ ಇರವ ಜೇನು – ನೊಣವರಿತಿರ್ಪುದು
ಸುಮಪರಾಗವನ್ನು – ಭ್ರಮರವರಿಗುಂ
ಪರಮಯೋಗಿ ದಾರಿ – ವರಭಕ್ತನರಿವನು
ವಿಶ್ವತೋಭಿ ರಾಮ – ಕೇಳು ವೇಮಾ |೩೩೮|

ಜಾಲಿಗಿಡದ ಮುಳ್ಳು – ಸಂಗಡ ಜನಿಪುದು
ಬೀಜದಿಂದ ಹೊರಗೆ – ಹೊರಟ ತೆರದಿ
ಖಲಗೆ ದುರ್ಬುದ್ಧಿಯು – ಮುಂಚೆಯೇ ಜನಿಪುದು
ವಿಶ್ವತೋಭಿರಾಮ – ಕೇಳು ವೇಮಾ |೩೩೯|

ಜೀವಲಿಂಗ ಪೂಜೆ – ಮಾಡಿದ ನರನಿಗೆ
ಶಿಲೆಯ ರೂಪದಲ್ಲಿ – ಚಿಂತೆ ಏಕೆ
ಮಧುವ ಸೇವಿಸುವಗೆ – ವಿಷವೆಂತು ರುಚಿಪುದು
ವಿಶ್ವತೋಭಿರಾಮ – ಕೇಳು ವೇಮಾ |೩೪೦|

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಜಗಮರಿಯೆ ಇಂದ್ರಜಾಲವು ।
ಜಗಮೆಂದೊಡೆ ಮಾಯೆ ಮತ್ತೆ ಜನ್ಮಂಗಳಿಗುಂ
ಭಗವಂತನಾದ ಬೊಮ್ಮಂ ।
ನಿಗಮಾಗಮ ನಿರ್ವಿಕಾರ ನಿರ್ಗುಣ ವೇಮಾ ।೩೪೧।

ಜೀವಾತ್ಮನೆಂದುಮಿರುತಿಹ ।
ಠಾವಂ ತಾನರಿಯಲಾರದ ಸ್ಥಿರಮಿದನಂ ॥
ಭಾವದೊಳರಿಯದೆ ತಿರುಗುವ ।
ಜೀವಿಗೆ ಭೂಮಿಯೊಳು ಮುಕ್ತಿ ದೊರೆವುದೆ ವೇಮಾ ।೩೪೨।

ಗೀ॥ ಜೀವಿ ಜೀವಿ ಕೊಲ್ಲೆ – ಶಿವನ ಕೊಂದಂತೆಯೇ
ಜೀವವಾವುದೆನಲು – ಶಿವನುಮಲ್ಲೇಂ ?
ಭಾವದಲ್ಲಿ ಬೇಗ – ಭಾವಿಸಿ ನೋಳ್ಪುದು
ವಿಶ್ವತೋಭಿರಾಮ – ಕೇಳು ವೇಮಾ ।೩೪೩।

ಕಂ॥ ಜ್ಞಾನಿಗೆ ಕರ್ಮಮದೇತಕೆ।
ಜ್ಞಾನಿಗೆ ಕರ್ಮಮದು ಸಲ್ಲದಿಳೆಯೊಳು ನೋಡಲ್ ॥
ಜ್ಞಾನಮೆ ಕರ್ಮಮದಾದರು ।
ಮಾನವನಿಗೆ ಕರ್ಮಮುಕ್ತಿ ಮಹಿಯೊಳ್ ವೇಮಾ ।೩೪೪।

ಗೀ॥ ಜಿಹ್ವೆ ರಸದಿಂದಲೇ - ಜೀವಪೋಷಣೆಯದು
ಬ್ರಹ್ಮವನ್ನ ರಸವು – ಸತ್ಯಮಲ್ತೆ ?
ರಸವ ಸೇವಿಸದಿಹ – ರಾಜರುಂ ಸಾಯರೇ
ವಿಶ್ವತೋಭಿರಾಮ - ಕೇಳು ವೇಮಾ ।೩೪೫।

—ಓಂ—

—ಶ್ರೀ ವೇಮನ ತತ್ವಗಳು—

ಜೀವನೆನಲು ನೀವು - ಸಿಕ್ಕುಬೀಳುವುದೇಕೆ
ವಾಯುವಾಗಸದೊಳು – ವಹ್ನಿಸೇರಿ
ದೇಹಿಯೆನಿಸಿ ಮೆರೆವ - ದೇಹದಿ ನಿಲ್ಲುತ್ತೆ
ವಿಶ್ವತೋಭಿರಾಮ - ಕೇಳು ವೇಮಾ |೩೪೬|

ಜಗದೊಳರಸಲಿಲ್ಲ – ಜಲದೊಳಗುಂ ಇಲ್ಲ
ನಿಗಮವೇದ್ಯವೆನಿಪ - ನಿಜಪದನುಡು
ಸುಗುಣ ನಿರ್ಗುಣಗಳ – ಸಾಧಿಸಿ ನೋಡಯ್ಯ
ವಿಶ್ವತೋಭಿರಾಮ - ಕೇಳು ವೇಮಾ |೩೪೭|

ಜಾತಿ ಮತಗಳೆಂದು – ಜನರಡರೊಳು ಸಿಕ್ಕಿ
ಭಾವ ಪರವಶರಾಗು – ತಿರುವರವರು
ಸತ್ತು ಸತ್ತು ಪುಟ್ಟು – ತಿರುವರೈ ಮೂರ್ಖರು
ವಿಶ್ವತೋಭಿರಾಮ - ಕೇಳು ವೇಮಾ |೩೪೮|

ಜೀವ ಭಾವವರಿಯೆ – ಕೆಡದೆಂದಿಗುಂ ಮತಿ
ದೈವವನ್ನರಿಯಲು – ಬುದ್ಧಿ ಪರಿಗುಂ
ತೇಜಮುದಯಿಸಿದೊಡೆ – ತಿಮಿರವೆಲ್ಲಿರ್ಪುದು
ವಿಶ್ವತೋಭಿರಾಮ - ಕೇಳು ವೇಮಾ |೩೪೯|

ಕಂ|| ಜವೆದಾಟಲೇಕೆ ಗುರಿಯಂ |
ಭವ ಹರಮುಹ ಭಕ್ತಿಯೊಂದಿ ಪರಿಪಕ್ವದೊಳಾ ||
ಧೃವವೆನಿಪ ಬಯಲ ಸೇರಲ್ |
ಶಿವ ತನ್ಮಯ ಚಿನ್ಮಯಮುಡು ಲಭಿಪುದು ವೇಮಾ |೩೫೦|

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಜ್ಞಾನನಿಷ್ಠೆಯೊಂದಿ - ದೇಹಮಂ ಮರೆವವ
ಕಾಮಿಯಲ್ಲ ಮೋಕ್ಷ – ಕಾಮಿಯವನು
ನೇಮನಿಷ್ಠೆಯುಳಿದು – ನಿರ್ಗುಣನಾಗುವ
ವಿಶ್ವತೋಭಿರಾಮ - ಕೇಳು ವೇಮಾ |೩೫೧|

ಕಂ॥ ಜಗದೊಳು ಗುರುವುದಯಿಸಿದೊಡೆ ।
ಜಗದೊಳಗಿಹ ಜನರು ಶರಣು ಶರಣೆಂದೆನರೇಂ ॥
ಜಗಮರಿತು ಮುಗಿಯೆ ನೋಡುವ ।
ನಿಗಮಾಗಮ ನಿರ್ವಿಕಾರ ನಿಪುಣನು ವೇಮಾ |೩೫೨|

ಜನ್ಮವನೆತ್ತಿದ ಮನುಜನು ।
ಚಿನ್ಮಯ ಪರಿಪೂರ್ಣ ಮಹಿಮ ಚಿತ್ತನ್ನರಿಯಲ್ ॥
ತನ್ಮಯತೆಯೊಂದಲಿರ್ಪಂ ।
ಚಿನ್ಮಯನಾಹರನ ಮನದೊಳಿರಿಪನು ವೇಮಾ |೩೫೩|

ಜೀವಾಧಾರವು ನೀರದು ।
ಜೀವಾಧಾರಮದು ಗಾಳಿ ಚಲಿಸುತಲನಿಶಂ ॥
ತಾವೇನೊಂಡಂ ಕೋರದೆ ।
ಜೀವಿಗಳಿರ್ದೆಡೆಯೊಳೆಲ್ಲ ದೊರೆವುವು ವೇಮಾ |೩೫೪|

ಜನನಿಯ ಲೋಪವನೆಣಿಸುತೆ ।
ಮನುಜನು ಚಿಂತಿಸುವನಾವಗಂ ಮಾನಸದೊಳ್ ॥
ಇನೆಯಳ ಲೋಪವನರಿತುಂ ।
ಘನನಾದರು ಬಿಡುವನದನೆಣಿಸದಲೆ ವೇಮಾ |೩೫೫|

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಜೊಳ್ಳು ಮಾತುಗಳಿಂದು - ಜಗವನ್ನು ತಿರುಗುತ್ತಿ
ಸುಳ್ಳು ಗುರುವು ಪೇಳ್ವ - ಕರ್ಮಚಯವ
ಹಲ್ಲಿನಲ್ಲಿ ಹುಳುವು - ಸೇರಿ ಬಾಧಿಸಿದಂತೆ
ವಿಶ್ವತೋಭಿರಾಮ - ಕೇಳು ವೇಮಾ ।೩೫೬।

ಜ್ಞಾಣರೆಂದೆಂಬುವ - ಚಪಲಾತ್ಮರೆಲ್ಲರು
ತಿಳಿಯರನ್ಯರನ್ನು - ತಮ್ಮನ್ನೈದೆ
ಕಷ್ಟವೆಂಬ ಕಾನನದಿ - ಗಾಸೆ ಪಡುವರು
ವಿಶ್ವತೋಭಿರಾಮ - ಕೇಳು ವೇಮಾ ।೩೫೭।

ಜನ್ಮ ಮರಣಾದ್ಯವಸ್ಥೆಯ - ಜಾಡುಮೀರಿ
ಮನ್ಮಯತ್ವವ ಪೂರಿಸಿ - ಮರೆಯ ಸೇರಿ
ತನ್ಮಯಾಕೃತಿ ಪೊಂದಲು - ತತ್ವಪದಮದು
ನಿರ್ವಿಕಾರಗೆ ಲಭಿಪುದು - ನಿಜದಿ ವೇಮಾ ।೩೫೮।

ಕಂ॥ ಜಪಗಳ ಮಾಡಲು ಸಿಕ್ಕದು ।
ವಿಪಿನಗಳಲ್ಲಿರಲು ಬಿಡುವುದೇಂ ಭ್ರಮೆಯಮಮಾ ॥
ಜಪ ಮಂತ್ರ ಮೂಲ ಸಿದ್ಧಿಗೆ ।
ನೆಪವೆಂಬುದು ಮೋಕ್ಷ ಪದವಿ ನಿಲ್ಲದು ವೇಮಾ ।೩೮೯।

ಗೀ॥ ಜಡೆಯ ಕಟ್ಟಲೇಕೆ - ಸನ್ಯಾಸಿಯಹುದೇಕೆ
ಒಡಲ ನೋಯಿಪಂಥ - ಯೋಗ ಮೇಕೆ
ಮುಕ್ತಿ ಕಾಂತೆಯೊಡನೆ - ಮುದ್ದಾಡಲಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ ।೩೬೦।

—ಶ್ರೀ ವೇಮನ ತತ್ವಗಳು—

ಟ

ಗೀ|| ಟಿಪ್ಪಣಿಗಳ ಮಾಡಿ - ಸಪ್ಪೆಯ ಮಾತುಗ
ಳಾಡುತಿರ್ಪರೆಲ್ಲ – ಶೃತಿ ಸ್ಮೃತಿಗಳ
ಬಿಚ್ಚಿ ಹೇಳಲೇಕೆ – ವೇದಾಂತ ಸಾರವ
ವಿಶ್ವತೋಭಿರಾಮ - ಕೇಳು ವೇಮಾ |೩೬೧|

ಟಂಕ ಹರಿಯದಿರಲು – ಪಂಕವಾಗದು ಮುನ್ನ
ಸ್ವರ್ನ ಭೂಷಣಮದು - ಜಗಮರಿವುದು
ಭಂಟ ನಿಲ್ಲದಿರುವ – ಪ್ರಭುವು ಶೋಭಿಸುವನೆ ?
ವಿಶ್ವತೋಭಿರಾಮ – ಕೇಳು ವೇಮಾ |೩೬೨|

ಡ

ಡೊಂಕು ಗುಳುವನುಕಾಸಿ – ಡೊಂಕು ತಿದ್ದಲ್ಕಹುದು
ಬೆಟ್ಟವೆಲ್ಲ ಹಿಟ್ಟು - ಮಾಡಬಹುದು
ಕಠಿಣ ಚಿತ್ತನ ಮನ - ತಿರುಗಿಸಲಾಗದು
ವಿಶ್ವತೋಭಿರಾಮ - ಕೇಳು ವೇಮಾ |೩೬೩|

ಕಂ|| ಡಂಬಗಳ ನುಡಿಯುವವನಂ |
ನಂಬುವರಿಳೆಯಲ್ಲಿ ಮೊದಲು ತುದಿಗೆಲ್ಲರುಮುಂ ||
ನಂಬರು ತುಂಬಿದ ಸುಳ್ಳಿಂ |
ದೆಂಬರು ಮತ್ತವನ – ಪಂದಿಯೆಂಬರು ವೇಮಾ |೩೬೪|

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಡೊಂಬರವನ ಆಟ – ಡೋರ್ಬಲವೆಲ್ಲವು
ಹೊಟ್ಟೆ ಕೂಳಿಗಾಗಿ - ಪುಟ್ಟಿರುವುದು
ಇದುವೆ ಯೋಗಿಗೈದೆ - ಆನಂದ ವಿಾವುದೇಂ ?
ವಿಶ್ವತೋಭಿರಾಮ - ಕೇಳು ವೇಮಾ |೩೬೫|

ತ್ರ

ತನುವೆಂಬ ಗೃಹದೊಳು – ಶತೃ ಮಿತ್ರ ರ್ಕಳಂ
ತಿಳಿಯದವನ – ತಿಳಿಸದೇತಕಿನ್ನು
ತಿಳಿದಿಹ ಮನುಜಂಗೆ - ದಿವ್ಯಾಮೃತವಿದಯ್ಯ
ವಿಶ್ವತೋಭಿರಾಮ – ಕೇಳು ವೇಮಾ |೩೬೬|

ತನುವಿದ ಸ್ಥಿರವೆಂದು - ಧನವಿದಸ್ಥಿರವೆಂದು
ತಿಳಿಸಬಲ್ಲ ತಾನು – ತಿಳಿದು ಕಲಿತು
ಪಾತ್ರನಾದ ಯೋಗಿ - ವಸ್ತ್ರವನರಿಯನು
ವಿಶ್ವತೋಭಿರಾಮ – ಕೇಳು ವೇಮಾ |೩೬೭|

ಕಂ॥ ತನ್ನಯ ನೆರಳೇ ಶತೃವು ।
ತನ್ನಯ ನೆರಳದುವೆ ಸಾಕ್ಷಿ ಸತ್ಯವು ಧರೆಯೊಳ್ ॥
ತನ್ನವರೆ ತನಗೆ ರಿಪುಗಳು ।
ತನ್ನಯ ಮಾನಸವೆ – ತನಗೆ ಸಾಹ್ಯವು ವೇಮಾ |೩೬೮|

—ಶ್ರೀ ವೇಮನ ತತ್ವಗಳು—

ಗೀ॥ ತಂದೆ ಮಾತನು ಕೇಳಿ - ತಾಯಿಯ ಕೊಲ್ಲುತ್ತೆ
ಪರಶುರಾಮನೇನು – ಫಲವ ಪಡೆದ
ನಿಲಲು ನೆರಳ ಕಾಣ - ಮಲಯಾದ್ರಿಯೊಳಗಿರ್ದ
ವಿಶ್ವತೋಭಿರಾಮ - ಕೇಳು ವೇಮಾ |೩೬೯|

ತಾಯಿ ಗರ್ಭದಿಂದ - ತಾಂ ಬರುವ ಸಮಯದಿ
ಮೊದಲು ವಸ್ತ್ರಮಿಲ್ಲ - ತುದಿಗುನಿಲ್ಲ
ನಡುವೆ ಬಟ್ಟೆಯುಡುವು - ದಪಹಾಸ್ಯಮಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ |೩೭೦|

ತಿಂಡಿ ನಿದ್ದೆಯುಳಿದು - ತಿಳಿವಿನಿತಿಲ್ಲದೆ
ಮುಕ್ತಿಗಾಗಿ ಸುತ್ತು - ತಿಹರು ಜನರು
ಪುಚ್ಛ ಹಿಡಿದ ನಾಯಿ - ಸುತ್ತುವ ತೆರದೊಳು
ವಿಶ್ವತೋಭಿರಾಮ - ಕೇಳು ವೇಮಾ |೩೭೧|

ತಾಯಿ ಗರ್ಭದಿಂದ - ತಾಂ ಬರುವ ಸಮಯದಿ
ಲಿಂಗವಿಲ್ಲ ಹುಡುಕಿ - ನೋಡಲಾಗಿ
ನಡುವೆ ಲಿಂಗವಿಡಲು – ನಗೆಗೀಡದಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ |೩೭೨|

ತನುವೆಂಬ ಗೃಹದೊಳು – ದಾವಾಗ್ನಿ ಸುಡುತಿರಲ್
ಮೇಲೆ ಸುಡುವುದೇಕೆ - ಮಿಥ್ಯಮಲ್ಲೇಂ ?
ದಾಸನ ತಪ್ಪಿಗೆ - ಶಿಕ್ಷೆಯಿದಲ್ಲವೆ ?
ವಿಶ್ವತೋಭಿರಾಮ – ಕೇಳು ವೇಮಾ |೩೭೩|

—ಓಂ—

—ಶ್ರೀ ವೇಮನ ತತ್ವಗಳು—

ತಾವುನಿಂತ ಕಡೆಯೊಳ್ – ದೈವಮಿಲ್ಲೆನ್ನುತ್ತೆ
ಪಾಮರರಾ – ತಿರುಪತಿಯ ತಿರುಗಿ
ಕಾಲು ಜೋವುಕಳೆದು – ಕೈಕಾಸ ನೀಗುತ್ತೆ
ಕೆಟ್ಟು ಗೃಹವ – ಸೇರುತಿಹರು ವೇಮಾ |೩೭೪|

ತೊಗಲು ಹೊಟ್ಟೆಯಲ್ಲಿ – ದೊಡ್ಡವನಿರಲಾಗಿ
ಕಲ್ಲು ಗುಡಿಗಳಲ್ಲಿ – ಎಡೆಯ ನಿಡಲು
ಕಲ್ಲುದೇವರಾಗೆ – ಎಡೆಯನ್ನು ತಿನ್ನದೇ
ವಿಶ್ವತೋಭಿರಾಮ – ಕೇಳು ವೇಮಾ |೩೭೫|

ತತ್ವ ಹೀನರಿಹರು – ಧರಣಿಯೊಳಗಣಿತ
ತತ್ವ ವೇತ್ತರರಿದು – ಧರಣಿಯಲ್ಲಿ
ಇರುವುದಾ ಡೊಡವರು – ಕಾಣಿಸಲಾರರು
ವಿಶ್ವತೋಭಿರಾಮ - ಕೇಳು ವೇಮಾ |೩೭೬|

ತಾಯಿ ಮೊದಲು ಸೂಳೆ – ಹೆಂಡತಿ ಪಂಚಮಳ್
ತಾನು ಬ್ರಾಹ್ಮಣ – ನದೆಂತು ಜಗದಿ
ತಪಸಿನಿಂದ ದ್ವಿಜನು – ಚರ್ಚಿಸೆ ಕುಲಮೆಲ್ಲಿ
ವಿಶ್ವತೋಭಿರಾಮ - ಕೇಳು ವೇಮಾ |೩೭೭|

ತಂದೆ ತಾಯಿಗಳೊಳು – ದಯೆಯಿಲ್ಲದಿಹ ಸುತ
ಹುಟ್ಟಲೇನು ತಾನು – ಸತ್ತೊಡೇನು
ಹುತ್ತದಲ್ಲಿ ಗೆದ್ದಲುದಿಸಿ – ಲಯವೈದದೆ ?
ವಿಶ್ವತೋಭಿರಾಮ - ಕೇಳು ವೇಮಾ |೩೭೮|

— ಶ್ರೀ ವೇಮನ ತತ್ವಗಳು —

ತಿಂದು ಕಲಿತ ಸೂಳೆ – ಬಂಗಾರವಾಸಿಪ
ಳಲ್ಪ ಸ್ವಲ್ಪದಿಂದ – ತೃಪ್ತಳಹಳೆ
ಬಿಟ್ಟೋಮೇದ ಎಮ್ಮೆ – ಕೂಗಲು ಪೋಪುದೇಂ ?
ವಿಶ್ವತೋಭಿರಾಮ - ಕೇಳು ವೇಮಾ |೩೭೯|

ತನ್ನ ಪಡೆದತಾಯಿ – ಯಂಡ ದೊಳಿರ್ಪರು
ಅನ್ಯ ಕಾಂತೆಯರೆಲ್ಲ – ರನ್ನು ನೋಡೆ
ಹೆತ್ತತಾಯ ಮೊಲೆಗಳನ್ನು – ಕಂಡರಿಯರೇಂ ?
ವಿಶ್ವತೋಭಿರಾಮ - ಕೇಳು ವೇಮಾ |೩೮೦|

ತನುವು ಕಪ್ಪಗಿರ್ದರುಂ – ಸ್ವೈರಣಿಯು ಸತಿ
ಸುಗಣಿಯಾಗಲವಳು – ಕೋಟಿ ಮೇಲು
ಬರೆಯ ಎಮ್ಮೆ ಹಾಲು – ಕೊಳ ಕೆನ್ನಲಪ್ಪುದೇಂ ?
ವಿಶ್ವತೋಭಿರಾಮ – ಕೇಳು ವೇಮಾ |೩೮೧|

ತನ್ನೊಳಿರ್ಪಾ ದೈವವಂ – ಕಾಣಲಾರದೆ
ತೀರ್ಥ ಯಾತ್ರೆಗೆಂದು – ತಿರುಗುತಿಹುದು
ಗಂಧದ ತಂಡುಗಳ್ – ಗಾರ್ಧಭ ಹೊತ್ತಂತೆ
ವಿಶ್ವತೋಭಿ ರಾಮ – ಕೇಳು ವೇಮಾ |೩೮೨|

ತಲೆಯೋಳ್ ವಾಮಹಸ್ತ - ವ ಭಯ ಹಸ್ತವನೀಡಿ
ದರ್ಪಣದೊಳು ತನ್ನ - ಮುಖವ ತೋರಿ
ಮಂಗಳವಮಂ ಮಾಳ್ಪ - ಕ್ಷೌರಿಕ ಹೀನನೇಂ ?
ವಿಶ್ವತೋಭಿರಾಮ – ಕೇಳು ವೇಮಾ |೩೮೩|

—ಓಂ—

—ಶ್ರೀ ವೇಮನ ತತ್ವಗಳು—

ತಾತನ ತಾಯ್ ತನ್ನ - ತಂದೆಯ ತಾಯಿಯು
ತನ್ನ ಪಡೆದ ತಾಯಿ - ತಾಯಿ ತಾಯಿ
ತಾಯಿ ಶೂದ್ರಳಾಗಿ - ತಾನೆಂತು ಬ್ರಾಹ್ಮಣ
ವಿಶ್ವತೋಭಿರಾಮ - ಕೇಳು ವೇಮಾ ।೩೮೪।

ತಂದೆಗಿಂತ ಸುತನು - ತಾಂ ಗುಣಿಯಾದನೇ
ಚಿಕ್ಕ ದೊಡ್ಡ ತನಗ - ಳೆಣಿಸರಾರುಂ
ನುತಿಸಿ ಕೃಷ್ಣನನ್ನು - ವಸುದೇವನನ್ನೇಕೆ
ನುತಿಸರವನಿಜನರು - ಪೇಳು ವೇಮಾ ।೩೮೫।

ತಂದೆ ತಾಯ್ಗಳೆಷ್ಟೊ - ತನ್ನ ಜನ್ಮಗಳೆಷ್ಟೊ
ತಿರುಗಿ ಕಾಣದಿರ್ಪ - ದಿಸೆಗಳೆಷ್ಟೊ
ಸ್ಥಿರವಿದುದ ಸ್ಥಿರವೆಂದು - ತಿಳಿಯನ ಜ್ಞಾನಿಯು
ವಿಶ್ವತೋಭಿರಾಮ - ಕೇಳು ವೇಮಾ ।೩೮೬।

ತನುವ ಬಿಟ್ಟುತಾನು - ಹೊರಟು ಹೋಗುವವೇಳೆ
ತನ್ನ ಸತಿಯು ಸುತರು - ಹಿತರು ಯಾರು
ಒಬ್ಬರಾದರು ಬರ - ರುಸುರೊಂದು ಹೊರತಾಗಿ
ವಿಶ್ವತೋಭಿರಾಮ - ಕೇಳು ವೇಮಾ ।೩೮೭।

ತೀವ್ರ ಕೋಪದಿಂದ - ತೀರ್ಥಯಾತ್ರೆಗೆ ಪೋಗಿ
ಕೊಳಕು ದೇಹವನ್ನು - ತೊಳೆದು ತೊಳೆದು
ಹಲವು ನಾಯ್ಗಳೆಲ್ಲ - ಫಲವೇನ ಪಡೆದರು
ವಿಶ್ವತೋಭಿರಾಮ - ಕೇಳು ವೇಮಾ ।೩೮೮।

—ಓಂ—

—ಶ್ರೀ ವೇಮನ ತತ್ವಗಳು—

ತನುವಿನೊಳಗಡಗಿರ್ಪ ತತ್ವವಂ ತಿಳಿಯದೆ
ಬೇರೆಯಾತ್ರೆ ಮಾಳ್ಪ - ಹುಚ್ಚು ಮನುಜ
ಸಬರ ಹೊತ್ತು ಹೊತ್ತು – ಕತ್ತೆ ತಿರುಗಿದಂತೆ
ವಿಶ್ವತೋಭಿರಾಮ - ಕೇಳು ವೇಮಾ |೩೮೯|

ತನವು ಯಾರಸೊತ್ತು - ಹಲವು ಬಗೆ ಪೋಷಿಗೆ
ಪ್ರಾಣವಾರ ಸೊತ್ತು – ಮೋಹವಿಡಲು
ಧನಮದಾರ ಸೊತ್ತು – ಧರ್ಮವೇ ತನ್ನದು
ವಿಶ್ವತೋಭಿರಾಮ - ಕೇಳು ವೇಮಾ |೩೯೦|

ತಾಮಸ ಪ್ರಕೃತಿಯಿಂ – ದಾವುದಾದರು ಕಾರ್ಯ
ಬೇಗ ಬೇಗ ಮಾಡೆ – ವಿಷಮವಹುದು
ಕಾಯಿ ಕಾವಿಗಿಡಲು – ಪಣ್ಣಾಗ ಬಲ್ಲುದೇಂ ?
ವಿಶ್ವತೋಭಿರಾಮ ಕೇಳು ವೇಮಾ |೩೯೧|

ತೊಗಲು ಗೊಂಬೆಮಾಡಿ - ತೆರೆಯೊಳಗಾಡಿಸಿ
ಭರದಿ ಭುವಿಯೊಳ್ಕೆಡವಿ – ಒದೆವ ರೀತಿ
ತನ್ನನಿಂತು ಸೂತ್ರ - ಪಿಡಿದಾಡಿಸುವನನ್ನು
ತಿಳಿಯರೇನು ಜೋದ್ಯ – ಮಯ್ಯ ವೇಮಾ |೩೯೨|

ತನ್ನ ತಾನರಿಯನು - ತಾನದಾರಿಗೆ ಪೇಳ್ವ
ಬರಿದೆ ತಿರುಗುತಿರ್ಪ - ಪಶು ಸಮಾನ
ಕಾಸಿ ನಾಶೆಗಾಗಿ – ಕರ್ಮವ ಮಾಡಿಪ
ವಿಶ್ವತೋಭಿರಾಮ ಕೇಳು ವೇಮಾ |೩೯೩|

—ಓಂ—

—ಶ್ರೀ ವೇಮನ ತತ್ವಗಳು—

ತಂದೆ ತಾಯಿ ಸಾಯೆ-ತನಯನು ದುಃಖಿಪ
ಪತಿಯು ಸಾಯೆ ಸತಿಯು - ಮರುಗುತಿಹಳು
ಕಾರ್ಯವಶದಿ ಹೊರತು – ಮೋಹವುಂಟಾಗದೈ
ವಿಶ್ವತೋಭಿರಾಮ - ಕೇಳು ವೇಮಾ |೩೯೪|

ತನ್ನ ಸವತಿಯೊಡನೆ – ತನ್ನ ಆಯುಧದೊಡನೆ
ಅಗ್ನಿಯೊಡನೆ ಅನ್ಯ – ಯುವತಿಯೊಡನೆ
ಸರಸವಾಡುವುದೆಲ್ಲ - ಹಾನಿಯು ಪ್ರಾಣಕ್ಕೆ
ವಿಶ್ವತೋಭಿರಾಮ - ಕೇಳು ವೇಮಾ |೩೯೫|

ಕಂ|| ತನ್ನಕುಲಗೋತ್ರ ರೂಪವು ।
ತನ್ನೈ ಸಿರಿಬಲವಿವೆಲ್ಲ ತನಗಿನ್ನೇಕೋ ॥
ತನ್ನೊಡನೆ ಬಾರವಾವುಂ ।
ತನ್ನಯ ಸತ್ಯವಿದು ಜೊತೆ ಯೊಳಿರ್ಪುದು ವೇಮಾ |೩೯೬|

ಗೀ|| ತನ್ನ ಭ್ರಾತರೆಲ್ಲ – ದಾನವ ಮಾಡಲು
ತನಗೆ ಪುಣ್ಯವೆಂದು - ಪೇಳೆ ಸಲ್ಲ
ತನ್ನಕಾಲ್ಗ ಕಡಿಯು - ಲನುಜ ನಳುವನೆ
ವಿಶ್ವತೋಭಿರಾಮ - ಕೇಳು ವೇಮಾ |೩೯೭|

ತಪ್ಪನೆಣಿಸುವವರು – ತಂಡೋಪ ತಂಡವು
ಸರ್ವರಲ್ಲಿ ತಪ್ಪಿತ – ಗಳಿರುವವು
ತಪ್ಪನೆಣಿಸುವವರು – ತಮ್ಮ ತಪ್ಪರಿಯರೈ
ವಿಶ್ವತೋಭಿರಾಮ - ಕೇಳು ವೇಮಾ |೩೯೮|

—ಓಂ—

—ಶ್ರೀ ವೇಮನ ತತ್ವಗಳು—

ತಾಯಿ ಗೌರಿ ತನಗೆ – ತಂದೆಯು ಶಂಭುವು
ಪ್ರಮಥ ಗಣಗ ಳಖಿಳ – ಬಂಧು ಜನರು
ತನ್ನ ತವರು ಮನೆಯು – ನಿರುತ ಕೈಲಾಸವು
ವಿಶ್ವತೋಭಿರಾಮ - ಕೇಳು ವೇಮ |೩೯೯|

ಕಂ॥ ತನ್ನೊಳ್ಳ ಪಟಗಳಿರ್ದೊಡೆ |
ತನ್ನಂದದೆ ಕಪಟ ಗುಣಗಳೆಂಬರು ಪರರೋಳ್ ॥
ತನ್ನೊಳ್ ಕಪಟಗ ಳಿರದಿರೆ |
ತನಗಾರುಂ ಕಪಟಯಿಲ್ಲ ಧರೆಯೋಳ್ ವೇಮಾ |೪೦೦|

ತಂದೆ ತಾಯಿ ಹಿತರು - ಬಂಧು ಬಾಂಧವರೆಲ್ಲ
ಸೇರಿ ಕೋರಿ ವರನ – ಬುದ್ಧಿ ನೋಡಿ
ವಧುವ ನೀವರಲ್ತು ? – ಆಯುವ ನೀಯುರು
ವಿಶ್ವತೋಭಿರಾಮ - ಕೇಳು ವೇಮಾ |೪೦೧|

ತಂತ್ರ ವಾದಿಗಳೈದೆ - ಬಹು ಜನರಿರ್ಪರು
ಮಂತ್ರ ವಾದಿಗಳತಿ - ವಿರಳ ಜಗದಿ
ಜಂತ್ರದವನ ಬೊಂಬೆ – ಯಂದ ದೊಳಾದುದು
ವಿಶ್ವತೋಭಿರಾಮ - ಕೇಳು ವೇಮಾ |೪೦೨|

ತೊತ್ತ ಕೊಡಲಿಯೊಳ್ – ದೋಷವು ಹೀನವು
ಸೂಳೆಯನ್ನು ಕೂಡೆ - ಲಜ್ಜೆ ಗೇಡು
ಜಾರೆಯನ್ನು ಸೇರೆ - ಸಾವಿಗೆ ಮೂಲವು
ವಿಶ್ವತೋಭಿರಾಮ – ಕೇಳು ವೇಮಾ |೪೦೩|

—ಓಂ—

—ಶ್ರೀ ವೇಮನ ತತ್ವಗಳು—

ತನಗೆ ಪ್ರಾಪ್ತವಿಲ್ಲದಲೆ – ದಾತ ಕೊಡನೆಂದು
ದೋಷ ಬುದ್ಧಿಯಿಂದೆ – ದೂರ್ವುದೆಲ್ಲ
ಮೂಗು ನೀಟು ನೋಡಿ - ಮೂಗುತಿಯ ಬೈಯ್ದಂತೆ
ವಿಶ್ವತೋಭಿರಾಮ - ಕೇಳು ವೇಮಾ |೪೦೪|

ಕಂ॥ ತಾವುರದೊಳಗಿನ ನೀರೋಲ್ ।
ವೇಮಣ್ಣನು ಚರಿಪ ಶಿವನ ಬೆದಕುತಲನುವಿಂ॥
ದೀ ಮಾಯೆ ನಂಬಲಾಗದು ।
ಈ ಮನದೊಳು ತಿಳಿಯಲಾಗದೀಶನ ವೇಮಾ |೪೦೫|

ಗೀ॥ ತಂದೆ ತಾಯ್ಗಳಲ್ಲಿ – ದಾರಿದ್ರ ಯುತರಲ್ಲಿ
ನಂಬಿದ ಕಡು ದೀನ – ಮನುಜರಲ್ಲಿ
ಪ್ರಭುಗಳಲ್ಲಿ ನೋಡೆ – ಭಕ್ತಿ ಯುಂಟಾಗಿರೆ
ಇಹ ಪರಂಗಳಲ್ಲಿ – ಸುಖವು ವೇಮಾ |೪೦೬|

ತಿರುಪತಿ ಯಾತ್ರೆಯಿಂ - ತುರಕ ದಾಸನದೆಂತು
ಕಾಶಿಯಲ್ಲಿ ಪಂದಿ – ಗಜಮದೆಂತು
ನಾಯಿ ಸಿಹ್ಮ ಮೆಂತು - ಗೋದಾವರಿಯೊಳಿರೆ
ವಿಶ್ವತೋಭಿರಾಮ ಕೇಳು ವೇಮಾ |೪೦೭|

ತನ್ನೊಳಾತ್ಮನ ಗಮನಿಸಿ - ಅನುದಿನದೊಳು
ನಿರ್ಗುಣಾತ್ಮನ ನರ್ಚಿಸಿ - ನಿಯತಿಯಿಂದೆ
ಪ್ರತ್ಯನಾತ್ಮನ ಒಳಗರಿ - ತೊಡನೆ ಯೋಗಿ
ಸಚ್ಚಿದಾನಂದ ಪದವನು - ಸೇರ್ವ ವೇಮಾ |೪೦೮|

—ಓಂ—

—ಶ್ರೀ ವೇಮನ ತತ್ವಗಳು—

ತನಯನ ಬದುಕಿಸಿ - ಕೇಳಲಾರ ಶಂಕರ
ತನಯನ ನುಳಿಸಿ ಕೊಳ ಲಾರ ಶೌರಿ
ದೈವ ಬಲಗಳಿಲ್ಲಿ - ತಾನಾಗಿ ತೋರ್ದವು
ವಿಶ್ವತೋಭಿರಾಮ – ಕೇಳು ವೇಮಾ ।೪೦೯।

ಕಂ॥ ತರುಣಿಗೆ ಮೇಲಾ ಭರಣದ ।
ಹೊರೆಯಿರ್ದರುಂ ಪತಿಯ ಕರುಣವಿಲ್ಲದೆ ನಿರುತಂ ॥
ನೆರೆ ಶೋಭಿಸ ದಿರ್ಪಂದದಿ ।
ಗುರುಕೃಪೆಯಿಲ್ಲದೆಯೆ ಮುಕ್ತಿ ದೊರೆಯದು ವೇಮಾ ।೪೧೦।

ಗೀ॥ ತನಯನ ವರಿಸಲು - ಕೋರಿ ಬಂದವಳನ್ನು
ತಂದೆ ವರಿಸಿದುದರ - ಮರ್ಮವೇನು
ತಪ್ಪು ತನ್ನ ಧರ್ಮ - ಕರ್ಮ ವೆಂದರಿತರು
ತಪ್ಪುದಲ್ತೆ ? ಕರ್ಮ – ಪಶುವು ವೇಮ ।೪೧೧।

ತಿಳಿದು ಶಿವನ ಪೂಜೆ - ಮಾಡಲು ಕೆಡದದು
ಮೊದಲು ಪಟ್ಟು ಹಿಡಿದು – ಬಿಡುವುದಲ್ಲ
ತಳದ ಗೋಡೆ ಬಿಟ್ಟು - ತುದಿ ಕಟ್ಟಲಪ್ಪುದೇಂ ?
ವಿಶ್ವತೋಭಿರಾಮ – ಕೇಳು ವೇಮಾ ।೪೧೨।

ತಮ್ಮ ಊರಿನಲ್ಲಿ - ಕ್ಷಾಮ ವುಂಟಾಗಲು
ಅಲ್ಲಿ ಬಿಟ್ಟು ಬೇರೆ – ಪೋಗದಿಹರೆ
ಕೊಳವು ಬತ್ತಲಲ್ಲಿ - ಬಕಗಳು ನಿಲ್ಲುವೇ ?
ವಿಶ್ವತೋಭಿರಾಮ - ಕೇಳು ವೇಮಾ ।೪೧೩।

—ಓಂ—

—ಶ್ರೀ ವೇಮನ ತತ್ವಗಳು—

ತನ್ನೊಳಿರ್ಪಾ ಜೀವ – ತತ್ವವನ್ನರಿಯದೆ
ಬೇರೆ ಇರ್ಪನೆಂದು – ಬೆದಕುತಿಹುದು
ಸೂರ್ಯನನ್ನು ನೋಡೆ – ದೀವಿಗೆ ಪಿಡಿದಂತೆ
ವಿಶ್ವತೋಭಿರಾಮ - ಕೇಳು ವೇಮಾ |೪೧೪|

ತಂದೆ ತಾಯ್ಗಳಿಹರು - ಜನ್ಮ ಜನ್ಮಂಗಳ
ತನಗೆ ತಿಳಿಸುವರವರು – ದೊರೆಯರಲ್ತೆ ?
ನಾದವೇ ಪರವೆಂದು - ನಂಬಿದ ನರನಿಗೆ
ಇಹದೊಳೈದೆ ಪರವು - ಇಹುದು ವೇಮಾ |೪೧೫|

ತಾಯಿ ದುಃಖಿಸಿದೊಡೆ – ಕೇಳದೆ, ಹೆಂಡತಿ
ದುಃಖ ಮಾಡೆ - ತರಹರಿಪರು ಜಡರು
ತಾರತಮ್ಯಜ್ಞಾ - ನವಿಲ್ಲದ ಪಶುಗಳು
ವಿಶ್ವತೋಭಿರಾಮ – ಕೇಳು ವೇಮಾ |೪೧೬|

ತಾನು ತನುವೆನ್ನುತ್ತಿ – ದ್ವಂದವಂ ನುಡಿಯುತ್ತಿ
ಮೋಹವಾರ್ಧಿಯಲ್ಲಿ – ಮುಳುಗಿ ನರನು
ನೋಡಲಾರ ಮೋಕ್ಷ - ಗತಿಯೆಂತು ದೊರೆವುದು
ವಿಶ್ವತೋಭಿರಾಮ - ಕೇಳು ವೇಮಾ |೪೧೭|

ಕಂ|| ತನ್ನ ಗುಣ ತನ್ನೊಳಿರುತಿರ ।
ಲನ್ಯರ ಗುಣಗಣಗಳೆಣಿಸುವರು ಮಾನಸದೊಳ್ ॥
ತನ್ನ ಗುಣ ತಾನೆ ತಿಳಿಯದೆ ।
ಅನ್ಯರ ನಿಂದಿಸುವ ನರನು ಮೂರ್ಖನು ವೇಮಾ |೪೧೮|

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ತಾನು ಇಂದ್ರಿಯಗಳ – ತಪ್ಪದೆ ಜಯಿಸುತೆ
ತತ್ವವರಸಿ ನೋಡೆ – ತಾನೆಯಹನು
ರಾಜಯೋಗಿಯಿಂತು – ಪ್ರಜ್ವಲಿಸುತ್ತಿಹ
ವಿಶ್ವತೋಭಿರಾಮ - ಕೇಳು ವೇಮಾ |೪೯|

ತಾರಕಮುಂ ನೋಳ್ಪ - ದಾರಿ ಬೇರಿರ್ಪುದು
ಸಮತೆಯಿಂದ ನೋಡೆ – ಸಮಮೆನಿಪುದು
ಹುಚ್ಚುತನದಿ ನೋಡೆ – ಬೆಳಕೆಲ್ಲ ಪರಿವುದು
ವಿಶ್ವತೋಭಿರಾಮ - ಕೇಳು ವೇಮಾ |೪೨೦|

ತಿಳಿಸುವವನಾವನು – ತಿಳಿಯುವವನಾವನು
ಗುಟ್ಟು ರಟ್ಟುಮಾಡೆ - ಬಟ್ಟಬಯಲು
ಘಟದ ನೀರಿನಲ್ಲಿ - ಸೂರ್ಯನಿರುವಂದದಿ
ವಿಶ್ವತೋಭಿರಾಮ - ಕೇಳು ವೇಮಾ |೪೨೧|

ಕಂ॥ ತಕ್ರದೊಳುದ್ಭವಮಾಗಿ ಸು ।
ತಕ್ರದಿ ತೇಲುತಿಹ ಬೆಣ್ಣೆಯಂದದಿ ಸಂಸಾ ॥
ರಕ್ರಮದೊಳ್ಪುಟ್ಟಿಯು ಘನ ।
ಚಕ್ರವ ಗುರ್ತಿಸಲು ಬಪ್ಪುದರಿವಿಂ ವೇಮಾ |೪೨೨|

ತನ್ನೊಳಗೆ ಸರ್ವವಡಗಿರೆ ।
ತನ್ನೊಳ್ ತಾಂ ಬೆದಕಲಾರದವನಿಯು ಚರಿಸು ॥
ತ್ತಿನ್ನಿರುವ ಪಶು ಸಮಾನರ ।
ನಿನ್ನೇನೆನ್ನುವುದೊ ತಿಳಿಸಲಾಗದು ವೇಮಾ |೪೨೩|

—ಓಂ—

—ಶ್ರೀ ವೇಮನ ತತ್ವಗಳು—

ಗ॥ ತೊಗಲು ಚೀಲದಲ್ಲಿ - ಮೊದಲು ಪುಟ್ಟಿದವನ:
ತುದಿಗೆ ತಿಳಿಯಬೇಕು - ವಿವರಮರಿತು
ತುದಿಗೆ ತಿಳಿಯಲಾರದಲೆ - ಕೆಡುತಿರ್ಪರು
ವಿಶ್ವತೋಭಿರಾಮ - ಕೇಳು ವೇಮಾ |೪೨೪|

ತಾನು ಅನುಭವಿಸದೆ - ಧರ್ಮವ ಮಾಡದೆ
ಸುತರಿಗೆಂದು ಧನವ - ಕೂಡಿಸಿಟ್ಟು
ತಿಳಿಯ ಹೇಳದಂತೆ – ತೀರಿಪೋಪರು ಮತ್ತೆ
ಸೊತ್ತು ಪರರ ಸೇರು – ತಿಹುದು ವೇಮಾ |೪೨೫|

ತೇರೆಂಬ ಮನೆಯನ್ನು – ದಿನ ದಿನ ಗೂಡಿಸಿ
ಮೆತ್ತಿ ಬಳಿದು ಮತ್ತೆ – ಸಾರಿಸುತ್ತೆ
ಅನುವುಗೊಳಿಸಿ ಜೀವಿ – ಬಿಟ್ಟು ಪೋಗುವುದಲ್ತೆ ?
ವಿಶ್ವತೋಭಿರಾಮ – ಕೇಳು ವೇಮಾ |೪೨೬|

ತನ್ನ ಮೇಲು ಕೋರಿ – ಧರ್ಮವ ಪೇಳಲು
ಬೈಯ್ಯುತಿರ್ಪನಧಮ - ಎದುರಿನಲ್ಲೆ
ತುಂಟ ಎಮ್ಮೆ ಮೇವು - ಹಾಕಲು ಇರಿಯದೇಂ !
ವಿಶ್ವತೋಭಿರಾಮ - ಕೇಳು ವೇಮಾ |೪೨೭|

ತನಯನಾವನಾದರುಂ - ತಂದೆಗಿಂತಲು
ಹೆಸರು ಪಡೆವನವನು - ವರಸುಪುತ್ರ
ಜನಕನನ್ನು ಹೀನ - ಮಾಡುವ ತನಯನು
ಮೂರು ಇಹಪರಗಳ – ಕೆಡಿಪ ವೇಮಾ |೪೨೮|

—ಶ್ರೀ ವೇಮನ ತತ್ವಗಳು —

ಮತ್ತ ಕೋಕಿಲ:—

ತಾಯಿ ತಂದೆಗಳಣ್ಣ ತಮ್ಮದಿ – ಕರ್ಾತ ಬಂಧುಗಳೇತಕೆ
ಮತ್ತೆ ಜನ್ಮವು ಬರದ ಸದ್ಗುರು – ಮರ್ವಭಾವವ ಪೊಂದೆಲೈ
ಮಾಯೆ ತೃಣವುಂ ಬಾರದೆಂದಿಗು - ಭೂಮಿಯುರುಳುವ ವೇಳೆಯೊಳ್
ಮಿಥ್ಯಭ್ರಾಂತಿಯ ತೊರೆದು- ವೇವನ ಕಾರ್ಯಪದ್ಧತಿ ನೋಳ್ಪುದೈ ।೪೯।

ಗೀ॥ ತಿಳಿದು ಆತ್ಮದಲ್ಲಿ - ದೇದೀಪ್ಯನಾಗಿಯು
ತೇಜದಲ್ಲಿ ಶಿವನ - ತಿಳಿಸುತ್ತೈದೆ
ಮನದಿ ಶಿವನ ನಿಲಿಸಿ – ಮಗ್ನನಾಗುವುದಯ್ಯ
ವಿಶ್ವತೋಭಿರಾಮ - ಕೇಳು ವೇಮಾ ।೬೩೦।

ಕಂ॥ ತಲೆ ತಾಕಿದಾಗ ನುತಿಪರು ।
ತಲೆ ಕೆಳಗಾದಾಗ ನುತಿಸದಿರ್ಪರು ಶಿವನಂ ॥
ತಿಳಿಗೇಡಿ ಕಾಕ ಮನುಜರ್ ।
ಒಳಿತಾಗಿರ್ದಾಗ ನುತಿಸರೇನಿದು ವೇಮಾ ।೪೩೧।

ಗೀ॥ ತಾಯಿ ಇರುವಾಗಲೇ - ತನಗೆ ಗೌರವವಮದು
ಆಕೆಯುಳಿಯಲಾರು – ಗೌರವಿಪರು
ಒಳ್ಳೆ ಕಾಲದಲ್ಲೆ – ಮರ್ಯಾದೆಯಾರ್ಜಿಸು
ವಿಶ್ವತೋಭಿರಾಮ - ಕೇಳು ವೇಮಾ ।೪೩೨।

ತಾಮಸಾದಿ ಕಾರ್ಯ - ಗಳು ತರವಮಲ್ಲವು
ತಾಮಸಂಗಳುಳಿವ – ನಲ್ತೆ ? ಸುಜನ
ತಾಮಸಂಗಳಿರ್ಪ - ನವನತಿ ಮೂರ್ಖನು
ವಿಶ್ವತೋಭಿರಾಮ - ಕೇಳು ವೇಮಾ ।೪೩೩।

—ಓಂ—

—ಶ್ರೀ ವೇಮನ ತತ್ವಗಳು—

ತಾಯಿಗೆ ದುರುಬಿದ್ದು – ತಂದೆ ಗೆದುರಾಡುತ್ತಿ
ಅಣ್ಣಗೆದುರು ಬೀಳ್ವ - ದಿವ್ರುಗಳ್ಮೂರು
ಆನು ಚಿತಂಗಳೆಂದು - ಸಾರುವರಿಳೆಯೊಳು
ಇದನು ತಿಳಿದು ನಡೆವು - ದುಚಿತ ವೇಮಾ |೪೩೪|

ತಿಳಿಯದೆನ್ನು ವಾತ – ನೆರೆ ಜಾಣ ಮಹಿಯೊಳು
ತಿಳಿವುದೆನ್ನು ವಾತ – ಮತ್ತ ಕಾರಿ
ಸುಮ್ಮ ನಿರ್ಪಾತನೆ – ಉತ್ತ ಮೋತ್ತಮನಯ್ಯ
ವಿಶ್ವತೋಭಿರಾಮ - ಕೇಳು ವೇಮಾ |೪೩೫|

ದ

ದೇವನೆನಲು ಬೇರೆ - ದೇಶ ದೊಳಿಲ್ಲವು
ದೇವಿಯೊಡನೆ ಸತತ – ದೇಹದೊಳಗೆ
ವಾಹನಂಗಳೇರಿ - ಹೊಡೆಯುತ ಲಿರ್ಪನು
ವಿಶ್ವತೋಭಿರಾಮ - ಕೇಳು ವೇಮಾ |೪೩೬|

ದರ್ಶನಂಗಳಲ್ಲಿ – ನೆರೆ ಷಣ್ಮತಗಳಲ್ಲಿ
ವರ್ಣಾಶ್ರಮಗಳಲ್ಲಿ - ಬಿಡದೆ ಸತತ
ತಿರುಗುತಿರ್ಪ ಮನುಜ - ತಿಳಿವನೇ ಬ್ರಹ್ಮವಂ
ವಿಶ್ವತೋಭಿರಾಮ - ಕೇಳು ವೇಮಾ |೪೩೭|

—ಓಂ—

—ಶ್ರೀ ವೇಮನ ತತ್ವಗಳು—

ದಾರ ಭುಜದೊಳಿರಿಸಿ – ತನ್ನ ಶೂದ್ರತ್ವವು
ಹೋಯಿತೆಂದು ಪೇಳೆ – ಬುದ್ಧಿ ಕಡಿಮೆ
ಮನ ಶುದ್ಧಿಯಿಲ್ಲದೆ – ದಾರವೇಂ ಗೈವುದು
ವಿಶ್ವತೋಭಿರಾಮ - ಕೇಳು ವೇಮಾ |೪೩೮|

ದಾಸಯ್ಯ ನಾಗ - ಬಹುದೈ ವೇಷದಿ ತಾಂ
ಜಂಗಮಯ್ಯ – ನಾಗಲು ಬಹುದೈ
ಲೇಶವು ಬ್ರಾಹ್ಮಣ – ನಾಗುವ
ಆಸೆಯು ತಾನಿಲ್ಲ ಜಗದಿ – ಕೇಳೈ ವೇಮಾ |೪೩೯|

ದಾನಗಳೊಳ ಗನ್ನ – ದಾನಕ್ಕೆ ಸಮವಿಲ್ಲ
ಪೆತ್ತ ತಾಯಿಗಿಂತ – ಘನತೆ ಯಿಲ್ಲ
ಬೋಧನಾ ಚಾರ್ಯನಿಂ – ಪೆರತು ಗುರು ವಿಲ್ಲವೈ
ವಿಶ್ವತೋಭಿರಾಮ ಕೇಳು ವೇಮಾ |೪೪೦|

ದಿಕ್ಕುಗೆಟ್ಟ ನರನು – ದಯೆಶಾಲಿ ಮನೆಯನ್ನು
ಸೇರಬೇಕು ಬದುಕಿಸುವನು – ಬಿಡದೆ
ಗೌರವಿಸಿದ ನಂದು - ಶ್ರೀ ರಾಮ ಚಂದ್ರನು
ಪಗೆಯ ಸೋದರನ – ವಿಭೀಷಣನ ಸುವೇಮಾ |೪೪೧|

ದಶಮಿ ಏಕಾದಶಿ - ಎನುತ್ತಲಿ ವ್ರತವ ಮಾಡಿ
ಕೂಳು ತಿನ್ನದಿರಲ್ – ದುರ್ಗುಣಂಗಳಿರವೆ ?
ಹುತ್ತ ದೊಳಗಿರ್ದ ಸರ್ಪವ - ಮೇಲೆ ಹೊಡೆಯೆ
ಸಾಯ್ವು ದೇನಯ್ಯ - ಸೌಜನ್ಯ ಶೀಲ ವೇಮಾ |೪೪೨|

—ಓಂ—

—ಶ್ರೀ ವೇಮನ ತತ್ವಗಳು—

ದಾರುವಿ ನೋಳ್ಬೆಂಕಿ – ತಾನಿರ ಲಪ್ಪುದು
ಬೆಂಕಿಯಲ್ಲಿ ದಾರು - ವಿರುವು ದೆಂತು
ದಾರು ವಲ್ಲಿ ಬೆಂಕಿ - ಯಂದದಿ ಸಂಸಾರಿ
ವಿಶ್ವತೋಭಿರಾಮು - ಕೇಳು ವೇಮಾ |೪೪೩|

ದಾತೃವಿರ್ದೆಡೆಯಲ್ಲಿ - ಲುಬ್ಧ ತಾನಿರ್ದೊಡೆ
ಸಾಯ್ವ ನಲ್ಲದವನು – ಸಾಗ ಗೊಡನು
ಕಲ್ಪ ವೃಕ್ಷ ದಡಿಯೋಳ್ – ಬೊಬ್ಬುಳಿ ಗಿಡದಂತೆ
ವಿಶ್ವತೋಭಿರಾಮು – ಕೇಳು ವೇಮಾ |೪೪೪|

ದಾನ ಕೇಳುವವನು – ಧರಣಿಯೊಳಧ ಮನು
ದಾನ ವೀವ ನರನು - ದೈವ ಸಮನು
ದಾನ ವೀಯದವನು - ಧನ್ಯನೆಂ ತಾಗುವ
ವಿಶ್ವತೋಭಿರಾಮು - ಕೇಳು ವೇಮಾ |೪೪೫|

ದಶರಥ ರಾಜನು - ರಾಮುಗೆ ಪಟ್ಟವಂ
ಕಟ್ಟಿ ಲೆಳಸೆ ಜಡೆಯ - ಕಟ್ಟಿ ನಡೆದ
ನೆನೆದ ರೀತಿಯಹುದೆ ? - ದೈವೀಕ ವಲ್ಲದೆ
ವಿಶ್ವತೋಭಿರಾಮು – ಕೇಳು ವೇಮಾ |೪೪೬|

ದೊಡ್ಡವ ರುಕ್ತಿಯಂ – ಪ್ರೇಮದಿ ಕೇಳಿತಾ
ನದರ ರೀತಿ ನಡೆಯ – ಲನು ಕರಿಪನು
ಹುಲಿ ಬಣ್ಣ ನೋಡಿ ನರಿ - ಬರೆಯೆಳಸಿ ಕೊಂಡಂತೆ
ವಿಶ್ವತೋಭಿರಾಮು - ಕೇಳು ವೇಮಾ |೪೪೭|

—ಶ್ರೀ ವೇಮನ ತತ್ವಗಳು—

ದೇಶ ದೇಶ ವೈದೆ – ತಿರು ತಿರುಗಿದೊಡು ಮಾ
ಆತ್ಮದಲ್ಲಿ ಧ್ಯಾನ - ಮಂಟು ತಿಹುದೆ ?
ಕಾಸಿಗಾಗಿ ತಿರುಗಲೇಂ - ಮೋಕ್ಷ ಮಪ್ಪುದು
ವಿಶ್ವತೋಭಿರಾಮ – ಕೇಳು ವೇಮಾ |೪೪೮|

ದಾನ ಧರ್ಮ ನಾಳೆ - ನಾಳೆಯೆಂದೆನ್ನುತ್ತೆ
ಕಾಲ ವ್ಯಯವ ಮಾಳ್ಪ - ಕೃಪಣ ನರನು
ನಾಳೆ ಯಾರೊ ಮತ್ತೆ – ತಾನಾರೊ ಅರಿಯನು
ವಿಶ್ವತೋಭಿರಾಮ - ಕೇಳು ವೇಮಾ |೪೪೯|

ದೈವ ದ್ರೋಹಿತಾನು – ಧನ ಮದದಿಂದಲಿ
ಸಕಲ ಸೌಖ್ಯದಿಂದ – ತೃಪ್ತನಾಗಿ
ಕೊನೆಗೆ ಮೇಲರಿಯದೆ – ಕೆಟ್ಟು ಪೋಗುವನಯ್ಯ
ವಿಶ್ವತೋಭಿರಾಮ - ಕೇಳು ವೇಮಾ |೪೫೦|

ದೇವ ಭೂಮಿಗಳಲ್ಲಿ – ದೇವಾಲಯಗಳಲ್ಲಿ
ದೇವನೆಂದು ಮುಗಿದು - ಸೇವೆ ಮಾಳ್ಪ
ತಿಳಿಯೆ ತನ್ನ ತಾನೆ - ದೇವಾಧಿ ದೇವನು
ವಿಶ್ವತೋಭಿರಾಮ - ಕೇಳು ವೇಮ |೪೫೧|

ದಾನ ಧರ್ಮ ಮತ್ತೆ – ದಯೆ ಸತ್ಯ ನೀತಿಯು
ವಿನಯ ಧೈರ್ಯ ಶೌರ್ಯ - ವಿತರಣಗಳು
ರಾಜರ ಪಾಲಿಗೆ - ರಾಜ ಯೋಗಂಗಳು
ವಿಶ್ವತೋಭಿ ರಾಮ – ಕೇಳು ವೇಮಾ |೪೫೨|

—ಓಂ—

—ಶ್ರೀ ವೇಮನ ತತ್ವಗಳು—

ದ್ವಿಜರ ಖೇದಗೊಳಿಸಿ - ಬಯ್ಯುವ ಮನುಜನು
ವ್ಯುತಿಯ ಪೊಂದಿ ತಾನು – ವ್ಯಥೆಪಡುವನು
ಕಾಲನ ಮುಂದವ – ಕಡುಕಷ್ಟ ಪಡುವನು
ವಿಶ್ವತೋಭಿರಾಮ - ಕೇಳು ವೇಮಾ |೪೫೩|

ದಾನದಲ್ಲಿ ಅನ್ನದಾನವೇ - ಶ್ರೇಷ್ಠವು
ಗಾನದಲ್ಲಿ ಸಾಮ – ಗಾನವಧಿಕ
ಧ್ಯಾನದಲ್ಲಿ ಶಿವನ – ಧ್ಯಾನವೇ ದೊಡ್ಡದೈ
ವಿಶ್ವತೋಭಿರಾಮ – ಕೇಳು ವೇಮಾ |೪೫೪|

ದಾನ ಮಾಡುವವನ – ಬಳಿಯೊಳು ಸೇರುತ್ತಿ
ವಕ್ರ ಭಾಷೆಯಾಡಿ - ತಪ್ಪಿಸುವವ
ಸಂಪಿಗೆ ಮರದೊಳು - ಸರ್ಪವಿದ್ದಂತೆಯೇ
ವಿಶ್ವತೋಭಿರಾಮ - ಕೇಳು ವೇಮಾ |೪೫೫|

ದುಷ್ಟ ಜನರು ಮೀರಿ – ತುಂಟ ಕಾರ್ಯಂಗಳ
ಶಿಷ್ಟ ಕಾರ್ಯವೆಂದು – ಮಾಡುತಿಹರು
ಕೂಡದೆಂದವರನ್ನು – ನಾಡೆ ದೂಷಿಸುವರು
ವಿಶ್ವತೋಭಿರಾಮ - ಕೇಳು ವೇಮಾ |೪೫೬|

ದೊಡ್ಡವನೆನ್ನುತ್ತಿ - ದೊರೆಗಳ ಬಳಿ ಸೇರಿ
ಚಾಡಿ ಪೇಳುತಿರ್ಪ – ಪಾಪಿ ನರನು
ಚಾಡಿ ಪೇಳುವವಗೆ ಸಾಯುಜ್ಯವಿರ್ಪುದೇಂ ?
ವಿಶ್ವತೋಭಿರಾಮ – ಕೇಳು ವೇಮಾ |೪೫೭|

—ಶ್ರೀ ವೇಮನ ತತ್ವಗಳು—

ದ್ರೋಹಿಯಾದ ನರನು – ಸಾಹಸದಿಂದೆಂಥ
ಸ್ನೇಹಿತರಿಗು ಕೂಡ – ಕೇಡೆಣಿಪನು
ಊಹೆಯೆಂತು ಮಾಳ್ಪ - ನಿದ ನದನೆನ್ನುತ್ತಿ
ವಿಶ್ವತೋಭಿರಾಮ - ಕೇಳು ವೇಮಾ |೪೫೮|

ದಿಕ್ಕು ತಪ್ಪಿದವನ – ದೀನತೆ ಕಳೆಯುವ
ಪುರುಷನಿಹದೊಳೈದೆ - ಪೂಜ್ಯನಪ್ಪಂ
ಪರದೊಳವನ ಭಾಗ್ಯ - ವೇನೆಂದು ಪೇಳುವೆ
ವಿಶ್ವತೋಭಿರಾಮ - ಕೇಳು ವೇಮಾ |೪೫೯|

ಧ

ಕಂ|| ಧರ್ಮಾರ್ಥ ಕಾಮ ಮೋಕ್ಷವ |
ನಿರ್ಮಲ ಮತಿಯರಿವನಲ್ಲದಿತರರಿಗಳವೇಂ ? ||
ಉರ್ವಿಯೊಳೆಲ್ಲೆಡೆ ಚರಿಸಲ್ |
ಕರ್ಮಿಗಳಿಗೆ ಮುಕ್ತಿ ದೊರೆವುದೇನೈ ವೇಮಾ |೪೬೦|

ಗೀ|| ಧರಣಿಯಲ್ಲಿ ನರರು - ಮಕ್ಕಳ ಬಯಸುತ್ತಿ
ಮರುಗುತಿಹರು - ಬಹಳ ಆಸೆಯಿಂದೆ
ಮಗನು ಜನಿಸಲವನು - ಕುಲವನುದ್ಧರಿಪವೇಂ ?
ವಿಶ್ವತೋಭಿರಾಮ - ಕೇಳು ವೇಮಾ |೪೬೧|

—ಓಂ—

—ಶ್ರೀ ವೇಮನ ತತ್ವಗಳು—

ಧರೆಯೊಳ್ ಮತವು ಎಂದು - ಸಕಲ ಮಾಂಸವ ತಿಂದು
ಜೀರೆ ಹೆಸರಿನಿಂದ - ಮಧುವ ಕುಡಿದು
ಪಾಪೆ ವರಸೆಯುಳಿದು - ನರಕವಿ ಬೀಳುವರ್
ವಿಶ್ವತೋಭಿರಾಮ - ಕೇಳು ವೇಮಾ |೪೬೧|

ಧ್ಯಾನಿಯಂದದೊಳಿರ್ಪ - ಮಾನಿಯಂದದೊಳಿರ್ಪ
ಭೋಗಿಯಂತಿರ್ಪ - ರೋಗಿಯ ತೆರದೊಳಿರ್ಪ
ಸಕಲವಂ ತಿಳಿದಿರ್ಪ - ಸರ್ವಜ್ಞನಂತಿರ್ಪ
ಪರಮಯೋಗಿ ವರನು - ಧರೆಯೊಳ್ ವೇಮಾ |೪೬೨|

ಧನಿಕನವನೆ ಸಕಲ - ಕುಲದೊಳು ಶ್ರೇಷ್ಠನು
ಧನವೆ ಭೋಗ ಭಾಗ್ಯ - ಗಳಿಗೆ ಮೂಲ
ಧನವಿಹೀನನಾದವನ - ಕುಲವೇಂ ಕುಲ
ವಿಶ್ವತೋಭಿರಾಮ - ಕೇಳು ವೇಮಾ |೪೬೪|

ಕಂ॥ ಧನಪತಿ ಸಖನಾಗಿರ್ದುಂ ।
ಅನುವಿಂ ಶಂಕರನು ಬಿಕ್ಷವೆತ್ತಿದ ಮುನ್ನಂ ॥
ತನಗೆಷ್ಟು ಜನಗಳಿರ್ದರು ।
ತನಗುಂಟಾಗಿರ್ದ ಭಾಗ್ಯ ತನ್ನದು ವೇಮಾ |೪೬೫|

ಗೀ॥ ಧನಿಕ ಕುರೂಪಿಯಾದರು - ಕಾಮನೆಂಬರು
ಬಡತನದೊಳು ಸಿಕ್ಕಿ - ನರಳುವವನು
ಕಾಮನಂತಿರ್ದರು - ಹೊಲೆಯನೆಂಬುವರಲ್ತು ?
ವಿಶ್ವತೋಭಿರಾಮ - ಕೇಳು ವೇಮಾ |೪೬೬|

—ಓಂ—

—ಶ್ರೀ ವೇಮನ ತತ್ವಗಳು—

ಧರ್ಮ ಬುದ್ಧಿಯಿಂದೆ – ದೈವವನ್ನರಿತೊಡೆ
ಕಾಲನೇನ ಮಾಡ - ಬಲ್ಲ ಪ್ರಜೆಯ
ಧರ್ಮದಲ್ಲಿ ದೈವ - ಸಂಬಂಧವಿರುವುದು
ವಿಶ್ವತೋಭಿರಾಮ - ಕೇಳು ವೇಮಾ |೪೬೭|

ಧನದ ಮದವು ಹೆಚ್ಚಿ - ದೈವವನ್ನರಿಯರು
ಕುಟಿಲ ಭಾವದಿಂದೆ – ಕ್ರೂರ ಜನರು
ಮದವು ಹೆಚ್ಚಿದಷ್ಟು - ಮನ್ನಣೆ ಇಲ್ಲವೈ
ವಿಶ್ವತೋಭಿರಾಮ - ಕೇಳು ವೇಮಾ |೪೬೮|

ಧರೆಯ ಜನರು ಪರಮ - ಯೋಗಿಯ ನೋಡುತ್ತೆ
ಉಬ್ಬುತಿರ್ಪರರಿಯ - ರವರ ಮರ್ಮ
ಅಮೃತದ ರುಚಿಯನ್ನು - ಹಸ್ತಗಳರಿವುವೇ ?
ವಿಶ್ವತೋಭಿರಾಮ – ಕೇಳು ವೇಮಾ |೪೬೯|

ಕಂ॥ ಧ್ವನಿಪುಟ್ಟಿ ಲಾಲಿಸುತ್ತಂ ।
ಧ್ವನಿ ಮಧ್ಯದಿ ಸೇರಿ ತಾನೆ ದನಿಯೆನಿಸುತ್ತಂ ॥
ಅನಿಪನಿತರೊಳಾಗಲೆ ಹೃ ।
ದ್ವನಜದಿ ನೋಡಲ್ಕೆ ಮುಕ್ತಿವಶಮದು ವೇಮಾ |೪೭೦|

ಗೀ॥ ಧರೆಯ ಜನರಿಗೆಲ್ಲ – ನೆರೆ ವಿವರಿಸುವೆ ನಾನು
ಹರನ ಕಾಂಬ ಪರಮ - ಸುಲಭ ಮಾರ್ಗ
ನಿರುತ ಮನವ ಚಲಿಸ - ದಿರ್ಪುದೇ ಸಾಧನ
ವಿಶ್ವತೋಭಿರಾಮ – ಕೇಳು ವೇಮಾ |೪೭೧|

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಧನ ಹೆಚ್ಚಲ್ ಮದಮಧಿಕಂ ।
ಧನಮದ ಹೆಚ್ಚಲ್ಕೆ ದುರ್ಗುಣಂಗಳಧಿಕಮ್ಮೈ ॥
ಧನಮಡಗಲ್ ಮದ ಮುರಿಗುಂ ।
ಧನಮದಮಡಗಲ್ಕೆ ಸುಗುಣಮುದಿಪುದು ವೇಮಾ ॥ ।೪೭೨।

ಧರೆಪುಟ್ಟ ಭೋಗಿಯಾದೆನು ।
ಪರಸಾಧನಮುಳಿದು ನಾರಿಗೋಸುಗ ನಾನೇ ॥
ತಿರುಗಿದೆನರಸುತೆ ಧನಮಂ ।
ಪಿರಿದಾರ್ಜಿಸಿ ಕೊನೆಗೆ ಮರಣಪೊಂದಿದೆ ವೇಮಾ ।೪೭೩।

ಗೀ॥ ಧರ್ಮಕಂಟಕನು ತಾಂ - ಧನದಿಂದೆ ಗರ್ವಿಸಿ
ಸಕಲ ಸಂಪದವನ್ನು - ಭ್ರಮಿಸಿ ಪಡೆದು
ಕಡೆಗೆ ತಾನು ಮೇಲು - ಕಾಣದೆ ಕೆಡುವನು
ವಿಶ್ವತೋಭಿರಾಮ - ಕೇಳು ವೇಮಾ ।೪೭೪।

ಧಾರ್ಮಿಕಂಗಲ್ಲದೆ – ಧರ್ಮ ತಾಂ ತಿಳಿಯದು
ಪಾಪಿ ಜೀವಿಯೆಂತು - ಕಾಣಲಹುದು
ನೀರು ಪುಗದೆ ಆಳ - ನಿಜಮಾಗಿ ತಿಳಿವುದೇಂ ?
ವಿಶ್ವತೋಭಿರಾಮ - ಕೇಳು ವೇಮಾ ।೪೭೫।

ನ

ಕಂ॥ ನವರಂಧ್ರಯುಕ್ತ ಚೀಲಕೆ ।
ನವಕುಂದನ ಭೂಷಣಂಗಳುಂ ಕುಲಮೇಕೋ ॥
ತವೆನೋಡಲಸ್ಥಿರಂ ತನು ।
ಸುವಿವೇಕದೆ ಬೊಮ್ಮ ನಾನೆನುತೆ ತಿಳಿ ವೇಮಾ ॥ ।೪೭೬।

—ಓಂ—

—ಶ್ರೀ ವೇಮನ ತತ್ವಗಳು—

ನರಕುಲದೊಳ್ ತಾಂ ಜನ್ಮಿಸಿ ।
ನರಕುಲದೊಳ್ ತಾನು ಬೆಳೆದು ನರನಾಗಿಯೆ ತಾ ॥
ನರಕುಲಮಂ ಛೀಯೆನ್ನುತೆ ।
ಹರಕುಲದೊಳ್ ಚರಿಸಲಾಗ ಹರನಹ ವೇಮಾ ॥ |೪೭೭|

೧೯|| ನಾಯಿ ತಿಂದವನು ಶ್ರೀ – ಗುರುಲಿಂಗ ಜಂಗಮು
ಹಂದಿ ತಿಂದವನೆ ತಾಂ – ಪರಮ ಯೋಗಿ
ಆನೆ ತಿಂಡವನಿಳೆಯೊ - ಳೆಂಥ ಸುಜ್ಞಾನಿಯೋ
ವಿಶ್ವತೋಭಿರಾಮ ಕೇಳು ವೇಮಾ |೪೭೮|

ನೀರಿನಲ್ಲಿ ಹಡಗು – ಅತಿ ಶೀಘ್ರ ನಡೆವುದು
ಹೊರಗದೊಂದು ಮೊಳವು – ಪೋಗಲಹುದೇ ?
ಸ್ಥಳವು ತಪ್ಪಲಾಗ – ಪ್ರಾಜ್ಞನಜ್ಞನುಮಲ್ತೆ ?
ವಿಶ್ವತೋಭಿರಾಮ - ಕೇಳು ವೇಮಾ |೪೭೯|

ನೀರ ಮುಳುಗಲೇಕೆ - ನಿಧಿಗಳನಿಡಲೇಕೆ
ಪ್ರಿಯದಿ ಗುಡಿಯ ಮುಂದೆ – ಮುಗಿವುದೇಕೆ
ಮಲಮೂತ್ರಗಳು ಹೊಟ್ಟೆ - ತುಂಬಿಕೊಂಡಿರಲಾಗಿ
ವಿಶ್ವತೋಭಿರಾಮ – ಕೇಳು ವೇಮಾ |೪೮೦|

ನ್ಯಾಯಮಲ್ಲ ಜಗದಿ – ಪಂಚಾಂಗ ಪೇಳ್ವುದು
ಕಿಂಚಿಜ್ಞಾನಮಾದೊ – ಡಿಲ್ಲದವರು
ಬ್ರಹ್ಮವರಿಯದಿಂತು – ಪೌರೋಹಿತವ ಮಾಡಿ
ಧರೆಯ ಸುರರು ನಾವೆ ಎಂಬರ್ ವೇಮಾ |೪೮೧|

—ಓಂ—

—ಶ್ರೀ ವೇಮನ ತತ್ವಗಳು—

ನಾಯಿಯು ಗೋವಲ್ಲ - ಮೊಲವು ತಾಂ ಪುಲಿಯಲ್ಲ
ಸೊಳ್ಳೆ ಗಜವುದಲ್ಲ - ಜಗದಿ ನೋಡೆ
ಲೋಭಿ ದಾತೃವಾಗುವನೆ - ಎಂದಿಗಾದೊಡುಂ
ವಿಶ್ವತೋಭಿರಾಮ - ಕೇಳು ವೇಮಾ |೪೮೨|

ಕಂ|| ನೀನಾಡಲು ನಾನಾಡುವೆ |
ನೀನಿರಲಾನಿರ್ಪೆನೈದೆ ನಿರ್ವಿಣ್ಣತೆಯಿಂ ||
ನೀಂ ನೆನೆಯಲ್ ನಾಂ ನೆನೆವೇಂ |
ನೀಂ ನಗಲಾಂ ನಗುವೆನಯ್ಯ ನಿಜವಿದು ವೇಮಾ || |೪೮೩|

ಗೀ|| ನಿಜವ ನುಡಿಯುವವನು – ನಿರ್ಮಲನಾಗಿರ್ಪ
ನಿಜವ ನುಡಿಯುವವನೆ – ನೀತಿಪರನು
ನಿಜವ ನುಡಿಯದವನೆ – ನೀಚ ಚಂಡಾಲನು
ವಿಶ್ವತೋಭಿರಾಮ – ಕೇಳು ವೇಮಾ |೪೮೪|

ನೀರೊಳಿರ್ಪ ಮೀನು - ಮಾಂಸದ ಭ್ರಾಂತಿಯಿಂ
ಗಾಲದಲ್ಲಿ ಸಿಗುವ ತೆರದಿ – ಭುವಿಯೊ –
ಳಾಸೆಯಿಂ ನರರೆಲ್ಲ - ನಾಶವಾಗುವರಯ್ಯ
ವಿಶ್ವತೋಭಿರಾಮ - ಕೇಳು ವೇಮಾ |೪೮೫|

ನೊಣವು ಜೇನರುಚಿಗೆ – ಬಿದ್ದು ತಾಂ ಸಾಯ್ವುದು
ವಿಟನು ಕಾಮರುಚಿಗೆ - ಬಿದ್ದು ಸಾಯ್ವ
ಲೋಭಿಯಾದ ನರನು - ಧರ್ಮವೆಂದೊಡೆ ಸಾಯ್ವ
ವಿಶ್ವತೋಭಿರಾಮ - ಕೇಳು ವೇಮಾ |೪೮೬|

— ಓಂ —

—ಶ್ರೀ ವೇಮನ ತತ್ವಗಳು—

ಕಂ॥ ನನ್ನದು ಮನೆ ನನ್ನದು ಹೊಲ ।
ನನ್ನದು ತನುವೆಂದು ಕಾಮಿಯಾಗುತೆ ಧರೆಯೊಳ್ ॥
ಉನ್ನತ ಪದವಿಯ ಕೋರದೆ ।
ಮುನ್ನಂ ದಾಯಾದಿಗಳಿಗೆ ಈವನು ವೇಮಾ ॥ ।೪೮೭।

ಗೀ॥ ನಿರುತ ಸಟೆಯನಾಡು – ವವರ ನಿವಾಸದಿಂ
ಭರದಿ ಲಕ್ಷ್ಮಿ ತೊಲಗ - ಡೇಕಿರುವಳು
ಪಿರಿದು ರಂಧ್ರದಿರ್ಪ – ಕುಂಭದ ನೀರಿನೋಲ್
ವಿಶ್ವತೋಭಿರಾಮ - ಕೇಳು ವೇಮಾ ।೪೮೮।

ನಾರಿಯುರಂ ಭೂರಿ – ದ್ರವ್ಯಮಂ ನೋಡಿದೊಡೆ
ಸಾರತರ ರುಚಿಗಳಂ – ಸ್ಮರಿಸಿದೊಡನೆ
ಯಾರಿಗಾದರು ಮೋಹ – ಪುಟ್ಟದೇನಿರ್ಪುದೇ
ವಿಶ್ವತೋಭಿರಾಮ – ಕೇಳು ವೇಮಾ ।೪೮೯।

ನನ್ನ ಮನೆಯವಿತ್ತ - ವಿದು ನನ್ನದೆನ್ನುತ್ತೆ
ಮಣ್ಣಿನಲ್ಲಿಡುವಂಥ - ಮಂಕು ಜೀವಿ
ತನ್ನ ಜೊತೆಯೊಳೊಂದು – ಬಿಡಿಕಾಸನೊಯ್ಯನು
ವಿಶ್ವತೋಭಿರಾಮ - ಕೇಳು ವೇಮಾ ।೪೯೦।

ನರರು ನೈಜವಾದ – ದುರ್ಗುಣಂಗಳ ಬಿಡರು
ನಾಯ ಬಾಲ ಡೊಂಕ - ತಿದ್ದಲಹುದೆ ?
ಮಿಾರಿದವಳು ಗಂಡನಂ - ಮಾರದಿರ್ಪಳೇಂ ?
ವಿಶ್ವತೋಭಿರಾಮ - ಕೇಳು ವೇಮಾ ।೪೯೧।

—ಓಂ—

—ಶ್ರೀ ವೇಮನ ತತ್ವಗಳು—

ನಾಯಿ ಕಚ್ಚಿ ದೊಡನೆ – ಕೂಗದೆ ಬಿಗಿ ಹಿಡಿದು
ಪಕ್ಕೆ ಎಲುಬಿ ಗೊದ್ದು - ಮಲಗಿಸುತ್ತೆ
ನಿಂಬೆ ಹಣ್ಣಿ ರಸವ – ತಲೆಗೆ ತಿಕ್ಕಿದೊಡಾಗ
ನಾಯ ವಿಷವು ಪೋಪು – ದಯ್ಯ ವೇಮಾ |೪೯೨|

ನೀರಿನಲ್ಲಿ ನೆಗಳು - ಆನೆಯಂ ಪಿಡುವುದು
ಹೊರಗೆ ನಾಯಿಯುದನು – ಕೊಲ್ಲುತಿಹುದು
ಸ್ಥಾನ ಬಲ ಮಲ್ಲದೆ - ತನ್ನ ಬಲ ಮಲ್ಲ ವೈ
ವಿಶ್ವತೋಭಿರಾಮ - ಕೇಳು ವೇಮಾ |೪೯೩|

ಕಂ|| ನಿರೋಳ್ ಜನಿಸಿದ ಲವಣಂ |
ಕ್ಷಾರಮೆ ನೀರಾಯ್ತು ನೀರು ಲವಣಗಳೊಂದೇ ||
ಈರೀತಿ ಶಿವನ ಜೀವನ |
ಸೇರಿಕೆಯರಿಯುವುದು ಪರಮ ಗುರುವರ ವೇಮಾ |೪೯೪|

ಗೀ|| ನುಡಿವುವೆನ ಲವೇಕೆ – ನುಡಿಯುದೆ ನೀನಿರ್ಪೆ
ನುಡಿವುದಯ್ಯ; ಎನ್ನೊಳ್ - ಪ್ರೀತಿಯಿಂದೆ
ನುಡಿವುದಣ್ಣ;; ನಿನ್ನ – ನುಡಿಯ ನಾಂ ಕೇಳುವೆ
ವಿಶ್ವತೋಭಿರಾಮ – ಕೇಳು ವೇಮಾ |೪೯೫|

ನಿನ್ನ ನೋಡಲಾಗಿ – ತನ್ನ ತಾ ಮರೆವನು
ತನ್ನ ನೋಡಲಾಗಿ - ನಿನ್ನ ಮರೆವ
ಯಾವ ವಿಧದಿ ಮನುಜ – ನರಿವ ನಿನ್ನಂ ತನ್ನ
ವಿಶ್ವತೋಭಿರಾಮ - ಕೇಳು ವೇಮಾ |೪೯೬|

—ಓಂ—

—ಶ್ರೀ ವೇಮನ ತತ್ವಗಳು—

ನಮ ಶಿವಾ ಎನಬಹುದು - ನಾರಾಯಣೆನ ಬಹುದು
ಮೇಲು ಜನರ ನೋಡಿ – ಮೆಚ್ಚ ಬಹುದು
ಗಂಟ ಬಿಚ್ಚಿ ಕಾಸ - ಕೊಡಲಾರ ನಾರಿಗುಂ
ವಿಶ್ವತೋಭಿರಾಮ – ಕೇಳು ವೇಮಾ |೪೯೭|

ನಾಯ ಬಾಲವನ್ನು - ನಳಿಕೆಯಲ್ಲಿಡಲಾಗ
ನೆಟ್ಟಗಿಹುದು - ನಳಿಕೆಯಲ್ಲಿ ಮಾತ್ರ
ಎಷ್ಟು ಪೇಳೆ ಹೀನ - ನವ ಗುಣ ಬಿಡುವನೇ
ವಿಶ್ವತೋಭಿರಾಮ - ಕೇಳು ವೇಮಾ |೪೯೮|

ನಾಯಿ ಏಕಾಂತವು - ಬಕನ ಕಪಟ ಧ್ಯಾನ
ಗಾರ್ಧಭ ರಾಗ ರಸ – ವೆನಿತು ಸೊಬಗೊ
ಆತ್ಮ ವರಿವ ಭಾವ – ಹೀನ ಮ ದಿಂತೆಯೋ
ವಿಶ್ವತೋಭಿರಾಮ - ಕೇಳು ವೇಮಾ |೪೯೯|

ಕಂದ॥ ನೀಚರ ವಿನುತಿಯ ಮಾಡುತೆ ।
ಯಾಚಕ ತನದಿಂದ ತಿರುಗಿ ಬಳಲುವುದೊಂದೇ ॥
ಶ್ರೀಚರಿತ ನಂಘ್ರಿ ಕಮಲವ ।
ಯೋಚಿಸೆ ತಾನಿಲ್ಲಿ ಯಲ್ಲಿ ಘನನ್ಯೆ ವೇಮಾ ॥ |೫೦೦|

ಗೀ॥ ನೆರೆ ಸುಖಾನಂದದಿ – ದುಖ್ಖವುಂ ನೀಗದೆ
ವಿಧಿಯ ದೂರಲಾಗ - ಫಲವುದೇನು
ಬುದ್ಧಿ ಏಕಾಗ್ರತೆ - ಪೊಂದಿ ದೊಡಾಗಲೆ
ಮುಕ್ತ ನಪ್ಪ ಜಗದಿ - ಮೌನಿ ವೇಮಾ |೫೦೧|

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ನೋಡಿರ್ದು ನೋಡರೆಂದುಂ ।
ನಾಡೆ ಸದಾ ಕೇಳಿ ಕೇಳದಿರ್ಪರು ಮತ್ತಂ ॥
ನೋಡಿಯು ಕುರುಡುಂ ಕೇಳಿಯು ।
ಗಾಢಂ ಕಿವುಡೆಂಬುದಿದುವೆ ನಿಕ್ಕಂ ವೇಮಾ |೫೦೨|

ನೇರ ಗಳಿಣಿಸುವ ದೊರೆಯುಂ ।
ಸೇರುವುದತಿ ಕಷ್ಟ ನೆಸವು ನಿಮಿಷದಿ ದೊರೆಗುಂ ॥
ವಾರಾಸಿ ದಾಟಿದರು ಶನಿ ।
ಮಾರಕನಾಗುತ್ತೆ ಪಿಡಿದು ಕೊಲ್ಲುವ ವೇಮಾ ॥ |೫೦೩|

ಗೀ॥ ನೆನೆ ಗ್ರಹಗಳು - ರಾಸಿಯೊಳ್ - ಚರಿಸುತಿರ್ದರು
ಒಳ್ಳೆ ಕೆಟ್ಟತನ ಗ - ಳಾಗುತಿಹವು
ಪುರುಷ ಯತ್ನವೆಂದು - ಬೊಗಳುವ ರೀತಕ್ಕೊ
ವಿಶ್ವತೋಭಿರಾಮ - ಕೇಳು ವೇಮಾ |೫೦೪|

ನರಿಯು ಬಾಯೊಳಿರ್ದ - ಮಾಂಸವು ನೀರೊಳು
ಮೀನು - ಪಿಡಿಯೆ ಬರಲು ಬೀಳುವಲ್ಲಿ
ಆದನು ಹದ್ದು ಹೊತ್ತು - ಕೊಂಡೊಯ್ದ ತೆರದೊಳು
ದೈವ ಘಟನೆ ಬೇರೆ - ಇಹುದು ವೇಮಾ |೫೦೫|

ನೆರೆಯುವರ ಸಂಪತ್ತು - ನೋಡಿ ತಾನತ್ತರೆ
ಸಿರಿಯು ಬರುವುದೆಂತು - ಪರಮ ಗುರುವು
ದೊರಕಿಸುವನೆ ತನ್ನ - ಕರ್ಮ ಮಿಂತಿರಲಾಗಿ
ವಿಶ್ವತೋಭಿರಾಮ- ಕೇಳು ವೇಮಾ |೫೦೬|

—ಓಂ—

—ಶ್ರೀ ವೇಮನ ತತ್ತ್ವಗಳು —

ಕಂ॥ ನರ ಜನ್ಮದೊಳು ದಯಿಸಿ ತಾಂ ।
ಪರಮಾತ್ಮನ ನರಿಯಲಾಗದುರು ಪಾಪಗಳಂ ॥
ನೆರೆಗೈದು ವರ್ತಿಸುತ್ತಿರೆ ।
ತಿಪು ತಿರುಗಿಯಧೋಗತಿಯನೆ ಪೊಂದುವ ವೇಮಾ |೫೦೭|

ಗೀ॥ ನೀರು ಅನ್ನ ನಿದ್ರೆ – ಯನ್ನುಳಿಯು ತಾವಗಂ
ಮುಕ್ತಿಗಾಗಿ ಅಲೆವ - ಮೂಢ ಮನುಜ
ಹುಚ್ಚು ನಾಯಿಯಂತೆ – ಬೇಸರ ಪೊಂದನು
ವಿಶ್ವತೋಭಿರಾಮ - ಕೇಳು ವೇಮಾ |೫೦೮|

ನೀರ ಮುಳುಗುವವನು - ನಿರ್ಮಲಾತ್ಮನು ಮಲ್ಲ
ಪೂರ್ಣವಾದ ಮುಕ್ತಿ - ಪೊಂದಲಾರ
ನೀರು ಪಕ್ಕಿ ಸತತ - ನೀರೊಳು ಮುಳುಗದೇ
ವಿಶ್ವತೋಭಿರಾಮ _ ಕೇಳು ವೇಮಾ |೫೦೯|

ನರನು ತಾನು ಮಾಗೆ - ನಾರಾಯಣನು ಮಾಗೆ
ತತ್ವ ಬದ್ಧನಾದ - ರರಿಯೆ ಧರಿಯೊಳ್
ಮರಣ ಮಿಥ್ಯದೆಂಬು - ದರಿವುದು ಮನದೊಳು
ವಿಶ್ವತೋಭಿರಾಮ – ಕೇಳು ವೇಮಾ |೫೧೦|

ಕಂ॥ ನಾನಾ ರೂಪವ ನೋಡಲ್ ।
ನೀನೇ ಕಾಣಿಸುವೆ ಮನವ ನಿಲಿಸಲ್ ನಿನ್ನೊಳ್
ನೀನೆಂಬುದರಿ ತೊಡಾಗಳ್ ।
ನಾ ನೀನೆಂಬುದೆ ವಿನಾಶ ಮಪ್ಪುದು ವೇಮಾ ॥ |೫೧೧|

—ಓಂ—

—ಶ್ರೀ ವೇಮನ ತತ್ವಗಳು—

ನಾನು ತನುವಲ್ಲವೆಂಬುದ |
ಮಾನಸದೊಳಗರಿಯದಿರ್ಪ ಮನುಜರ್ಗೆಲ್ಲಂ ||
ಸ್ವಾನುಭವ ಸಿದ್ಧಿಯೊದದುವೆ
ತಾನಹ ಪರಮಾತ್ಮನರಿವುದಳವೇಂ ವೇಮಾ | ೫೧೨ |

ಗೀ|| ನಾನು ಎಂಬ ವಚನ – ನೀನೆನ್ನಬಹುದು ಮೇಣ್ |
ನೀನು ನಾನೆ ಎಂಬ – ನಿಷ್ಠೆ ತಿಳಿಯೆ
ನಾನು ನೀನೇ ನೀನು – ನಾನೆನ್ನಬಹುದಯ್ಯ
ವಿಶ್ವತೋಭಿ ರಾಮು – ಕೇಳು ವೇಮಾ | ೫೧೩ |

ಕಂ|| ನಾಂ ಸತ್ತಾಗಳೆ ಮತ್ತಂ |
ತಾಂ ಸಾಯುವ ಪಂಚ – ತತ್ವವೊಂದಾಗುತ್ತಂ ||
ತಾಂ ರಾಜರೂಪವೊಂಧುವ |
ನೇಂ ಪೇಳುವೆ ರಾಜಿಸುತ್ತೆ ನಿಲ್ಲುವ ವೇಮಾ | ೫೧೪ |

ನಾದವನರಿದಿಹ ಯೋಗಿಯು |
ವೇದಾಂತದೊಳಿರ್ಪ ವಿಧಿಯ ತಿಳಿಸೆ ಸಮರ್ಥಂ ||
ನಾದವೆ ಮುಕ್ತಿ ಗೆಹಾದಿಯು |
ಸಾದರದಿಂ ಸಾರಿ ಪೇಳ್ವುದಿಳೆಯೊಳ್ ವೇಮಾ | ೫೧೫ |

ಗೀ|| ನಾದ ನಾದ ಕೂಡಿ - ನಾಮ ರೂಪಾದುದು
ನಾದದಲ್ಲಿ ನಾದ ನಾಟಿರುವುದು
ವಾದ ಮಾಡುವವರು – ವರ್ಣಿಸಲಾರರು
ವಿಶ್ವತೋಭಿರಾಮು – ಕೇಳು ವೇಮಾ | ೫೧೬ |

—ಓಂ—

—ಶ್ರೀ ವೇಮನ ತತ್ವಗಳು—

ನಾಸಿಕಾಗ್ರದಲ್ಲಿ - ಗುರಿಯನ್ನು ನಿಲ್ಲಿಸಿ
ಘಾಸೆ ಪಡದೆ ನೋಡೆ – ಶಕ್ಯವುಹುದು
ಕಾಶಿ ಕಂಚಿ ತಿರುಗಿ – ಕಷ್ಟಬೀಳುವುದೇಕೆ
ವಿಶ್ವತೋಭಿ ರಾಮ - ಕೇಳು ವೇಮಾ | ೫೧೭ |

ನೀನು ನುಡಿಯುತಿರಲು – ನಿತ್ಯ ಪೂಜಿತನಪ್ಪ
ನೀನು ನುಡಿಯದಿರಲು - ನಿದ್ರೆ ಪೋಪ
ನೀನು ನುಡಿಯೆ ನುಡಿಯೆ – ನಿರ್ಮಲನಾಗುವ
ವಿಶ್ವತೋಭಿರಾಮ - ಕೇಳು ವೇಮಾ | ೫೧೮ |

ನಿತ್ಯ ಸತ್ಯವ್ರತಾಚಾರ – ನಿಪುಣನಾಗಿ
ಪರಮ ಧರ್ಮಾರ್ಥಗಳನ್ನೆಲ್ಲ ಪಡೆದು ನೋಡಿ
ಸಿದ್ಧಿ ಪೊಂದುವ ಪರಿಪೂರ್ಣ – ಚಿಂತೆಯಾಂತೊ
ಡಾಗಳಾನಂದಮು ಮಿತ - ಮಾಗುವುದು ವೇಮಾ | ೫೧೯ |

ಕಂ|| ನಿತ್ಯಾನಂದ ವಿವೇಕಂ |
ಸತ್ವದಿ ತಾನರಿಯದಿರಲು ಶಕ್ಯಮೆ ಜಗದೊಳ್ ||
ಮೌಕ್ತಿಕದೋಲ್ ಗುರುಮರ್ಮಂ |
ಭೃತ್ಯಂ ಗಾಗುತ್ತೆ ಮನದೊಳರಿವಂ ವೇಮಾ | ೫೨೦ |

ನೀತಿಯು ಭಕ್ತಿ ಜ್ಞಾನಂ |
ರೀತಿಯು ಸದ್ವರ್ತನಂಗಳಿರ್ದೊಡೆ ಮನದೊಳ್ ||
ಜ್ಯೋತಿ ಸ್ವರೂಪಂ ಬೊಮ್ಮಂ |
ಭೂತಾತ್ಮಂ ನಿನ್ನ ಪೊಂದುವಂ ವರ ವೇಮಾ | ೫೨೧ |

—ಓಂ—

—ಶ್ರೀ ವೇಮನ ತತ್ವಗಳು—

ನೀನೆಂದೊಡುಮಾನೆಂದೊಡು ।
ಮಾನಂದ ಬ್ರಹ್ಮ ಪದ್ಧತಿಯು ತಾನಹುದೇಂ ? ॥
ಜ್ಞಾನದೊಳರಿಯುತೆ ನೆರೆಸ ।
ನ್ಮಾನಿತನಾಗುತ್ತೆ ನಿನ್ನನರಿವುದು ವೇಮಾ । ೫೨ ।

ಗೀ॥ ನೀರಿನಲ್ಲಿ ಬಿದ್ದ – ಕೆಂಡವಿದ್ದಲಿಯಕ್ಕುಂ
ಬೆಂಕಿ ಮೇಲೆ ನೀರ – ಪಾತ್ರೆಯಿಡಲು
ಚಳಮಳ ಕುದಿವುದು – ಚೋದ್ಯಮಿದಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ । ೫೩ ।

ಕಂ॥ ನಭಮಂ ಪಿಡಿಯಲ್ಬಹುದೈ ।
ಇಭಮಂ ಪಿಡಿದೊಂದು ವೇಳೆ ಕಟ್ಟಲ್‌ಬಹುದೈ ॥
ವ್ಯಭಿಚಾರಿಯ ಮನ ನಿಲಿಪುದು ।
ವಿಭುವಿಂಗಸದಳಮದೆಂದು ಸಾರ್ದೈ ವೇಮಾ । ೫೪ ।

ಗೀ॥ ನಾಥನಿರ್ಪಕಾಂತೆ-ಯಾತನ ಪ್ರೀತಿಸಿ
ದೇವನೆಂದು ತಿಳಿದು - ಸೇವಿಸುವಳು
ಭಾವಿಸಳನ್ಯನಂಸ್ಪರ್ಶಿಸಬಲ್ಲಳೇಂ ?
ವಿಶ್ವತೋಭಿರಾಮ-ಕೇಳು ವೇಮಾ । ೫೫ ।

ಕಂ॥ ನಂಡನನು ಜನಿಸಿ ತಾಂ ಬುಧ ।
ವೃಂದಕ್ಕೆ ವಿಧೇಯನಾಗಲಾನಂದ ಸುಖಂ ।
ಮಂದಮತಿ ಸತ್ಪುರುಷರಂ ।
ನಿಂದಿಸುತಿರೆ ಚಿಂತೆಯುದಿಪುದಿದು ದಿಟ ವೇಮಾ । ೫೬ ।

—ಓಂ—

—ಶ್ರೀ ವೇಮನ ತತ್ವಗಳು—

ಗೀ|| . ನಿಜವ ನುಡಿಯುವವನ – ಜಗವೆಲ್ಲ ಬೈವುದು
ನಿಜವ ನುಡಿಯೆ ಸಲ್ಲ - ನೀಚರ ಬಳಿ
ನಿಜಮಹಾತ್ಮರಲ್ಲಿ - ನಿಜವಾಡಬೇಕಯ್ಯ
ವಿಶ್ವತೋಭಿರಾಮ – ಕೇಳು ವೇಮಾ | ೫೨೭ |

ನೀತಿ ಜ್ಯೋತಿ ಹೊರತು-ನಿರ್ಮಲಮಪ್ಪುದೇ
ನೆಂತು ಲಭಿಪುದೈದೆ–ಪರವು ತನಗೆ
ಧನವಿದ್ದಮಾತ್ರವೇ–ದೈವವೇಂ ದೊರೆಗುವೆ ?
ವಿಶ್ವತೋಭಿರಾಮ - ಕೇಳು ವೇಮಾ | ೫೨೮ |

ನೀತಿಯರಿತು ಪೇಳ್ವ - ನಿಜವಾಗಿ ವೇಮನ
ಪಾತಕಂಗಳನ್ನು - ಪೋಗೊಳಿಸಿದ
ಖ್ಯಾತಿಯಾಂತ ತತ್ವ - ವರಿಸಿ ಪೇಳಿದ ನಿಂತು
ವಿಶ್ವತೋಭಿರಾಮ - ಕೇಳು ವೇಮಾ | ೫೨೯ |

ನೆರೆ ದರಿದ್ರನಾಗೆ – ಬಂಧುಗಳ್ ಪಗೆಗಳು
ನೆರೆ ದರಿದ್ರನಾಗೆ-ಪರವೆ ಸುನ್ನೆ
ನೆರೆ ದರಿದ್ರನಾಗೆ - ನ್ಯಾಯವು ದೊರೆಯದು
ವಿಶ್ವತೋಭಿರಾಮ - ಕೇಳು ವೇಮಾ | ೫೩೦ |

ಕಂ|| ನಂದನ ಸಂವತ್ಸರದಾ ।
ಸಂಧಿಯ ಕಾರ್ತಿಕ ಮಾಸ ಪೂರ್ಣಿಮ ದಿನದೊಳ್ ||
ವಿಂಧ್ಯಾದ್ರಿ ಸೇತು ಮಧ್ಯದಿ ।
ಸುಂದರನುಳು ವೀರನೋರ್ವನಾಳುವ ವೇಮಾ | ೫೩೧ |

—ಓಂ—

—ಶ್ರೀ ವೇಮನ ತತ್ವಗಳು—

ನೂರಾರು ನದಿಯ ಜಲದೊಳ್ |
ಬಾರಿಗು ಮುಳುಗುವುದು ಮತ್ತ ಮದುನೆರೆ ಕಷ್ಟಂ ||
ಆರಯೆ ಮೂರ್ಖಂಗಿದರಿಂ |
ಸಾರ ವಿಚಾರಮದು ತಿಳಿಸಲಾಗದು ವೇಮಾ | ೫೩೨ |

ಗೀ|| ನೀಚ ತೊತ್ತುಸಂಗ - ಕುಜನನಿಗಲ್ಲದೆ
ಸುಜನನಾದ ನರಗೆ - ಸಮ್ಮತಿಸದು
ಶಗಣಿ ತಿಂಬ ಹುಳುವು - ಬೆಲ್ಲಮನ್ನರಿವುದೇ
ವಿಶ್ವತೋಭಿ ರಾಮ - ಕೇಳು ವೇಮಾ | ೫೩೩ |

ನೆರಳನೀವ ಮರಗ - ಳವು ಸಾಧು ಬೋಧೆಗ
ಳಡಗಿ ಕೆಳಗೆ ಸೇರೆ - ನೆರಳು ದೊರೆಗುಂ
ಅಲ್ಲಿ ಇಲ್ಲಿ ತಿರುಗ - ಲದು ಮಿಲ್ಲ ಇದುಮಿಲ್ಲ
ವಿಶ್ವತೋಭಿ ರಾಮ - ಕೇಳು ವೇಮಾ | ೫೩೪ |

ಪ

ಕಂ|| ಪಗೆಯುಳಿವುದಾಗ್ರಹಂ ಬಿಡೆ |
ಪಗೆಯುಂ ಕಾಮುಂಗಳಳಿದು ಪರಜನ್ಮಂಗಳ್ ||
ಮಿಗೆ ಲಭಿಪುದಲ್ತ ಭೇದಂ |
ತ್ರಿಗುಣಗಳಡಗಲ್ಕೆ ಮುಕ್ತಿ ಸ್ಥಿರಮದು ವೇಮಾ | ೫೩೫ |

ಗೀ|| ಪ್ರಣವವರಿಯದವನು - ಭಕ್ತನು ತಾನಲ್ಲ
ಜ್ಯೋತಿಯರಿಯದವನು - ಯೋಗಿಯಲ್ಲ
ನಿತ್ಯವರಿಯದವನು - ನಿರ್ವಾಣಿ ತಾನಲ್ಲ
ವಿಶ್ವತೋಭಿ ರಾಮ - ಕೇಳು ವೇಮಾ | ೫೩೬ |

—ಓಂ—

—ಶ್ರೀ ವೇಮನ ತತ್ವಗಳು—

ಪುರುಷ ಭಾಗ್ಯದೆ ಪುಣ್ಯ - ವತಿ ದೊರೆವಳಲ್ಲವೆ ?
ಪುಣ್ಯವತಿಗುಮಂತೆ . ಪುರುಷ ದೊರೆವಂ
ಈರ್ವರ ಪುಣ್ಯದಿ - ಪುತ್ರರು ಮಿತ್ರರು
ಅಷ್ಟಭೋಗ ಭಾಗ್ಯ - ದೊರೆಗುಂ ವೇಮಾ | ೫೩೭ |

ಪ್ರಾಣಪ್ರತಿಷ್ಠೆಯು - ಪ್ರಾಪಂಚಮಲ್ಲದೆ
ಬೇರೆಯುಂಟೆ ಭುವಿಯೊಳ್ - ಬೆದಕಿ ನೋಡೆ
ಪ್ರಾಣಪ್ರತಿಷ್ಠೆಯಿಂ - ಪ್ರತಿಮೆಗಳ್ ನುಡಿವುವೇ ?
ವಿಶ್ವತೋಭಿ ರಾಮ - ಕೇಳು ವೇಮಾ | ೫೩೮ |

ಪಾಷಾಣಗಳ ತಂದು - ಗುಡಿಗಟ್ಟಿ ಮೇಲಾಗಿ
ಬೇರೆ ಶಿಲೆಯ ನಟ್ಟು - ದೇವರೆಂದು
ಪೂಜೆ ಮಾಡಲಾಗಿ - ಪುಣ್ಯವು ಬರ್ಪುದೇಂ ?
ವಿಶ್ವತೋಭಿರಾಮ - ಕೇಳು ವೇಮಾ | ೫೩೯ |

ಪೂಜೆ ಮಾಡಿ ಮಾಡಿ - ಪೂಜಾರಿ ತಾನಾದ
ಪೂಜೆ ವಸ್ತುವರಿಯ - ಭುವಿಯೊಳ್ತಾನು
ಎಲ್ಲಿ ಪೂಜೆ ಪಾಳ್ಪ - ನೆಲ್ಲ ದಿಕ್ಕಿನೊಳ್ತಾನೆ
ತಾನೆ ನಾನು ತಾನೆ - ತಾನು ವೇಮಾ | ೫೪೦ |

ಕಂ|| ಪುಷ್ಪಗಳೊಳಗತ್ಯುತ್ತಮ |
ಪುಷ್ಪಂ ವರ ಜಾಜಿ ಪುಷ್ಪ ಪುರುಷರೊಳೆಲ್ಲಂ ||
ನಿಷ್ಪಕ್ಷಪಾತಿಯುತ್ತಮ |
ನಿಷ್ಪ್ರಾಪಂಚಿಕನೆ ಯೋಗಿ ನಿಕ್ಕಂ ವೇಮಾ | ೫೪೧ |

—ಓಂ—

—ಶ್ರೀ ವೇಮನ ತತ್ವಗಳು—

೧೯|| ಪ್ರಜೆಯು ಮಾಳ್ಪ ಕೆಡಕು – ಪ್ರಭುವಿಗೆ ಬರ್ಪುದು
ಪ್ರಭುವು ಮಾಳ್ಪ ಮೇಲು – ಪ್ರಜೆಗೆ ಅರ್ಧ
ಪ್ರಭುವು ಮಾಳ್ಪ ಕೆಡುಕು – ಪ್ರಜೆಗೇಕೆ ಬರದಯ್ಯೊ
ವಿಶ್ವತೋಭಿ ರಾಮ – ಕೇಳು ವೇಮಾ | ೫೪೨ |

ಪಾಪವೆಂಬ ವಸ್ತು - ಪರದೇಶದಲ್ಲಿಲ್ಲ
ತನ್ನ ಕರ್ಮಚಯದೊ - ಳಡಗಿರುವುದು
ಧರ್ಮ ಕರ್ಮ ವೆಂಬು - ದರಿವುದೇ ಜ್ಞಾನವು
ವಿಶ್ವತೋಭಿರಾಮ–ಕೇಳು ವೇಮಾ | ೫೪೩ |

ಪುಣ್ಯವೆಲ್ಲ ಸೇರಿ – ಪುರುಷನಾಗುದಿಪನು
ಪಾಪ ವಶದಿ ಸ್ತ್ರೀಯು - ಜನ್ಮಿಸುವಳು
ಕಷ್ಟನಾಸತಿಗೆಂದು – ಕಂಡು ಕುಗ್ಗರು ಮತ್ತೆ
ವಿಶ್ವತೋಭಿರಾಮ - ಕೇಳು ವೇಮಾ | ೫೪೪ |

ಪರಮ ಹಂಸರೆಂಬ – ಪೆಸರೊಂದು ಮಾತ್ರವೇ
ಪರಧನ ಸ್ತ್ರೀಯರ – ನ್ನಾಸಿಸುವರು
ಪರಮ ಹಂಸನು ಸಟೆ – ಪರ ಹಿಂಸಕರು ದಿಟ
ವಿಶ್ವತೋಭಿರಾಮ – ಕೇಳು ವೇಮಾ | ೫೪೫ |

ಪ್ರಭುವು ಕೋತಿಯಾಗೆ – ಪಾರ್ಶ್ವದಿ ನಾಯಿಗ
ಳ್ಸೇನೆಯೊಡೆಯ ನರಿಯು – ಸೇನೆ ಪುಲಿಗ
ಳಾನೆಗಳ ಶ್ವಗಳಿಲಿಗಳು – ಬೆಕ್ಕುಗಳ್
ವಿಶ್ವತೋಭಿರಾಮ - ಕೇಳು ವೇಮಾ | ೫೪೬ |

—ಓಂ—

—ಶ್ರೀ ವೇಮನ ತತ್ವಗಳು—

ಪರಸತಿ ಗಮನವು - ಪ್ರತ್ಯಕ್ಷ ನರಕವು
ತಿಳಿಯೆ ದೂಷಣೆಗೆ - ಮಹಾಲಯಮದು
ಪುರುಷ ನೋಡೆ ಕೊಲ್ವ - ಭೂಪತಿ ದಂಡಿಪಂ
ವಿಶ್ವತೋಭಿರಾಮ - ಕೇಳು ವೇಮಾ | ೫೪೭ |

ಕಂ॥ ಪಿರಿದುಂ ಪಾಪಕೆ ಭಯಮುಂ ।
ಮರಣಕೆ ನಿರ್ಭಯುವ ತೋರ್ಪುದೇ ತಾಂ ವಿಹಿತಂ ॥
ಮರೆವುದು ತಾಂ ಪರನಿಂದೆಯ
ಮರೆವುದು ಸತಿ ಸುತರ ಮೇಲಣಾಸೆಯ ವೇಮಾ | ೫೪೮ |

ಗೀ॥ ಪತಿಯು ಕಾಲದಲ್ಲಿ - ಸತಿ ಕಷ್ಟ ವಹಿಸಲು
ಸುತರ ಕಾಲದಲ್ಲಿ – ಸುಖವು ನಿಕ್ಕಂ
ಕಷ್ಟಸುಖಗಳಿಳೆಯೊ – ಳಾರಿಗುಂ ತಪ್ಪದು
ಬಲವು ಪುತ್ರ ಬಂಧು – ಬಲವೆ ವೇಮಾ | ೫೪೯ |

ಪರಧನಂಗಳಿಗೈದೆ = ನೆರೆ ಕೈಯ್ಯ ನೀಡುವರ್
ಸತ್ಯವರಿಯು ದಿರ್ಪ – ಸ್ವಾರ್ಥಿ ದ್ವಿಜರು
ದ್ವಿಜರೆಂದು ಪೇಳಲು – ತೇಜವೇನಿರ್ಪುದು
ವಿಶ್ವತೋಭಿರಾಮ - ಕೇಳು ವೇಮಾ | ೫೫೦ |

ಪರರಿಗಾಗಿ ಭೂಮಿ – ಯನ್ನುತ್ತು ಬಿತ್ತುವ -
ರವನಿ ಪತಿಗೆ ವಶ್ಯ – ರಾಗಿರುವರು
ಹಾಲಿನಂಥ ಕುಲಜ – ರೀವರು ಕಂದಾಯ
ಮಾತ ನರಿಯ ರೊಕ್ಕ – ಲಿಗರು ವೇಮಾ | ೫೫೧ |

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಪರಕಾಂತಾ ಸೋದರನುಂ ।
ಪರಧನಗಳ್ಗಾಸೆಪಡದವನು ಪರಹಿತನುಂ ॥
ಪರರಾಗ್ರಹಗೊಂಡರು ತಾಂ ।
ನೆರೆ ಮುಳಿಯದೆ ಬದುಕುವವನು ಮಾನ್ಯನು ವೇಮಾ । ೫೫೨ ।

ಗೀ॥ ಪತಿಯ ಮಾನಸದೊಳು – ಪರಮಾತ್ಮನೆನ್ನುತ್ತೆ
ನುತಿಪ ಸತಿಗೆ ಪರವು – ಲಭಿಪುದೆಂಬರ್
ಪತಿಯ ದೂರುತಿರ್ಪ – ಸುದತಿಗೆ ದುರ್ಗತಿ
ಸತತ ಬಾಧಿಸುವುದು – ಕೇಳು ವೇಮಾ । ೫೫೩ ।

ಪಟ್ಟು ಹಿಡಿಯೆ ಸಲ್ಲ – ಪಿಡಿದು ಬಿಡುವುದು ಮಲ್ಲ
ಪಿಡಿದೊಡದನು ಬಿಗಿಯ – ಹಿಡಿಯಬೇಕು
ಪಿಡಿದು ಬಿಡುವುದಕ್ಕಿಂತ – ಪ್ರಾಣಬಿಡುವುದೆ ಲೇಸು
ವಿಶ್ವತೋಭಿ ರಾಮ – ಕೇಳು ವೇಮಾ । ೫೫೪ ।

ಕಂ॥ ಪ್ರತ್ಯಕ್ಷಂ ಭೂದೇವಿಯು ।
ಪ್ರತ್ಯಕ್ಷಂ ವಾಯುವಗ್ನಿ ಜೀವೇಂದ್ರಿಯಗಳ್ ॥
ಪ್ರತ್ಯಕ್ಷಂ ರವಿ ಚಂದ್ರರು ।
ಪ್ರತ್ಯಕ್ಷವನರಿಯಲಾರರೈ ವರ ವೇಮಾ । ೫೫೫ ।

ಗೀ॥ ಪತಿಗೆದುರು ನುಡಿಯುತಿಹ - ಸತಿಯು ತಾಂ ಶುನಕಮೈ
ಮೀರಿದ ಸತಿಯೊಡ - ಗೂಡಿ ಬೆರೆಯೆ
ಪಂದಿ ಪಂದಿ ಸೇರಿ - ಕೆಸರೊಳು ಬಿದ್ದಂತೆ
ವಿಶ್ವತೋಭಿ ರಾಮ - ಕೇಳು ವೇಮಾ । ೫೫೬ ।

—ಓಂ—

—ಶ್ರೀ ವೇಮನ ತತ್ವಗಳು—

ಪಾಗು ಹಚ್ಚಡಗಳು - ಧನಧಾನ್ಯ ಸಂಪದ
ಬೀಗಮುಂಗುರಗಳು - ದೊಡ್ಡ ಹೊಟ್ಟೆ
ನೋಡಿ ಗೌರವಿಪರು - ಒಳಗುಟ್ಟ ನೋಡರು
ವಿಶ್ವತೋಭಿ ರಾಮ - ಕೇಳು ವೇಮಾ | ೫೫೭ |

ಪಿಕವು ಬನದ ಮಧ್ಯೆ - ಪ್ರಿಯವಾಗಿ ನುಡಿಯುವ
ತೆರದಿ ಪ್ರಾಜ್ಞಜನರ - ನಡೆ ನುಡಿಗಳು
ಕಾಗೆ ಕೂಗಿನಂತೆ - ಕರ್ಪೂಬದ್ಧರ ಕೂಗು
ವಿಶ್ವತೋಭಿ ರಾಮ - ಕೇಳು ವೇಮಾ | ೫೫೮ |

ಪಿಂಡಗಳಂ ಮಾಡಿ - ಪಿತೃಗಳ ನೆನೆಯುತ್ತೆ
ಕಾಗೆಗಳಿಗಿಡುತಿರ್ಪ - ಕತ್ತೆಗಳಿರ
ಹೊಲಸು ತಿಂಬ ಕಾಗೆ - ಪಿತೃವಾಗಬಲ್ಲುದೇಂ ?
ವಿಶ್ವತೋಭಿ ರಾಮ - ಕೇಳು ವೇಮಾ | ೫೫೯ |

ಪುಸ್ತಕಗಳು ಜಡೆಗಳ್ - ಪುಲಿದೊಗಲ್ ಬೆತ್ತವು
ಕಕ್ಷಪಾಳಿ ಹತ್ತು - ಲಕ್ಷವಿರಲು
ಭಾರಗೇಡೇ ಹೊರತು - ಮೋಕ್ಷವೇನಿಲ್ಲವೈ
ವಿಶ್ವತೋಭಿ ರಾಮ - ಕೇಳು ವೇಮಾ | ೫೬೦ |

ಪುಣ್ಯಪುರುಷಗೊಂದು - ಬೆನ್ನು ಹುಣ್ಣಾದೊಡೆ
ವಸುಧೆ ಎಲ್ಲ ವಾರ್ತೆ – ಹರಡುತಿಹುದು
ಬಡವನ ಮನೆಯ – ಲಗ್ನವನಾರು ಮರಿಯರು
ವಿಶ್ವತೋಭಿರಾಮ - ಕೇಳು ವೇಮಾ | ೫೬೧ |

—ಓಂ—

—ಶ್ರೀ ವೇಮನ ತತ್ವಗಳು—

ಪುರುಷರೆಲ್ಲ ಪುಣ್ಯ – ಭೂಮಿ ಎಂದೆಂಬರು
ಬುದ್ಧಿ ಇಲ್ಲಮಿದುವೆ – ಭೂಮಿಯಲ್ಲೇಂ ?
ಪುಣ್ಯ ತೀರ್ಥಂಗಳಿಗೆ – ಪೋಗಿದ್ದೆನೆಂಬರು
ಏನ ಪೇಳ್ವುದಯ್ಯ – ಇದನು ವೇಮಾ | ೫೬೨ |

ಪೂಜೆಗಿಂತಲೆಣಿಸೆ – ಬುದ್ಧಿ ನಿಧಾನವು.
ಮಾತಿಗಿಂತಲೆಣಿಸೆ – ಮನದ ದೃಢವು
ಕುಲಕೆ ಮಿಗಿಲು ನೋಡೆ - ಗುಣವೇ ಪ್ರಧಾನವು
ವಿಶ್ವತೋಭಿರಾಮ - ಕೇಳು ವೇಮಾ | ೫೬೩ |

ಪುರುಷನರಿಯೆ ಕೊಲ್ವ - ಭೂಪತಿ ದಂಡಿಪಂ
ನಖಿಳ ನಿಂದೆಗಳಿಗೆ - ಆಲಯಮದು
ಪರಪುರುಷ ಸಂಗವು - ಪ್ರತ್ಯಕ್ಷ ನರಕವು
ವಿಶ್ವತೋಭಿರಾಮ - ಕೇಳು ವೇಮಾ | ೫೬೪ |

ಪೂರ್ವ ವಾಸನೆಯಿರ್ಪ – ಪುಣ್ಯಾತ್ಮರಾವಗಂ
ಊಟೆ ಚಿಲುಮೆಯಂತೆ - ವೃದ್ಧಿಯಾಗು
ತೆಪ್ಪ ಜನಕ್ಕೀಯ - ಲೆಂದಿನಂತಿರ್ಪರು
ವಿಶ್ವತೋಭಿರಾಮ – ಕೇಳು ವೇಮಾ | ೫೬೫ |

ಪರದತ್ತಮಂ ಪಾಲಿಸುವ – ನರಂಗಿಳೆಯಲ್ಲಿ
ನೆರೆ ಸ್ವದತ್ತಂ ವೃದ್ಧಿ - ಯಾಗುತಿಹುದು
ಪರದತ್ತಮಂ ಹರಿಸೆ - ಭರದಿಂ ಸ್ವದತ್ತಕ್ಕೆ
ಹಾನಿಬರ್ಪುದಯ್ಯ - ನಿಜದಿ ವೇಮಾ | ೫೬೬ |

—ಶ್ರೀ ವೇಮನ ತತ್ವಗಳು—

ಪರಬಲವಮಂ ನೋಡಿ – ಪ್ರಾಣ ರಕ್ಷಣೆಗಾಗಿ
ಭರದಿ ಓಡುತಿರ್ಪ – ಭೀರು ಭಟಗೆ
ಯಮನು ಕುಪಿತನಾಗೆ – ಮಧ್ಯಸ್ತನಾವನು
ವಿಶ್ವತೋಭಿ ರಾಮ - ಕೇಳು ವೇಮಾ | ೫೬೭ |

ಪ್ರಭುವಿಗಿತ್ತ ತೆರದಿ – ಬಡವನಿಗೀಯರು
ವನಿತೆಗಿತ್ತ ತೆರದಿ - ಧರ್ಮಗುಡರು
ಸುರೆಗೆ ಕೊಟ್ಟ ತೆರದಿ – ಸುಮತಿಗಳ್ಗೀಯರು
ವಿಶ್ವತೋಭಿ ರಾಮ - ಕೇಳು ವೇಮಾ | ೫೬೮ |

ಪಟ್ಟು ಬಟ್ಟೆಯುಟ್ಟು - ಪಟ್ಟೆ ನಾಮುಗಳಿಟ್ಟು
ದಿಟ್ಟವಾಗಿ ವೈಷ್ಣ – ವನು ಮೆನಿಸುತೆ
ಲೊಟ್ಟೆ ಸೇಂದಿ ಗುಡುಕ – ಲೋಗರ ವಂಚಿಪ
ವಿಶ್ವತೋಭಿರಾಮ - ಕೇಳು ವೇಮಾ | ೫೬೯ |

ಪೈರನಿಟ್ಟ ಮಾನವನ - ಫಲವೇ ಫಲ
ಪೈರನಿಡದೆ ಫಲವು – ದೆಂತು ಪಡೆವಂ
ಪೈರನಿಟ್ಟ ಮನುಜ – ಬಲು ಸುಖಿಯಾಗುವಂ
ವಿಶ್ವತೋಭಿ ರಾಮ - ಕೇಳು ವೇಮಾ | ೫೭೦ |

ಪ್ರಳಯ ಕಾಲದಲ್ಲಿ – ಪ್ರಮಥರ ಕೈಯಿಂದೆ
ನಷ್ಟವಾದರಲ್ತು ? – ಆಗಿನವರು
ತಿಳಿಯಲಾರರೈದೆ - ದೇವನಂ ದ್ವಿಜರೆಲ್ಲ
ವಿಶ್ವತೋಭಿರಾಮ - ಕೇಳು ವೇಮಾ | ೫೭೧ |

—ಓಂ—

—ಶ್ರೀ ವೇಮನ ತತ್ವಗಳು—

ಪಿಂಡವಾಗಿ ತಾಯ – ಗರ್ಭದೊಳಿರ್ದು ತಾಂ
ಪೂರ್ವ ಕರ್ಮ ಮರಿತು - ಮರುಗುತಿರ್ದು
ಧರಣಿಯಲ್ಲಿ ಜನಿಸಿ – ಮರೆತು ವಿಜೃಂಭಿಪಂ
ವಿಶ್ವತೋಭಿ ರಾಮ - ಕೇಳು ವೇಮಾ | ೫೭೨ |

ಪ್ರಜೆಗಳ್ಸಾಯ್ವ ವೇಳೆ - ತಾವೆ ಸಾಯುವ ವೇಳೆ
ರಕ್ಷಿಸಿಕೊಳಬೇಕೊ ? – ರಾಜವರರು
ಮಹಿಪತಿ ಪೆಸರದು – ಮನುಜಂಗೆ ಸಲ್ವುದೇಂ ?
ವಿಶ್ವತೋಭಿ ರಾಮ - ಕೇಳು ವೇಮಾ | ೫೭೩ |

ಪಂಚ ಶತೃ ಪಂಚ – ಬಾಣನಂ ಗೆಲ್ಲುತ್ತಿ
ಪಂಚ ವರ್ಣವನ್ನು - ಪಠನಮಾಡಿ
ಪಂಚ ಮುಖಗಳಿಂದೆ – ಪ್ರಜ್ವಲಿ ಪಾಠನ
ಪಂಚೆ ಸೇರುವಾತ – ಭಕ್ತ ವೇಮಾ | ೫೭೪ |

ಕಂ॥ ಪಂಚಾಕ್ಷರ ಜಪಮಾಡಲ್ ।
ಸಂಚಿತ ಕರ್ಮಂಗಳೆಲ್ಲ ನಶಿಸುವು ವಾಗಳ್ ॥
ಮಿಂಚುವುದುರುತರ ತೇಜಂ ।
ಮಿಂಚಿದ ದುರ್ಭ್ರಮೆಯು ಪರಿವುದಿಳೆಯೊಳ್ ವೇಮಾ | ೫೭೫ |

ಪರಮಾತ್ಮನ ವಿವರಿಸಲೇಂ ।
ತರಮೇ ನಣುರೇಣುವಲ್ಲಿ ತೃಣದಲ್ಲಿರ್ಪಂ ॥
ಪರಿಕಿಸಲೆಲ್ಲ - ಸುರೂಪದೆ ।
ಗುರುವಾ ಗೊಪ್ಪುವನು ಬೆಳಗುತೆಲ್ಲೆಡೆ ವೇಮಾ | ೫೭೬ |

—ಓಂ—

—ಶ್ರೀ ವೇಮನ ತತ್ವಗಳು—

ಗೀ|| ಪರವು ಪರಮದೆಂದು – ನುಡಿಯುವರೆಲ್ಲರು
ಪರದೊಳೇಂ ಮಹತ್ವ - ವಿರ್ಪುದರಿಯೆ
ಪರದೊಳಲ್ಲಿ ಇಲ್ಲಿ – ಪರಿಪೂರ್ಣಮಲ್ಲವೇ ?
ವಿಶ್ವತೋಭಿ ರಾಮ – ಕೇಳು ವೇಮಾ | ೫೭೭ |

ಕಂ|| ಪಿಂಡವು ಪೃಥುವಿಗೆ ಬೀಳಲ್ ।
ಕಂಡಾಗಳೆ ಮಂತ್ರಸಾನಿಯುದ ತಿಳಿಸುವಳೇಂ ? ॥
ಗಂಡು ಶಿಶುವೆಂಬ ವಾರ್ತೆಯು ।
ಮಂಡಲದೊಳ್ ಪಬ್ಬುತಿಹುದೊ ಮಾನಿತ ವೇಮಾ | ೫೭೮ |

ಗೀ|| ಪುನುಗು ಬೆಕ್ಕಿಗೇಕೆ – ಪುಟ್ಟಿತು ವಾಸನೆ
ಆದರ ಮಹಿಮೆಯೇನೊ – ಧರಣಿಯಲ್ಲಿ
ಬ್ರಹ್ಮನ ಕೈಗಳು - ಹಾಳಾದ ಕೈಗಳು
ವಿಶ್ವತೋಭಿ ರಾಮ - ಕೇಳು ವೇಮಾ | ೫೭೯ |

ಪ್ರಣವ ಮಂತ್ರ ಮಹಿಮೆ - ಭಾವಿಸೆಲಿಂಗನೇ
ಮೂರು ಮೂರ್ತಿಗಳೊಳು – ಬೆಳಗುತಿರ್ಪಂ
ಮಾನ್ಯರರಿತು ಪೊಗಳೆ – ಸಾಮಾನ್ಯ ನರಿವನೆ
ವಿಶ್ವತೋಭಿರಾಮ - ಕೇಳು ವೇಮಾ | ೫೮೦ |

ಕಂ|| ಪ್ರತ್ಯಕ್ಷನಪ್ಪ ಶಿವ ತಾಂ ।
ನಿತ್ಯಂ ಮನದಲ್ಲಿ ನಿಲಿಸಿ ಸ್ತುತಿಸಿ ದೊಡಾಗಳ್ ॥
ಸತ್ಯಂ ಬೆಳಗುತ ಲಿರ್ಪಂ ।
ನಿತ್ಯಂ ಸಂತೃಪ್ತನಾಗಿ ಬಾಳ್ವಂ ವೇಮಾ ॥ | ೫೮೧ |

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಪ್ರಾಣವಿಲ್ಲದಿರಲು - ಪರವ ಪೊಂದಲುಸಲ್ಲ
ಪ್ರಾಣವಿರ್ದೊಡೈದೆ - ಪರ ಮಿರುವುದು
ಪ್ರಾಣಿ ಪರವ ತಿಳಿಯ – ಲಾರದು ಪರಿಕಿಸೆ
ವಿಶ್ವತೋಭಿ ರಾಮ - ಕೇಳು ವೇಮಾ | ೫೮೨ |

ಪರರಿ ಗುಪಕರಿಸುತ್ತೆ – ಪರಸೊತ್ತ ಪರರಿಂಗೆ
ಹರುಷ ದೀಯಲಾಗಿ – ಪರವು ದೊರೆಗುಂ
ಪರ ಸಾಧನಕ್ಕಿಂತ - ಪಾವನವೇಂ ಸೊತ್ತು
ವಿಶ್ವತೋಭಿರಾಮ - ಕೇಳು ವೇಮಾ | ೫೮೩ |

ಪಂಚಮ ವೇದವೇ - ಭಾರತವೆನ್ನುತ್ತೆ
ಪೊಗಳು ತಿರ್ಪರೇಕೊ – ಜಡ ಮತಿಗಳು
ಹಿಂಸೆ ಕಾರ್ಯವೆಲ್ಲ – ತಮಗಿಷ್ಟ ವಾಯ್ತಿಯ್ಯೊ
ವಿಶ್ವತೋಭಿರಾಮ – ಕೇಳು ವೇಮಾ | ೫೮೪ |

ಪರರ ವಿತ್ತದಲ್ಲಿ – ಭ್ರಾಂತಿಯುಂ ನೀಗಿದ
ಪುರುಷನ ಮನಿಯಲ್ಲಿ – ಪುಣ್ಯ ಮೂರ್ತಿ
ಪರರ ವಿತ್ತಮರಿಯೆ – ಪಾಪ ಸಂಚಯಮದು
ವಿಶ್ವತೋಭಿ ರಾಮ - ಕೇಳು ವೇಮಾ | ೫೮೫ |

ಪಟ್ಟಣಂಗಳಲ್ಲಿ – ಸತಿ ಪತಿಯರು ಸದಾ
ವೋದದಿಹರು – ಅದರ ಮರ್ಮಮರಿಯೆ
ಮುಕ್ತಿ ಮಾರ್ಗಕ್ಕಲ್ಲಿ - ಯುಕ್ತಿಯೇ ತೋರದು
ವಿಶ್ವತೋಭಿ ರಾಮ - ಕೇಳು ವೇಮಾ | ೫೮೬ |

—ಓಂ—

—ಶ್ರೀ ವೇಮನ ತತ್ವಗಳು—

ಕಂ|| ಪಾತಕ ಸಂಸಾರಾರ್ಣವ |
ಮೇತೆರದೊಳ್ ದಾಟಲಿರ್ಪೆ ನೀನೆಚ್ಚರದಿಂ ||
ಚೇತನ ಮೂರ್ತಿಯ ಮನದೊಳ್ |
ಸಾತಿಶಯಂ ಮಿಗಿಲು ನುತಿಸು ಸುಖಿಸುವೆ ವೇಮಾ | ೫೮೭ |

ಗೀ|| ಪಟ್ಟಣಂಗಳಲ್ಲಿ – ಪ್ರೌಢಾಂಗನೆಯರಿಹರ್
ಪಳ್ಳಿಗಳೊಳಗವರು – ವಾಸಿಸುವರೆ ?
ಸುಖಿಗಳಲ್ಪರದರ – ದಾರಿಯನರಿಯರು
ವಿಶ್ವತೋಭಿರಾಮ - ಕೇಳು ವೇಮಾ | ೫೮೮ |

ಪಡವಲಕಾಯಿಗೆ - ಕಲ್ಲನ್ನು ಕಟ್ಟಲು
ಕಡೆಗೆ ಡೊಂಕನುಳಿದು - ಬೆಳೆಯುತಿಹುದು
ನಾಯ ಬಾಲ ಕಟ್ಟೆ - ಲದು ನೀಳವಾಗ್ಗುವದೇಂ ?
ವಿಶ್ವತೋಭಿ ರಾಮ - ಕೇಳು ವೇಮಾ | ೫೮೯ |

ಪರರ ವಂಚಿಸುತ್ತೆ - ಪರಧನ ಸೆಳೆಯುತ್ತೆ
ಪಿರಿದು ಹೊಟ್ಟೆಯೊರೆವು - ದೈದೆ ಕೇಳು
ಋಣವ ಮಾಡಲವನು - ಘನನೆನಿಸಲಾರನು
ವಿಶ್ವತೋಭಿರಾಮ - ಕೇಳು ವೇಮಾ | ೫೯೦ |

ಪರರ ಬೈವುದರಿಂದೆ – ಪಾಪಕರ್ಮಂ ಬಲು
ಬಿಡದು ಎಂದಿಗಾದೊ – ಡವನಿಯಲ್ಲಿ
ಪರನು ಪರನಲ್ಲವೈ – ಪರಮಾತ್ಮನಾಗಿಹಂ
ವಿಶ್ವತೋಭಿ ರಾಮ - ಕೇಳು ವೇಮಾ | ೫೯೧ |

—ಓಂ—

—ಶ್ರೀ ವೇಮನ ತತ್ವಗಳು—

ಪರರ ಓದನೋಡಿ - ನೀಸನ ಬುದ್ಧಿಯಿಂ
ಪಳ್ಳು ಮಾತನಾಡ್ವ - ಜಳ್ಳು ಮನುಜ
ನವನ ಸೇರುವುದು - ಮಹಾ ಪಾಪಮಲ್ಲವೇ
ವಿಶ್ವತೋಭಿ ರಾಮ - ಕೇಳು ವೇಮಾ | ೫೯೨ |

ಕಂ॥ ಪಲಬರು ಕಲೆತಿಹ ಸಭೆಯೋಳ್ ।
ತಲೆದೂಗಿಸಿ ಭಳಿರೆ : ಭಳಿರೆ :: ಎನಿಸುತೆ ಪುತ್ರಂ ॥
ನಲವಿಂ ಧನ್ಯತೆ ಪೊಂದುವ ।
ಸುಲಲಿತ ಭಾಷಣವ ಗೈವುದೊಳಿತೈ ವೇಮಾ | ೫೯೩ |

ಫ

ಗೀ॥ ಫಲವು ದೊರೆಯದಿರ್ಪ - ಕಾರ್ಯವಂ ಮಾಡರು
ಇಳೆಯ ಜನಗಳರಿಯು - ಲಿದುವೆ ನಿಕ್ಕಂ
ಇಲ್ಲಿ ಫಲವಿದೆರ್ೊಡೆ - ಅಲ್ಲಿಯುಂ ಫಲವುಲ್ತೆ ?
ವಿಶ್ವತೋಭಿರಾಮ - ಕೇಳು ವೇಮಾ | ೫೯೪ |

ಬ

ಬೆಕ್ಕು ಇಲಿಯ ಪಿಡಿದು - ಪ್ರೀತಿಯೊಳಿರದದು
ಮತ್ತೆ ಕೋಳಿ ಪಿಡಿಯು - ಲೆತ್ನಿಸುವುದು
ವ ಪು ತಿಯಿಂದಲ್ಲವೆ ; - ವ ೂಪುವುದೆಲ್ಲವು
ವಿಶ್ವತೋಭಿ ರಾಮ - ಕೇಳು ವೇಮಾ | ೫೯೫ |

—ಓಂ—

—ಶ್ರೀ ವೇಮನ ತತ್ವಗಳು—

ಬೀಜ ಮಿಲ್ಲದಿರ್ಪ – ವೃಕ್ಷಶಾಂ ಪುಟ್ಟಿತು
ಫಲವು ಪುಷ್ಪವೈದೆ - ಪತ್ರೆಯಿಲ್ಲ
ನೋಡೆ ರುಚಿಯು ಮಿಲ್ಲ - ಸಂಕಟ ಮಿಾವುದು
ವಿಶ್ವತೋಭಿರಾಮ - ಕೇಳು ವೇಮಾ | ೫೯೬ |

ಬ್ರಹ್ಮಮೆಂಬ ವಸ್ತು - ಪರದೇಶದಲ್ಲಿಲ್ಲ
ಬ್ರಹ್ಮಮೆನಲು ತಾನೆ - ಬಟ್ಟ ಬಯಲು
ತನ್ನ ತಾನರಿದೊಡೆ – ತಾನಯ ಬ್ರಹ್ಮವು
ವಿಶ್ವತೋಭಿ ರಾಮ - ಕೇಳು ವೇಮಾ | ೫೯೭ |

ಬ್ರಹ್ಮನನ್ನು ಕೊಂದು - ವಿಷ್ಣುವಿನೊಳ್ಬೆರೆಸಿ
ವಿಷ್ಣುವನ್ನು ಕೊಂದು - ಶಿವನೊಳ್ಬೆರೆಸಿ
ಶಿವನ ಕೊಂದು ತಾನೆ – ಶಿವಯೋಗಿಯಾಗುವ
ವಿಶ್ವತೋಭಿ ರಾಮ - ಕೇಳು ವೇಮಾ | ೫೯೮ |

ಬ್ರಹ್ಮ ಘಟವೆ ತನುವು – ಪ್ರಾಣವೇ ವಾಯುವು
ಮಿತ್ರ, ಚಂದ್ರ, ಅಗ್ನಿ - ನೇತ್ರ ಚಯವು
ಮತ್ತೆ ಬ್ರಹ್ಮಮೆನಲು - ಭುವಿಯೊಳಗಿಲ್ಲವೈ
ವಿಶ್ವತೋಭಿರಾಮ - ಕೇಳು ವೇಮಾ | ೫೯೯ |

ಬ್ರಹ್ಮವೇತ್ತರೆಂದು – ಪೌರುಷ ಮಾಳ್ಪರು
ಬ್ರಹ್ಮ ಮೆಂದೊಡದರ – ಭಾವವೇನು ?
ಬಿಳುಪೊ, ಕಪ್ಪೊ, ಕೆಂಪೊ - ತಿಳಿದೊಡೆ ಪೇಳಿರಿಂ
ವಿಶ್ವತೋಭಿ ರಾಮ - ಕೇಳು ವೇಮಾ | ೬೦೦ |

—ಓಂ—

—ಶ್ರೀ ವೇಮನ ತತ್ವಗಳು—

ಬ್ರಾಹ್ಮಣಂ ಗಿಡಲಾಗ – ಫಲವಿಹುದೆಂಬರು
ನಾಯಿಗಳ್ಗಿಡಲೇನು – ಕೊರತೆಯಹುದು
ಅಲ್ಲಿ ಇಲ್ಲಿ ಜೀವ - ಮೇಕ ಮಲ್ಲವೆ ಪೇಳಿಂ
ವಿಶ್ವತೋಭಿ ರಾಮು - ಕೇಳು ವೇಮಾ |೬೦೧|

ಬಾಳು ನಿತ್ಯಮೆನ್ನು – ತತಿಶಯಾನಂದದಿಂ
ದುಬ್ಬಿ ಉಬ್ಬಿ ಕುಣಿವ – ಹುಚ್ಚರಿಹರು
ಪ್ರಾಣಿ ಕೋಟಿಗಳೆಲ್ಲ - ಯಮನಿಗೆ ಕುರಿಗಳು
ವಿಶ್ವತೋಭಿ ರಾಮ - ಕೇಳು ವೇಮಾ |೬೦೨|

ಬೋಳು ತಲೆಯು ಮೇಲೆ – ಕಾವಿಯ ಶಾಟಿಯು
ಮೈಗೆ ಬೂದಿ ಬಳಿದು – ಕೊಂಡು ತಿರುಗೆ
ಇಂಥ ವೇಷಗಳೆಲ್ಲ - ಹೊಟ್ಟೆ ಕೂಳಿಂಗಲ್ತು ?
ವಿಶ್ವತೋಭಿ ರಾಮ – ಕೇಳು ವೇಮಾ |೬೦೩|

ಬೆಳ್ಳಿ ಬೆಟ್ಟದಲ್ಲಿ ವಾಸ ಮಾಗಿರ್ದೊಡುಂ
ಭಿಕ್ಷಮೆತ್ತಿ ತಿಂದನೇಕೆ – ಶಿವನು
ತನಗದೆಷ್ಟು ಘನತೆ – ಇರ್ದೊಡುಂ ಪರರನ್ನು
ಕೇಳದಿರಲು ತೀರ – ದಯ್ಯ ವೇಮಾ |೬೦೪|

ಬೆದಕಿ ಕಾಣಲಾರ - ವೇದಾಂತ ವೇದ್ಯನ
ತತ್ವವೇತ್ತನಿಪನು - ಧರಣಿಯಲ್ಲಿ
ಕಂಡ ಜನರಿಗೆಲ್ಲ - ಕಾಣನು ಸರ್ವದಾ
ವಿಶ್ವತೋಭಿರಾಮ - ಕೇಳು ವೇಮಾ |೬೦೫|

—ಓಂ—

—ಶ್ರೀ ವೇಮನ ತತ್ವಗಳು—

ಬಲಿಯೊಳ್ಸಿಕ್ಕ ವೇಳೆಯೊ - ಸಿಂಹ ಮಾದೊಡಂ
ಒಂದು ನಾಯಿ ಕೊಲ್ಲು - ತಿಹುದದನ್ನು
ಸಿಕ್ಕಿಬಿದ್ದ ಸಮಯದೊಳ್ - ಶೌರ್ಯ ನಡೆಯದು
ವಿಶ್ವತೋಭಿ ರಾಮ - ಕೇಳು ವೇಮಾ ।೬೦೬।

ಬ್ರಹ್ಮಹತ್ಯೆಯಿಂದೆ - ಬಹುರೋಗಿಯಾಗುವಂ
ಬ್ರಹ್ಮಹತ್ಯೆಯಿಂದೆ - ಪದವಿ ಕೆಡುಗುಂ
ಬ್ರಹ್ಮಹತ್ಯೆಯಿಂದೆ - ಪಾಪ ಸಂಘಟಿಪುದು
ವಿಶ್ವತೋಭಿರಾಮ - ಕೇಳು ವೇಮಾ ।೬೦೭।

ಬ್ರಹ್ಮನಾರ ಸುತನು - ಪರಿಕಿಸಿ ನೋಡಲು
ವಿಷ್ಣುವಾರ ತನಯು - ನರಿತು ನೋಡೆ
ಶಿವನವಾರ ಪುತ್ರ - ತಿಳಿಯರು ಜನಗಳು
ವಿಶ್ವತೋಭಿ ರಾಮ - ಕೇಳು ವೇಮಾ ।೬೦೮।

ಬ್ರಹ್ಮ, ರಾಜ, ವೈಶ್ಯ, - ಶೂದ್ರಾದಿ ವರ್ಣಗಳ್
ಬ್ರಹ್ಮ. ವಿಷ್ಣು. ನೃಪತಿ - ಪಶುಗಳೆಷ್ಟು
ಬ್ರಹ್ಮವನ್ನರಿಯದೆ - ಬಹುರೂಪಮೆಂತಾಯ್ತು
ವಿಶ್ವತೋಭಿ ರಾಮ - ಕೇಳು ವೇಮಾ ।೬೦೯।

ಬಾಲಪ್ರಾಯದಿ ಭಕ್ತಿಯ - ಬೆಳೆಸಲಿಲ್ಲ
ಯೌವನದಿ ಕಾಮವ - ನ್ನುಪಶಮಿಸಲಿಲ್ಲ
ಮುಪ್ಪಿನೊಳು ಚಿಂತೆಯಿಂ - ಮುಕ್ತಿ ಲಭಿಪುದೆಲ್ಲಿ ?
ವಿಶ್ವತೋಭಿ ರಾಮ - ಕೇಳು ವೇಮಾ ।೬೧೦।

—ಓಂ—

—ಶ್ರೀ ವೇಮನ ತತ್ವಗಳು—

ಬೇವಿಗ್ಹಾಲನೊಯ್ದು - ಪ್ರೇಮದಿ ಬೆಳೆಸಲು
ವಿಷವು ಪೋಗಿ ಸಿಹಿಯು — ಜನಿಸದೆಂದುಂ
ನೀಚ ನೀಚ ಹೊರತು — ಧರ್ಮಜ್ಞನಪ್ಪನೇಂ ?
ವಿಶ್ವತೋಭಿ ರಾಮ - ಕೇಳು ವೇಮಾ | ೬೧೧ |

ಬೇರು ಹುಳುವು ಸೇರಿ - ವೃಕ್ಷಮಂ ಕೆಡಿಪುದು
ಜೇಡಿ ಹುಳುವು ಸೇರಿ - ಗಿಡವು ಕೆಡುಗುಂ
ಕುಚ್ಛಿತ ಸೇರಲು - ಸುಗುಣಿ ತಾಂ ಕೆಡುವನು
ವಿಶ್ವತೋಭಿ ರಾಮ - ಕೇಳು ವೇಮಾ | ೬೧೨ |

ಬ್ರಹ್ಮ ಮೆಲ್ಲೆನ್ನುತ್ತೆ — ಹಲವು ಬಗೆ ಕೇಳಲು
ದೇವತರಿಗು ತಿಳಿಸ — ಲಳವೆ ಜಗದಿ
ಬ್ರಹ್ಮ ಮೆಲ್ಲೆಡೆಯೊಳುಂ — ಪರಿಪೂರ್ಣಮಿರ್ಪುದು
ವಿಶ್ವತೋಭಿ ರಾಮ - ಕೇಳು ವೇಮಾ | ೬೧೩ |

ಬೀಜ ಮೊದಲು ಗುರುವು — ಈ ಜಗಕ್ಕೆಲ್ಲವು
ಪ್ರಣವ ಮಂತ್ರವೊಂದು - ಪರಮ ಗುರುವು
ಕರ್ಮ ಗುರುವು ನೋಡೆ - ಗಾಯತ್ರಿ ಮಂತ್ರವು
ವಿಶ್ವತೋಭಿ ರಾಮ - ಕೇಳು ವೇಮಾ | ೬೧೪ |

ಬ್ರಹ್ಮ ಕರ್ತನಲ್ತೆ ? — ಪಣೆಯೊಳು ಬರೆಯಲು
ತನ್ನ ಶಿರವ ಶಿವನು - ಕಡಿಯಲೆಂದು
ಬರೆದು ಕೊಂಡುದೇಕೆ ! - ಚೋದ್ಯಮಿದಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ | ೬೧೫ |

—ಶ್ರೀ ವೇಮನ ತತ್ವಗಳು—

ಬಿಡುವುದುಚಿತ ಮಾತು – ವಿಶ್ರಾಂತಿ ದೊರೆಯದಿರೆ
ಬಿಡುವುದೊಳಿತು ಮೊದಲು – ರೀತಿಯರಿತು
ಬಿಡಲು ಬೇಕು ದೊರೆಯೊ - ಳ್ವಿತರಣೆ ಯಿರದಿರೆ
ವಿಶ್ವತೋಭಿ ರಾಮ - ಕೇಳು ವೇಮಾ | ೬೧೬ |

ಬ್ರಹ್ಮಚರ್ಯ ಮಹಿಂಸೆಯು - ಪರಮ ಧರ್ಮ
ಮೆರಡು ಜಗದೊಳ – ಗುತ್ತಮ ತಪಗಳಲ್ತೆ ?
ಇದನು ತಿಳಿದವನುತ್ತಮ - ಜ್ಞಾನಯೋಗಿ
ಯೆನಿಸಿ ಸರ್ವವ ನರಿಯುವ – ಯೋಗಿ ವೇಮಾ | ೬೧೭ |

ಬಿಗಿದು ಮನವ ನಿಲಿಸಿ - ಆನಂದ ಕೇಳಿಯೊಳ್
ಬ್ರಹ್ಮಮಯನು ಮುಕ್ತಿ - ಬಯಸುತಿಹನು
ಜಿಹ್ವೆ ಚಪಲದಿಂದ - ಜೀವನು ಕೆಡುವನೈ
ವಿಶ್ವತೋಭಿ ರಾಮ - ಕೇಳು ವೇಮಾ | ೬೧೮ |

ಬಹಳ ಕಾವ್ಯಗಳನು – ಪರಿಕಿಸಲಪ್ಪುದು
ಬಹಳ ಶಬ್ದಗಳನು - ನುಡಿಯಲಹುದು
ಸಹನ ವೊಂದು ಬರ್ಪು - ದದು ಬಹು ಕಷ್ಟವು
ವಿಶ್ವತೋಭಿ ರಾಮ – ಕೇಳು ವೇಮಾ | ೬೧೯ |

ಬೇಕೆಂದರುಂ ಬರದು – ಬೇಡವೆಂದರು ಬಿಡದು
ತಾನು ಮಾಡ್ದ ಧರ್ಮ – ಮೆಂದು ತಿಳಿದು
ಮನದೊಳದನು ಸ್ಮರಿಸ – ನುತ್ತಮ ವಿಬುಧನು
ವಿಶ್ವತೋಭಿರಾಮ - ಕೇಳು ವೇಮಾ | ೬೨೦ |

—ಓಂ—

—ಶ್ರೀ ವೇಮನ ತತ್ವಗಳು—

ಬೆಟ್ಟ ಗುಹೆಯೊಳಿರಲು – ಗುಡಿ ಗೋಪುರ ದೊಳಿರಲು
ಪಟ್ಟಿ ಪಟ್ಟಿ ಬೂದಿ - ಬಳಿದು ಇರಲು
ದುಷ್ಟ ಬುದ್ಧಿ ತನ್ನ - ದುರ್ಬುದ್ಧಿ ಬಿಡನಯ್ಯ
ವಿಶ್ವತೋಭಿ ರಾಮ – ಕೇಳು ವೇಮಾ । ೬೨೧ ।

ಬೆಟ್ಟದಪ್ಪನೆ ಮಾವ - ಬೆಟ್ಟದಮ್ಮನೆ ಸತಿ
ಬೆಟ್ಟ ಗಟ್ಟಿ ಚಾಪ - ಬೆಟ್ಟನೆ ಮನೆ
ಬೆಟ್ಟದಂಥ ದೊರೆಯು – ಗುಂಡಾಗಿ ಪೋದನೇ?
ವಿಶ್ವತೋಭಿ ರಾಮ – ಕೇಳು ವೇಮಾ । ೬೨೨ ।

ಕಂ॥ ಬರುವುದು ಪೋಪುದು ಮಾತ್ರಂ ।
ಬರುವುದನಂ ಕಾಣಲಾರರಿದು ವರಸೆಯುತು ॥
ತ್ತಿರದೆ ತಿರುಗುತ್ತ ಲಿರ್ಪರ್ ।
ಉರಿಯೊಳ್ ಬೀಳುವ ಪತಂಗದಂದದಿ ವೇಮಾ । ೬೨೩ ।

ಗೀ॥ ಬಲೆಯ ಬೀಸಿ ದುಷ್ಟ - ವನ್ಯ ಮೃಗಂಗಳ
ಹಿಡಿಯುಬಹುದು – ಹಾಳು ಕರ್ಮಚಯವು
ಗುರು ಸು ಬೋಧೆ ಇಲ್ಲದಲೆ - ಫಲವಿಲ್ಲಾವುದು
ವಿಶ್ವತೋಭಿರಾಮ – ಕೇಳು ವೇಮಾ । ೬೨೪ ।

ಬಾಲ್ಯದಲ್ಲಿ ಶಿವನ - ಪರಿಕಿಸಲಾರರು
ಯೌವ್ವನದೊಳು - ಶಿವನ ನರಿಯರವರು
ಮುಪ್ಪಿನಲ್ಲಿ ಮೋಸ - ಪೋಪುದು ಸಹಜ ವೈ
ವಿಶ್ವತೋಭಿ ರಾಮ - ಕೇಳು ವೇಮಾ । ೬೨೫ ।

—ಓಂ—

—ಶ್ರೀ ವೇಮನ ತತ್ವಗಳು—

ಬೂಟಕ ಮಾಡಿ ಈ - ಭುವಿಯಲ್ಲಿ ಜನಗಳು
ನಾಟಕವಾಡಿ ನಯ - ವನ್ನು ತೋರಿಪರು
ಪಾಟಿಸದಲೆ ವೃಥಾ - ತಿರುಗುತಲಿರ್ಪರು
ವಿಶ್ವತೋಭಿ ರಾಮ - ಕೇಳು ವೇಮಾ । ೬೨೬ ।

ಬೂದಿ ಬಳಿದುಕೊಂಡು – ಭುಜದೊಳು ರುದ್ರಾಕ್ಷಿ
ಸರವು ಲಿಂಗವಂಗ-ಡಲ್ಲಿ ಮತಗ-
ಳಿಲ್ಲ ಸರಿಯಲ್ಲದೆ - ಅಲ್ಲಿ ಶೋಭಿಪುವೆಂತು
ವಿಶ್ವತೋಭಿರಾಮ - ಕೇಳು ವೇಮಾ । ೬೨೭ ।

ಬಾಯಿಂ ಸತಿಯುವನನ್ನು - ಪೂಜಿಸೆ ದೋಷವು
ಹೊಟ್ಟೆಿ ಸತಿಯಾತನ – ಊಹೆ ಮೇಲು
ತಲೆಯುಕಿ ಸತಿಯಾತನ – ಪೂಜೆಯಿಂ ಮುಕ್ತಿಯು
ವಿಶ್ವತೋಭಿ ರಾಮ - ಕೇಳು ವೇಮಾ । ೬೨೮ ।

ಕಂ॥ ಬಯಲೊಳ್ ಸರ್ವಂ - ಜನಿಪುದು ।
ಬಯಲೊಳ್ ತಾಂ ಲೀನಮಪ್ಪುದೀ ಬ್ರಹ್ಮಾಂಡಂ ॥
ಬಯಲೆಂದರಿತೊಡೆ ಮನದೊಳ್ ।
ಬಯಲೊಳಗೀ ಮುಕ್ತಿ ಬಟ್ಟೆ ಬಯಲದು ವೇಮಾ ॥ । ೬೨೯ ।

ಗೀ॥ ಬದುಕಲಿರುವವರಾರು ? ಬದುಕದಿರುವವರಾರು ?
ಬದುಕಿ ಬದುಕದಿರ್ಪ - ನರರದಾರು ?
ಧರೆಯ ಶೋಧಮಾಡಿ – ಸ್ಥಿರವಾಗಿ ನೋಡು ನೀಂ
ವಿಶ್ವತೋಭಿರಾಮ - ಕೇಳು ವೇಮಾ । ೬೩೦ ।

೧ಬ್ರಹ್ಮ ೨ವಿಷ್ಣು ೩ಮಹೇಶ್ವರ

—ಓಂ—

—ಶ್ರೀ ವೇಮನ ತತ್ವಗಳು—

ಬೆಣ್ಣೆ ಕೈಯ್ಯೊಳಿರ್ದು – ವಿವರವನ್ನರಿಯದೆ
ತುಪ್ಪ ವೆನ್ನುವಂಥ – ಮನುಜನಂತೆ
ತಾನೆ ದೇವನಾಗಿ – ದೈವವಂ ಬೆದಕುವ
ವಿಶ್ವತೋಭಿ ರಾಮು - ಕೇಳು ವೇಮಾ | ೬೩೧ |

ಬಿಸಿಲು ನೆರಳಿರವನ್ನು – ಅರಿಯನಜ್ಞಾನಿಯು
ಇರ್ಪ ಸರ್ವಕಾಲ – ವಿಳೆಯ ಮೇಲೆ
ಕೊಳು ಘಾಂಡ್ಯ ತಿರುಗು – ತಿರ್ಪನು ಸರ್ವದಾ
ವಿಶ್ವತೋಭಿರಾಮು ಕೇಳು - ವೇಮಾ | ೬೩೨ |

ಬಟ್ಟೆಯಿಟ್ಟು ನಾಲ್ಕು – ಬಾನೆ ಎಣ್ಣೆಯ ಕಾಸಿ
ಶುದ್ಧಿಮಾಡಲದು – ವಿಶುದ್ಧಮಹುದೆ ?
ಪುಟ್ಟದ್ದೈದೆ ಪೂರ್ವ – ವಾಸನೆಯಿಲ್ಲದೆ
ವಿಶ್ವತೋಭಿ ರಾಮು - ಕೇಳು ವೇಮಾ | ೬೩೩ |

ಬೌದ್ಧಮತದವರೆಲ್ಲ - ಬುದ್ಧಿ ದೈವಮೆನುತ್ತೆ
ಹೆಚ್ಚು ಕಡಿಮೆ ಮಾಡಿ - ತುಚ್ಛಮಾಗಿ
ಇತರ ಮತನ ತಾವು - ಹೀಯಾಳಿಸುವುದೊಂದೆ
ವಿಶ್ವತೋಭಿ ರಾಮು – ಕೇಳು ವೇಮಾ | ೬೩೪ |

ಬ್ರಾಹ್ಮಣರೆಂಬರು – ಬ್ರಹ್ಮತ್ವಮಿಲ್ಲವು
ಬ್ರಾಹ್ಮಣಮೆಲ್ಲಿದೆ – ಬ್ರಹ್ಮಮಯದಿ
ಬೊಂಬೆಯಂತೆ ದಿಂಬಿ – ಗೊರಗಿ ಕುಳ್ಳಿರುವರು
ವಿಶ್ವತೋಭಿ ರಾಮು - ಕೇಳು ವೇಮಾ | ೬೩೫ |

—ಓಂ—

—ಶ್ರೀ ವೇಮನ ತತ್ವಗಳು—

ಬೇವಿಗ್ಹಾಲನೆರೆದು – ಸಾಕುತ್ತ ಬೆಳೆಸಲು
ಯಾವ ವಿಧದಿ ವಿಷವು – ಪೋಗದಂತೆ
ನೀಚನವಗುಣಗಳ – ನುಳಿವನೇ ಭುವಿಯೊಳು
ವಿಶ್ವತೋಭಿ ರಾಮ - ಕೇಳು ವೇಮಾ | ೬೩೬ |

ಬಿಸಿಲ ನೆರಳ ರೀತಿ - ಯರಿದಿಹ ಯೋಗಿಯು
ಇರ್ಪನೆಲ್ಲ ಕಾಲ – ಮವನಿಯಲ್ಲಿ
ಕೂಳ ಪಾಂಡ್ಯನರಿವನೇ – ಜ್ಞಾನ ಮತವನ್ನು
ವಿಶ್ವತೋಭಿರಾಮ - ಕೇಳು ವೇಮಾ | ೬೩೭ |

ಬಹು ಪಾಪಿಯಾದೊಡುಂ – ಬ್ರಹ್ಮಘ್ನನಾದೊಡುಂ
ನಿರ್ದಯ ನೀಚಾತ್ಮ - ನಾದೊಡೈದೆ
ಮರಣ ಕಾಲದೊಳೆಲ್ಲ - ಮಮತೆಗಳಂ ಬಿಟ್ಟು
ಹರನ ಭಜಿಸೆ - ಮುಕ್ತನಪ್ಪ ವೇಮಾ | ೬೩೮ |

ಬುದ್ಧಿಹೀನಗೇಕೆ - ಶುದ್ಧ ಶಾಸ್ತ್ರಂಗಳು
ಮುದ್ದು ನಾರಿಗೇಕೆ - ವೃದ್ಧಪತಿಯು
ತಂಗಳನ್ನ ಮಿಗದ - ಸಂಸಾರಮೇತಕ್ಕೆ
ವಿಶ್ವತೋಭಿರಾಮ - ಕೇಳು ವೇಮಾ | ೬೩೯ |

ಭ

ಭವಿಗೆ ಸೂತ್ರದಲ್ಲಿ – ಭರದಿ ಕಟ್ಟುತೆ ಲಿಂಗ
ಭವಿಯ ಸುಟ್ಟು - ಬೂದಿಯುಪಗೆ ಬಳಿದು
ಭವಿಯ ಶಿವನ ತೆರದಿ - ಭಾವಿಸಿ ತಿಳಿವುದು
ವಿಶ್ವತೋಭಿ ರಾಮ – ಕೇಳು ವೇಮಾ | ೬೪೦ |

—ಓಂ—

—ಶ್ರೀ ವೇಮನ ತತ್ವಗಳು—

ಭಸ್ಮಧಾರಿಯ ನೋಡಿ - ಪಾಪವೆಂಬರು ಮತ್ತೆ
ನಾಮಧಾರಿಯ ನೋಡಿ - ನಗುವರವರು
ಭಸ್ಮ ನಾಮಗಳಿಗು -ಪರಮಾತ್ಮನಾವನು
ವಿಶ್ವತೋಭಿ ರಾಮ - ಕೇಳು ವೇಮಾ | ೬೪೧ |

ಭಕ್ತಿ ತೋರಿ ಸೂಳೆ – ಪಲವು ಬಗೆ ಕರೆವಳು
ಭಕ್ತಿಯಲ್ಲದು ಕಾಲ – ಮೃತ್ಯು ನಿಜವು
ಮೃತ್ಯು ಸೇರಿದ ಮನೆಯ – ನುಂಗದೆ ಪೋಪುದೇಂ ?
ವಿಶ್ವತೋಭಿ ರಾಮ - ಕೇಳು ವೇಮಾ | ೬೪೨ |

ಭೂಮಿ ತನ್ನದೆನಲು - ಭುವನೇಶ ನಗುವನು
ಲೋಭಿಯನ್ನು ನೋಡಿ - ಧನ ನಗುವುದು
ಪ್ರಾಣ ಭಯವ ನೋಡಿ - ಯಮನು ತಾಂ ನಗುವನೈ
ವಿಶ್ವತೋಭಿ ರಾಮ – ಕೇಳು ವೇಮಾ | ೬೪೩ |

ಭಸ್ಮ ದೇಹಕೆಲ್ಲ – ಬಳಿದೊಡೆ ಯೇನಾಯ್ತು
ನಿಷ್ಠೆ ಶಿವನ ಮೇಲೆ – ನಿಲಿಸಬೇಕು
ಬೂದಿಯಲ್ಲಿ ಕತ್ತೆ ಬಿದ್ದು – ವದ್ದಾಡದೇಂ?
ವಿಶ್ವತೋಭಿರಾಮ – ಕೇಳು ವೇಮಾ | ೬೪೪ |

ಭಸ್ಮ ದೂಷಕರೆಲ್ಲ - ಭಸ್ಮವಾದರು ಮತ್ತೆ
ಮಣ್ಣು ದೂಷಕರೆಲ್ಲ – ಮಣ್ಣು ಬೆರೆದರ್
ದೂಷಣೆ ಫಲವೈದೆ - ತೀವ್ರದಿಂ ತೋರಿತು
ವಿಶ್ವತೋಭಿ ರಾಮ - ಕೇಳು ವೇಮಾ | ೬೪೫ |

—ಓಂ—

—ಶ್ರೀ ವೇಮನ ತತ್ವಗಳು—

ಭಾಗವತರೆಂದೊಡವ – ರೆಂಥವರೊ ಜಗದಲ್ಲಿ
ಅದನು ತಿಳಿಯಲಾರ – ರವನಿ ಜನರು
ಆಡಿ ಪಾಡುವವರು – ಭಾಗವತ ರಾಗುವರೆ ?
ವಿಶ್ವತೋಭಿ ರಾಮ - ಕೇಳು ವೇಮಾ | ೬೪೬ |

ಕಂ॥ ಭುವನಾಕಾರನ ಮನದೊಳ್ ।
ಸುವಿಮಲ ಶುಭ ಮೂರ್ತಿಯಾಗಿ ಪರಿಕಿಸೆ ಜಗದೊಳ್ ॥
ಭವನಾಶಂ ನಿಸ್ಸೇಷಂ ।
ಶಿವದೇವನೆ ಚಿನ್ಮಯಾತ್ಮ ಸಿದ್ಧನು ವೇಮಾ | ೬೪೭ |

ಗೀ॥ ಭೂಮಿಯಲ್ಲಿ ಪುಣ್ಯ – ಪುರುಷರು ದಿಸದಿರೆ
ಜಗಗಳ್ ಬೆಳಗುತಿಹವೆ - ಪಗಲು ರಾತ್ರಿ
ಸರ್ವಮೆಲ್ಲ ಬಯಲು - ಅಲ್ಲಿ ಗಲ್ಲಿಗೆ ನೋಡಿ
ವಿಶ್ವತೋಭಿ ರಾಮ – ಕೇಳು ವೇಮಾ | ೬೪೮ |

ಕಂ॥ ಭಯಮೆಲ್ಲಾ ದೇಹಕ್ಕೇ ।
ಭಯ ಮಡಗಲ್ ನಿಜಮದೆಲ್ಲ ಪರಮಾತ್ಮಂಗೇ ॥
ಲಯಮೆಲ್ಲಾ ದೇಹಕ್ಕೇ ।
ಜಯಮೆಲ್ಲಾ ಜೀವಗೆಂದು ಸಾರ್ವೆ ವೇಮಾ ॥ | ೬೪೯ |

ಭುವಿಯೊಳ್ ಜ್ಞಾನಮೆಂಬ - ಈಜನ್ನು ಬಲ್ಲವ
ಜಲಧಿಯೆಂಬ ತಮವ – ಜಡಿದು ಬಡಿದು
ವಿಲಯಮೆಂಬ ಗಟ್ಟಮಂ – ದಾಟ ಬಲ್ಲನು
ವಿಶ್ವತೋಭಿ ರಾಮ – ಕೇಳು ವೇಮಾ | ೬೫೦ |

—ಓಂ—

—ಶ್ರೀ ವೇಮನ ತತ್ವಗಳು—

ಕಂ|| ಭಗವಂತನಾದ ದೇವಂ ।
ಜಗಗಳ ತನ್ನಲ್ಲಿ ಬೆಳೆಸಿ ಜಾಲದೆ ತೋರ್ಪಂ ||
ಮಿಗೆ ತರ್ಕಂತೆಲ್ಲವ ತಾ ।
ನೊಗು ಮಿಗೆಯಿಂ ಬೆಳಗುತಿರ್ಪ ನರಿವುದು ವೇಮಾ । ೬೫೧ ।

ಭಯವು ಕಣಾ: ಅಜ್ಞಾನವೆ ।
ಭಯ ಮಡಗಲ್ ಸಿದ್ಧಿಸುವುದು ಪರಮಾರ್ಥಂ ತಾಂ ||
ಲಯವು ಕಣಾ ! ಈ ದೇಹಂ ।
ಜಯವು ಕಣಾ ! ಜೀವಗೆಂದು ಸಾರ್ವೈ ವೇಮಾ । ೬೫೨ ।

ಗೀ|| ಭಾನು, ಸೋಮ, ವಹ್ನಿ – ಭವ್ಯ ಲೋಚನನನ್ನು
ಮನದಿ ನುತಿಸದಿರಲು - ಫಲಮದಿಲ್ಲ
ಇಹ ಪರಂಗಳಿಗೆ – ಮಹೇಶ್ವರನದರಿಂದೆ
ವಿಶ್ವತೋಭಿ ರಾಮ - ಕೇಳು ವೇಮಾ । ೬೫೩ ।

ಕಂ|| ಭುಕ್ತಿಯೊಳತಿಶಯ ವಿಷಯಾ ।
ಸಕ್ತತೆ ತಾಂತಿರುಗುತಿರ್ಪ ಸತ್ರಂಗಳೊಳಾ ||
ಭುಕ್ತಿಯೊಳು ಮುಕ್ತಿದೂರಂ ।
ಭಕ್ತಿಯೊಳೇ ನರಗೆ ಮುಕ್ತಿ ದೊರೆಗುಂ ವೇಮಾ । ೬೫೪ ।

ಭೋಗಂಗಳ ಬಯಸದೆ ತಾಂ ।
ರಾಗ ದ್ವೇಷಗಗಳೆಲ್ಲ ತೊಲಗಿಸಿ ಮತ್ತಂ ||
ಬೇಗಂ ಮೋಕ್ಷಂ ಬಯಸುವ ।
ನಾ ಗುರು ದಯೆಯಿಂದೆ ಯೋಗಿಯಪ್ಪಂ ವೇಮಾ || । ೬೫೫ ।

—ಓಂ—

—ಶ್ರೀ ವೇಮನ ತತ್ವಗಳು—

೧೯॥ ಭವ ಸಮುದ್ರ ಮಲ್ತು । ಭಾರ್ಯೆ ಮಕರ ಮಲ್ತು?
ಮೀನು ಜಲಗ ಮಲ್ತು – ಶಿಶುಗಳೆಲ್ಲ
ಭವ ಹರನಿ:ದಲೇ - ಹರಿಯ ಸೇರುವನಲ್ತು ?
ವಿಶ್ವತೋಭಿ ರಾಮ - ಕೇಳು ವೇಮಾ । ೬೫೬ ।

ಭಾಗ್ಯವತಿಯು ಪರರ – ಹಸಿವು ತೃಷೆಗಳ ಕಂಡು
ಅವರ ಸಂತವಿಟ್ಟು – ಉಪ ಚರಿಪಳು
ತನ್ನ ದುಷ್ಟ ಸತಿಯು – ತನ್ನ ಹಸಿವಲ್ಲದೆ
ಪತಿಯ ಹಸಿವ ನರಿಯ – ದಿಹಳು ವೇಮಾ । ೬೫೭ ।

ಭಂಡ ನುಡಿಯಾಡುವಂ - ಪರಮನೀಚಾ ಧಮಂ
ದಂಡಿ ಗುಣ ಮುಳ್ಳವರ - ಪರಿಯರಿವನೇಂ ?
ಚೆಂದನದ ಘನತೆಯಂ - ಪಂದಿಯೆಂತರಿವುದೈ
ವಿಶ್ವತೋಭಿರಾಮ ಕೇಳು - ವೇಮಾ । ೬೫೮ ।

ಮ

ಮೇಘ ಮಡ್ಡ ಮಾಗೆ – ಸೂರ್ಯನಂ ಕೆಡಿಪುದು
ಚಿತ್ತ ವಡ್ಡಮಾಗೆ – ಸ್ಥಿರವು ಕೆಡುಗುಂ
ಮರೆವೆ ಯಡ್ಡಮಾಗೆ – ವರ ಮುಕ್ತಿ ಕೆಡಿಪುದು
ವಿಶ್ವತೋಭಿ ರಾಮ – ಕೇಳು ವೇಮಾ । ೬೫೯ ।

ಮಾಯೆ ಲೋಕಮೆಲ್ಲ – ಮನುಜ ತಾನರಿಯನು
ಮಾಯೆಯಿಂದ ತಾನು – ಮಗ್ನನಹನು
ಮಾಯೆ ತಿಳಿಯುವವನೆ – ಮರ್ಮಜ್ಞ ಯೋಗಿಯು
ವಿಶ್ವತೋಭಿ ರಾಮ - ಕೇಳು ವೇಮಾ । ೬೬೦ ।

—ಓಂ—

—ಶ್ರೀ ವೇಮನ ತತ್ವಗಳು—

ಮೌನದಿರುವವರೆಗು – ಮಂತ್ರವು ದೊರೆಯದು
ಮಂತ್ರಮಡಗದಿರಲು – ಮನವು ನಿಲದು
ಮನವು ನಿಲ್ಲದಿರಲು – ವರಮುಕ್ತಿ ದೊರೆಯದು
ವಿಶ್ವತೋಭಿ ರಾಮ - ಕೇಳು ವೇಮಾ |೬೬೧|

ಮೂವರಲ್ಲಿ ಹೆಚ್ಚು - ಮುಂದರಿಯಲಾರದೆ
ನರಕದಲ್ಲಿ ಬೀಳ್ವ - ನರರಿರುವರು
ಮೂವರಿಗುಂ ಸಿಗದ - ಮೂಲ ಮೂರ್ತಿಯದೋರ್ವ
ವಿಶ್ವತೋಭಿ ರಾಮ - ಕೇಳು ವೇಮಾ |೬೬೨|

ಮುಳುಗಿ, ಮುಳುಗಿ, ಮುಳುಗಿ – ಮುದ್ದೆಯು ತಾನಾಗಿ
ಒಣಗಿ, ಒಣಗಿ, ಒಣಗಿ – ಕೃಶಮದಾಗಿ
ತಿರುಗಿ, ತಿರುಗಿ, ತಿರುಗಿ – ಬಳಲುವುದೊಂದೆಯೇ
ವಿಶ್ವತೋಭಿ ರಾಮ - ಕೇಳು ವೇಮಾ |೬೬೩|

ಮರ್ಮವರಿಯದವರು – ಮತಗಳ ನಿರ್ಮಿಸಿ
ಉರ್ವಿಯಲ್ಲಿ ಜನರು – ದುಃಖಿಸುವರು
ಒಂದ ನೋಡಿ ನಾಯಿ – ಮತ್ತೊಂದು ಬಗುಳ್ದಂತೆ
ವಿಶ್ವತೋಭಿರಾಮ - ಕೇಳು ವೇಮಾ |೬೬೪|

ಮೇಲೆ ಮೇಲೆ ಪತಿಯ – ಮಾತಿಗಡ್ಡೈಸುವ
ಳವಳು ಸತಿಯುಮಲ್ಲ - ದೊಡ್ಡ ಡೋಲು
ಅಂಥ ಸತಿಯ ಬಿಟ್ಟು - ಅಡವಿ ಸೇರ್ವುದೆ ಮೇಲು
ವಿಶ್ವತೋಭಿ ರಾಮ - ಕೇಳು ವೇಮಾ |೬೬೫|

—ಶ್ರೀ ವೇಮನ ತತ್ವಗಳು—

ಮಿಸುಗಲೀಯದಂತೆ - ಬಿಗಿಯಾಗಿ ಲಿಂಗವ
ಕಟ್ಟಿಹಾಕಲೇನು – ತಪ್ಪು ಮಾಡ್ವ
ಭಾವದಲ್ಲಿ ಶಿವನ – ಭಾವಿಸಿ ಕಾಂಬುದು
ವಿಶ್ವತೋಭಿರಾಮ – ಕೇಳು ವೇಮಾ | ೬೬೬ |

ಮೊಲೆಯ ಕುಡಿದು ಬೆಳೆದು - ಮೊಲೆಗೆ ತಾನಾಶಿಸಿ
ಮೊಲೆಯ ಕತದಿ ಮುಕ್ತಿ - ಮುಂಡಮಾಯ್ತು
ಮೊಲೆಯನ್ನು ತೊರೆದವನೆ – ಸರ್ವಜ್ಞ ಯೋಗಿಯು
ವಿಶ್ವತೋಭಿ ರಾಮ – ಕೇಳು ವೇಮಾ | ೬೬೭ |

ಮೆಣಸು ಮೇಲೆ ನೋಡೆ - ಕಪ್ಪಾಗಿ ಕಾಂಬುದು
ಕಡಿದು ನೋಡಲೊಳಗೆ - ಚುರುಕೆನಿಪುದು
ಸಜ್ಜನ ಜನಗಳ - ಸಾರವಿಂತಿರ್ಪುದು
ವಿಶ್ವತೋಭಿ ರಾಮ - ಕೇಳು ವೇಮಾ | ೬೬೮ |

ಮೇಕೆ ಕತ್ತಿನ ಮೊಲೆ - ಗಳ ಕುಡಿಯ ಪೋಗಲು
ಹಸಿವದೇಕೆ ಮಾಣ್ಗು - ಮಾಸೆ ಹೊರತು
ಲೋಭಿಯನ್ನು ಕೇಳೆ – ಲಾಭಮೇನಿಲ್ಲವೈ
ವಿಶ್ವತೋಭಿ ರಾಮ - ಕೇಳು ವೇಮಾ | ೬೬೯ |

ಕಂ॥ ಮಳೆಯಿಂದ ನೆನೆಯದವರುಂ ।
ಸಲೆ ವೇಮಣ್ಣನೊಳು ಬೈಸಿಕೊಳದಿರ್ಪವರುಂ ॥
ಪಲವುಂ ಬಗೆಯೊಳ್ ಬೆಡಕಲ್ ।
ತಿಳಿಯಲ್ಕಸದಳಮೆನಿಪ್ಪುದೈ ವರ ವೇಮಾ | ೬೭೦ |

—೧೪೦—

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಮುಂಜಿ ಬ್ರಾಹ್ಮಣರೆಲ್ಲ - ಮುಂಜಿ ಮಂತ್ರಗಳಿಂದೆ
ಮುಂಜಿ ಮಾಳ್ಪೆವೆಂದು - ಒದರುತಿಹುದು
ಮುಸುರೆ ತಿಂಬ ಕಾಗೆ - ಕಾವು ಕಾವೆಂಬಂತೆ
ವಿಶ್ವತೋಭಿ ರಾಮ - ಕೇಳು ವೇಮಾ | ೬೭೧ |

ಮನೆ ಮನೆಯೊಳಗೆಲ್ಲ - ಈಶ್ವರನಿರಲಾಗಿ
ತಿಳಿದು ನೋಡದೈದೆ – ವಿಪಿನದೊಳಗೆ
ಇರುವುದುಚಿತವೆಂದು – ವಾಸಿಪರ್ಜೋಗಿಗಳ್
ವಿಶ್ವತೋಭಿ ರಾಮ - ಕೇಳು ವೇಮಾ | ೬೭೨ |

ಮದ್ಯಘಟಕೆ ಬೂದಿ - ಬಲವಾಗಿ ಬಳಿದಡುಂ
ಒಳಗೆ ಕಂಪು ಅದರೊ – ಳಡಗದೈದೆ
ಭುಜದಿ ದಾರ ಮಿರಿಸೆ – ಹೊಳಪಿನಿಂದ್ವಿಜನೆಂತು
ವಿಶ್ವತೋಭಿ ರಾಮ - ಕೇಳು ವೇಮಾ | ೬೭೩ |

ಮೋಹರಾಶಿಯಲ್ಲಿ – ಮುಳುಗಿ ಸಾವುದೆ ಹೊರತು
ಹರಿ ಪರಾಯಣತ್ವ–ಮರಿದು ಜಗದಿ
ಸೇರಿ ಗುರುಧ್ಯಾನ – ಮೂಲಮರಿವುದೆ ಮುಕ್ತಿ
ವಿಶ್ವತೋಭಿ ರಾಮ - ಕೇಳು ವೇಮಾ | ೬೭೪ |

ಮಕ್ಕಾಕ್ಕೆ ಪೋಗಿ ತಾಂ – ಮತ್ತೆ ಬರ್ಪುದದೇಕೆ ?
ಏಕವಾದ ಚಿತ್ತ – ವೆಲ್ಲಿಯಿಹುದು
ಎಲ್ಲೆಡೆ ಪರಿಪೂರ್ಣ - ನಲ್ಲಾ ಮಹಾತ್ಮನು
ವಿಶ್ವತೋಭಿ ರಾಮ - ಕೇಳು ವೇಮಾ | ೬೭೫ |

—ಶ್ರೀ ವೇಮನ ತತ್ವಗಳು—

ಕಂ॥ ಮನವೇ ನೆರೆ ಯವ್ವನವಾ ।
ಮನವೇ ಜೀವನವು ಧರೆಯ ಮನುಜರ್ಗೆಲ್ಲಂ ॥
ಮನಸಿಗೆ ಮನಸೇ ಸಾಕ್ಷಿಯು ।
ಮನಸಿಗೆ ಪಾರ್ಥಕ್ಯಮಿಲ್ಲ ಮಹಿಯೊಳ್ ವೇಮಾ ।೬೭೬।

ಗೀ॥ ಮಾದಿಗನೆಂದೊಡೆ - ಬಲು ಹೀನನೆಂಬರು
ಮಾದಿಗನಲ್ಲವೆ - ಸುರರ ಮಾವ
ಮಾದಿಗನ ಮಗ - ಅರುಂಧತಿಯಲ್ಲವೇ ?
ವಿಶ್ವತೋಭಿರಾಮ – ಕೇಳು ವೇಮಾ ।೬೭೭।

ಮಾದಿಗನೆನೆ ಸಲ್ಲ – ಮತ್ತೆ ವಸಿಷ್ಟಂಗೆ
ಮಾದಿಗನ ಪುತ್ರಿಯೇ – ಸತಿಯುಅಲ್ತೆ ?
ಮಾದಿಗ ಗುಣವಿರೆ – ದ್ವಿಜನು ತಾನೆಂತಾದ
ವಿಶ್ವತೋಭಿ ರಾಮ – ಕೇಳು ವೇಮಾ ।೬೮೭।

ಮುಳುಗಿ ಮುಳುಗಿ ವಿಪ್ರ – ಮುಂದುಗಾಣದೆ ಪೋದ
ತಿರುಗಿ ತಿರುಗಿ ಜೋಗಿ – ಯರಿಯದಾಧ
ಕೂಗಿ ಕೂಗಿ ವಾದಿ – ನಾಯಿಯು ತಾನಾದ
ವಿಶ್ವತೋಭಿ ರಾಮ - ಕೇಳು ವೇಮಾ ।೬೭೯।

ಮೃಗ ಮದಮಂ ನೋಡೆ - ಮೇಲೆ ಕಪ್ಪಾಂತುದು
ಮಘಮಘಿಸುವುದದರ - ಪರಿಮಳಮದು
ಗುರುಗಳ ಸದ್ಗುಣ - ಮಿಾರೀತಿಯಲ್ಲವೇ ?
ವಿಶ್ವತೋಭಿ ರಾಮ - ಕೇಳು ವೇಮಾ ।೬೮೦।

—ಓಂ—

—ಶ್ರೀ ವೇಮನ ತತ್ವಗಳು—

ಮೊದಲು ಆಸೆಯಿತ್ತು - ತುದಿಗಿಲ್ಲ ಪೋಗೆಂಬ
ಪರಮ ಲೋಭಿಯಾದ - ಮನುಜ ತಾನು
ಅತಿಥಿಯುಸುರು ತಾಗಿ - ಸಂಕಟಪಡುವನೈ
ವಿಶ್ವತೋಭಿ ರಾಮ - ಕೇಳು ವೇಮಾ | ೬೪೧ |

ಕಂ|| ಮೋಸವನೆಸಗುತೆ ಭುವಿಯೊಳ್ |
ದಾಸರು ನಾವೆಂದು ಭಸಿತ ಧರಿಸಿ ತಿರುಗಲಾ ||
ಮೋಸದ ಶಿವ ವಂಚಕರಂ |
ದೂಷಿಸುವರ್ಜನರು ದೋಷ ತಪ್ಪದು ವೇಮಾ | ೬೪೨ |

ಗೀ|| ಮರಳು ಕಬ್ಬಿನ ಕಲ್ಲು - ಇದ್ದಿಲು ತವುಡನ್ನು
ಸ್ವರ್ಣ ಕಸ ತೃಣದಂತೆ - ನೋಳ್ಪ ನರನು
ಪರಮಪದವ ಪೊಂದುನಂ - ಪರಿಣಾಮದಿ
ವಿಶ್ವತೋಭಿ ರಾಮ - ಕೇಳು ವೇಮಾ | ೬೪೩ |

ಮನೆಯ ಸತಿಯ ಬಿಟ್ಟು - ಸೂಳೆಯ ಬೆನ್ಹತ್ತಿ
ತಿರುಗುತಿರ್ಪನವನು - ಹುಚ್ಚು ನರನು
ಪೈರು ಹೊಲವ ಬಿಟ್ಟು - ಅಂಕಲಾರಿಸಿದಂತೆ
ವಿಶ್ವತೋಭಿ ರಾಮ - ಕೇಳು ವೇಮಾ | ೬೪೪ |

ಮಣ್ಣಿನಿಂದ ಕೆಲವು - ಮರದಿಂದಲೇ ಕೆಲವು
ಲೋಹದಿಂದ ಕೆಲವು - ಪ್ರತಿಮೆಗಳನು
ಮಾಡಿಟ್ಟು ಭಗವಂತ - ನೆಂದು ಕೈಮುಗಿಯಲು
ಮುಕ್ತಿಯಾವು-ವೆಂತು - ಕೇಳು ವೇಮಾ | ೬೪೫ |

—ಓಂ—

—ಶ್ರೀ ವೇಮನ ತತ್ವಗಳು—

ಮಾಸಿದ ತಲೆಯಿಂದೆ – ಮಲಿನ ವಸ್ತ್ರಗಳಿಂದೆ
ಮೈಯ್ಯ ಜಿಡ್ಡಿನಿಂದೆ – ಹೇಸಿನರನು
ಬ್ರಾಹ್ಮಣನಾದೊಡೇಂ – ತೊಲಗು ತೊಲಗೆಂಬರು
ವಿಶ್ವತೋಭಿರಾಮ - ಕೇಳು ವೇಮಾ | ೬೦೭ |

ಮಾತನಾಡಲರಿತು - ಮನವನ್ನು ಕರಗಿಸಿ
ಪಿರಿದು ಪ್ರಿಯವ ಪೇಳಿ - ಒಲಿಸದಿರಲು
ಪರರ ಕೈಯ್ಯ ಕಾಸು - ಸುಮ್ಮನೆ ಬರ್ಪುದೇ ?
ವಿಶ್ವತೋಭಿ ರಾಮ - ಕೇಳು ವೇಮಾ | ೬೮೭ |

ಮೂಢ ಭಕ್ತಿಯಿಂದ – ಹರನನ್ನು ಪೂಜಿಸಿ
ಬೇಡ ಮುಕ್ತನಾದ – ಮುನ್ನ ತಾನು
ಪೂಜೆಗೇನು ಬಂತು – ಬುದ್ಧಿ ಪ್ರಧಾನವು
ವಿಶ್ವತೋಭಿ ರಾಮ – ಕೇಳು ವೇಮಾ | ೬೮೮ |

ಕಂ॥ ಮೃಗಗಳು ಮೃಗಗಳ ಕೇಳವು ।
ಖಗ ಜಾತಿಗಳೈದೆ ಖಗಗಳಂ ಕೇಳವು ಈ ॥
ಜಳದೊಳು ಪುರುಷಂ ಪುರುಷನ !
ಮಿಗೆಕೇಳಲ್ ಕೊಡದೊಡವನುಪೆರ್ಗಡ? ವೇಮಾ | ೬೮೯ |

ಗೀ॥ ಮನಸಿನಲ್ಲಿ ಒಂದು - ಮಾತಿನೊಳ್ಮತ್ತೊಂದು
ಕಾರ್ಯದಲ್ಲದೊಂದು - ಭಿನ್ನವಾಗೆ
ಇಂಥ ನರಗೆ ಮುಕ್ತಿ - ತಾನೆಂತು ಲಭಿಪುದು
ವಿಶ್ವತೋಭಿ ರಾಮ - ಕೇಳು ವೇಮಾ | ೬೯೦ |

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಮನವೇ ಮಾಯಾ ಮೃಗವೂ ।
ಮನವೆಲ್ಲಿಯು ಚಲಿಸದಂತೆ ಬಿಗಿಹಿಡಿಯುತ್ತಂ ॥
ಮನದೊಳಹಂ ಮದಮೃಗವಂ !
ಮನದೊಳ್ ಕೊಂದಲ್ಲಿ ಮುಕ್ತಿ ಸಿದ್ಧಂ ವೇಮಾ । ೬೯೧ ।

ಗೀ॥ ಮೊಂಡ ನರನಿಗೇಕೆ - ದುಂಡು ಕೈ ಕಡಗಗಳ್
ಬೊಚ್ಚು ಮನುಜಗೇಕೆ – ಕೃತಕ ಪಲ್ಗಳ್
ಕತ್ತೆಗದೇತಕ್ಕೆ - ಗಡ್ಡಗಳ್ ಮೀಸೆಗಳ್
ವಿಶ್ವತೋಭಿ ರಾಮ - ಕೇಳು ವೇಮಾ । ೬೯೨ ।

ಮೊಂಡ ಮಾತಿನಲ್ಲಿ - ಅಡಗಿರ್ಪುದೆ? ವಿರಕ್ತಿ
ಯುಮನ ಗೆಲ್ಲುವದಕ್ಕೆ - ಸಾಧ್ಯಮಲ್ಲ
ಕಲಿಯುಗದ ವಿರಕ್ತಿ - ಹೆಂಡಕುಡಿದೊದರುವುದೆ
ವಿಶ್ವತೋಭಿರಾಮ - ಕೇಳು ವೇಮಾ । ೬೯೩ ।

ಕಂ॥ ಮರದೋಳ್ಬೆಂಕಿಯುದಯಿಪ್ಪುದು ।
ಮರವುರಿವುದೆ ? ಬೆಂಕಿಯಿರುವ ಮನುಜಾವಳಿಯೊಳ್ ॥
ಮರದೊಳ್ಬೆಂಕಿಯ ತೆರದಿಂ ।
ಮಿಡುಗುತೆ ನೆರೆ ಯೋಗಿ ಬೆಳಗುತಿರ್ಪಂ ವೇಮಾ । ೬೯೪ ।

ಗೀ॥ ಮಣ್ಣು ಪಾತ್ರೆಯಂಥ – ಮಾಯಾ ಶರೀರವು
ಸಾವುದಿಂದು ನಾಳೆ ಸಾಯದಾತ್ಮ
ಘಟಗಳೆಷ್ಟಾದೊಡುಂ – ಗಗನವು ತಾನೊಂದೆ
ವಿಶ್ವತೋಭಿ ರಾಮ - ಕೇಳು ವೇಮಾ । ೬೯೫ ।

—ಶ್ರೀ ವೇಮನ ತತ್ವಗಳು—

ಮಾತಾಡಲಹುದು ತಾಂ – ಮನನಿಲಿಸಲಾಗದು
ತಿಳಿಸಲಹುದು ತನ್ನ – ತಿಳಿವುದರಿದು
ಕತ್ತಿ ಪಿಡಿಯಲಹುದು – ಶೂರನೆನಿಪುದು ಕಷ್ಟ
ವಿಶ್ವತೋಭಿ ರಾಮ – ಕೇಳು ವೇಮಾ । ೬೯೬ ।

ಮಾತ ನಿಲಿಸದಿರ್ಪ – ಮನುಜನೆ ಚಂಡಾಲ
ಆಜ್ಞೆನಡೆಸದಿರ್ಪ – ದೊರೆ ವಿತಂತು
ಮಹಿಮೆ ಇಲ್ಲದಿರ್ಪ ಯತಿಯೆ – ಮಣ್ಣಿನ ಪುಲಿ
ವಿಶ್ವತೋಭಿ ರಾಮ – ಕೇಳು ವೇಮಾ । ೬೯೭ ।

ಮಳೆ ಬರುವುದುಂ ಮತ್ತೆ – ಪ್ರಾಣ ತೊರೆಯುವುದನ್ನು
ತಿಳಿಯಲಶದಳಮೆನಿತು – ಘನನಾದೊಡುಂ
ತಿಳಿದೊಡಾಗಳೆ ಕಲಿ – ನಡೆವುದೆ ಧರೆಯುಲ್ಲಿ
ವಿಶ್ವತೋಭಿ ರಾಮ – ಕೇಳು ವೇಮಾ । ೬೯೮ ।

ಮೇದನರಿವನೆಂತು – ಘನತರ ವಸ್ತುವಂ
ದೇಹಮರಿವುದೆಂತು – ದಿವ್ಯ ಬೋಧೆ
ಮನದೊಳಿದನ, ತಿಳಿದು – ವೇದಾಂತಮರಿವುದು
ವಿಶ್ವತೋಭಿ ರಾಮ – ಕೇಳು ವೇಮಾ । ೬೯೯ ।

ಕಂ॥ ಮೊದಲಿನ ಮತವನ್ನುಳಿಯದೆ ।
ತುದಿಗನ್ಯರ ಮತವ ತಾನು ದೂರದೆ ಮತ್ತಂ ॥
ಮುದದಿಂದಡನಿದ ಕೋರಡೆ ।
ಸದು ಹೃದಯನೆನಿಸುತೆ ಚರಿಪನವ ಬುಧ ವೇಮಾ । ೭೦೦ ।

—ಓಂ—

—ಶ್ರೀ ವೇಮನ ತತ್ವಗಳು—

ಗೀ|| ಮಣ್ಣು ಮೆತ್ತಿ ತೊಳೆದು - ಮತ್ತೆ ರೂಪಾಗಿಸಿ
ಕುಂಟೆ ನೀರೊಳ್ ಬೂದಿ - ಗುರುತ ನಿಲಿಸಿ
ಮತ್ತೆ ಜನರೆಲ್ಲರು - ದೇವರಂ ಕುಣಿಸರು
ವಿಶ್ವತೋಭಿರಾಮ – ಕೇಳು ವೇಮಾ | ೭೦೧ |

ಮುಷಿಯುವಂದದಿ ಮಾಡುತೆ – ಮೈಯ್ಯಮರೆದು
ನಿದ್ರಿಸಂದದಿ ಮಾಡುತೆ – ಅಖಿಳ ಜಗವ
ತೋರುತಿಳೆಯೊಳು – ಬದ್ಧರಾಗಿಸುತೆ ಸೂಕ್ಷ್ಮ
ರೂಪನಾ ಮಹದೇವನು – ಮುಕ್ತಿ ? ವೇಮಾ | ೭೦೨ |

ಮರವು ತಕ್ಕುದಾದ - ರದರೊಳಗುತ್ತಮ
ವಸ್ತುಗಳನು ಮಾಳ್ಪ - ರಾಗದಿರಲು
ಸುಡುವರೀ ಪರಿಯೊಳ - ಗಲ್ಲವೇ ? ಕರ್ಮಿಗಳ್
ವಿಶ್ವತೋಭಿ ರಾಮ – ಕೇಳು ವೇಮಾ | ೭೦೩ |

ಮಣ್ಣಿನಲ್ಲಿ ಪುಟ್ಟಿ - ಮಣ್ಣಿನಿಂ ಬೆಳೆಯುತ್ತೆ
ಮಣ್ಣಿಗಾಗಿ ನರರು - ಮಗ್ನರಾಗಿ
ಮಣ್ಣು ಮಣ್ಣು ಸೇರುವುದ - ನರಿಯುಲಾರರು
ವಿಶ್ವತೋಭಿ ರಾಮ - ಕೇಳು ವೇಮಾ | ೭೦೪ |

ಮನದ ಮುಕ್ತಿಯನ್ನು - ಮತ್ತೊಂದು ಕಡೆಯಲ್ಲಿ
ಬೆದಕುತಿರ್ಪ ನರನು - ಹುಚ್ಚು ನರನು
ಕುರಿಯ ಕಂಕುಳಲ್ಲಿ - ಇರುಕಿಸಿ ಗೊಲ್ಲನು
ಅದನೆ ಬೆದಕುವಂತೆ - ಇಹುದು ವೇಮಾ | ೭೦೫ |

—ಓಂ—

—ಶ್ರೀ ವೇಮನ ತತ್ವಗಳು—

ಮೊದಲದಾರು ಪುಟ್ಟಿದರೊ - ತಿಳಿಯಲ್ಕದು
ಚೋದ್ಯವಾಗಿ ತೋರು - ತಿರ್ಪುದಲ್ತೆ ?
ಆದಿಶಕ್ತಿಯೆಂದೊಡದು - ಬಯಲೆಂದರಿ
ವಿಶ್ವತೋಭಿ ರಾಮ - ಕೇಳು ವೇಮಾ | ೭೦೬ |

ಮಾಯೆ ಭಯವಿಲ್ಲದ – ಮನುಜನೇ ಮನುಜನು
ಮಾಯೆಯಲ್ಲಿ ಮುಳುಗೆ - ಮನುಜನೆಂತು
ಕಾಯಮಳಿ ದಾಗಳೇ - ಮಾಯೆಯುಮಳಿವುದು
ವಿಶ್ವತೋಭಿ ರಾಮ - ಕೇಳು ವೇಮಾ | ೭೦೭ |

ಕಂ॥ ಮುಕ್ಕೋಣ ಶಿಖರದೊಳು ಗುರಿ ।
ಯಿಕ್ಕುತೆ ಪರಿ ಪೂರ್ಣನಾಗಿ ಧೈರ್ಯದೊಳನಿಶಂ ॥
ಸೊಕ್ಕದೆ ಸೊರಗದೆ ಇರ್ದೊಡೆ ।
ಶಿಕ್ಕುವುನಾ ಮುಕ್ತಿ ಸೂರೆಗೊಳ್ಳುವ ವೇಮಾ | ೭೦೮ |

ಗೀ॥ ಮೂರು ಗುಣಗಳಲ್ಲಿ – ಮುಃಖ್ಯ ಗುಣವೊಂದನ್ನು
ತಿಳಿಯದಿರ್ಪ ನರನು – ಸುಖಿಪನೆಂತು
ಭ್ರಮೆಗೆ ಶಿಲ್ಕಲವನು – ಹುಚ್ಚನೆಂತಾಗುವ
ವಿಶ್ವತೋಭಿ ರಾಮ - ಕೇಳು ವೇಮಾ | ೭೦೯ |

ಕಂ॥ ಮೂಢಾತ್ಮರಾದವರು ನೆರೆ ।
ಗೂಢಾರ್ಥಂ ತಿಳಿವರೆಂತು ಗುರಿ ಸೇರದಿಹರ್ ॥
ಗಾಢಾಂಧಕಾರ ದೂರನ
ಬೇಡುತೆ ಸೇರಲ್ಕೆ ಬಪ್ಪುದರಿಯೈ ವೇಮಾ | ೭೧೦ |

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಮೂರು ವೇಳೆಯಲ್ಲಿ – ನೋಡದಿಂ ಶಿವನಾತ್ಮ
ಪೂಜೆ ಮಾಡುವಾತ – ಪುಣ್ಯಮೂರ್ತಿ
ಪೂಜೆ ಯಿಲ್ಲದೆಂತು – ಮೋಕ್ಷವು ಲಭಿಪುದು
ವಿಶ್ವತೋಭಿ ರಾಮ - ಕೇಳು ವೇಮಾ ।೭೧೧।

ಮಯ್ಯ ಬಣ್ಣನೋಡಿ – ನಡೆ ನುಡಿಗಳ ನೋಡಿ
ವಾರೆ ಮುಡಿಯುಳ್ಳಂಥ - ಸ್ತ್ರೀಯ ನೋಡಿ
ವಿಟರು ಒಳಗೊಳಗೆಯೇ - ತಳಮಳ ಗೊಳ್ವರು
ವಿಶ್ವತೋಭಿ ರಾಮ – ಕೇಳು ವೇಮಾ ।೭೧೨।

ಕಂ॥ ಮೊದಲೋಳ್ ಮಾತೃ ಸುದೈವಂ ।
ಪದದಿಂದಂ ಜನಕನೆರೆಡನೆಯ ದೈವಂ ತಾಂ ॥
ಕುದುರಲ್ ಗುರುವರ ನಾತನೆ ।
ತುದಿ ದೈವಂ ಮಾನವರ್ಗೆ ತಿಳಿವುದು ವೇಮಾ ॥ ।೭೧೩।

ಗೀ॥ ಮಂತ್ರ ವೊಂದು: ಪೇಳಿ – ದೇವತಾರ್ಚನೆ ಮಾಡಿ
ಕರುಣವೆಮ್ಮ ಮೇಲೆ ಕರೆದನೆಂದು
ವೇದ ಪಠನ ಮಾಡಿ - ಹುಚ್ಚರಾದರು ಮತ್ತೆ
ವಿಶ್ವತೋಭಿ ರಾಮ - ಕೇಳು ವೇಮಾ ।೭೧೪।

ಕಂ॥ ಮನವೇ ಮಾಯಾ ಮೃಗವಾ ।
ಮನಮೇತರ ಮೇಲೆ ಮತ್ತೆ ಪೋಗೊಳಿಸದೆ ತಾಂ ॥
ಮನದೊಳ್ ಮನಮಂ ಕೊಲ್ಲಲ್ ।
ಮನಸಿನೊಳೇ ಮುಕ್ತಿ ಯುಪ್ಪುದಿದು ದಿಟ ವೇಮಾ ॥ ।೭೧೫।

—ಓಂ—

—ಶ್ರೀ ವೇಮನ ತತ್ವಗಳು—

ಮಾತಿನೊಳು ಮಾತು ಬರ್ಪುವು ।
ಮಾತಿನೊಳೇ ಪುಟ್ಟುತಿಹವು ಮಣಿ ಮಂತ್ರಗಳ್ ॥
ಮಾತಿನ ಹೊಂದಿಕೆ ತಿಳಿದೊಡೆ ।
ಮಾತಿನೊಳೇ ಮುಕ್ತಿ ಲಭಿಸುವುದು ಪರ ವೇಮಾ ॥ । ೭೧೬ ।

ಗೀ॥ ಮಾಂಸ ಖಂಡಗಳೆಲುಬುಗಳ್ – ಮತ್ತೆ ತೊಗಲು
ಮೂತ್ರ ಮಲಯುತ ಮುಟ್ಟಲು ಬಾರದ ತನು
ಕಾಯಜನ ಬಾಣವೆನುತಾಸೆಪಡುತೆ ಕೆಡುವ
ನಾಶೆ ಯಳಿಯುವ ರೀತಿಯು ಪೇಳು ವೇಮಾ । ೭೧೭ ।

ಮಂತ್ರವೆಲ್ಲ ಮರೆತು – ಮಧುರಾಧರವ ಕೋರು
ವಧುವನೊಡೆಯನನ್ನ – ದೆಂತು ಕಾಂಬ
ಸುದತಿಯು ನೋಡುತ್ತಿ – ಪರವನ್ನು ವರೆಯುವಂ
ವಿಶ್ವತೋಭಿ ರಾಮ - ಕೇಳು ವೇಮಾ । ೭೧೮ ।

ಮಾತನಾಡಲಹುದು – ಮರ್ಮವನ್ನರಿತೊಡೆ
ಚಿಕ್ಕ ದೊಡ್ಡತನಗ – ಳೆಣಿಪುದಲ್ಲ
ಚಿಕ್ಕ ದೀಪವಿಷ್ಟೆ – ಬೆಳಕೆಷ್ಟು ಬೀಳ್ಪುದು
ವಿಶ್ವತೋಭಿ ರಾಮ – ಕೇಳು ವೇಮಾ । ೭೧೯ ।

ಮರದ ಡೊಂಕ ತಿದ್ದ – ಲಪ್ಪುದು ಮತ್ತಮಾ
ಶಿಲೆಯ ಡೊಂಕ ತಿದ್ದ – ಲಹುದು ಜಗದಿ
ಮನವ ತಿದ್ದಲಾಗ – ದಾರಿಗುಂ ಮಹಿಯೊಳು
ವಿಶ್ವತೋಭಿ ರಾಮ – ಕೇಳು ವೇಮಾ । ೭೨೦ ।

—ಓಂ—

—ಶ್ರೀ ವೇಮನ ತತ್ವಗಳು—

ಮೃಗವು ಮೃಗವು ಎಂದು - ದೂಷಿಪರಿಳೆಯೊಳು
ಮೃಗಗಳ್ಗಿಂತ ಮೂರ್ಖ - ಜನಗಳಿಹರು
ಮೃಗದ ಗುಣವು - ಮೂರ್ಖ ಜನಗಳೊಳಿಲ್ಲವೈ
ವಿಶ್ವತೋಭಿ ರಾಮ - ಕೇಳು ವೇಮಾ | ೭೨೧ |

ಮುದ್ರೆಯೊತ್ತಿಸಿಕೊಂಡು - ಅಡಿಯೇನೆನುತ್ತಲಿ
ಎಂಜಲುಂಡು ಪಂಗ - ನಾಮವಿಡಲು
ದಾಸನೆಂತವನು ವೇಷದ - ದಾಸನಲ್ಲದೆ
ಭಾಗ್ಯವಶದಿ ಬಾಳ - ತಿಳಿಯೊ ವೇಮಾ | ೭೨೨ |

ಮತದ ವೇಷದವರು - ಮಹಿಯೊಳನೇಕರು
ಮೂಢ ಜನರು ಗುಂಪು - ಕೂಡಿಸುವರು
ಬಕಗಳ್ ಬಕಕಳ್ ಸೇರಿ - ತಕಪಕ ಕುಣಿವಂತೆ
ವಿಶ್ವತೋಭಿ ರಾಮ - ಕೇಳು ವೇಮಾ | ೭೨೩ |

ಮಾತಿನಲ್ಲದೊಂದು - ಮನದೊಳು ಮತ್ತೊಂದು
ಒಳಗದೊಂದು ಮತ್ತೆ - ನಡೆಯೊಳೊಂದು
ಇಂಥ ನರಗೆ ಮುಕ್ತಿ - ಯೆಂತು ತಾಂ ಲಭಿಪುದು
ವಿಶ್ವತೋಭಿ ರಾಮ - ಕೇಳು ವೇಮಾ | ೭೨೪ |

ಯ

ಗೀ॥ ಯಾವ ಜಾತಿಯವನೊ - ಮೊದಲೊಳು ತಿಳಿಯದು
ನೀಚ ಬಾಳಿಗೇಕೆ - ನಿಯಮವಿನ್ನು
ತಿಳಿವುದೀ ಜಗತ್ತು - ಈಶ್ವರ ಮಯವೆಂದು
ವಿಶ್ವತೋಭಿ ರಾಮ - ಕೇಳು ವೇಮಾ | ೭೨೫ |

—ಶ್ರೀ ವೇಮನ ತತ್ವಗಳು—

ಯಾವ ಮಂತ್ರಮಾದೊ - ಡೆಂಜಲಾಗದ ರೀತಿ
ಪೇಳಲಳವೆ ಬ್ರಹ್ಮ - ಗಾದೊಡೇನು
ಎಂಜಲೆಂಜಲೆಂಬ - ರೆಂಜಲ ಬಾಯಲ್ಲೆ
ವಿಶ್ವತೋಭಿ ರಾಮ - ಕೇಳು ವೇಮಾ | ೭೨೬ |

ಯಮನು ಬಿಗುಹಿನೊಳ್ - ಪ್ರಾಣಮಂ ಶೆಳೆಯುವಾಗ
ಭ್ರಮೆಯ ತೋರಿಸೆ - ಬಿಡುವನೆ ಪಾಶಬಂಧ
ಕ್ರಮವ ಮನದೊಳು - ಗಮನಿಸಿ ನಡೆಯಬೇಕು
ವಿಮಲ ಗುಣರಾಜ - ಯೋಗೀಂದ್ರ ವೇಮಚಿಂದ್ರಾ | ೭೨೭ |

ಯೋನಿಯಲ್ಲಿ ಪುಟ್ಟ - ಯೋನಿಯು ಕೆಡಿಪುದು
ಮೊಲೆಯ ಕುಡಿದು ಬೆಳೆದು - ಮೊಲೆಯ ಪಿಡಿವ
ಸೃಷ್ಟಿಯಲ್ಲಿ ಪ್ರಾಣಿ - ಗಿಲ್ಲವು ನಾಚಿಕೆ
ವಿಶ್ವತೋಭಿ ರಾಮ - ಕೇಳು ವೇಮಾ | ೭೨೮ |

ಯಜ್ಞಸೂತ್ರವ ಧರಿಸಲು – ಪ್ರಜ್ಞೆಯಿಹುದೇಂ ?
ಮಜ್ಞಚಿತ್ತದೊಳಾದೊಡೆ – ಮಹಿಮನಾಗ್ವ
ಬ್ರಹ್ಮಮಯನಾಗಲವನೆ – ಬ್ರಾಹ್ಮಣನು ನಿಕ್ಕಂ
ವಿಮಲ ಗುಣರಾಜ – ಯೋಗೀಂದ್ರ ವೇಮ ಚಿಂದ್ರಾ |೭೨೯|

ಕಂ|| ಯಾವಲ್ಲಿ ಮನವು ಚಲಿಪುದೊ |
ಭಾವಿಸಲಾಕಡೆಯೊಳಿಂದ್ರಿಯಂಗಳ ಸೆಳೆಗುಂ ||
ದೇವನ ಪದಮಂ ಸೇರಲ್ |
ತಾವೆಲ್ಲಿಯು ಚಲಿಸವಿಂದ್ರಿಯಂಗಳು ವೇಮಾ | ೭೩೦ |

—ಓಂ—

—ಶ್ರೀ ವೇಮನ ತತ್ವಗಳು—

೧೫॥ ಯಂತ್ರ ಮಂತ್ರದಿಂದೆ – ತಾರಕಂ ದೊರೆಗುಮೆ ?
ಮಂತ್ರ ಬಲವು ಗುರು – ಸ್ವತಂತ್ರವಿಃಹುದು
ಚಿಂತೆ ಮಾಡಲದನು – ಚಿನ್ಮಯನಾಗುವಂ
ವಿಶ್ವತೋಭಿ ರಾಮ - ಕೇಳು ವೇಮಾ |೭೩೧|

ಯಜ್ಞ ಯಾಗಗಳಿಷ್ಟು – ಮಾಡಿದರದೇನು
ಆತ್ಮಯಜ್ಞವದಾಗ್ವುದೆ – ತಿಳಿದು ನೋಡೆ
ಕ್ರತುವ ಮಾಳ್ಪರು – ಪರಿಕಿಸೆ ಕಳ್ಳರವರು
ವಿಶ್ವತೋಭಿ ರಾಮ - ಕೇಳು ವೇಮಾ | ೭೩೨ |

ಯಾವ ಮಹಾತ್ಮನಿಂ – ದೀಜಗ ಪುಟ್ಟಿತೋ
ಆ ಮಹಾತ್ಮನನ್ನು – ಭಜಿಸಿ ಸತತ
ನಿಯಮ ನಿಷ್ಠೆ ತೋರಿ – ನೆಮ್ಮದಿ ಪಡೆವುದು
ವಿಶ್ವತೋಭಿ ರಾಮ – ಕೇಳು ವೇಮಾ | ೭೩೩ |

ಯಾತ್ರೆ ಪೋದ ನರನು – ಎಷ್ಟು ದಿನ ತಿರುಗಿಯು
ಪಾದದಷ್ಟು ಮುಕ್ತಿ – ಪಡೆಯಲಾರ
ಮನವ ನಿಲ್ಲಿಪಾತ – ಮಹನೀಯನಾಗುವ
ವಿಶ್ವತೋಭಿ ರಾಮ – ಕೇಳು ವೇಮಾ | ೭೩೪ |

ಯಮನ ಕೈಗೆ ಸಿಕ್ಕಿ - ದಾರಿಯ ಕಾಣದೆ
ವ್ಯಥೆಯ ಪಡುವನವನು - ಹುಚ್ಚು ನರನು
ಸತಿಯ ಬಲೆಗೆ ಸಿಕ್ಕಿ - ಸಂತಾಪ ಪಡಲೇಕೆ ?
ವಿಶ್ವತೋಭಿ ರಾಮ - ಕೇಳು ವೇಮಾ | ೭೩೫ |

—ಓಂ—

—ಶ್ರೀ ವೇಮನ ತತ್ವಗಳು—

ಕಂ|| ಯಾವಂ ಸುಗುಣ ಕದಂಬಂ |
ಭೂವಲಯದಿ ಪಿಡಿಯಬಲ್ಲನೆನಿಸುವನನಿಶಂ ||
ಕೋವಿದನೆ ಮುಕ್ತಿಗರ್ಹಂ |
ಪಾವನ ಪರಿಪೂರ್ಣ ಹೃದಯ ರಂಜಕ ವೇಮಾ | ೭೩೬ |

ಗೀ|| ಯವ್ವನವೆಂದೊಡ - ದೇನೆಂದು ತಿಳಿಯದು
ಯವ್ವನವನ್ನೆಣಿಪ - ರಧಿಕವಾಗಿ
ಯವ್ವನವೇ ತನ್ನನಡು - ಮುಳುಗಿಸುವುದು
ವಿಶ್ವತೋಭಿ ರಾಮ - ಕೇಳು ವೇಮಾ | ೭೩೭ |

ಯಾವುದೋ ಪರತತ್ವ – ಮೆಂಬುದನ್ನರಿಯದೆ
ಸೋಮಯಾಜಿ ಪಶುಗಳ್ – ಶ್ರುಕ್ಕಡಗಿಸೆ
ಸಾಮವೆನ್ನುತೋದಿ – ಸಾಯ್ವರದೇತಕ್ಕೊ ?
ಬಾಧಕಂಗಳು ದುರ್ಗುಣ – ಪಂಜಿ‍್ತ ವೇಮಾ | ೭೩೮ |

ರ

ರಜ್ಜು ಸರ್ಪವೆಂದು - ನೋಡಿ ತಾಂ ಭಯಪಟ್ಟು
ಹಗ್ಗವೆಂದು ತಿಳಿಯೆ - ಭಯವು ಪರಿಗುಂ
ಭಯವು ತೀರಿದೊಡನೆ - ಬ್ರಹ್ಮವು ತಿಳಿವುದು
ವಿಶ್ವತೋಭಿ ರಾಮ - ಕೇಳು ವೇಮಾ | ೭೩೯ |

ರಜಕ ಬಟ್ಟೆಯೊಗೆವ - ಗಜಿಬಿಜಿ ಮಾಡುತ್ತೆ
ಮಲಿನವೆಲ್ಲ ಕಳೆದು - ಮಡಸಿ ಒಡಿವ
ಬುದ್ಧಿ ಪೇಳುವವನು - ಗುದ್ದಿದರುಂ ಸರಿಯೆ
ವಿಶ್ವತೋಭಿ ರಾಮ - ಕೇಳು ವೇಮಾ | ೭೪೦ |

—ಓಂ—

—ಶ್ರೀ ವೇಮನ ತತ್ವಗಳು—

ರಾಮನಾಮ ಪಠನ – ದಿಂದಲಾ ವಾಲ್ಮೀಕಿ
ಮೊದಲು ಬೇಡನಿದ್ದು – ದ್ವಿಜನೆನಿಸಿದ
ಕುಲವು ಘನವಲ್ಲ ಸ – ದ್ಗುಣವೇ ಘನವಯ್ಯ
ವಿಶ್ವತೋಭಿ ರಾಮ - ಕೇಳು ವೇಮಾ | ೭೪೧ |

ರಾಜ ರಾಜರ್ಗೆಲ್ಲ - ಯುದ್ಧರಂಗದ ಚಿಂತೆ
ಪರಮ ಮೌನಿಗಳಿಗೆ - ಪರದ ಚಿಂತೆ
ಅಲ್ಪ ನರರಿಗೆಲ್ಲ - ಸ್ತ್ರೀಯರ ಚಿಂತೆಯು
ಭಾಗ್ಯವಶದಿ ಬಾಳ - ತಿಳಿಯೊ ವೇಮಾ | ೭೪೨ |

ರಾಮ ಭಕ್ತರೆಂದು - ಶಿಲೆಗಳ್ಗೆ ಮುಗಿಯುತ್ತೆ
ಭಜನೆ ಮಾಳ್ಪುದೇಕೆ - ಭಕ್ತಿಯುಳಿದು
ಭಕ್ತಿಯಿರ್ಪ ಮನುಜ - ಭಜನೆಯಂ ಮಾಳ್ಪನೇ ?
ವಿಶ್ವತೋಭಿ ರಾಮ - ಕೇಳು ವೇಮಾ | ೭೪೩ |

ಕಂ|| ರವಿ ಕಾಣದುದಂ ಕವಿ ತಾಂ |
ಭುವಿಯೊಳ್ ತಿಳಿದಿರ್ಪನ್ನೈದೆ ಕವಿಯರಿದುದನಂ ||
ರವಿಯುರಿಯಲ್ಕಸಮರ್ಥಂ |
ರವಿಗಿಮ್ಮಿಗಿಲವನಿಯಲ್ಲಿ ವರಕವಿ ವೇಮಾ | ೭೪೪ |

ಗೀ|| ರಾಮನೋರ್ವ ಜನಿಸಿ - ರವಿವಂಶ ಬೆಳೆದುದು
ಕುರುಪ ಜನಿಸಿ ತನ್ನ - ಕುಲವೆ ಹೋಯ್ತು
ಧರೆಯೊಳ್ ಪುಣ್ಯ ಪಾಪ - ವೀರೀತಿಯಲ್ಲವೇ ?
ವಿಶ್ವತೋಭಿ ರಾಮ - ಕೇಳು ವೇಮಾ | ೭೪೫ |

—ಓಂ—

—ಶ್ರೀ ವೇಮನ ತತ್ವಗಳು—

ರಂಡಮುಂಡೆಗೇಕೆ - ಮುತ್ತಿನ ಬೈತಲೆ
ಬಣ್ಣವೆಲ್ಲ ಭಾಗ್ಯ - ವತಿಗೆ ಹೊರತು
ಕುಂಟು ಕುದುರೆಗೇಕೆ - ಕುಚ್ಚುಗಳ್ ಮಣಿಗಳು
ವಿಶ್ವತೋಭಿ ರಾಮ - ಕೇಳು ವೇಮಾ | ೭೪೬ |

ರಾಜಯೋಗದಿಂದ - ರಾಜತ್ವಮಂ ಪೊಂದಿ
ರಾಜ ರಾಜ ರಾಜ - ರಾಜನೆನಿಸಿ
ರಾಜಯೋಗದಿಂದೆ - ರಾಜಶೇಖರನಾದ
ವಿಶ್ವತೋಭಿ ರಾಮ - ಕೇಳು ವೇಮಾ | ೭೪೭ |

ರಾಜಸದಿಂದಲಿ – ರಾಜ್ಯಭಾರವ ಮಾಡಿ
ಸ್ಥೈರಣೆಯಿಲ್ಲದೆ – ಕೆಡುವನಿಳೆಯೊಳ್
ನೀರ ಮೇಲೆ ಗುಂಡು – ತೇಲುವುದೆ ? ಮುಳುಗದೆ
ವಿಶ್ವತೋಭಿ ರಾಮ – ಕೇಳು ವೇಮಾ | ೭೪೮ |

ರಾಜವಂಶಜರು ತಾವ್ – ಬಚ್ಚಿಟ್ಟ ಹಣವೆಲ್ಲ
ಭಟರ ಪಾಲೊ ! ಭೋಗ – ದವರ ಪಾಲೊ !!
ಲೋಭಿ ನರನ ಧನವು – ಕಳ್ಳಕಾಕರ ಪಾಲು
ವಿಶ್ವತೋಭಿ ರಾಮ – ಕೇಳು ವೇಮಾ | ೭೪೯ |

ರಾಜ ಮಾತೆನಬೇಕು - ರಸಿಕನಾಡುವ ಮಾತು
ಅಷ್ಟು ಮಾತ್ರ ಗರ್ವ - ಪಡುವುದಲ್ಲ
ತಿಳಿದು ನಡೆಯಲಾಗ - ಗ್ರಹಸಮಾನನು ಮತ್ತೆ ?
ಹೆಚ್ಚು ಕಡಿಮೆ ಏತ - ಕ್ಕಹುದು ವೇಮಾ | ೭೫೦ |

—ಓಂ—

—ಶ್ರೀ ವೇಮನ ತತ್ವಗಳು—

ಲ

ಲೋಹ ಮುರಿಯಲದನು - ಕಾಸಿ ಬೆಸೆಯಲ್‌ಬಹುದು
ಮನಸು ಮುರಿದ ಮೇಲೆ - ಬೆಸೆಯಲಹುದೆ ?
ಜನಗಳಿದ ನರಿಯುತ್ತಿ - ಜಾಣರಾಗಿರ್ಪುದೈ
ವಿಶ್ವತೋಭಿ ರಾಮ - ಕೇಳು ವೇಮಾ | ೭೫೧ |

ಲವಣ ವಿಲ್ಲದಿರ್ಪ - ಸಾರದು ನಿಸ್ಸಾರ
ತೊವ್ವೆಯಿಲ್ಲ ದೂಟ - ತಿಂಡಿ ಕಾಟ
ಸಾಲವಿಲ್ಲದವನು – ಶೀಲ ಸಂಪನ್ನನು
ವಿಶ್ವತೋಭಿ ರಾಮ - ಕೇಳು ವೇಮಾ | ೭೫೨ |

ಲಂಕೆ ಪೋಗುವಾಗ - ಲಂಕಾಧಿಪತಿ ರಾಜ್ಯ
ಮೆಲ್ಲ ಕಪಿಯ ಸೇನೆ – ಯಾ ಕ್ರಮಿಸಿತು
ಕೇಡು ಗಾಲದಲ್ಲಿ - ಕೆಡಿಸಲ್ಪನೆ ಸಾಕು
ವಿಶ್ವತೋಭಿ ರಾಮ - ಕೇಳು ವೇಮಾ | ೭೫೩ |

ಕಂ|| ಲೋಕಮೆ ತನ್ನಂ ಛೀಯೆನೆ ।
ಬೇಕಾಗಿಯೆ ಕೇಡ ಬಗೆವನಧಮಂ ನಿಕ್ಕಂ ||
ಏಕತ ದೊಳರಿಯ ಧರ್ಮವಿ ।
ವೇಕಂ ಕಾಕಾಳಿಯರಿವುದೇಂ ? ಸತ್ಕಾರ್ಯಂ || | ೭೫೪ |

ಲಲಿತ ಶಿವತತ್ವ ಪದದೋಳ್ ।
ಕಲಿತಿಹ ಶಿವಯೋಗಿ ಯೇಕೆ ಕಲೆವಂ ಜಗದೋಳ್ ||
ಜಲ ಬಿಂದು ಮುತ್ತದಾಗುತೆ ।
ಕಲೆವುದೆ ನೊಡಲಂತೆ ನೀರೊಳೇನದು ವೇಮಾ || | ೭೫೫ |

—ಓಂ—

—ಶ್ರೀ ವೇಮನ ತತ್ವಗಳು—

ಗೀ|| ಲೆಕ್ಕ ವಿಲ್ಲದಾಶೆ - ಲೀನ ವಾಗಿರುತಿರೆ
ದಿಕ್ಕು ತಪ್ಪಿ ನರನು - ತಿರುಗುತಿಹನು
ಸಾಯಿಯಂಥ ಮನವು - ನಿಲುವುದೇ ನೋಂದೆಡೆ
ವಿಶ್ವತೋಭಿ ರಾಮ - ಕೇಳು ವೇಮಾ | ೭೫೬ |

ವ

ಕಂ|| ವಿಷಯಾ ಸಕ್ತಿ ಯೊಳಿರ್ದರು ।
ವಿಷಯಗಳಂ ಸ್ಮರಿಸದಿರ್ಪನ ನಿಶಂ ಮನದೊಳ್ ॥
ವಿಷ ಸಂಸಾರ ಮಿದೆನ್ನುತೆ ।
ವಿಷಯಂಗಳನೆಲ್ಲ ಗೆಲ್ವ ವೇಮಣ್ಣನು ತಾಂ ॥ | ೭೫೭ |

ಗೀ|| ವಸ್ತು ದೊರೆವವರೆಗು - ದೀಪವು ವಶ್ಯಕಂ
ವಸ್ತು ದೊರೆತ ಮೇಲೆ - ದೀಪ ವೇಕೆ ?
ದೇವತಾನಾದೊಡೆ - ದೇಹಮಿನ್ನೇತಕ್ಕೆ
ವಿಶ್ವತೋಭಿ ರಾಮ - ಕೇಳು ವೇಮಾ | ೭೫೮ |

ವಾಕ್ಕಿನಲ್ಲಿ ಗುರುವು - ವಾಗ್ತತ್ವದೊಳು ಗುರುವು
ಕತ್ತಲಲ್ಲಿ ಗುರುವು - ಕಾಣಿಸುವನು
ಸಕಲ ಜಗಕೆ ಗುರುವೆ - ಯಾಧಾರನಾಗಿರ್ಪ
ವಿಶ್ವತೋಭಿ ರಾಮ - ಕೇಳು ವೇಮಾ | ೭೫೯ |

ಕಂ|| ವೇಮಣ್ಣ ನೊರೆದ ವೇದ ವ ।
ತಾಮಸ ದಿಂದಲ್ಲವೆಂಬ ಬಾಯಿಗೆ ಗಾಲಂ ॥
ಪ್ರೇಮದಿ ಭೇದಂ ತೊಲಗಿಸಿ ।
ಸೌಮನ ದೀಕ್ಷಿಪಗೆ ಮುಕ್ತಿ ತಪ್ಪದು ವೇಮಾ ॥ | ೭೬೦ |

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ವೇಮಣ್ಣ ಯೋಗಿಯಿಂ - ಪೆರತು ಯೋಗಿಯು ಮಿಲ್ಲ
ರಾಮ ಚೆಂದ್ರನಿಗಿಂತ - ರಾಜನಿಲ್ಲ
ಆಂಜನೇಯನಿಗಿಂತ - ಲಮಿತ ಭಕ್ತನುಮಿಲ್ಲ
ವಿಶ್ವತೋಭಿ ರಾಮ - ಕೇಳು ವೇಮಾ | ೭೬೧ |

ವ್ರತಗಳೆಷ್ಟಾದರುಂ - ನಿಜಮದರೊಳಗಿಲ್ಲ
ಸತ್ಯಮರಿತ ನರನೆ - ನಿತ್ಯಯೋಗಿ
ವ್ರತಗಳಲ್ಲಿ ಮುಕ್ತಿ - ಬೆದಕಿದೊಡಿಲ್ಲವು
ವಿಶ್ವತೋಭಿ ರಾಮ - ಕೇಳು ವೇಮಾ | ೭೬೨ |

ಸೀ॥ ವಿಜ್ಞಾನ ದೃಷ್ಟಿಯಿಂ ವಿಶ್ವವು ನಿನಗೆಲ್ಲ
ಪರಮಾಣುವಾಗಿ ತೋರುವುದು ನಿಕ್ಕಂ
ಅಜ್ಞಾನ ದೃಷ್ಟಿಯಿಂ ಸರ್ವವು ನಿಜವೆಂದು
ಕಾಣುತಲಿರ್ಪುವು ಕ್ರಮದೊಳೈದೆ
ಸುಜ್ಞಾನ ದೃಷ್ಟಿಯಿಂ ಸುಖಕರ ಮಾಗಿಹ
ಸಕಲವು ತಾನೆಂದು ತಿಳಿಯುತಿಹುದು
ಇಷ್ಟು ಮಾರ್ಗಂಗಳನೇಕ ರೀತಿಲಿ ನೋಳ್ಪ
ಯೋಗಿಗೆ ಶೂನ್ಯಮದಾಗಿ ತೋರ್ಕುಂ

ಗೀ॥ ವಿಮಲ ಬೋಧೆಯೊ - ಳೆರಡು ತತ್ವಮ ದೊಳಿಹುವು
ಕುಮತ ವಾದಗಳ್ ನಶಿಸುತೆ - ಕ್ರಮ ಪಡುವುವು
ಚಿತ್ತ ಶುದ್ಧಾ ಮನಸ್ಕ - ಮಾಗುತ್ತೆ ಬೆಳಗು
ತಾನುಹಾ ವಸ್ತು ಮಹಿಮೆಯು - ಪರಮ ವೇಮಾ | ೭೬೩ |

—ಓಂ—

—ಶ್ರೀ ವೇಮನ ತತ್ವಗಳು—

ವರ್ಣಾ ಶ್ರಮಂಗಳಿಗೆ – ವದರ್ವರು ಗುರುವೆಂದು
ಮರಣ ಮರಿಯದಿರ್ಪ – ಮರುಳರವರು
ಗುರುವೆಂದು ಪೇಳಲು – ಗುರುತಿಲ್ಲ ವೆಲ್ಲಿಯುಂ
ವಿಶ್ವತೋಭಿ ರಾಮ - ಕೇಳು ವೇಮಾ | ೭೬೪ |

ವಿಟನು ಕೂಡಿ ಬಿಟ್ಟ - ಸೂಳೆಯು ಮೋಹದಿ
ದೀನ ವಿಟನರ್ದೋರ್ವ – ತಿರುಗುತಿರ್ಪ
ಕೆರದ ಗುಂಪನಾಯಿ – ಕಂಡ ವ್ರೊಲಾಡುದು
ವಿಶ್ವತೋಭಿ ರಾಮ - ಕೇಳು ವೇಮಾ | ೭೬೫ |

ವಿಪ್ರರೆಲ್ಲರು ಸೇರಿ - ಹುಚ್ಚು ಕೂಗನು ಕೂಗಿ
ಸತಿ ಪತಿಗಳ ಮಾಡಿ – ಸಮ್ಮತದೊಳು
ನೆರೆ ಮುಹೂರ್ತವ ಮಾಡೆ – ಮುಂಡೆ ಯೆಂತಾದಳೈ
ವಿಶ್ವತೋಭಿ ರಾಮ – ಕೇಳು ವೇಮಾ | ೭೬೬ |

ವಿಶ್ವವ ನಡೆಸುವ – ವಿಶ್ವೇಶ್ವರನು ಮಿರಲ್
ಬ್ರಾಹ್ಮಣರಿಗದೆಂತು – ಘನತೆ ಬಂತು
ವನದಿಹ ಕೋತಿಯು - ವಸುಧೆ ಯನ್ನಾಳ್ವುದೇ ?
ವಿಶ್ವತೋಭಿ ರಾಮ – ಕೇಳು ವೇಮಾ | ೭೬೭ |

ವಿಪ್ರ ಶ್ರೇಷ್ಠರೆಂದು - ವೇದಗಳೋದುತ್ತೆ
ಪ್ರಾಕೃತರನು ನೋಡಿ – ಪರಿಹಸಿಪರು
ಧರಣಿ ಸುರನಿಗಿಂತ - ದಾಸನ ಮತ ಹೆಚ್ಚು
ವಿಶ್ವತೋಭಿ ರಾಮ - ಕೇಳು ವೇಮಾ | ೭೬೮ |

—ಓಂ—

—ಶ್ರೀ ವೇಮನ ತತ್ವಗಳು—

ವೇಮಗಿಂತ ವಿಷವು - ಹುಚ್ಚು ಕಳಿಂಗವು
ಹಾವಿಗಿಂತ ವಿಷವು – ಪ್ರಥಮ ಶಾಖೆ
ಶಾಖೆಗಿಂತ ವಿಷವು – ಕರಿಯ ಹಾರುವ ನಿಕ್ಕಂ
ವಿಶ್ವತೋಭಿ ರಾಮ - ಕೇಳು ವೇಮಾ | ೭೬೯ |

ಕಂ|| ವಿಶ್ವೋತ್ಪತ್ತಿಗೆ 'ಕಮಲಜ' |
ವಿಶ್ವವ ರಕ್ಷಿಸಲು ಬೆಳೆಸಲಾಹರಿ, ಮತ್ತಂ ||
ವಿಶ್ವವಿ ನಾಶಕೆ 'ಹರ, ತಾಂ |
ವಿಶ್ವೇಶರ್ಗಿಂತು ಬಿರುದುಗಳ್ನಿಜ ವೇಮಾ | ೭೭೦ |

ಗೀ|| ವೇದ ಶಾಸ್ತ್ರಗಳನ್ನು – ಓದಿ ಕೇಳಿದೊಡೇನು
ಬರಿದೆ ತಿರುಗಿ ಸಾವ – ರೆಲ್ಲರಂತೆ
ಬ್ರಹ್ಮ ಮಹಿಮೆ ತಿಳಿದು – ಬದುಕುವುದು ಚಿತವು
ವಿಶ್ವತೋಭಿ ರಾಮ – ಕೇಳು ವೇಮಾ | ೭೭೧ |

ವೇಷಧಾರಿಗೆಂದು - ವಿಶ್ವಾಸ ಕೊಡದು
ವೇಷವೆಷ್ಟೊ ದೋಷ ಕಾರಿಯಲ್ತು ?
ರಟ್ಟು ಮಾಡಲಿಲ್ಲೆ ರಾವಣ ವೇಷವು
ವಿಶ್ವತೋಭಿ ರಾಮ – ಕೇಳು ವೇಮಾ | ೭೭೨ |

ವಿತ್ತ ಹೀನನಾದ ವೇಳೆಯೊಳ್ – ತಾಯಿಯು
ಸತಿಯು ಸುತರು ಹಿತರು – ಬಂಧು ಜನರು
ಸರ್ವರು ಶತೃಗ – ಳೀತಕ್ಕೆ ಕೆಡುವಿರಿ
ವಿಶ್ವತೋಭಿ ರಾಮ – ಕೇಳು ವೇಮಾ | ೭೭೩ |

—ಓಂ—

—ಶ್ರೀ ವೇಮನ ತತ್ವಗಳು—

ವಿಷ್ಣು ಗರ್ಭದಲ್ಲಿ - ನೆಲಸಿರೆ ಲೋಕಗ
ಳಲ್ಲಿ ಸಕಲ ಜೀವ - ರಾಸಿಯಿಹವು
ಪುನಃಜಪವರ್ಗಮೆಲ್ಲ - ವೈಷ್ಣವರಲ್ಲವೆ ?
ವಿಶ್ವತೋಭಿ ರಾಮ - ಕೇಳು ವೇಮಾ | ೭೭೪ |

ಕಂ|| ವಿಷಯಗಳೊಳ್ಬೆರೆವ ಲಸವೆ |
ವಿಷಮುಂಟಿಡ ಕತವೆ ತಿಳಿವು ದುತ್ತಮ ಧರೆಯೊಳ್ ||
ವಿಷಸಮ ಮಾಯಾ ಸುಖಮಂ |
ವಿಷಯಗಳೊಳ್ಬೆರ ಸಧಿಃಹರು ವೇತ್ತರು ವೇಮಾ || | ೭೭೫ |

ಗೀ|| ವಸ್ತು ವಿದ್ದ ಸ್ಥಳದಿ - ಶೋಧಿಸಲಪ್ಪುದು
ವಸ್ತು ವಿಲ್ಲ ದೆಡೆಯೊಳ್ – ಬೆದಕ ಲೇಕೆ
ಅಂಜನ ಮಿರದಿರ - ಲಾವಸ್ತು ದೊರೆಗುಮೇ ?
ವಿಶ್ವತೋಭಿ ರಾಮ - ಕೇಳು ವೇಮಾ | ೭೭೬ |

ವಿಜಯನಾದ ನರನು - ಬಿಲ್ಲು ಕೈಗೊಳಲಾಗ
ಕುಜನನಾದ ನರರು ಬಿದ್ದರಿಳೆಗೆ
ಭಜನೆ ಮಾಡೆ ಘನನು - ಪಾಲಿಸದಿರ್ಪನೇ ?
ವಿಶ್ವತೋಭಿ ರಾಮ – ಕೇಳು ವೇಮಾ | ೭೭೭ |

ಕಂ|| ವೇಮನ ತತ್ವಂಗಳನಂ |
ಪ್ರೇಮ ದೊಳೋದಿದ ಮಹಾ ಜನಂಗಳು ನಿಚ್ಚಂ ||
ಸೋಮಧರ ನಾಮದೇವನ |
ಸಾಮಿಪ್ಯಂ ಸೇರುತಿರ್ಪರಿದು ದಿಟ ವೇಮಾ || | ೭೭೮ |

—ಓಂ—

—ಶ್ರೀ ವೇಮನ ತತ್ವಗಳು—

ರಗಳೆ- ವೇದಾತೀತನು - ವೇಮನನಯ್ಯಾ !
ವೇಮನ ನುಡಿಗಳು - ವೇದಗಳಯ್ಯಾ !
ವಾದಿಪ ಬಾಯಿಗೆ - ಬೂದಿಯಿದಯ್ಯಾ !
ಅಲಸದೆ ಓದಲು – ಕೇಳುವರಯ್ಯಾ !
ಕೇಳಿದವರು – ತಿಳಿಯುವರಿದನಯ್ಯಾ !
ತಿಳಿದ ನರರು - ನುಡಿಯರು ತಾವಯ್ಯಾ !
ಪೇಳಲಾರು ಮಾಡರು–ಕೇಳಯ್ಯಾ !
ಮಾಡಿದವರು - ಸಿದ್ಧರು ಕೇಳಯ್ಯಾ !
ಸಿದ್ಧರ ಮಾತು - ಪ್ರಸಿದ್ಧಮದಯ್ಯಾ !
ಜಾತರ ಜಾತರ – ಜಾತರುಮಯ್ಯಾ !
ಜಾತರ ತೀತನು – ವೇಮನನಯ್ಯಾ ! | ೭೭೯ |

ಗೀ|| ವಾದ ಮಾಡದಿರ್ಪ - ನಾರ ಸಂಗಡಲು ತಾಂ
ಸೇರನಾರ ಕೂಡೆ - ಕೇಡೆಣಿಸನು
ಜ್ಞಾನಿಯಾದ ಸಾಧು – ಘನತೆಯೊಂದನೆ ನೋಳ್ಪ
ವಿಶ್ವತೋಭಿ ರಾಮ - ಕೇಳು ವೇಮಾ | ೭೮೦ |

ವಿದ್ಯೆ ಇಲ್ಲದಿರಲು - ವಿತ್ತ ವಿಲ್ಲದೆ ಇರಲು
ಮೂಢನಿರಲು - ತುದಿಗೆ - ಮೂಕನಿರಲು
ಇಷ್ಟ ಬಂಧು ವಾದರುಂ – ಕಷ್ಟ ತಪ್ಪದು
ವಿಶ್ವತೋಭಿ ರಾಮ - ಕೇಳು ವೇಮಾ | ೭೮೧ |

—ಓಂ—

—ಶ್ರೀ ವೇಮನ ತತ್ವಗಳು—

ವಿಶ್ವ ರೂಪವ - ಮನದೊಳು - ತಿಳಿದು ನೋಡಿ
ಹ್ರಸ್ವ ಮಾಡುತೆ - ಕಾಮ ವಿಕಾರವನ್ನು
ಸ್ವಸ್ವ ರೂಪವ ನೋಡಲು – ಪ್ರಾಜ್ಞನಪ್ಪಂ
ವಿಶ್ವತೋಭಿ ರಾಮ - ಕೇಳು ವೇಮಾ | ೭೮೨ |

ಕಂ॥ ವಿಧಿ ಕೃತಮೆಂಬರು ಸರ್ವಂ |
ವಿಧಿಗುಂ ವಿಧಿಯೋರ್ವನವನೆ ವಿಷ್ಣು ಸ್ವರೂಪಂ ॥
ವಿಧಿ ಯಾವನೆಂದು ಪೇಳ್ವರಿ |
ವಿಧಿಯಾ ಬ್ರಹ್ಮಸ್ವರೂಪ ಮರಿವುದು ವೇಮಾ ॥ | ೭೮೩ |

ಗೀ॥ ವ್ಯಾಧಿ ಪೀಡನ ಮದು - ವ್ಯಸನ ಸಂತಾಪವು
ದುಃಖ ಸಂಭವ ಮದು – ಭಯ ಪಡಿವುದು
ಇಲ್ಲದವರು ಇರ್ಪರೇ – ನೆಂದಿಗಾದಡುಂ
ವಿಶ್ವತೋಭಿ ರಾಮ – ಕೇಳು ವೇಮಾ | ೭೮೪ |

ವೇದ ಗೀತವ ಮಿಂಚುತೆ - ಬೆಳಗು ವಾತ
ನಾಡು ಬೀಡು - ಕಳಾಯುತ – ನಾ ಗಿರುವನ
ಸಾಧನದಿ - ಸೇರುವುದೆ ವರ - ಸಂಮತ ಮದು
ಜನ್ಮ ಸಾರ್ಥಕ - ಮಾಗಳೇ - ಯಹುದು ವೇಮಾ | ೭೮೫ |

ವೇದ ಸಾರಮೆಲ್ಲ - ಬೆದಕಿ ತಾ ನೋಡುತ್ತ್ತೆ
ಲೀನವಾದ ಬ್ರಹ್ಮ – ರೀತಿ ಯರಿತು
ಪರವ ನೋಡುವಾತ - ಪರಮಾತ್ಮ ನಾಗುವಂ
ವಿಶ್ವತೋಭಿ ರಾಮ - ಕೇಳು ವೇಮಾ | ೭೮೬ |

—ಓಂ—

—ಶ್ರೀ ವೇಮನ ತತ್ವಗಳು—

ವಿಟನ ನೋಡಿದಾಗ – ಮಟಮಾಯ ಮಾಳ್ಪಳು
ಕಿಡಿಕಿಯಲ್ಲಿ ಸೇರಿ – ಕೇಕರಿಸಳು
ಕುಟಿಲೆ ವೇಶ್ಯೆಯನ್ನು – ಪರಿಕಿಸಲಾಗದೈ
ವಿಶ್ವತೋಭಿ ರಾಮ - ಕೇಳು ವೇಮಾ | ೭೪೭ |

ವೇದ ವಿದ್ಯೆಯೆಲ್ಲ – ವೇಶ್ಯಾ ಸಮಾನವು
ಭ್ರಮೆಯುಗೊಳಿಸಿ – ದಿಕ್ಕು ತೋರಗೊಡದು
ಜ್ಞಾನ ವಿದ್ಯೆಯೊಂದೆ – ಕುಲಕಾಂತೆಯಂಥದು
ವಿಶ್ವತೋಭಿ ರಾಮ - ಕೇಳು ವೇಮಾ | ೭೪೮ |

ಕಂ॥ ವೇದಾಂತ ವೇದ್ಯರೆಂದು ವಿ।
ವಾದಂ ಗಳಿಗೈದೆ ಮುಂದೆ ಬರ್ಬರು ಕೆಲಬರ್॥
ಸಾಧುಗಳಲ್ಲೆಂದುಸಿರಲ್।
ಭೇದ ಗುಣಂಗಳವೆ ಗುಡುತು ಕೇಳ್ವೆ ವೇಮಾ | ೭೪೯ |

ವಿದ್ಯೆಯೊಳುತ್ತಮ ನೀತಿ ಸು।
ವಾದ್ಯದೊಳಾ ವೀಣೆ ಮತ್ತಮಾರಸಿಕರ್ಗಂ॥
ಹೃದ್ಯಂ ತಾನೆಂದಿಗುಮುಂ।
ವಿದ್ಯೆಯೊಳಾ ಬ್ರಹ್ಮವಿದ್ಯೆ ವಿದ್ಯೆಯು ವೇಮಾ | ೭೫೦ |

ಗೀ॥ ವಿಶ್ವನಾಥನಲ್ಲಿ - ವಿಪ್ರರ ಬಳಿಯಲ್ಲಿ
ವಿಬುಧರಲ್ಲಿ ತತ್ವ – ವೇತ್ತರಲ್ಲಿ
ಭಕ್ತಿ ವಿಹೀನನು – ಪಾಪಾತ್ಮನೆನಿಳೆಯೊಳು
ವಿಶ್ವತೋಭಿ ರಾಮ - ಕೇಳು ವೇಮಾ | ೭೫೧ |

—ಓಂ—

—ಶ್ರೀ ವೇಮನ ತತ್ವಗಳು—

ಸೀ॥ ವಾತ ಪೈತ್ಯ ಶ್ಲೇಷ್ಮ – ವೊಂದೆ ಸಮವಾಗಿಯು
ಶತೃವಂ ಮಿತ್ರರಂ – ಸಮವೆನಿಸಲು
ಸುರಸಾನ್ನ ಔಷಧಿ – ವೊಂದಾಗಿ ಮತ್ತಮಾ
ಸ್ವರ್ಣ ಲೋಷ್ಟಂಗಳ – ನೇಕವಾಗಿ
ಜಾತಿಗಳೆಲ್ಲ ಸಮನ್ವಯ – ವಾಗಿಯು
ಕರ್ತ ಧರ್ಮಂಗಳ – ನೇಕವಾಗಿ
ಘನ ಸುಖದುಃಖಂಗ – ಳೆಲ್ಲವನ್ನೊಂದಾಗಿ
ನೆರೆ ದಿವಾರಾತ್ರಿಗ – ಳೊಂದೆಯಾಗಿ

ಗೀ ॥

ತಿಳಿದು ಆತ್ಮದಲ್ಲಿ - ದೇದೀಪ್ಯನಾಗಿಯು
ತೇಜದಲ್ಲಿ ಶಿವನ - ತಿಳಿಸುತೈದೆ
ಮನದಿ ಶಿವನ ನಿಲಿಸಿ - ಮಗ್ನನಾಗುವುದಯ್ಯ.
ವಿಶ್ವತೋಭಿ ರಾಮ – ಕೇಳು ವೇಮಾ । ೭೯೨ ।

ವನದಿ ಚರಿಸುತಿರ್ಪ - ವರಮೌನಿಯಾದೊಡಂ
ಮನವು ಕುದುರದಿರಲು - ಮಮತೆಯುಳಿದು
ಕೆಡುವನೆನಲು ಮೂರ್ಖ - ಕೆಡುವುದಾಶ್ಚರ್ಯಮೇಂ ?
ವಿಶ್ವತೋಭಿ ರಾಮ - ಕೇಳು ವೇಮಾ । ೭೯೩ ।

ವಾರಕಾಂತೆಗುಂಟೆ - ವಾವೆ ವರಸೆಗಳು
ಚಾಡಿಕೋರಗುಂಟೆ - ಸತ್ವಗುಣವು
ಮೂಢಮತಿಗಳಿಗುಂಟೆ - ನಿಶ್ಚಯ ಜ್ಞಾನವು
ವಿಶ್ವತೋಭಿ ರಾಮ - ಕೇಳು ವೇಮಾ । ೭೯೪ ।

—ಓಂ—

—ಶ್ರೀ ವೇಮನ ತತ್ವಗಳು—

ವಾದ ಬುದ್ಧಿಯಿಂದ - ವಾದಗಳಾಡಲು -
ಮೇದಿನಿಯೊಳು ತವಕ - ಪಡುತಲಿಹರು
ಕರ್ಮ ಮಾರ್ಗದಿಂದೆ - ಕಾಣವು ಸತ್ಯಮಂ
ವಿಶ್ವತೋಭಿ ರಾಮ - ಕೇಳು ವೇಮಾ | ೭೯೫ |

ಶ

ಕಂ॥ ಶಿವ ಕವಿಗಳ್ಗಂ ಮತ್ತಂ ।
ನವಕವಿಗಳ್ಗಿರ್ದೆ ಭಕ್ತಿ ತತ್ವಂಗಳಿಗುಂ ॥
ಶಿವಲೋಕ ಪ್ರಮಥರಿಗುಂ ।
ಶಿವನಿಗು ಗುರುವಿಂಗು ಶರಣು ಮಾಳ್ಪುದು ವೇಮಾ | ೭೯೬ |

ಗೀ॥ ಶಿಲೆಯ ನೋಡಿ ನರರು – ಶಿವನೆಂದು ತಿಳಿವರು
ಶಿಲೆಯು ಶಿಲೆಯೆ ಹೊರತು - ಶಿವನುಮಲ್ಲ
ತನ್ನೊಳಿರ್ಪ ಶಿವನ - ತಾನೇಕೆ ತಿಳಿಯನು
ವಿಶ್ವತೋಭಿ ರಾಮ – ಕೇಳು ವೇಮಾ | ೭೯೭ |

ಶೈವ ವೈಷ್ಣವಾದಿ - ಷಣ್ಮತಗಳಿಗೆಲ್ಲ
ದೇವನೊಬ್ಬನೆಂದು - ತಿಳಿಯದಿಹರು
ತಮಗೆ ಭೇದವಾಗೆ - ತತ್ವಕ್ಕೆ ಭೇದವೇಂ ?
ವಿಶ್ವತೋಭಿ ರಾಮ - ಕೇಳು ವೇಮಾ | ೭೯೮ |

ಶೈವ ದಾರ ತಂದು - ಬಂಧಿಸಿ ಕಟ್ಟಲು
ಲಿಂಗನೇನು ಕಳ್ಳ - ತನವ ಮಾಡ್ದ
ಆತ್ಮ ಲಿಂಗನನ್ನು - ಅರ್ಚಿಸಲಾರರು
ವಿಶ್ವತೋಭಿ ರಾಮ - ಕೇಳು ವೇಮಾ | ೯೭೯ |

—ಶ್ರೀ ವೇಮನ ತತ್ವಗಳು—

ಶತೃವರ್ಗಮರಸಿ - ಕ್ಷಿಪ್ರದೊಳ್ ಖಂಡಿಸಿ
ಮಿತ್ರವರ್ಗಕ್ಕೆಲ್ಲ - ಮೇಲು ಮಾಡಿ
ಪಿರಿದು ಬೆಳಕು ನೋಡಿ - ಪಿಂಡದ ಮಧ್ಯದಿ
ಅರ್ಥಿ ನಿಲ್ಲಿಸುವನೆ - ಹರನು ವೇಮಾ | ೮೮೦ |

ಶಿಲೆಯ ಪ್ರತುಮೆ ಮಾಡಿ - ಅಂಧಕಾರದೊಳಿಟ್ಟ
ಮುಗಿವುದೇಕೆ ಹುಚ್ಚ - ಮೂರ್ಖ ಜನರೆ
ಜೀವದೊಳಲ್ಲದೆ – ಶಿಲೆಗಳೊಳೇನಿದೆ ?
ವಿಶ್ವತೋಭಿ ರಾಮ – ಕೇಳು ವೇಮಾ | ೮೮೧ |

ಶೂದ್ರರೇಂದು ಭುವಿಯೊಳ್ - ಶೂದ್ರರ ನಿಂದಿಪ
ಸ್ವಾರ್ಥ ಪರರ ನೋಡೆ - ಸೋಜಿಗಮದು
ದ್ವಿಜನು ತಾನೆನ್ನಲು – ದ್ವಿಜನವನೆಂತಾಗ್ವ
ವಿಶ್ವತೋಭಿ ರಾಮ – ಕೇಳು ವೇಮಾ | ೮೮೨ |

ಶೂದ್ರರಲ್ಲಿ ಪುಟ್ಟ – ಶೂದ್ರರ ದೂಷಿಸಿ
ದ್ವಿಜರು ಎಂಬ ಪೆಸರು - ನಿಜವ ಮಾಡೆ
ಮನಸು ನಿಲ್ಲಿಸದವ - ಮತ್ತೆ ತಾಂ ಶೂದ್ರನೈ
ವಿಶ್ವತೋಭಿ ರಾಮ - ಕೇಳು ವೇಮಾ | ೮೮೩ |

ಸೀ|| ಶ್ರವಣಗಳ್ಕೋರ್ವವು ಸಂಗೀತ ಸಾಹಿತ್ಯ
ಶಾಸ್ತ್ರಂಗಳಾದಿಯಾದಿತರವನ್ನು
ಚರ್ಮವು ಕೋರ್ವ್ರಡು ಶೈತ್ಯೋಷ್ಣ, ಮೃದು,
ಕಠಿಣಂಗಳ ಸ್ಪರ್ಶಮಂ ಬಿಡದೆ ಸತತ

—ಓಂ—

—ಶ್ರೀ ವೇಮನ ತತ್ವಗಳು—

ಕಂಗಳು ಕೋರ್ವುವು ಪ್ರೀತಿಯೊಳ್ಬಣ್ಣದ
ಚಿತ್ರವಿಚಿತ್ರ ರೂಪಂಗಳನ್ನು
ನಾಲಗೆ ಕೋರ್ವುದು ರುಚಿಗಳನಾವಗಂ
ಒಗರು, ಕಾರಂ, ಕಹಿ, ಉಪ್ಪು, ಸಿಹಿಯಂ

ಗೀ॥

ಮೂಗು ಬಯಸುವುದರ್ಥಿಯೊಳ್ ಗಂಧವನ್ನು
ಕಿವಿಯು, ಕಂಗಳು, ಚರ್ಮವು, ಜಿಹ್ವೆ, ಮೂಗು
ಇಷ್ಟು ಉಂಟಾಗಿ ಪೊತ್ತಿಹುದೀ ಶರೀರಂ
ತನ್ನ ತಿಳಿಯಲು ಘಟಿಪುದು ನಿಕ್ಕಂ ವೇಮಾ । ೮೦೪ ।

ಗೀ॥ ಶಿವ ಮತ ಮಾಡೊಡಂ – ವಿವರಿಸೆ ಗುರು ಮುಖ್ಯ
ಹರಿಮತ ಮಾಡೊಡುಂ – ತಿಳಿಸೆ ಗುರುವೆ
ಗುರುವ ತಿಳಿಯದಿರ್ಪ – ಗುಣಹೀನನೆಂಬಲ್ಲ
ವಿಶ್ವತೋಭಿ ರಾಮ – ಕೇಳು ವೇಮಾ । ೮೦೫ ।

ಶಿವನ ಭಕ್ತರೆಲ್ಲ – ಬೂದಿಯಾದರು ಸುಟ್ಟು
ವಾದ ಮೇಕೆ ದೈವ – ಭೇದಮೇಕೆ
ವಿಷ್ಣು ಭಕ್ತರೆಲ್ಲ – ಮಣ್ಣು ಪಾಲಾದರೈ
ವಿಶ್ವತೋಭಿ ರಾಮ - ಕೇಳು ವೇಮಾ । ೮೦೬ ।

ಶಿವನ ಮೇಲೆ ಮನವು – ಸ್ಥಿರಮಾಗಿ ನಿಲ್ಲಲು
ಆಗದಿದ್ದ ಮುಕ್ತಿ – ಯಹುದು ! ಅಹುದು !!
ಶಿವನ ಮೇಲೆ ಭಕ್ತಿ – ಎಳ್ಳನಿತು ತಪ್ಪಿದೊ
ಡಾಗ ದಾಗದಯ್ಯ - ಮುಕ್ತಿ ವೇಮಾ । ೮೦೭ ।

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಶಿವ ಗುಡಿಗೆ ದೀಪವಿಡಲಾ ।
ಶಿವಮಂದಿರವೆಲ್ಲ ಬೆಳಗುತಿರ್ಪುದು ಮದರಿಂ ॥
ಶಿವಯೋಗಿ ಮಹಿಮೆ ದೀಪಂ ।
ಭುವನಂಗಳನೆಲ್ಲ ಬೆಳಗುತಿರ್ಪುದು ವೇಮಾ ॥ । ೮೦೮।

ಗೀ॥ ಶಿಲೆಯು ಬಸವಗೈದೆ - ಶರಣೆಂದು ಮುಗಿವರು
ಜೀವ ಬಸವನನ್ನು - ಗುದ್ದುತಿಹರು
ಬಸವನ ಭಕ್ತರು - ಪಾಪಿಗಳಲ್ಲವೇ ?
ವಿಶ್ವತೋಭಿರಾಮ - ಕೇಳು ವೇಮಾ । ೮೦೯ ।

ಶ್ರವಣ ಪುಟಗಳಿರ್ದುಂ - ಸಾರ್ಥಕಮೇನಯ್ಯ !
ಕೇಳಬೇಕು ಹಿರಿಯ - ರಾಡಿದುದನು
ಕೇಳಿ ಕೇಳಿ ನೀನೆ — ಪರಿಶುದ್ಧನಾಗುವೆ
ವಿಶ್ವತೋಭಿ ರಾಮ - ಕೇಳು ವೇಮಾ । ೮೧೦ ।

ಶಿಲೆಯ ಪೂಜೆ ಮಾಡಿ - ದೇಶ ದೇಶಂ ತಿರುಗಿ
ಕಾಣಲಾರ ಮುಕ್ತಿ - ಕಾಂತೆಯನ್ನು
ಶಾನಿರ್ಪ ಸ್ಥಳದಲ್ಲೆ — ದೈವಮೇನಿಲ್ಲವೇ ?
ವಿಶ್ವತೋಭಿ ರಾಮ - ಕೇಳು ವೇಮಾ । ೮೧೧ ।

ಶಾಂತಿ ಮನಸ್ಸಿನಿಂ — ಶೀತಲನಾಗಿರ್ದು
ಭಾಸ ಮಾನನವನೆ - ಪರಮ ಯೋಗಿ
ಈಶನನ್ನು ಸೇರಿ - ಮುಕ್ತಿಯಂ ಪೊಂದುವ
ವಿಶ್ವತೋಭಿ ರಾಮ - ಕೇಳು ವೇಮಾ । ೮೧೨ ।

—ಓಂ—

—ಶ್ರೀ ವೇಮನ ತತ್ವಗಳು—

ಶಿಲೆಯಾದ ಹಲ್ಯೆ ತಾಂ - ರಾಮಪದ ಸೋಂಕುತ್ತೆ
ನಾರಿಯಾದಳೆಂದು – ನುಡಿವರಿಳೆಯೊಳ್
ಮಾಡ್ದ ಕರ್ಮವಿಂತು – ಯಾರಿಗುಂ ತಪ್ಪದು
ವಿಶ್ವತೋಭಿ ರಾಮ - ಕೇಳು ವೇಮಾ | ೮೧೩ |

ಶಕ್ತಿಯಿರ್ಪ ಕಾರ್ಯ – ಸರಿಯಾಗಿ ನಡೆವುದು
ಭಕ್ತಿ ಇರ್ಪ ಪೂಜೆ – ಫಲ ದೊರೆವುದು
ಯುಕ್ತಿಯುಳ್ಳ ಮಾತು – ಮನ್ನಿಸಲಪ್ಪುದು
ವಿಶ್ವತೋಭಿ ರಾಮ – ಕೇಳು ವೇಮಾ | ೮೧೪ |

ಸಿಡಿಲು ಬಿದ್ದ ಭೂಮಿ - ತಡ ಬಡೆಯಾಗ್ಪುದು
ಸಿಡಿಲು ಬಿದ್ದ ಮನೆಯು - ಕೆಡುವುದದುವೆ
ಸಿಡಿಲು ಬಡಿದಾತನ – ಪ್ರೇತವನೇನೆಂಬೆ
ವಿಶ್ವತೋಭಿ ರಾಮ - ಕೇಳು ವೇಮಾ | ೮೧೫ |

ಶಾರದಾಂಬೆ ವಿಧಿಯ - ಬಾಯನ್ನು ಬಡಿದಳು
ಲಕುಮಿ ಹರಿಯುರವನು - ಬಡಿದಳೈದೆ
ಚಂಡಿ ಹರನ ಶರಿರ - ದರ್ಧಮಂ ಕೊಂಡಳು
ವಿಶ್ವತೋಭಿ ರಾಮ - ಕೇಳು ವೇಮಾ | ೮೧೬ |

ಶಿವ ಮಂತ್ರವೇ ತಾನು - ಶ್ರೀಹರಿ ಮಂತ್ರವೈ
ತಿಳಿದು ತಿಳಿಯದಿಹರು - ಹುಚ್ಚು ನರರು
ದೇವನಂ ಮರೆವರು - ದೇಹಮಂ ನಂಬುತ್ತೆ
ವಿಶ್ವತೋಭಿ ರಾಮ – ಕೇಳು ವೇಮಾ | ೮೧೭ |

—ಓಂ—

—ಶ್ರೀ ವೇಮನ ತತ್ವಗಳು—

ಶಿಲೆಯೊಳ್ ರೂಪು ಮಾಡೆ - ರಾಜರು ಮುಗಿವರು
ಅದು ವಿಭವದಿ ಮೆರೆವು - ದಿಳೆಯೊಳಿಲ್ಲ
ಕರ್ತನಾವನೆಂಡು – ಕಾಣರು ಜಗದೊಳು
ವಿಶ್ವತೋಭಿ ರಾಮ – ಕೇಳು ವೇಮಾ | ೮೧೮ |

ಶಕ್ತಿ ಪೂಜೆಯಿಂದೆ - ಕೆಟ್ಟರು ಮನುಜರು
ಮುಕ್ತಿ ಮಹಿಮೆಯರಿಯ - ರಧಮರವರು
ಆದಿಶಕ್ತಿಯಿಂದಲೇ – ಕೆಡುಕಾದುದು
ವಿಶ್ವತೋಭಿ ರಾಮ - ಕೇಳು ವೇಮಾ | ೮೧೯ |

ಸ

ಕಂ|| ಸರ್ವವು ತಾನೆಂದರಿತಿಹ |
ನಿರ್ವೈರಿಗೆ ಹೊರೆತು ಮುಕ್ತಿ ದೊರೆಗುಮೆ ಪರದೊಳ್ ||
ಉರ್ವಿಯೊಳೆಲ್ಲೆಡೆಚರಿಸಲ್ |
ಪರ್ವತ ಗುಹೆ ಜಲಧಿಗಳೊಳು ನೆಲೆಸಲ್ ವೇಮಾ | ೮೨೦ |

ಸಲ್ಲದಿದೆಂದಾರೊಳ್ ತಪೆ |
ನಿಲ್ಲದೆ ತಾಂ ವಾದ ಗೈಯ್ಯುದಿರ್ಪಂ ಜಡನೋಲ್ ||
ನಿಲ್ಲಿಸೆ ಭೇದಾಭೇದಂ |
ಅಲ್ಲಿಯೆ ವೇದಾಂತ ಸಾರ ಮರಿತಂ ವೇಮಾ || | ೮೨೧ |

ಗೀ|| ಸತಿಯು ಸುತರು ಮಾಯೆ – ಸಂಸಾರವಿದು ಮಾಯೆ
ಧನವು ಘನವು ಮಾಯೆ - ತನುವು ಮಾಯೆ
ಮಾಯೆ ಗೆಲ್ಲುವವನೆ - ಮರ್ಮಜ್ಞ ಯೋಗಿಯು
ವಿಶ್ವತೋಭಿ ರಾಮ – ಕೇಳು ವೇಮಾ | ೮೨೨ |

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಸತಿಯಿಂದಲೆ ಪತಿ ಜನಿಸಿದ ।
ಪತಿಯಿಂದಲೆ ಸತಿಯು ಜನಿಸಿದಳು ಸತ್ಯಮಿದಾ ॥
ಸತಿಪತಿಗಳೆಂಬರಾರೈ ।
ಮತಿಯೊಳ್ ಚರ್ಚಿಸುತೆ ತಿಳಿವುದಿಳೆಯೊಳ್ ವೇಮಾ । ೮೨೩ ।

ಗೀ॥ ಸತಿಯು ಮಾಳ್ಪ ಕೆಡುಕು – ಪತಿಗೆ ತಪ್ಪದೆ ಬರ್ಕುಂ
ಪತಿಯು ಮಾಳ್ಪ ಪುಣ್ಯ – ಸತಿಗೆ ಅರ್ಧಂ
ಪತಿಯು ಮಾಳ್ಪ ಪಾಪ – ಸತಿಗೆ ಬರದೇತಕ್ಕೊ !
ವಿಶ್ವತೋಭಿ ರಾಮ – ಕೇಳು ವೇಮಾ । ೮೨೪ ।

ಕಂ॥ ಸ್ತ್ರೀ ತಲೆಯೊಳ್ ರುದ್ರಂಗುಂ ।
ಸ್ತ್ರೀ ಬಾಯೊಳ್ ಬ್ರಹ್ಮಗನಿಶ - ಮಾಲೋಚಿಸಲಾ ॥
ಸ್ತ್ರೀ ವಕ್ಷದೊಳಾ ಹರಿಗುಂ ।
ಸ್ತ್ರೀಯುರನಂ ತ್ಯಜಿಸರವರು ಚಿನ್ಮಯ ವೇಮಾ । ೮೨೫ ।

ಸಂಕಲ್ಪಮುಡಗಿ ತಾ ನಿ ।
ಸ್ಸಂಕಲ್ಪನೆನಿಸಿದೊಡಲ್ಲಿ ಸದ್ಗತಿ ಸಿದ್ಧಂ ॥
ಸಂಕಲ್ಪಮೆ ಬಂಧಂ ನಿ ।
ಸ್ಸಂಕಲ್ಪಮೆ ಮೋಕ್ಷಮರಿಯಲಪ್ಪುದು ವೇಮಾ । ೮೨೬ ।

ಗೀ॥ ಸಾಧು ಜನರ ನೋಡಿ – ಸಂತೋಷ ಪಡುವಾತ
ಪರರ ಮೇಲು ನೋಡಿ - ಸ್ವೈರಿಪಾತ
ಮನೆಯೊಳಿರ್ದೊಡೇನು - ಅಡವಿಯೊಳಿರ್ದೊಡೇಂ !
ವಿಶ್ವತೋಭಿ ರಾಮ - ಕೇಳು ವೇಮಾ । ೮೨೭ ।

—ಓಂ—

—ಶ್ರೀ ವೇಮನ ತತ್ವಗಳು—

ಸತಿಯು ಪೊಂದಲು ಸಲ್ಲ - ಸುತರ ಪೊಂದಲು ಸಲ್ಲ
ವ್ಯಥೆಯ ಪಡುವನವನು - ಹುಚ್ಚು ನರನು
ನೆಲದೊಳಿದ್ದಾ ಕಲ್ಲು - ತಲೆಯಲ್ಲಿ ಪೊತ್ತಂತೆ
ವಿಶ್ವತೋಭಿ ರಾಮ - ಕೇಳು ವೇಮಾ |೬೨೮|

ಸಂಧ್ಯ ಮಾಡಿದೊಡೇನು - ಜಪವ ಮಾಡಿದೊಡೇನು
ವೇದ ಶಾಸ್ತ್ರಗಳನು - ಓದಲೇನು
ಭಕ್ತಿಯಿಲ್ಲದವನು - ಬ್ರಾಹ್ಮಣನಲ್ಲವು
ವಿಶ್ವತೋಭಿ ರಾಮ - ಕೇಳು ವೇಮಾ |೬೨೯|

ಸಕಲ ವಿದ್ಯೆಯನೋದಿ - ಸಂತೋಷಪಡಬಹುದು
ಕಯ್ಯ ನೀಡಿ ಕಾಸ - ನೀಯಲಾರ
ಪರರಿಗೆನಿತಾದೊಡಂ - ಪೇಳಬಹುದದರಂತೆ
ತಾನು ನಡೆಯಲಾರ - ಧರೆಯೊಳ್ ವೇಮಾ |೬೩೦|

ಸತ್ತ ಸತ್ತನೆಂದು - ಸಾವಿಗೆ ದುಃಖಿಪ
ದೀನ ನರರ ಹುಚ್ಚು - ತಿಳಿಸಲಳವೇಂ ?
ಪ್ರಾಣದಲ್ಲಿ ಮೃತ್ಯು - ಬಂಧಗಳ್ಬಿಡುವುವೆ ?
ವಿಶ್ವತೋಭಿ ರಾಮ - ಕೇಳು ವೇಮಾ |೬೩೧|

ಕಂ|| ಸಾವೆಂಥದೊ ಹುಟ್ಟೆಂಥದು |
ಸಾವಿಗೆ ಭಯಪಡುವುದೇಕೆ ? ಜನ್ಮಕ್ಕೆ ಪೊದಲ್ ||
ಜೀವಿಗೆ ದೇಹಮದೆಲ್ಲೆಯು |
ದೀವಿಧ ಭಾವದೊಳು ಗುರಿಯಿಡುವುದೈ ವೇಮಾ |೬೩೨|

— ಶ್ರೀ ವೇಮನ ತತ್ವಗಳು —

ಗೀ॥ ಸಕಲ ತೀರ್ಥಯಾತ್ರೆ - ಸಕಲ ಯಜ್ಞಂಗಳುಂ
ತಳೆಯ ಬೊಳಿಸದಿರಲು - ಫಲಮದಿಲ್ಲ
ಮಂತ್ರ ಜಲಕ್ಕಿಂತ - ಕ್ಷೌರದ ಜಲ ಹೆಚ್ಚು
ವಿಶ್ವತೋಭಿ ರಾಮ - ಕೇಳು ವೇಮಾ | ೮೩೩ |

ಸತ್ಯವಂತರೊಡನೆ - ಸರಸವಾಡಲು ಸಲ್ಲ
ದೀನರಲ್ಲಿ ಜಗಳ - ವಾಡೆ ಸಲ್ಲ
ಭಾಗ್ಯವಂತರೊಡನೆ - ಕೂಡಿಯಾಡಲು ಸಲ್ಲ
ವಿಶ್ವತೋಭಿ ರಾಮ - ಕೇಳು ವೇಮಾ | ೮೩೪ |

ಕಂ॥ ಸದ್ಗುರು ಕೃಪೆಯಿಂದನಿಶಂ ।
ಸದ್ಗತಿ ಸಂಧಿಪ್ಪುದು ಬರಿದೆ ಎನಿತೋದಿದೊಡೇಂ ॥
ಸದ್ಗತಿ ದೊರೆಗುಮೆ ? ಧರೆಯೊಳ್
ಸದ್ಗುರುವೇ ದೈವಮೆಂದು ಸಾರೈ ವೇಮಾ | ೮೩೫ |

ಸತಿಯ ಮಾತ ಕೇಳಿ - ಸೋದರರಂ ಬಿಟ್ಟು
ಬೇರೆ ಪೋಗುವವನು - ಹುಚ್ಚು ನರನು
ನಾಯ ಬಾಲ ಪಿಡಿದು - ನದಿಯ ದಾಟುವನೆಂತು
ವಿಶ್ವತೋಭಿ ರಾಮ - ಕೇಳು ವೇಮಾ | ೮೩೬ |

ಕಂ॥ ಸಚ್ಚರಿತೆ ಲೋಕವಶ್ಯಂ ।
ಕುತ್ಸಿತಮೇ ಲೋಕನಿಂದೆ ಕೋಪಿದನಿಂಗುಂ ॥
ತುಚ್ಛದೊಳು ಹಾನಿಯಕ್ಕುಂ ।
ಮತ್ಸರವೇ ತನ್ನ ಕೆಡಿಸುವುದು ವರ ವೇಮಾ | ೮೩೭ |

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಸುಳ್ಳುಗಾರನನ್ನು – ಗ್ರಾಮಾಧಿಪತಿ ಬಲ್ಲ
ಸತ್ಯವಾಡುವವನ – ಸ್ವಾಮಿ ಬಲ್ಲ
ಮಿಕ್ಕು ತಿಂಬ ಪತಿಯು – ಹೆಂಡತಿ ಬಲ್ಲಳೈ
ವಿಶ್ವತೋಭಿ ರಾಮ - ಕೇಳು ವೇಮಾ । ೬೫೮ ।

ಸುಳ್ಳು ಗುರುವು ಪೇಳ್ವ – ನೆಲ್ಲ ಕರ್ಮಂಗಳ
ಮಧ್ಯ ಗುರುವು ಪೇಳ್ವ – ಮಂತ್ರಂಚಯುವ
ಉತ್ತಮಾರ್ಯನು ಪೇಳ್ವ - ಯೋಗ ಸಾಮ್ರಾಜ್ಯಮಂ
ವಿಶ್ವತೋಭಿ ರಾಮ - ಕೇಳು ವೇಮಾ । ೬೫೯ ।

ಸುಳ್ಳು ನಿಜವೆರಡನ್ನು – ಕರಕಂಠನರಿವನು
ನೀರು ಪಳ್ಳಮರಿಗುಂ - ನಿಜದಿ ನೋಡೆ
ತನಯುನ ಜನನವ – ತಾಯಿ ತಾನರಿವಳೈ
ವಿಶ್ವತೋಭಿ ರಾಮ - ಕೇಳು ವೇಮಾ । ೬೬೦ ।

ಸತಿಯು ರಂಭೆಯಾಗಿ - ಶೀಲವತಿಯಾದೊಡುಂ
ಜಾರ ಪುರುಷನೇಕೆ - ಜಾಡು ಬಿಡುವ
ಕತ್ತೆ ಮೂಳೆಯನ್ನು – ನಾಯಿ ಕಡಿದಂದದಿ
ವಿಶ್ವತೋಭಿ ರಾಮ - ಕೇಳು ವೇಮಾ । ೬೬೧ ।

ಸತ್ಕುಲ ಪ್ರಸೂತನುಂ – ಸರ್ವಜ್ಞ ನಿಧಿಯು ತಾ
ನತ್ಯಧಿಕ ನಿಧಿಯ – ಸಂಧಿಸೆ ಪಿಡಿವನೇಂ !
ಪುಣ್ಯ ಸಾಧ್ವಿ ಪರರ – ಸ್ಪರ್ಶಕ್ಕೊಪ್ಪುವಳೆಂತು
ವಿಶ್ವತೋಭಿ ರಾಮ - ಕೇಳು ವೇಮಾ । ೬೬೨ ।

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಸ್ಥಾವರಗಳ ಭಕ್ಷಿಸುವರು ।
ಭಾವಿಸೆ ಜಂಗಮಗಳಂತೆ ಪಲವು ರುಚಿಗಳಂ ॥
ಜೀವಿಗಳನೆಲ್ಲ ಬಳಿಕಂ ।
ತೀವ್ರದೆ ತಮ್ಮನ್ನು ತಾನೆ ತಿಂಬರು ವೇಮಾ । ೮೪೩ ।

ಗೀ॥ ಸೋಮಯಾಜಿಯೆಂದು - ಸೊಂಪಿನಿಂ ವೇಷವ
ಧರಿಸಿ ಮಾಂಸವೆಲ್ಲ - ಸುಟ್ಟು ತಿಂಬ
ದ್ವಿಜನೇದೊಡೆಂತವ ನಧಿಕನಾಗುವನಿಳೆಗೆ
ವಿಶ್ವತೋಭಿ ರಾಮ - ಕೇಳು ವೇಮಾ । ೮೪೪

ಕಂ॥ ಸಕಲಾಕಾರನನಂತಂ ।
ಸಕಲಾತ್ಮಂಗಳಲಿ ಸರ್ವ ಸಾಕ್ಷಿಯನುತ್ತಂ ॥
ಸಕಲರೊಳು ನಿರ್ವಿಕಾರಂ ।
ಅಕಲಂಕ ಸ್ಥಿತಿಲಿ ಬೊಮ್ಮನಾಗುವ ವೇಮಾ । ೮೪೫ ।

ಗೀ॥ ಸುಳ್ಳೆನಿಪ್ಪ ಜಗಮಿದೇ – ನಿತ್ಯಮೆನ್ನುತ್ತೆ
ನಂಬಿ ಭ್ರಮಿಸಿ – ನಾರಿಯನ್ನು ಬಯಸಿ
ಸಕಲ ಜನರು ಮರೆವರಾ – ಹರಿಹರರನ್ನು
ವಿಶ್ವತೋಭಿ ರಾಮ – ಕೇಳು ವೇಮಾ । ೮೪೬ ।

ಸುಂದರಿ ಸತಿಯಾದೊಡುಂ - ಸರಸಿಯಾದೊಡುಂ
ಪರಪುರುಷ ದರುಶನಂ – ವರ್ಜಿಸಿದೊಡುಂ
ಸಂಜೆಯಾಗಲೊಡನೆ – ವಯ್ಯಾರ ಮಾಡಳೇಂ ?
ವಿಶ್ವತೋಭಿ ರಾಮ - ಕೇಳು ವೇಮಾ । ೮೪೭ ।

—ಓಂ—

—ಶ್ರೀ ವೇಮನ ತತ್ವಗಳು—

ಸೇತುವಿನೊಳ್ ಮುಳುಗೆ - ಕಾಗೆ ಬಿಳುಪಾಗ್ವುದೇ ?
ಕಾಶಿಯಲ್ಲಿ ಹದ್ದು - ಗರುಡನಹುದೆ ?
ಬದರಿ ಸೇರೆ ವೃದ್ಧ - ಬಾಲಕನಾಗ್ವನೇ ?
ವಿಶ್ವತೋಭಿ ರಾಮು - ಕೇಳು ವೇಮಾ | ೪೪೮ |

ಸಾವು ಇಂದು ನಾಳೆ - ಜೊತೆಗೂಡಿರುವುಲ್ತೆ ?
ದಿನ ದಿನ ಧನ - ಕೂಡಿಸಿಡುವುದೇಕೆ
ಆಶೆ ನಾಶಗೈದು - ನಡೆವವರಿಲ್ಲವು
ವಿಶ್ವತೋಭಿ ರಾಮು - ಕೇಳು ವೇಮಾ | ೪೪೯ |

ಸಾಯುವವರ ನೋಡಿ - ಸಾಯದ ಪುಟ್ಟದ
ತತ್ವವನ್ನು ಮನದಿ - ತಿಳಿದು ತಿಳಿದು
ಬೆದಕಿ ನೋಡುಪಂಥ ಬುಧನೆ ತಾಂ ಸಜ್ಜನ
ವಿಶ್ವತೋಭಿ ರಾಮು - ಕೇಳು ವೇಮಾ | ೪೫೦ |

ಸಾವಿರಾರು ವೇಷಗಳ - ನಳವಡಿಪರು
ತಾವಿವೆಲ್ಲ ಹೊಟ್ಟೆ - ಕೂಳಿಗಾಗಿ
ಮೇಲಿವಲ್ಲ ತತ್ವ - ಮರಿವುದೇ ಮುಕ್ತಿಯು
ವಿಶ್ವತೋಭಿ ರಾಮು - ಕೇಳು ವೇಮಾ | ೪೫೧ |

ಸಹನವಿಲ್ಲದಾಗ - ಶುಕ್ರನಂಥಾವನೇ
ಮನಸು ಹಿಡಿಯಲಾರ - ದದನು ಬಿಟ್ಟು
ಕಣ್ಣು ಪೋದ ಮೇಲೆ ಕಾಗೆಯಂತಾದನೈ
ವಿಶ್ವತೋಭಿ ರಾಮು - ಕೇಳು ವೇಮಾ | ೪೫೨ |

—ಓಂ—

—ಶ್ರೀ ವೇಮನ ತತ್ವಗಳು—

ಸಗರನಿಳೆಗೆ ಚಕ್ರವರ್ತಿ - ತಾನಾದೊಡಂ
ಪರರು ತನ್ನ ಪೊಗಳ - ಲುಬ್ಬುತಿರ್ದ
ಇಂತು ಘನತೆ ಬಂತು - ಇವರಿಗೆ ನೋಡಲು
ವಿಶ್ವತೋಭಿ ರಾಮ – ಕೇಳು ವೇಮಾ | ೮೫೩ |

ಸತಿಯು ಸುತರ ಧನವ - ನಿವ ಮೀರಲಾರದೆ
ನೆನೆದು ಕರ್ಮದಿಂದ - ಮೋಸ ಪೋಗಿ
ಯಮನ ನೋಡಿದಾಗ - ಏನೆಂದು ಪೇಳುವ ?
ವಿಶ್ವತೋಭಿ ರಾಮ – ಕೇಳು ವೇಮಾ | ೮೫೪ |

ಸಕಲ ವಿದ್ಯೆಯಲ್ಲಿ – ಪರಿಣತರಾದೊಡಂ
ಅತಿ ಪರಿಚಯದಿಂದ - ಲವರು ಹಗುರ
ಹಿತ್ತಿಲ ಗಿಡ ಮದ್ದಿ - ಗಾಗದು ಧರೆಯೊಳು
ವಿಶ್ವತೋಭಿ ರಾಮ – ಕೇಳು ವೇಮಾ | ೮೫೫ |

ಸವತಿ ತಾಯಿ ತಪ್ಪು - ಗಳನು ಸಾಧಿಸುವಳು
ಸ್ವಂತ ತಾಯಿಯಂತೆ - ಸಹಿಸಳೆಂದುಂ
ಅಚ್ಚರಿಪಡದೆ ಸೀಂ - ವಿಜ್ಞಾನಮಂ ಪೊಂದು
ವಿಶ್ವತೋಭಿ ರಾಮ - ಕೇಳು ವೇಮಾ | ೮೫೬ |

ಸಾಧು ಸಂಗದಿ ಶಾಂತವು – ಸಮನಿಸುವುದು
ಶಾಂತತೆಯೊಳು ಸುಜ್ಞಾನವು -- ಶಕ್ಯಮಹುದು
ಶಕ್ಯಮಾಗಲು ತನ್ನೊಳು - ಪರಮಿರುವುದು
ಪರವು ದೊರೆಯಲು - ಶಿವನು ಸಾಮೀಪ್ಯ ವೇಮಾ | ೮೫೭ |

—ಓಂ—

—ಶ್ರೀ ವೇಮನ ತತ್ವಗಳು—

ಸಾಮು ಮಾಡಿ ಜಟ್ಟಿ – ಸಾಹಸಿಯಾಗುವಂ
ಸಾಮು ಮಾಡದಿರಲು - ಶಕುತಿ ಹೀನಂ
ಸಾಮು ಮಾಡಿದವನು - ಸಾಯುವುದೇ ನಿಜಂ
ವಿಶ್ವತೋಭಿ ರಾಮು - ಕೇಳು ವೇಮಾ | ೮೫೮ |

ಸುತರ ಕತದಿ ಪುಣ್ಯ - ಸೌಖ್ಯಮಾಗುವುದೆಂದು
ಮನುಜನಿರ್ಸ ಕರ್ಮ – ಮಕದಿ ಬಿದ್ದು
ಆನೆಯು ಬಿದ್ದೊಡೆ - ಮಶಕನೆತ್ತುವುದೇನು ?
ವಿಶ್ವತೋಭಿ ರಾಮು - ಕೇಳು ವೇಮಾ | ೮೫೯ |

ಸುಖಗಳೆಲ್ಲ ತಿಳಿದು – ನೋಡಲು ದುಖ್ಖಗಳ್
ಪುಣ್ಯವೆಂದು ಪೇಳ್ವು - ದೆಲ್ಲ ಪಾಪ
ಕಳ್ಳ ನೇಣಿನಲ್ಲಿ - ಸುಖ ಕೋರಿದಂದದಿ
ವಿಶ್ವತೋಭಿ ರಾಮು - ಕೇಳು ವೇಮಾ | ೮೬೦ |

ಸತಿಯ ಮಾರಿ ತಾನು – ಆಚಾರಮುಳಿಯುತ್ತ
ದೀನನಾದನೊಂದು - ಮಾತಿಗಾಗಿ
ಕೊನೆಗೆ ಸ್ಮಶಾನವ - ಕಾಯ್ದು ಹರಿಶ್ಚಂದ್ರ
ವಿಶ್ವತೋಭಿ ರಾಮು - ಕೇಳು ವೇಮಾ | ೮೬೧ |

ಸತಿಯು ಸುತರೆನ್ನುತ್ತ - ಲತಿ ಮೋಹದಲ್ಲಿರೆ
ಧನದ ಮೇಲಣಾಸೆ – ಮೇರೆ ಮೀರ –
ಲಂಥ ನರರಿಗೆಲಿಯೊ - ಲಾಗದು ಮುಕ್ತಿಯು
ವಿಶ್ವತೋಭಿ ರಾಮು - ಕೇಳು ವೇಮಾ | ೮೬೨ |

—ಓಂ—

—ಶ್ರೀ ವೇಮನ ತತ್ವಗಳು—

ಸತಿಯು, ಪತಿಯು, ಸುತನು – ಮೂವರೊಳಾತ್ಮನು
ಒಂದೆ ತೆರದೊಳಿರ್ದು – ಬೆಳಗುತಿಹನು
ರೂಪುಗಳ್ ನೋಡಲು – ಬೇರೆ ಬೇರಿರ್ಪುವು
ವಿಶ್ವತೋಭಿ ರಾಮ - ಕೇಳು ವೇಮಾ । ೮೬೩ ।

ಸುಳ್ಳು ನಿಜವರಿಯುತೆ – ಗಾಳಿ ಭೂತವ ನೀಗಿ
ಮನೆಯ ಮೇಲಣಾಸೆ – ಏಕೆ ಬಿಡರೊ !
ನೀರ ಮೇಲಣ ಗುಳ್ಳೆ – ನೆಲೆಯಾಗಿ ನಿಲ್ಲದು
ವಿಶ್ವತೋಭಿ ರಾಮ - ಕೇಳು ವೇಮಾ । ೮೬೪ ।

ಸತಿಯ ಮೇಲೆ ಆಸೆ - ಪತಿಗೆ ತಾನಿರ್ಪುದು
ಪತಿಯ ಮೇಲೆ ಆಸೆ - ಸತಿಗೆ ಇರ್ಪುಂ
ಶಿವನ ಮೇಲೆ ಆಸೆ - ಸಿದ್ಧನಿಗಿರ್ಪುದೈ
ವಿಶ್ವತೋಭಿ ರಾಮ - ಕೇಳು ವೇಮಾ । ೮೬೫ ।

ಕಂ॥ ಸಕ್ಕರೆ ಕಲಸಿ ತಿನಲ್ಕಾ ।
ಮುಕ್ಕಿದ ತವುಡಾದೊಡದು ರಸಾಯನಮಕ್ಕುಂ ॥
ಮಿಕ್ಕು ಬಯಸಿರ್ಪ ದಾಸಿಯು ।
ಚೊಕ್ಕಟಮಾದಂಥ ದಿವ್ಯ ಭಾಮೆಯು ವೇಮಾ । ೮೬೬ ।

ಗೀ॥ ಸಕಲ ಶಾಸ್ತ್ರಂಗಳ - ಸಂಪುಟಂ ಬರೆಯುತ್ತೆ
ಓದನರಿತು ತಮ್ಮ - ಸಾವರಿಯರು
ಸಾವರಿಯದ ಓದು - ಓದುವುದೇತಕ್ಕೊ
ವಿಶ್ವತೋಭಿ ರಾಮ - ಕೇಳು ವೇಮಾ । ೮೬೭ ।

—ಓಂ—

—ಶ್ರೀ ವೇಮನ ತತ್ವಗಳು—

ಸತಿಯ ಮಾಯೆ ನಂಬಿ – ಸೌಖ್ಯವಿರ್ದಪುದೆಂದು
ಮತಿವಿಹೀನರಾದ – ರೆಲ್ಲ ನರರು
ಗತಿಯು ಸತಿಯಿಂದ ತಾಂ – ಕಾಣಲಾರರು ಕಣಾ !
ವಿಶ್ವತೋಭಿ ರಾಮ - ಕೇಳು ವೇಮಾ | ೮೬೮ |

ಸಾಧು ಜನರ ಸ್ನೇಹವಂ – ಬಿಡಬಾರದು
ಪ್ರಕೃತಿ ಬಿಡದ ಮುನ್ನ – ಪರವು ಸಿಗದು
ಹೇಚು ಕಾಯು ಕೊಯ್ಯಲೇಂ ? – ಬೀಜವಿರ್ಪುದೇ ?
ವಿಶ್ವತೋಭಿ ರಾಮ – ಕೇಳು ವೇಮಾ | ೮೬೯ |

ಸಾಧು ಸತ್ಪುರುಷರಂ - ಸಂತಾಪಗೊಳಿಸಲು
ಕುಲವಿನಾಶವಲ್ತೆ ? - ಕ್ರೂರಿಯರಿಯಂ
ಸಾಧು ಬುಧರ ಪೂಜೆ - ಸಾಯುಜ್ಯವೀವುದು
ವಿಶ್ವತೋಭಿ ರಾಮ - ಕೇಳು ವೇಮಾ | ೮೭೦ |

ಸಿದ್ಧರಾದವರ ಚಿತ್ತವು – ರಂಜಿಸುವುದದು
ಒಡಲ ಬಣ್ಣ ಲೆಕ್ಕ – ವಿಡರು ಮುನ್ನ
ಹಲಸು ಹಣ್ಣಿನಿರವು – ಹೊರಗೆಂತು ತೋರ್ಪುದು
ವಿಶ್ವತೋಭಿ ರಾಮ – ಕೇಳು ವೇಮಾ | ೮೭೧ |

ಸುಗುಣವಂತೆಯಾದ - ಸುದತಿ ತಾನಿರುತಿರೆ
ಬುದ್ಧಿವಂತರಾಗಿ – ಬದುಕುತಿಹರು
ಸ್ವರ್ಗಮೇತಕ್ಕಯ್ಯ - ಸಂಸಾರಿಗಿಹದೊಳು
ವಿಶ್ವತೋಭಿ ರಾಮ – ಕೇಳು ವೇಮಾ | ೮೭೨ |

—ಓಂ—

—ಶ್ರೀ ವೇಮನ ತತ್ವಗಳು—

ಸುರರು ಮುನಿಗಳಂದು – ಸೌಮ್ಯದೊಳಿರ್ದರು
ಧರ್ಮಮಾರ್ಗವೊಂದೆ - ತಾರಕವೆನೆ
ಇಂತಲ್ಲದವರಸುರ – ರಾಗುತ್ತೆ ಮಡಿದರು
ವಿಶ್ವತೋಭಿ ರಾಮ - ಕೇಳು ವೇಮಾ | ೮೭೩ |

ಸಾಧು ಸತ್ಪುರುಷರಂ - ಸಂತವಿಟ್ಟಾತನು
ಪ್ರಜೆಗಳನ್ನು ಪೊರೆದ – ರಾಜ ವರನು
ಪಿರಿದು ಶತ್ರುವನ್ನು – ಕರುಣಿಸಿದಾತನು
ಭರದಿ ಮುಕ್ತಿಯನ್ನು - ಪಡೆವ ವೇಮಾ | ೮೭೪ |

ಸ್ನಾನವೈದೆ ಮಾಡಿ - ಸದ್ಧರ್ಮಿಯಾಗದೆ
ನೀರೊಳ್ ಮುಳುಗಲಾಗ – ಮಹಿಮನಹನೆ ?
ನೀರಕೋಳಿ ನೀರಿನೊಳ್ – ಮುಳುಗಿದಂದದಿ
ವಿಶ್ವತೋಭಿ ರಾಮ - ಕೇಳು ವೇಮಾ | ೮೭೫ |

ಸಾವು ಬಂದ ವೇಳೆ – ಸನ್ಯಾಸಿಯಪ್ಪುದು
ಕೊನೆಗೆ ಆದಿಕುಲವು – ಕೆಡುವುದಲ್ತೆ ?
ಪಾಪವೈದೆ ಬೇರೆ – ಫಲವಿರಲಾರದೈ
ವಿಶ್ವತೋಭಿ ರಾಮ - ಕೇಳು ವೇಮಾ | ೮೭೬ |

ಸಾಧು ಚರಿತೆಯಾದ - ಸತಿ ಸತ್ಪ್ರವರ್ತನೆ
ಜಾರನರಿವನೆಂತು – ಸಾಧು ಬುಧನ
ಬ್ರಹ್ಮನಿಷ್ಠೆ ಮೂಢ - ಪ್ರಾಕೃತನರಿವನೇ ?
ವಿಶ್ವತೋಭಿ ರಾಮ - ಕೇಳು ವೇಮಾ | ೮೭೭ |

—ಶ್ರೀ ವೇಮನ ತತ್ವಗಳು—

ಸೊಪ್ಪುಸದೆಯ ತಿಂದ - ಮೇಕೆಮರಿಗಳಿಗೇಕೆ
ಆಗದಯ್ಯ ಕಾಯ – ಶುದ್ಧಿಯವಕೆ
ಲೋಗರೆಲ್ಲ ಹುಚ್ಚು - ನರರಾಗಿ ಪೋದರು
ವಿಶ್ವತೋಭಿ ರಾಮ - ಕೇಳು ವೇಮಾ | ೮೭೮ |

ಸಾಕು ಸಾಕು ಇನ್ನು - ಚಾರ್ವಾಕ ಮತರೀತಿ
ಶಕ್ತಿ ಶೈವವೆಂದು – ಬಹಳ ನಂಬಿ
ಸರಣಿಯಿಂ ಕೆಡುವರು - ಚೆಂಡಾಲ ಸೇವೆಯಿಂ
ವಿಶ್ವತೋಭಿ ರಾಮ – ಕೇಳು ವೇಮಾ | ೮೭೯ |

ಸೇರಿಸದಿರು ಬಳಿಗೆ - ಪಾಪಿ ಡಾಂಬೀಕರ
ಮೋಸ ಮಾಳ್ಪರ್ದ್ರೋಷ - ವೆನ್ನದವರು
ಕ್ರೂರ ಮೃಗಗಳಂಥವರು - ನಂಬಬೇಡ ನೀಂ
ವಿಶ್ವತೋಭಿ ರಾಮ – ಕೇಳು ವೇಮಾ | ೮೮೦ |

ಸುಜನ ಸ್ನೇಹವನ್ನು - ಬಿಡಬಾರದೆಂದಿಗುಂ
ಪ್ರಕೃತಿಯರಿಯದಿರಲು - ಭಕ್ತಿಯಿಲ್ಲ
ಕೆಡುಗರೆಂತು ಭಕ್ತಿ - ನಿಲ್ಲಿಪರಿಳೆಯೊಳು
ವಿಶ್ವತೋಭಿ ರಾಮ – ಕೇಳು ವೇಮಾ | ೮೮೧ |

ಸಹನಮಿಲ್ಲದಿರ್ಪ - ಸತಿಯಿರ್ದು ಫಲವೇನು
ಮತಿವಿಹೀನ ಸುತನು - ಪುಟ್ಟಲೇನು
ಸದ್ಗುಣಮುದಿಸದ - ಓದಿನಿಂ ಫಲವೇನು
ವಿಶ್ವತೋಭಿರಾಮ - ಕೇಳು ವೇಮಾ | ೮೮೨ |

—ಓಂ—

—ಶ್ರೀ ವೇಮನ ತತ್ವಗಳು—

ಸುಗುಣ ಗಣಗಳಿರ್ಪ - ಕುಲ ಸತಿಯನ್ನಾರು
ನಿಂದೆ ಮಾಡರವರು – ನೀತಿ ಪರರು
ಸುಗುಣಂ ಗಳಿಲ್ಲದಿರೆ - ಕುಲಹೀನೆ ಎನ್ನುವರು.
ವಿಶ್ವತೋಭಿ ರಾಮ - ಕೇಳು ವೇಮಾ | ೮೮೩ |

ಹ

ಹೆಚ್ಚು ಕಡಿಮೆ ಯೆಂದು - ಮನದೊಳು ಭಾವಿಸಿ
ಕುತ್ಸಿತ ಮರಿಯದ – ಮೂರ್ಖ ಜನರ
ಮತ್ಸರ ದಿಂದಲಿ – ಚೆಂಡಾಲರೆಂಬರು
ವಿಶ್ವತೋಭಿ ರಾಮ - ಕೇಳು ವೇಮಾ | ೮೮೪ |

ಹುಚ್ಚು ನರಿಗಳಂತೆ - ವಿಪ್ರರೆಲ್ಲರು ಸೇರಿ
ವೇದ ಮಂತ್ರ ಪಠಿಸಿ - ವಿಗ್ರಹಗಳ
ಪ್ರಾಣ ಪ್ರತಿಷ್ಠೆಯಂ – ಮಾಳ್ಪೆ ವೆಂದೆಂಬರು
ಭ್ರಮೆ ಯಿದಲ್ಲವೇನು - ಪೇಳು ವೇಮಾ | ೮೮೫ |

ಹಿಂಸೆ ಮಾಡದಿರುವುದೇ – ಧರ್ಮವೆನ್ನುತ್ತೆ
ಹಿಂಸೆ ಮಾಡುತಿರ್ಪ – ರವನಿ ಸುರರು
ಸತ್ತ ಪಶುವ ತಿಂಬ ಚೆಂಡಾಲರ್ಗೆ ಮೇಲು
ವಿಶ್ವತೋಭಿ ರಾಮ - ಕೇಳು ವೇಮಾ | ೮೮೬ |

ಹೆಸರು ಸೋಮಯಾಜಿ – ಬಲು ಹಿಂಹ ಬಲನು ತಾಂ
ಮೇಕೆ ಹೋತ ಪಿಡಿದು ಕತ್ತು ಮುರಿವ
ನಿಂತು ಕ್ರತುವಿನಿಂ ಸ್ವರ್ಗವು ಲಭಿವುದೇಂ ?
ವಿಶ್ವತೋಭಿ ರಾಮ – ಕೇಳು ವೇಮಾ | ೮೮೭ |

—ಓಂ—

—ಶ್ರೀ ವೇಮನ ತತ್ವಗಳು—

ಹಾಲು ಸಮುದ್ರದಿ ಮಲಗಿರು ವಾತನು
ಗೊಲ್ಲರ ಮನೆ ಹಾಲು – ಕದಿಯಲೇಕೆ ?
ನೆರೆಯುವರ ಸೊತ್ತು ತಾ - ನೆಷ್ಟು ಪ್ರಿಯವೋ ಕಾಣೆ
ವಿಶ್ವತೋಭಿ ರಾಮು – ಕೇಳು ವೇಮಾ | ೮೮೮ |

ಹುಲ್ಲು ಮೇವ ಪಶುವ - ತಿನ್ನುವ ಮನುಜರ
ಹೊಲೆಯರೆಂದು ಕರೆವ ರವನಿ ಜನರು
ಹಂದಿ ಕೋಳಿ ತಿಂಬ ರವರತಿ ಶ್ರೇಷ್ಠರೇಂ ?
ವಿಶ್ವತೋಭಿ ರಾಮು - ಕೇಳು ವೇಮಾ | ೮೮೯ |

ಹಂದಿ ಮರಿಗ ಳೀನುವುದು - ಹತ್ತನೈದನು
ಆನೆ ಈನುತಿರ್ಪು – ದೊಂದು ಮರಿಯು
ಉತ್ತಮ ಪುರುಷನು - ಓರ್ವನೇ ಸಾಲನೇ ?
ವಿಶ್ವತೋಭಿ ರಾಮು - ಕೇಳು ವೇಮಾ | ೮೯೦ |

ಹುಚ್ಚು ನರನಿಗಂತೆ – ವೇಷ ಧಾರಿಗು ಮಂತೆ
ರೋಗಿಗಂತೆ ಷಮ ಯೋಗಿಗಂತೆ
ಸ್ತ್ರೀಯರ ನೀಕ್ಷಿಸೆ – ಚಿತ್ತವು ಕೆಡುವುದು
ವಿಶ್ವತೋಭಿ ರಾಮು - ಕೇಳು ವೇಮಾ | ೮೯೧ |

ಹೃದಯ ದಲ್ಲಡಗಿರ್ಪ - ಈಶನಂ ತಿಳಿಯದೆ
ಕಲ್ಲಿಗೆಲ್ಲ ಮುಗಿವ – ಮಾನವರಿರ
ಕಲ್ಲಿನೊ ಳೀಸಿದೆ – ಜೀವ ದೊಳಲ್ಲದೆ
ವಿಶ್ವತೋಭಿ ರಾಮು - ಕೇಳು ವೇಮಾ | ೮೯೨ |

—ಓಂ—

—ಶ್ರೀ ವೇಮನ ತತ್ವಗಳು—

ಹಣವ ಕೂಡಿಸಿಟ್ಟು - ಧರ್ಮವ ಮಾಡದೆ
ತಾನು ತಿನ್ನದದನು - ನೆಲದೊಳಿಟ್ಟು
ಜೇನು ನೊಣಗಳಂತೆ - ಪರರ ಪಾಲದುನಿಕ್ಕಂ
ವಿಶ್ವತೋಭಿ.ರಾಮ - ಕೇಳು ವೇಮಾ | ೮೯೩ |

ಹಾಲ ಕಲೆತು ನೀರು - ಹಾಲಾಗಿ ಶೋಭಿಸಿ
ಪಾನ ಯೋಗ್ಯ ಮಾದ - ತೆರದೊಳದುವೆ
ಸಾಧು ಜನರ ಕೂಡಿಯಾಡುವ - ಮನುಜರು
ಮುಕ್ತರಹರು ಮಾನ - ನೀಯ ವೇಮಾ | ೮೯೪ |

ಹಾವಿಗಿಂತ ಲಿಹುದೆ - ಪಾಪಿಷ್ಠ ಜಂತುವು
ಆದನು ಪಳಗಿಸುವರು - ಹಾವಿ ನವರು
ಖಲನ ಗುಣವ ತಿರುಗಿಸಲು - ಸಾಧ್ಯ ಮಿಲ್ಲನೈ
ವಿಶ್ವತೋಭಿ ರಾಮ - ಕೇಳು ವೇಮಾ | ೮೯೫ |

ಹೊಲೆಯ ಹೊಲೆಯನಲ್ಲ - ಧರೆಯೊಳು ನೋಡಲು
ಮಾತು ಬದಲಿಸುವವ - ಹೊಲೆಯ ನಲ್ತೆ ?
ಗುಣ ವಿಶೇಷದಿಂದ - ಹೊಲೆತನ ಬರ್ಪುದು
ವಿಶ್ವತೋಭಿ ರಾಮ - ಕೇಳು ವೇಮಾ | ೮೯೬ |

ಹೊಲೆಯು ಹೊಲೆ ಎನುತ್ತೆ - ನೀರೊಳು ಮುಳುಗುವರ್
ಹೊಲಸಿನಲ್ಲಿ ತನುವು - ಜನಿಸಿ ಮತ್ತೆ
ಹೊಲಸಿನಲ್ಲೆ ತೊಳಲಿ - ಬಳಲುವು ದರಿಯರು
ವಿಶ್ವತೋಭಿ ರಾಮ - ಕೇಳು ವೇಮಾ | ೮೯೭ |

—ಓಂ—

—ಶ್ರೀ ವೇಮನ ತತ್ವಗಳು—

ಹಿಂದೆ ನೋಡಲೆಣಿಸೆ – ಕಷ್ಟದ ಕುಂಟೆಯು
ಮುಂದೆ ನೋಡ ಲೆಣಿಸೆ - ಕೊಳಕು ಕುಂಟೆ
ಸುಂದರಿಯನು ನೋಡು - ಆನಂದ ಪಡುವರು
ವಿಶ್ವತೋಭಿ ರಾಮ - ಕೇಳು ವೇಮಾ | ೮೯೮ |

ಹೆಚ್ಚು ಕುಲದಿ ಪುಟ್ಟೆ – ಎಷ್ಟು ದಿನ ಬಾಳ್ದರುಂ.
ಸಾವು ಹುಟ್ಟು ಭುವಿಯೊಳ್ – ಜಾತಕ ಮದು
ಮೆಚ್ಚಿ ಮನದಿ ಪೂಜೆ ಮೇಲಾಗಿ ಮಾಳ್ಪುದು
ವಿಶ್ವತೋಭಿ ರಾಮ – ಕೇಳು ವೇಮಾ | ೮೯೯ |

ಹೊಲೆಯ ಮಾಂಸ ತಿಂಬ – ಮಹಿಯೊಳು ಜನರೆಲ್ಲ
ನೆಣವ ತಿಂಬರೊಂದೆ - ಕುಲಮದಲ್ಲೇಂ ?
ಕುಲಗಳೆಲ್ಲ ಒಂದೆ - ಕುಲಮೆಂದು ತಿಳಿವುದು
ವಿಶ್ವತೋಭಿ ರಾಮ - ಕೇಳು ವೇಮಾ | ೯೦೦ |

ಹಾಲ ಹಕ್ಕಿ ಶಕುನ - ಫಲ ವಿಾವುದೆಂಬರು
ಹಾಲ ಹಕ್ಕಿಗೇನು - ಫಲವು ತಿಳಿಗುಂ
ತನ್ನ ಮೇಲು ಕೀಳು - ತನ್ನೊಳೇ ಇರ್ಪುದು
ವಿಶ್ವತೋಭಿ ರಾಮ – ಕೇಳು ವೇಮಾ | ೯೦೧ |

ಹಸಿದ ಮಾನವನಿ ಗನ್ನವ – ನಿಡ ಲಾತನು
ಹರನಿ ಗರ್ಪಿಸುತ್ತ - ಲಾರಗಿಪನು
ಧನ ವಿಹೀನ ಗೀವ – ದಾನವೇ ದಾಸವ್ಯೆ
ವಿಶ್ವತೋಭಿ ರಾಮ - ಕೇಳು ವೇಮಾ | ೯೦೨ |

—ಓಂ—

—ಶ್ರೀ ವೇಮನ ತತ್ವಗಳು—

ಹಲವರಾಡುವ ಮಾತು - ಫಲವಿಾವುದದು ಶ್ರೇಷ್ಠ
ಒಬ್ಬನಾಡುವ ಮಾತು - ನಡೆಯದೆಂದುಂ
ಸುಮ್ಮನಿರುವವನಿಗೆ - ಊರೆಲ್ಲ ಸರಿಯಲ್ಲ
ವಿಶ್ವತೋಭಿರಾಮ – ಕೇಳು ವೇಮಾ | ೯೦೩ |

ಹಲವು ಬಗೆ ಕರೆದರುಂ - ನುಡಿಯದೆ ನೀನಿರ್ಪೆ
ನುಡಿವುದಯ್ಯ ಎನ್ನ – ಭ್ರಮೆಯು ತೀರೆ
ನುಡಿಯದಿರಲು ನಿನ್ನ – ಪರರು ದೂಷಿಸುವರು
ವಿಶ್ವತೋಭಿರಾಮ - ಕೇಳು ವೇಮಾ | ೯೦೪ |

ಹಾಲ ನೀರ-ಬೇರೆ - ಮಾಳ್ಪುದು ಹಂಸವು
ಇಂಥ ಸುಗುಣ – ಬಕನಿಗೆಲ್ಲಿ ಬಂತು
ಅಜ್ಞನಾದ ಮನುಜ - ನರಿವನೆ ಶಿವನನ್ನು
ವಿಶ್ವತೋಭಿರಾಮ - ಕೇಳು ವೇಮಾ | ೯೦೫ |

ಹುಲಿಯ ದೆಂಥದೆನಲು – ಭೂಲೋಕ ಮೃಗರಾಜ
ಕಲಿಯ ದೆಂಥದೆನಲು – ಕಾಣಲರಿದು
ಹುಲಿ, ಕಲಿಗಳಿಗ್ಗಿಂತ – ಕೊಲುವ ಹಸಿವಧಿಕವೈ
ವಿಶ್ವತೋಭಿರಾಮ – ಕೇಳು ವೇಮಾ | ೯೦೬ |

ಹಲ್ಲಿ ನುಡಿಯ ಕೇಳಿ – ತಮ್ಮ ಕಾರ್ಯಗಳೆಲ್ಲ
ಸಫಲವಾಯಿತೆಂದು – ಸಮ್ಮತಿಸುತೆ
ಆಗದ ಕಾರ್ಯಕ್ಕೆ – ಕರ್ಮವೆಂದೆಂಬರು
ವಿಶ್ವತೋಭಿರಾಮ – ಕೇಳು ವೇಮಾ | ೯೦೭ |

—ಓಂ—

—ಶ್ರೀ ವೇಮನ ತತ್ವಗಳು—

ಹತ್ತಿ ಹಣ್ಣು ಮೇಲೆ - ರಮ್ಯವಾಗಿರ್ಪುದು
ಹೊಟ್ಟೆ ಬಿಚ್ಚಿನೋಡೆ - ಹುಳುಗಳಿಹವು
ಹುಚ್ಚು ನರನ ಮನದ – ಬಿಂಕವಿಾರೀತಿಯ್ತೆ
ವಿಶ್ವತೋಭಿರಾಮ - ಕೇಳು ವೇಮಾ | ೯೦೮ |

ಹೊಲೆಯ ಮುಟ್ಟಿದನೆಂದು – ನೀರೊಳು ಮುಳುಗುವರ್
ಮೂಲಕರ್ಮದಿಂದ – ಹೊಲೆಯನಾದ
ಏಕೆ ತಿಳಿಯದಿಹರು – ಈ ನರ ಪಶುಗಳು
ವಿಶ್ವತೋಭಿರಾಮ - ಕೇಳು ವೇಮಾ | ೯೦೯ |

ಹಲಸಿನ ತೊಳೆಗಿಂತ – ಸಕ್ಕರೆ ಸವಿಗಿಂತ
ಸಣ್ಣ ಜೇನಿಗಿಂತ – ಗಿಣ್ಣಕ್ಕಿಂತ
ಕಬ್ಬು ರಸಕ್ಕಿಂತ – ಕನ್ನೆಯ ನುಡಿ ಸಿಹಿಯೆ ?
ವಿಶ್ವತೋಭಿರಾಮ - ಕೇಳು ವೇಮಾ | ೯೧೦ |

ಹೊಟ್ಟೆಗಾಗಿ ಮನವೆ - ಕಳವಳವೇತಕ್ಕೆ
ಹೊಟ್ಟೆಗಾಗಿ ತೃಪ್ತಿ - ಪೊಂದು ಬೇಗ
ಹೊಟ್ಟೆ ಕಲ್ಲಿನಲ್ಲಿ - ಕಪ್ಪೆಗುವಿಲ್ಲವೇಂ ?
ವಿಶ್ವತೋಭಿರಾಮ - ಕೇಳು ವೇಮಾ | ೯೧೧ |

ಹಲವು ಜನರ ಕೊಂದು - ದೀನರ ವಧಿಸುತ್ತಿ
ಓರ್ವನಿಂಗೆ ನೂರು - ಕದ್ದು ತಂದು
ಎಲ್ಲಡಗಿದೊಡಲ್ಲಿ – ಯಮ ಬಿಡದೆ ಕೊಲ್ಲುವಂ
ವಿಶ್ವತೋಭಿರಾಮ - ಕೇಳು ವೇಮಾ | ೯೧೨ |

—ಓಂ—

—ಶ್ರೀ ವೇಮನ ತತ್ವಗಳು—

ಹುಟ್ಟುವಾಗ ಶೂದ್ರ – ನುತ್ತಮೋತ್ತಮನೆಂತು
ಸತಿಯು ಶೂದ್ರಳಲ್ತು ? ಸತ್ಯಮದುವೆ
ತಾಯಿ ಶೂದ್ರಳಾಗಿ - ತಾನೆಂತು ಬ್ರಾಹ್ಮಣ ?
ವಿಶ್ವತೋಭಿರಾಮ - ಕೇಳು ವೇಮಾ | ೯೧೩ |

ಹಣೆ ಭಕ್ತನಾದೊಡೆ - ಬಾಯಿಯೆ ತೋಳವು
ಮನವೆ ಭೂತವಾಗಿ - ಮಾರ್ಪಡುವುದು
ಶಿವನ ಕಾಂಬೆನೆನಲು – ನಾಚಿಕೆಯಾಗದೇಂ ?
ವಿಶ್ವತೋಭಿರಾಮ – ಕೇಳು ವೇಮಾ | ೯೧೪ |

ಹಣೆಯ ಮೇಲೆ ಬರೆಯುವನು - ಹಣೆಯಲ್ಪವೇ !
ಹಣೆಯು ಅಲ್ಪವಿದ್ದು - ಬರೆವುದಧಿಕ
ಹಣೆಯ ಬರಹವನ್ನು - ಅಳಿಸಲು ಪೋಪುದೇಂ ?
ವಿಶ್ವತೋಭಿರಾಮ - ಕೇಳು ವೇಮಾ | ೯೧೫ |

ಹಣವೊಬ್ಬನಿಗೆ ಮತ್ತೆ - ಗುಣವೊಬ್ಬನಿಗೆ
ವಿತರಣವೊಬ್ಬನಿಗೆ – ಇಂತು ಮಾಡ್ದನೇಕೆ
ಬ್ರಹ್ಮನ ಕೈಗಳು – ಹಾಳಾದ ಕೈಗಳು
ವಿಶ್ವತೋಭಿರಾಮ – ಕೇಳು ವೇಮಾ | ೯೧೬ |

ಹರಿಗೆ ಸಿರಿಯು ದೊರಕಿ - ದಾಗಲೇ ಹರನಿಗೆ
ವಿಷವು ದೊರಕಿತಕಟ ! - ಪರಿಕಿಸಿದೊಡೆ
ಅರಿಯಲಾಗದಾರಿ - ಗೇನೇನು ಲಭಿಪುದೋ !
ವಿಶ್ವತೋಭಿರಾಮ - ಕೇಳು ವೇಮಾ | ೯೧೭ |

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಹರಿ, ಹರ, ವಿಧಿ, ಮುನಿ, ಪರರುಂ ।
ಧರೆಯೊಳ್ ಜನ್ಮಿಸುತೆ ತುದಿಗೆ ನರರಂದದೊಳಾ ॥
ಜರೆ ಮರಣಂ ಪೊಂದುತ್ತಂ ।
ವರಸೆಯೊಳೈದಿದರು ದೈವವಶಮಿದು ವೇಮಾ । ೯೧೮ ।

ಹರಿ ವಿಧಿಗಳುದಯ ಮರಿಯೆಯ ? ।
ಹರನು ಪರಾಜಿತನುಮಾದ ಪರಿಯರಿಯೆಯ ನೀಂ ॥
ನೆರೆ ವೇದ ವಾಕ್ಯಮರಿಯಯು ! ।
ಗುರುತರಮೆಲ್ಲಕ್ಕು ದೈವಮಿರ್ಪುದು ವೇಮಾ । ೯೧೯ ।

ಗೀ॥ ಹಸಿದು ಬಂದನೆಂದು - ಮರಿತು ಪರದೇಶಿಗೆ
ಒಂದು ತುತ್ತು ಅನ್ನ – ಕೊಡುವುದಿಲ್ಲ
ಮುಂಡೆಯ ಮಗನು ತಾಂ - ರಂಡೆಗಳ್ಗಿಡುವನು
ವಿಶ್ವತೋಭಿರಾಮ - ಕೇಳು ವೇಮಾ । ೯೨೦ ।

ಹೊಲೆಯನಂಟು ಒಳ್ಳೆ – ನೀರಿನಿಂ ಪೋಪುದು
ತುರುಕನುಂಟು ತುದಿಗೆ - ಮೇಲಿನಂತೆ
ನೀಚಕಳ್ಳನಂಟು – ಸತ್ತರುಂ ಪೋಗದು
ವಿಶ್ವತೋಭಿರಾಮ – ಕೇಳು ವೇಮಾ । ೯೨೧ ।

ಕಂ॥ ಹಯಮುದರಿ ಓಡುವಂದದಿ ।
ರಯದಿಂದೋಡುತಿಹ ಮನಪವನನು ವಿಂದೀಗಳ್ ॥
ನಯ ಭಯಮಂ ತೋರಿಸುತಂ ।
ಪಯಣಂ ಸಾಗಿಪುದು ನಿನ್ನ ಕಾರ್ಯಂ ವೇಮಾ । ೯೨೨ ।

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಹಾನಿಯಿಂದಲಖಿಳ - ದುಖ್ಖಗಳ್ ಬರ್ಸುವು
ಹಾನಿ ತಪ್ಪಲಾಗ - ಸುಖವು ದೊರೆಗುಂ
ಹಾನಿ ತಿಳಿಯುವಾತ - ಸರ್ವಜ್ಞ ಶಿವಯೋಗಿ
ವಿಶ್ವತೋಭಿರಾಮು - ಕೇಳು ವೇಮಾ | ೯೨೩ |

ಹೇತು ತಾರಕ ವಿದ್ಯೆ – ಯರಿತವರೆಲ್ಲರು
ವ್ಯಥೆಯ ಪೊಂದದಿಹರು – ವಿದ್ಯೆಯಿಂದೆ
ತತ್ವ ಮರಿತಮೇಲೆ–ತನಗೆ ಚಿಂತೆಯದೇಕೆ ?
ವಿಶ್ವತೋಭಿರಾಮು – ಕೇಳು ವೇಮಾ | ೯೨೪ |

ಹಸುವ ಕೆಚ್ಚಲ ಹಿಂಡಿ - ಹಾಲ ಕಾಯಿಸಲಾಗ
ಹೆತ್ತು ಮೊಸರು ಮಜ್ಜಿ-ಗೆಯುಮೆನಿಪುದು
ಅದರೊಳಗಡಗಿರ್ಪ – ಬೆಣ್ಣೆಯನ್ನರಿವುದು
ವಿಶ್ವತೋಭಿರಾಮು – ಕೇಳು ವೇಮಾ | ೯೨೫ |

ಹಣ್ಣಿನಿಂದ ಪುಟ್ಟಿರುವುದು – ಪ್ರಪಂಚವು
ಹಣ್ಣಿನಿಂದಲಿಹ – ಪರಂಗಳಿಹ
ಹಣ್ಣು ಮೇಲೇರಿದವ – ಪ್ರಹ್ಲಾದನೋರ್ವನೇ
ವಿಶ್ವತೋಭಿರಾಮು – ಕೇಳು ವೇಮಾ | ೯೨೬ |

ಹಗಲು ರಾತ್ರಿ ನೋಡೆ – ಭಾವದೊಳೆಲ್ಲವು
ತಾನು ನಾನು ಎನುವ – ಸ್ಮರಣೆ ಮರೆದು
ವರ್ತಿ ಪಾತನಲ್ತೆ? – ಉತ್ತಮ ಯೋಗಿಯು
ವಿಶ್ವತೋಭಿರಾಮು - ಕೇಳು ವೇಮಾ | ೯೨೭ |

—ಓಂ—

—ಶ್ರೀ ವೇಮನ ತತ್ವಗಳು—

ಹುಟ್ಟಿದ ಜನರೆಲ್ಲ - ಭುವಿಯೊಳು ಬದುಕಿರೆ
ಜಗಮದೆಂತು ಹಿಡಿವು - ದಗಣಿತ ಮನೆ
ಯಮನ ಲೆಕ್ಕದಂತೆ - ತಗ್ಗುತ್ತಲಿರ್ಪುದು
ವಿಶ್ವತೋಭಿರಾಮ - ಕೇಳು ವೇಮಾ ‌| ೯೨೮ |

ಹುಟ್ಟುವಾಗಲು ದುಖ್ಖ - ಬೆಳೆಯುವಾಗಲು ದುಖ್ಖ
ಕಟ್ಟಕಡೆಗೆ ಮರಣ - ದುಃಖ್ಖವೊಂದು
ನರನ ದುಖ್ಖದಂತೆ - ಬೇರೆ ದುಖ್ಖವುದಿಲ್ಲ
ವಿಶ್ವತೋಭಿರಾಮ - ಕೇಳು ವೇಮಾ | ೯೨೯ |

ಹಾಲು, ಮೊಸರು, ಬೆಣ್ಣೆ - ಯನ್ನವ ತಿನ್ನುತ್ತೆ
ಸ್ತ್ರೀಯರನ್ನು ನೋಡ - ದಿರ್ಪನವನು
ಶೀಲವಂತ ನೋರ್ವ - ನುತ್ತಮ ಶಿವನಯ್ಯ
ವಿಶ್ವತೋಭಿರಾಮ - ಕೇಳು ವೇಮಾ | ೯೩೦ |

ಹುಡುಗತನದ ಸ್ವೇಛ್ಛೆ - ಮನ್ನಣೆ ಕೆಡಿಪುದು
ಬಿಡದೆ ಮುಡದಿ ಸ್ವೇಛ್ಛೆ - ಕೇಡೆನಿಪುದು
ಕಡೆಗೆ ಕೆಡಕು - ಧನಿಕನಾದವನ ಸ್ವೇಛ್ಛೆಯು
ವಿಶ್ವತೋಭಿರಾಮ - ಕೇಳು ವೇಮಾ | ೯೩೧ |

ಹುಟ್ಟುಸಾವ ನರನು - ಪೂರ್ವವೇನರಿಯದೆ
ಬಟ್ಟ ಬಯಲ ನೋಡಿ-ಭ್ರಮಿಸಿ ತಾನು
ಕೆಟ್ಟು ಭೂಮಿ ತಿರುಗ - ಲೇತರ ಫಲವಿದೆ
ವಿಶ್ವತೋಭಿರಾಮ - ಕೇಳು ವೇಮಾ | ೯೩೨ |

—ಓಂ—

—ಶ್ರೀ ವೇಮನ ತತ್ವಗಳು—

ಹುಟ್ಟಿದೊಡನೆ ಹೊಕ್ಕು-ಳನ್ನು ಕೊಯ್ವಾಗಲೇ
ದಿಟ್ಟವುಲ್ತಿ ? ಗುರುವಿ - ನವುಲವುುದ್ರೆ
ಮುದ್ರೆಯಿಲ್ಲದವರು – ಮುಜ್ಜನದೊಳಗಿಲ್ಲ
ವಿಶ್ವತೋಭಿರಾಮ - ಕೇಳು ವೇಮಾ | ೯೩೩ |

ಹಲವು ವಿದ್ಯೆಗಳೇಕೆ – ಹಲವು ವಾದಗಳೇಕೆ
ಒಂದೆ ಮನಸಿನಿಂದ - ಮೌನದಿರಲು
ಸರ್ವಸಿದ್ಧನಪ್ಪ – ಸರ್ವವು ತಾನಪ್ಪ
ವಿಶ್ವತೋಭಿರಾಮ - ಕೇಳು ವೇಮಾ | ೯೩೪ |

ಹಿತ್ತಲ ಗಿಡವನ್ನು - ಅಂಕೆಯೊಳಿಡದಿರೆ
ಸ್ವೇಚ್ಛೆಯಾಗಿ ಹೊರ – ಹೊರಡುವುದಾಚೆ
ಸ್ತ್ರೀಯರ ಗುಣ ಗಣ - ಮೀರೀತಿಯಿರ್ಪುದು
ವಿಶ್ವತೋಭಿರಾಮ – ಕೇಳು ವೇಮಾ | ೯೩೫ |

ಹೊತ್ತು ಮೂಡುವ ಕಡೆ – ಹೊತ್ತು ನಿಲ್ಲುವ ಕಡೆ
ಹೊತ್ತು ಮುಳುಗುವ ಕಡೆ – ದ್ರಿಷ್ಟಿ ನಿಲಿಸಿ
ಹೊತ್ತ ತಿಳಿದಾತನೇ - ಉತ್ತಮ ಯೋಗಿಯು
ವಿಶ್ವತೋಭಿರಾಮ - ಕೇಳು ವೇಮಾ | ೯೩೬ |

ಕಂ॥ ಹೇಳಿಯು ತೋರಲ್ಕಾಗದು ।
ಮೇಲಾಗಿಯೆ ಮನದಿ ನೋಡಿ ತಿಳಿವುದು ಮತ್ತಂ ॥
ಆಲಸ್ಯಮುಳಿದು ನೋಡಲ್ ।
ವಾಲಾಯದೊಳಿಲ್ಲ ಜಗವ ತುಂಬಿತು ವೇಮಾ ॥ | ೯೩೭ |

—ಓಂ—

—ಶ್ರೀ ವೇಮನ ತತ್ವಗಳು—

ಹತ್ತಿರವಿರ್ಪುದು ಕನ್ನಡಿ ।
ಮತ್ತಂ ರೂಪಿನೊಳು ನಿನ್ನ ರೂಪಂ ನೋಡ್ಪೈ ॥
ಸತ್ಯಂ ಬಿಂಬದೊಳಡಗಿಹ ।
ಮೃತ್ಯುಂಜಯನನ್ನು ನೋಡಿ ಮುಕಿಸ್ಪೈ ವೇಮಾ ।೧೩೮।

ಹಾಲಿನ ಚಟ ಹತ್ತಿ - ಪಸುಳೆ ತಾನಳುವುದು
ಕ್ಷುತ್ಪಿಪಾಸಕ್ಕೈದೆ - ಬಳಲುತಿಹುದು
ತಾಯಿ ಕೆಲಸ ಮುಗಿಸಿ – ಶಿಶುವ ಮುದ್ದಿಸುವಳು
ವಿಶ್ವತೋಽಭಿರಾಮ – ಕೇಳು ವೇಮಾ । ೧೩೯ ।

ಹೆಂಡತಿ ಕಡೆಯುವ - ರಾತ್ಮಬಂಧುಗಳಲ್ತೆ ?
ತಾಯಿ ಕಡೆಯುವರೊಳ್ಳೆ - ನಂಟರಲ್ತೆ ?
ತಂದೆಯ ಕಡೆಯುವ - ರೆಲ್ಲ ದಾಯಾದಿಗಳ್
ವಿಶ್ವತೋಽಭಿರಾಮ - ಕೇಳು ವೇಮಾ । ೧೪೦ ।

ಹಿಂದೆ ಮುಂದೆ ಯೋಚಿಸದೆ - ಮಾತು ಕೊಟ್ಟು ತಾ
ನಕ್ಕೊ ! ಇಕ್ಕೊ ! ಎನ್ನು - ತಾಸೆ ತೋರಿ
ಗಡುವು ಮಾಡಿ ನಾಳೆ - ಎನ್ನುವ ನಧಮನು
ವಿಶ್ವತೋಽಭಿರಾಮ - ಕೇಳು ವೇಮಾ । ೧೪೧ ।

ಹಾಡಿ ಹಾಡಿ ರಾಗ - ಸೊಂಪಾಗುತಿರ್ಪುದು
ಕೂಡಿಯಾಡೆ ಸತಿಯು - ಪ್ರೇಮಿಸುವಳು
ತಿಂದು ತಿಂದು ಬೇವು – ಸಿಹಿಯಾಗುತಿರ್ಪುದು
ವಿಶ್ವತೋಽಭಿರಾಮ - ಕೇಳು ವೇಮಾ । ೧೪೨ ।

—ಓಂ—

—ಶ್ರೀ ವೇಮನ ತತ್ವಗಳು—

ಹೆಚ್ಚು ಕಡಿಮೆ ಎಂಥದೋ - ಮನುಜ ಮನುಜರೊಳ್
ತನುವು ನಿಜವುದಲ್ಲ - ತಥ್ಯ ಪುಢುವೆ
ಅರಿತು ಚರಿಸಲಾರ - ರೇನೆಂಬೆ ಮೂರ್ಖರ
ವಿಶ್ವತೋಭಿರಾಮ - ಕೇಳು ವೇಮಾ | ೯೪೩ |

ಪುಚ್ಚ ವೇಷಂಗಳಂ - ಧರಿಸುವುದೇತಕ್ಕೆ
ಅಚ್ಚ ಕರಿಯ ನಾಯಿ - ಬಿಳಿಯದಹುದೆ ?
ಹೃದಯದಲ್ಲಿ ದುರ್ಗುಣಗಳ - ಹೊಳಲಿ ಬೇಕು
ವಿಶ್ವತೋಭಿರಾಮ - ಕೇಳು ವೇಮಾ | ೯೪೪ |

ಹೀನ ಮನುಜನೆಷ್ಟು - ವಿದ್ಯೆಯಂ ಕಲಿತರು
ಘನನುಮಲ್ಲ - ಮೂಢ ಮತಿಯುಮವನು
ಪರಿಮಳಮಂ ಪೊತ್ತ - ಕತ್ತೆಯು ಘನಮದೇಂ ?
ವಿಶ್ವತೋಭಿರಾಮ - ಕೇಳು ವೇಮಾ | ೯೪೫ |

ಹಸಿವು ತೀರಿದಾಗ - ಆಚಾರಗಳು ಹೆಚ್ಚು
ಹಸಿವು ಹೆಚ್ಚಲವು - ಗಳೆಲ್ಲ ಪರಿಗುಂ
ಹಸಿದು ಕತ್ತಲಾಗ - ಲಾತುರ ಹೆಚ್ಚಯ್ಯ
ವಿಶ್ವತೋಭಿರಾಮ - ಕೇಳು ವೇಮಾ | ೯೪೬ |

ಹೊಟ್ಟೆಯುಬ್ಬಿಸುತ್ತ - ಕಂಗಳ ಮುಚ್ಚುತ್ತ
ಬಿಲ್ಲನೆ ಬಿಗಿದಿರ್ಪ - ಕಪಟಯೋಗಿ
ಯಮನಿಗವನು ಕುರಿಯು - ತಾನೇನ ಮಾಡುವ
ವಿಶ್ವತೋಭಿರಾಮ - ಕೇಳು ವೇಮಾ | ೯೪೭

—ಓಂ—

—ಶ್ರೀ ವೇಮನ ತತ್ವಗಳು—

ಹೊಟ್ಟೆ ಕಿಚ್ಚಿನಿಂದೆ - ಕಾಮಾಗ್ನಿಯಿಂದಲಿ
ಕ್ರೋಧ ವಹ್ನಿಯಿಂದೆ - ಕುಟಿಲನಾಗ
ದುತ್ತಮ ಮಾರ್ಗದಿಂ - ವರ್ತಿಪ ಸಜ್ಜನ
ವಿಶ್ವತೋಭಿರಾಮ — ಕೇಳು ವೇಮಾ | ೯೪೮ |

ವಿವಿಧ ಸಂಕಲನ

ಗೀ|| ನೀರಿನಿಂದ ತೊಳೆದು - ನಿತ್ಯವು ಶುಚಿಮಾಡಿ
ಕೂಳು ಹಾಕಿ ಮೇಲೆ — ಬಟ್ಟೆಯುಡಿಸಿ
ಎಷ್ಟೊ ಪಾಟು ಬೀಳ್ವ — ರೀ ದೇಹಕ್ಕೋಸುಗ
ವಿಶ್ವತೋಭಿರಾಮ — ಕೇಳು ವೇಮಾ | ೯೪೯ |

ಕಂ|| ದೀನಗೆ ಕನ್ಯಾದಾನಂ |
ಮಾನವ ತಾನೊಮ್ಮೆ ಮಾಡಲತಿಶಯ ಸುಖದಿಂ
ದಾನಂದಿಸುವಂ ಪರದೊಳ್ |
ಧ್ಯಾನಿಸು ವೇದಾಂತ ಸಾರಮಿದು ವರ ವೇಮಾ | ೯೫೦ |

ಗೀ|| ಇಹದೊಳೈದೆ ಸುಖವು - ಇನಿತಾ ದೊಡಿಲ್ಲವು
ಪರದಿ ಸುಖಮದೆಲ್ಲಿ - ದೊರೆವು ದರಿಯೆ
ಜನನ ವಿಲ್ಲದೆಂತು - ಮರಣವು ಬರ್ಪುದು
ವಿಶ್ವತೋಭಿರಾಮ — ಕೇಳು ವೇಮಾ | ೯೫೧ |

ದ್ವಾರಬಂಧನ ಮದು — ತನಯರು ಸಂಪದ
ಬಂಧು ವರ್ಗವೆಲ್ಲ - ಪೌಳಿ ಗೋಡೆ
ಮೂಢರಾದ ನರರು - ಸಿಗುವರು ಬಲೆಯೊಳು
ವಿಶ್ವತೋಭಿರಾಮ - ಕೇಳು ವೇಮಾ | ೯೫೨ |

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಚತುರೋಪಾಯ – ಸಮರ್ಥತೆ ।
ವಿತರಣೆ ಗಾಂಭೀರ್ಯ - ಧೈರ್ಯ ವಿಭವ ಸ್ಫುರಣಾ ।
ದಿತರ ಗುಣಂಗಳು ಮೂಡಿ ।
ರ್ದ ತುಲಿತನಾದವನೆ ರಾಜನೆನಿಸುವ ವೇಮಾ । ೯೫೩ ।

ಗೀ॥ ಒಂದೆ ಮನಸಿನಲ್ಲಿ - ಇರ್ಪುದು ಸಕಲವು
ಹುಚ್ಚು ಹಿಡಿದು ನರನು - ತಿಳಿಯದಿಹರು
ಅದನು ತಿಳಿದು ನಡೆವು - ಧೊಂದಯೋ ಸಾಕಯ್ಯ
ವಿಶ್ವತೋಭಿರಾಮ - ಕೇಳು ವೇಮಾ । ೯೫೪ ।

ಮೆಟ್ಟಿನೊಳಿಹ ಕಲ್ಲು - ಕಿವಿಯೊಳಗಣ ತೊಣಚೆ
ಕಣ್ಣಿನ ಕಸ ಕಾಲು - ಮುಳ್ಳು ಮತ್ತಂ
ಮನೆಯ ಪೋರಿವುಗಳ - ನ್ನಷ್ಟಿಷ್ಟು ಎನೆಸಲ್ಲ
ವಿಶ್ವತೋಭಿರಾಮ - ಕೇಳು ವೇಮಾ । ೯೫೫ ।

ಒಬ್ಬರನ್ನು ಪಿಡಿದು - ಒಬ್ಬರು ತಿಂಬರು
ಅವರ ಬಾಯ ಮೃತ್ಯು - ಬಡಿವಳೈದೆ
ಮಿನ ಮರಿಯು ದೊಡ್ಡ - ಮೀನೊಂದು ಬಡಿವುದು
ಅದನು ತಿಂದು ಬಿಡುವ - ನೋರ್ವ ವೇಮಾ । ೯೫೬ ।

ಒಂದು ಹೊತ್ತು ಮಾಡೆ - ಊರ್ಹಂದಿಯಾಗುವ
ತಪವ ಮಾಡಲವನು - ದೀನನಾಗ್ವ
ಸತತ ಶಿಲೆಗೆ ಮುಗಿಯೆ - ನಿರ್ಜೀವಿಯಾಗುವ
ವಿಶ್ವತೋಭಿರಾಮ - ಕೇಳು ವೇಮಾ । ೯೫೭ ।

—ಓಂ—

—ಶ್ರೀ ವೇಮನ ತತ್ವಗಳು—

ಕಂ॥ ಆಗದದು ಕೋರಲಾಗದು ।
ಆಗಲಿಹುದು ಕೋರದಿರ್ದೊಡಾಗ್ಪುದು ನಿಕ್ಕಂ ॥
ಹೇಗೆಂದು ಚಿಂತಿಸಿದೊಡಂ ।
ಆಗಲ್ಕಿಹುದಾಗದಿರದು ಕೇಳ್ಳೈ ವೇಮಾ ॥ ।೯೫೮।

ಗೀ॥ ವ್ಯಾಧಿ ಬಂದ ವೇಳೆ - ವೈದ್ಯನ ಬಳಿಯಲ್ಲಿ
ಔಷಧವಂ ಕೊಳ್ಳ—ಲದು ಹರಿವುದು
ದೀಪವಿಲ್ಲದಿರಲು — ಪೋಪುದೇಂ ಕತ್ತಲು
ವಿಶ್ವತೋಭಿರಾಮ - ಕೇಳು ವೇಮಾ ।೯೫೯।

ಧನವಿಹೀನರಿಂಗೆ — ಧೈರ್ಯಮೇ ಶೂನ್ಯಮ್ಪೆ
ಧೈರ್ಯಮಿದ್ದವಂಗೆ — ಧನಮೆ ಶೂನ್ಯಂ
ಧನ, ಧೈರ್ಯಮೆರಡಿವು — ಧರೆ ರಾಜವರ್ಗಕ್ಕೆ
ವಿಶ್ವತೋಭಿರಾಮ - ಕೇಳು ವೇಮಾ ।೯೬೦।

ಉ॥ ಬರಗಳು ಗಂಡಗಳ್ ಕಠಿಣ ಕಷ್ಟದ ರೋಗಗ-
ಳೆಷ್ಟು ಬಂದೊಡಂ ।
ಕರುಣದಿ ಜೀವರಾಸಿಗಳಿಗಿತ್ತಿರಲಾಯುವ ದಿಟ್ಟಮಾ-
ಗಿ ತಾಂ ।
ನೆರೆ ಪರಿತಾಪಮೇಕೆ ಪಡಿಯೂಟಕೆ ದುರ್ಗತಿ-
ಎನ್ನಲೇಕೆ ಮೂಢತಾ ।
ನರಿಯೆ ದಯಾಳುವಾದ ಪರಮಾತ್ಮನವೋರ್ವನು
ದಿಕ್ಕು ವೇಮನಾ ॥ ।೯೬೧।

—ಓಂ—

—ಶ್ರೀ ವೇಮನ ತತ್ವಗಳು—

೧೯ ಬೈದು ಬಡಿಯಲ್ಬೈದೆ - ತಿರುಗಿ ಮಾತಾಡದೆ
ಅಲ್ಲಿ ಯಿಲ್ಲಿ ನೋಡಿ - ಭೀತಿಗೊಳದೆ
ತನ್ನ ನಲ್ಲವೆಂದು – ತತ್ತರ ಪಡದಿರು
ವಂಥ ನರನು – ಬ್ರಹ್ಮವೇತ್ತ ವೇಮಾ | ೯೬೨ |

ಬಲವನೆಲ್ಲ ಬಿಟ್ಟು - ಮೇಲಕ್ಕೆ ಹಾರಲು
ಮರದ ಕೊನೆಯ ಫಲವು - ಲಭಿಪುದೆಂತು
ಪುಸ್ತಕಗಳು ಓದಲೇಂ – ಮೋಕ್ಷ ಮಪ್ಪುದೇ ?
ವಿಶ್ವತೋಭಿರಾಮ - ಕೇಳು ವೇಮಾ | ೯೬೩ |

ಏನ ಓದಿದೊಡೇನು - ತಿಳಿವಿನಿತಿಲ್ಲದೆ
ಓದಿನಲ್ಲಿ ಪರಮ - ಸೌಖ್ಯಮೇನು
ಮಾನ ಸೈಕ್ಯದಿಂದೆ - ಮುಕ್ತಿಯು ದೊರೆವುದು
ವಿಶ್ವತೋಭಿರಾಮ - ಕೇಳು ವೇಮಾ | ೯೬೪ |

ಥಳಕು ಬೆಳಕು ತೋರಿ - ಒಲಪಿನಿಂ ಮೆಚ್ಚಿಸಿ
ಕೈಯ್ಯ ಕಾಸನೆಲ್ಲ - ಕಸಿಯುತಿಪರು
ವಿಟನ ಸೇರು ತಿಂತು – ವಾರಾಂಗನೆಯರೆಲ್ಲ
ವಿಶ್ವತೋಭಿರಾಮ - ಕೇಳು ವೇಮಾ | ೯೬೫ |

ಬೆಣ್ಣೆ ಕಾಸಿ ತುಪ್ಪ - ನೆರಳೊಳಗಿಂಸಲು
ಹೆತ್ತು ಗಟ್ಟಿಯಹುದು - ವೊಸರಿನಂತೆ
ಮಥಿಸಿ ಮಥಿಸಿ ನೀನು – ಮನ ಸ್ಥಿರಗೊಳಿಪುದು
ವಿಶ್ವತೋಭಿರಾಮ - ಕೇಳು ವೇಮಾ | ೯೬೬ |

—ಓಂ—

—ಶ್ರೀ ವೇಮನ ತತ್ವಗಳು—

ಪ್ರಾಣದಲ್ಲಿ ಶಿವನ - ಭಾವಿಸಲಾರದೆ
ದೀಕ್ಷೆಯೆಂದು ಮಡಿಪ — ಮೂರ್ಖ ಜನರೆ
ದೀಕ್ಷೆ ಯೊಳೇನಿದೆ - ಮೂಲದ್ರೊಳಲ್ಲದೆ
ವಿಶ್ವತೋಭಿರಾಮ - ಕೇಳು ವೇಮಾ | ೯೬೭ |

ಕಂ॥ ಈ ಲೋಕ ಚಿಹ್ನೆ ಯೆಲ್ಲವು।
ಮೇಲಹ ಗುರು ಶಕ್ತಿಯಿಂದೆ — ಪಿರಿದೆನಿ ಸಲ್ಕಾ ॥
ಕಾಲನು ಸಂಧಿಸಲಾರನು ।
ಪೇಳ್ವೆ ಸಾಕೆಂದು ಜನ್ಮಗಳ ವರ ವೇಮಾ ॥ | ೯೬೮ |

ಗೀ॥ ಈ ಷಣತ್ರಯಂಗಳ - ನ್ನೆಳೆದು ಕಟ್ಟುತ್ತಿ
ಮೋಸ ಪೋಗದೆ - ಮನದಿ ಗಾಸೆಪಡದೆ
ರೋಸಿ ಬಯಲೊಳು ಸೇರಲು - ಲೇಸೆನಿಪುದು
ಭಾಸುರಾಂಗ ಸಮುನ್ನತ — ನಪ್ಪ ವೇಮಾ | ೯೬೯ |

ಉತ್ತಮೋತ್ತಮ ಮಪ್ಪ - ನೀಲವೊಂದೇ ಸಾಕು
ಥಳುಕು ಬೆಳಕು ಶಿಲೆಯ - ರಾಶಿಯೇಕೆ ?
ಸಾರವಾದ ತತ್ವ — ಮೊಂದೆಯೇ ಸಾಲುದೇ ?
ವಿಶ್ವತೋಭಿರಾಮ — ಕೇಳು ವೇಮಾ | ೯೭೦ |

ಗಾಜಿನ ಕುಪ್ಪೆಯೋಳ್ - ಬೆಳಗುವ ದೀಪದೋಲ್
ದೇಹದಲ್ಲಿ ಜ್ಞಾನ - ಜ್ಯೋತಿ ಇರ್ಕುಂ
ತಿಳಿದವ ರಿದರರ್ಥ - ತಿಳಿವರು ಲೋಕದಿ
ವಿಶ್ವತೋಭಿರಾಮ — ಕೇಳು ವೇಮಾ | ೯೭೧ |

—ಓಂ—

—ಶ್ರೀ ವೇಮನ ತತ್ವಗಳು—

ಕೂಳಿಗು ಮಿಲ್ಲದೆ – ಕೂತಿಹ ಮನುಜನು
ಸುದತಿಯುರನು ನೋಡಿ - ವ್ಯಥೆ ಪಡುವನು
ಬೆಂಕಿಯುಂ ನೋಡಿದ – ಶಲಭದ ರೀತಿಯಿಂ
ವಿಶ್ವತೋಭಿರಾಮ - ಕೇಳು ವೇಮಾ | ೯೭೨ |

ಕಸವು ಪಶುಗಳಿಂಗೆ - ಗಾಳಿಯುರಗ ನಿಂಗೆ
ಸಕಲ ಜಗದಿ ದೊರೆಯು - ವಂತೆ ಮಾಡ್ದ
ಕುಂಭಿನೀ ನರರಿಗೆ - ಕೂಳು ದೊರೆಯದೆ ಮಾಡ್ದ
ವಿಶ್ವತೋಭಿರಾಮ – ಕೇಳು ವೇಮಾ | ೯೭೩ |

ಜೀವ ಪೋಗದ ಮುನ್ನ - ಜೀವ ವಸ್ತುವ ನಿಲಿಸಿ
ಜೀವ ನಿಲಿಸಬೇಕು – ಜೀವನ ಮದು
ಜೀವ ಪೋದಮೇಲೆ – ಜೀವ ವಸ್ತುಗಳೇಕೆ ?
ವಿಶ್ವತೋಭಿರಾಮ - ಕೇಳು ವೇಮಾ | ೯೭೪ |

ತಿಳಿದವರಿಗೆ ತಿಳಿಸ - ಲಾರಾದರುಂ ಸಾಕು
ಮೂರ್ಖನಿಂಗೆ ತಿಳಿಸೆ – ಬ್ರಹ್ಮಗಳಿವೆ
ನದಿಯ ಡೊಂಕ ತಿದ್ದ - ಲಾರಿಗೆ ಸಾಧ್ಯವೈ
ವಿಶ್ವತೋಭಿರಾಮ – ಕೇಳು ವೇಮಾ | ೯೭೫ |

ಆಗದವನ ಕೈಲಿ – ಕಾಸು ವೀಸವ ಕೊಟ್ಟೆ
ಹಿಂದೆ ತಿರುಗುತಿಹುದು – ಹುಚ್ಚುತನವು
ಬೆಕ್ಕು ಪಿಡಿದ ಕೋಳಿ – ಕರೆದರೆ ನುಡಿವುದೇಂ ?
ವಿಶ್ವತೋಭಿರಾಮ - ಕೇಳು ವೇಮಾ | ೯೭೬ |

—ಓಂ—

—ಶ್ರೀ ವೇಮನ ತತ್ವಗಳು—

ಕೆಟ್ಟಲೋಭಿ ನರನ ಸಿರಿಗೆ ತಾನಾಸಿಸಿ
ಘಾಟಿ ಯೋರ್ವ ಹಿಂದೆ - ತಿರುಗುತಿಹುದು
ಟಗರ ಹಿಂದೆ ನರಿಯು - ಗಂಟು ಬಿದ್ದಂತೆಯೇ
ವಿಶ್ವತೋಭಿರಾಮ – ಕೇಳು ವೇಮಾ | ೯೭೭ |

ಇದ್ದ ವೇಳೆ ನರನು – ಕಾಣನು ಮದಿಸಿತಾ
ನಿಲ್ಲದಾಗ ಇಡಲು – ಇಲ್ಲವಿಲ್ಲ
ಇದ್ದು ಇಲ್ಲದಿರ್ಪ – ಕಾಲ ಮುಂಟಾಗದೇ ?
ವಿಶ್ವತೋಭಿರಾಮ - ಕೇಳು ವೇಮಾ | ೯೭೮ |

ಕಂಡು ಕಾಣದಿರ್ಪ – ಮಿಸುಗನು ಬಾಯಿಯಂ
ಕೇಳಿ ಕೇಳದಿರ್ಪ - ನಚ್ಚರಿಯದು
ಸಿರಿಯಿರ್ಪ ನರಗದು - ಸನ್ನಿ ಘಾತಕ ರೋಗ
ವಿಶ್ವತೋಭಿರಾಮ - ಕೇಳು ವೇಮಾ | ೯೭೯ |

ಬ್ರಹ್ಮವನ್ನರಿಯದು - ಭಾವ ಮಲ್ಲಿರಲಾಗಿ
ತನುವ ಗುಡಿಯ ಮಾಡಿ - ತನ್ನ ನಿಲಿಸಿ
ಬಾಹ್ಯ ಜಗವ ಮರೆದು - ಒಳನೋಟ ನೋಳ್ಪುದು
ವಿಶ್ವತೋಭಿರಾಮ – ಕೇಳು ವೇಮಾ | ೯೮೦ |

ಭೂಪತಿ ಕೃಪೆನಂಬಿ - ಭೂಮಿ ಕೆಡಿಸುವಾತ
ಪ್ರಜೆಗಳು ಸಿರು ತಾಗಿ - ಬೀಳ್ವ ಕೊನೆಗೆ
ಮೇಲೆ ಹಾರಿದ 'ಚೆಂಡ' - ಎದುವರೆಗೆ ನಿಲ್ಲುವುದು
ವಿಶ್ವತೋಭಿರಾಮ - ಕೇಳು ವೇಮಾ | ೯೮೧ |

—ಓಂ—

—ಶ್ರೀ ವೇಮನ ತತ್ವಗಳು—

ಕಿವಿಗೆ ಮುಟ್ಟುವಂತೆ – ಪೇಳಿದ ವೇಮಣ್ಣ
ಬಟ್ಟಬಯಲೊಳಿಹದು – ಬ್ರಹ್ಮನೆಂದು
ಬುದ್ಧಿವಂತರಾಗಿ – ತಿಳಿದು ಸುಖಿಸುವುದು
ವಿಶ್ವತೋಭಿರಾಮ – ಕೇಳು ವೇಮಾ | ೯೮೨ |

ಇಂದ್ರಿಯಂಗಳಲ್ಲಿ – ಕಟ್ಟುಬಿದ್ದಿರುವಂಥ
ಹುಚ್ಚ ಮನುಜ ಶಿವನ – ನರಿವನೆಂತು ?
ಇಂದ್ರಿಯಗಳ ಗೆಲ್ದು – ಈಶನಂ ಕಾಂಬುದು
ವಿಶ್ವತೋಭಿರಾಮ – ಕೇಳು ವೇಮಾ | ೯೮೩ |

ಆಸೆಯಿಂದ ಮನುಜ – ರಾಯುಷ್ಯಮುಳ್ಳವರು
ತಿರುಗುತಿಹರು ಭ್ರಮೆಯು – ಕಳೆಯುರವರು
ಕೊಳಕು ಭಾಂಡದಲ್ಲಿ – ಮುಸುರುವ ನೊಣದಂತೆ
ವಿಶ್ವತೋಭಿರಾಮ – ಕೇಳು ವೇಮಾ | ೯೮೪ |

ಮಡಿಕೆಯೊಡೆಯಲಾಗಿ – ಹೊಸದೊಂದು ಕೊಳಬಹುದು
ತಡಿಕೆ ಮುಂದೊಡದನು – ಮಾಡಬಹುದು
ಬಿದ್ದುಹೋದ ನರನು – ಕುದುರುವುದತಿಶಯ
ವಿಶ್ವತೋಭಿರಾಮ – ಕೇಳು ವೇಮಾ | ೯೮೫ |

ಊರ್ಧ್ವಲೋಕದಲ್ಲಿ – ಉಚಿತ ಕ್ರಮಗಳಿಂದ
ರೂಪಮೇನಿಲ್ಲದೆಯೆ – ರೂಢಿಯಿಂದೆ
ಪರಮಯೋಗಿ ಕಾಂಬ – ಪರಮಾತ್ಮನಿವನೆಂದು
ವಿಶ್ವತೋಭಿರಾಮ – ಕೇಳು ವೇಮಾ | ೯೮೬ |

—ಓಂ—

—ಶ್ರೀ ವೇಮನ ತತ್ವಗಳು—

ಸತ್ಯಮೂವರಿಸಿರೆ – ಜ್ಞಾನಮೂವರಿಸಿರೆ
ಜ್ಞಾನಮಿರಲು ಸತ್ಯ - ನಿತ್ಯಮಿರಲು
ಜ್ಞಾನ ಸತ್ಯಮಿರಲು - ಬ್ರಾಹ್ಮಣನವ ನಿಜ
ವಿಶ್ವತೋಽಭಿರಾಮ – ಕೇಳು ವೇಮಾ । ೯೮೭ ।

ನೀರು ಕಾರಮಾಯ್ತು – ಕಾರವು ನೀರಾಯ್ತು
ಕಾರವಾದ ನೀರು – ಕಾರಮಾಯ್ತು
ಕಾಠದಲ್ಲಿ ನೀರು – ಕಡು ರಮ್ಯವಾಗಿದೆ
ವಿಶ್ವತೋಽಭಿರಾಮ - ಕೇಳು ವೇಮಾ । ೯೮೮ ।

ಹೊಟ್ಟೆ ತುಂಬ ಸುಧೆಯ – ಕ್ರಮವಾಗಿ ಕುಡಿದೊಡೆ
ಹಾಲಮೇಲದೇಕೆ – ಮನವು ಪರಿಗುಂ
ತತ್ವಮರಿತ ಮೇಲೆ ತತ್ವಮಿನ್ನೇತಕ್ಕೆ ?
ವಿಶ್ವತೋಽಭಿರಾಮ - ಕೇಳು ವೇಮಾ । ೯೮೯ ।

ಸ್ವಾನುಭೂತಿಯಿರದೆ - ಶಾಸ್ತ್ರವಾಸನೆಯಿಂದೆ
ಸಂಶಯಮಳಿಯದು - ಸಾಧಕನಿಗೆ
ಚಿತ್ರದೀಪದಿಂದೆ - ಕತ್ತಲೆ ಕೆಡದಂತೆ
ವಿಶ್ವತೋಽಭಿರಾಮ - ಕೇಳು ವೇಮಾ । ೯೯೦ ।

ಕಂ॥ ಶಾಂತಿಯೊಳು ಸಕಲ ಕಾರ್ಯಂ ।
ಸಂತೋಷಂ ಬಡೆದು ಸತ್ಯನಿತ್ಯ ವಿಜೆಯಮಂ ॥
ಪಥಂ ಗೆಲುವುದು ಧರ್ಮಜ ।
ನೆಂತೆಂತಹ ಕಷ್ಟನಷ್ಟಮಂ ಜಯಿಸಿದ ಶಾಂ ॥ । ೯೯೧ ।

—ಓಂ—

—ಶ್ರೀ ವೇಮನ ತತ್ವಗಳು—

ಗೀ॥ ಉರ್ವಿ ಜನರು ಪರಮ - ಯೋಗೀಶ್ವರನ ನೋಡಿ
ತೆಗಳುತಿಹರು ಪೊಗಳ - ಲರಿಯರವರು
ಅಮೃತಮಾದಿ ಸುರರ - ಹಸ್ತಮೇನರಿವುದು
ವಿಶ್ವತೋಭಿರಾಮ - ಕೇಳು ವೇಮಾ ।೯೯೨।

ಮಣ್ಣು ತಿನ್ನೆಂದೊಡೆ – ಕೋಪಮಂ ಮಾಳ್ಪರು
ಮಣ್ಣಿನ ಮೇಲನ್ನು – ಮರೆದಿರುವರು
ನೀರಿನಲ್ಲಿನ ಮೇಲು – ನಿಖಿಲಮಾಗಿರ್ಪುದೈ
ವಿಶ್ವತೋಭಿರಾಮ - ಕೇಳು ವೇಮಾ ।೯೯೩।

ತತ್ವಮಂ ಸ್ಥಿರಮಾದ - ಕಡೆಯಲ್ಲಿ ಬೆದಕುತ್ತ
ತಾನೆ ತತ್ವಮಪ್ಪ - ತತ್ವಯೋಗಿ
ನೆನಹುಗಳಡಗಲು ತಾನೆಯೇ ತತ್ವವು
ವಿಶ್ವತೋಭಿರಾಮ - ಕೇಳು ವೇಮಾ ।೯೯೪।

ಕಂ॥ ಈ ಕಪಟ ನಾಟಕಂಗಳಿ ।
ವೇ ಕಪಟದಪೋದಿವೆಲ್ಲವೇಂ ಶೋಭಿಪುವೋ ॥
ಆ ಕಪಟಾತ್ಮಂಗೈದ – ನ ।
ದೇ ಕಪಟಿಗೆ ಕೈಯ್ಯ ಮುಗಿದು ವಿರಮಿಸು ವೇಮಾ ॥ ।೯೯೫।

ಗೀ॥ ಬಿಸಿಲು ವೇಳೆ ಕತ್ತ - ಲೇಕಮಾಗಿರ್ದಂತೆ
ತುಂಬಿ, ಕೊಡದ ನೀರು - ನಿಲ್ಲುವಂತೆ
ಪಿಂದು ಪರಮಾತ್ಮನ - ತತ್ವಮಂ ತಿಳಿವುದು
ವಿಶ್ವತೋಭಿರಾಮ – ಕೇಳು ವೇಮಾ ।೯೯೬।

—ಓಂ—

—ಶ್ರೀ ವೇಮನ ತತ್ವಗಳು—

ಶಿಷ್ಯ ಸಮುದಾಯಕ್ಕೆ - ಶಿವನ ತೋರಿಸದೆ ತಾ
ನಲ್ಲ ಸಲ್ಲದಿರ್ಪ - ಮತದಿ ಪೊಗುವ
ಗುರು ಬುದ್ಧಿ ಪರಿಕಿಸೆ - ಕುರುಡೆತ್ತು ಪೊಲಮಯ್ಯ
ವಿಶ್ವತೋಭಿರಾಮ - ಕೇಳು ವೇಮಾ ।೯೯೭।

ದೇಶ ವೇಷಗಳನ್ನು - ವಿಶದಪಡಿಸದೆ ದೇವ
ನಾತ್ಮದಲ್ಲಿ ಇರ್ಪ - ನಡಗಿ ಯುಡುಗಿ
ವೇಷದಿರವ ನೋಡೆ - ಗ್ರಾಸಕ್ಕೆ ಮಾತ್ರವೇ ?
ವಿಶ್ವತೋಭಿರಾಮ – ಕೇಳು ವೇಮಾ ।೯೯೮।

ಪರ್ವತ, ವನವಾಸಿ - ಪರಿಣಾಮ ವರ್ತನೆ
ಕೂಪ ವಾಸಿಯೆಂತು – ಗುರುತನರಿವ
ಬ್ರಹ್ಮನಿಷ್ಠನೊಡನೆ – ಪ್ರಾಕೃತ ಚರಿಪನೆ ?
ವಿಶ್ವತೋಭಿರಾಮ - ಕೇಳು ವೇಮಾ ।೯೯೯।

ಕಸ್ತೂರಿಯಂ ನೋಡೆ – ಕಾಂತಿ ಕಪ್ಪಾಗಿಹುದು
ಪರಿಮಳವದು ತಾನೆ - ಮಘ ಮಘಿಪುದು
ಗುರುಗಳಾದ ಬುಧರ - ಗುಣ ಗಣವಿಾ ರೀತಿ
ವಿಶ್ವತೋಭಿರಾಮ – ಕೇಳು ವೇಮಾ ।೧೦೦೦।

ಗೀ॥ ಕಲಿಯುಗದಲ್ಲಿರ್ಪ - ರೈತ ಜನಾಂಗಕ್ಕೆ
ವೇಮನ ತನ್ನಯ - ಕೀರ್ತಿ ಮಾರಿ
ಇದ್ದ ಧರ್ಮವೆಲ್ಲ - ಉರ್ವಿಯೊಳ್ ನರರಿಗೆ
ಸೂರೆಗೈದ ಪರವ - ಕೋರಿ ವೇಮಾ ।೧೦೦೧

—ಓಂ—

—ಶ್ರೀ ವೇಮನ ತತ್ವಗಳು—

ಕುರಿಯ ಕಂಕುಳಲ್ಲಿ – ಇರುಕಿಸಿ ಗೊಲ್ಲನು
ಮಂದೆಯಲ್ಲಿ ಭ್ರಮಿಸಿ - ತಿರುಗುವಂತೆ
ದೈವ ವನ್ನರಿಯದೆ – ಪರದೈವ ಮರಸುವ
ವಿಶ್ವತೋಭಿರಾಮ – ಕೇಳು ವೇಮಾ ।೧೦೦೨।

ತಾನು ವಿಮಲನಾಗಿ – ತನ್ನ ಗುಣವೆಲ್ಲಮಂ
ಶಿವನಿ ಗಿಡದ ಗುರುವು – ಕೆಟ್ಟ ಗುರುವು
ಕುರುಡ ಕುದುರೆ ಹತ್ತಿ - ಗುಡಿಸುತ್ತಿ ದಂದದಿ
ವಿಶ್ವತೋಭಿರಾಮ – ಕೇಳು ವೇಮಾ ।೧೦೦೩।

ತಿಳಿಯಲಾರ ರೈದೆ – ಕಲಿಯುಗದೊಳಗಿರ್ಪ
ಮನುಜ ವರ್ಗಕೆಲ್ಲ - ಮಾನವೊಂದೆ
ದಾಷ್ಟಿಕರಾದವರು - ತಮ್ಮಂತೆ ನೋಡದೆ
ಪರರ ನಿಂದೆ ಮಾಡು - ತಿಹರು ವೇಮಾ ।೧೦೦೪।

ಸೂಕ್ಷ್ಮ ಮಧ್ಯದಲ್ಲಿ – ಸೇರಿ ಜೀವನು ಮಿರ್ಪ
ಸ್ಥೂಲ ಮಧ್ಯದಲ್ಲಿ - ಸೂರ್ಯನಿರ್ಪ
ನಾದು ಬಿಂದು ಕಳೆಯೊ - ಳಾ ಬ್ರಹ್ಮಮಿರ್ಪುದು
ವಿಶ್ವತೋಭಿರಾಮ – ಕೇಳು ವೇಮಾ ।೧೦೦೫।

ಸಂಪೂರ್ಣವಾದುದು



ಓಂ

ಗ್ರಂಥಕರ್ತರ ಪುಸ್ತಕ ರಾಜಗಳು

೧. ಗಾಂಧಿ ತತ್ವಗಳು
(ಚರಮಗೀತಾ ಸಮೇತ)

೨. ಗಾಂಧಿಜೀ ಗುಣಗಾನ
(ಕೀರ್ತನೆಗಳು).

೩. ಗ್ರಾಮಾಭಿವೃದ್ಧಿ
(ಪಾನನಿರೋಧ-
ಹಳ್ಳಿಗಳ ಸುಧಾರಣೆ)

೪. ಹೈದರಾಬಾದು ಲಾವಣಿ
(ಭಾರತ ಸರಕಾರದ ವಿಜಯ)

❁

ಪುನರ್ಮುದ್ರಣವಾಗಬೇಕಾದವು

೧. ಭೋಜ-ಕಾಲಿದಾಸ
(ಅಪೂರ್ವ ಕಥಾ ಸಂವಿಧಾನ)

೨. ರಾಷ್ಟ್ರ ಪ್ರೇಮ
(ಆತ್ಮಾರ್ಪಣ-ಗದ್ಯ ರೂಪವಲ್ಲಿ)

೩. ಭಕ್ತಾಮೃತ-
(ರಾಷ್ಟ್ರೀಯ ಭಾವನಾ ಲಹರಿ)

೪. ಶಿವಕೀರ್ತನಗಳು
(ಆಧುನಿಕ ವಿಚಾರ ವಾಹಿನಿ)

ಓಂ



ನಾಟ್ಯರಂಗದಲ್ಲಿ ಅಭಿನಯಿಸಲರ್ಹವಾದ ಬೋಧಪ್ರದ – ನಾಟಕಗಳನ್ನೂ, ರಾಷ್ಟ್ರೀಯ ಕೀರ್ತನೆಗಳನ್ನೂ, ಅನೇಕ ಆಧುನಿಕ ಸುಧಾರಣಾ ಲಾವಣಿ, ಪದ-ಪದ್ಯಗಳನ್ನೂ ರಚಿಸಿ, ಪ್ರಚುರಿಸಿ, ಕರ್ನಾಟಕಾಂಧ್ರ ಸಾಹಿತ್ಯಕ್ಕೆ ನನ್ನ ಅಳಿಲ ಸೇವಾ–ಕಾಣಿಕೆ–ಸಲ್ಲಿಸಿ, ಇದೀಗ "ಬಾಪೂ ತತ್ವ ಪ್ರಚಾರ ಮಂಡಲಿ"ಯನ್ನು ಸ್ಥಾಪಿಸಿ, ತನ್ಮೂಲಕ ಇನ್ನೂ ಹೆಚ್ಚಿನ ನಾಡ – ನುಡಿಗಳ ಸೇವೆ ಸಲ್ಲಿಸಲು ಕುತೂಹಲ ಉಳ್ಳವನಾಗಿರುತ್ತೇನೆ.

